ಮಂಗಳವಾರ, ಮಾರ್ಚ್ 12, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಮುಂಬೈನಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾಲಿವುಡ್ ನಟಿ ಮೌನಿ ರಾಯ್ ಪಾಲ್ಗೊಂಡಿದ್ದರು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕೈಮಗ್ಗ ಮತ್ತು ಜವಳಿ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನೇಕಾರರ ಸಮೃದ್ಧ ಬದುಕಿಗೆ ಹೊಂಬೆಳಕು

ಶ್ರೀ ಶಿವಾನಂದ ಎಸ್. ಪಾಟೀಲ, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು ಕೈಮಗ್ಗ ಮತ್ತು ಮಗ್ಗದ ಉತ್ಪನ್ನಗಳನ್ನು ವೀಕ್ಷಿಸುತ್ತಿರುವುದು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ನೇಕಾರರ ಸರ್ವಾಂಗೀಣ ಅಭಿವೃದ್ಧಿಗಾಗಿ ಹಲವಾರು ಉಪಯುಕ್ತ ಯೋಜನೆಗಳನ್ನು ಕೈಗೊಂಡಿದೆ.

ನೇಕಾರ ಸಮ್ಮಾನ್ ಯೋಜನೆ

2023-24 ನೇ ಸಾಲಿನಲ್ಲಿ ಕೈಮಗ್ಗ ನೇಕಾರರು ಹಾಗೂ ವಿದ್ಯುತ್ ಮಗ್ಗ ನೇಕಾರರು/ಮಗ್ಗ ಪೂರ್ವ ಘಟಕಗಳ ಕೆಲಸಗಾರರು ಸೇರಿದಂತೆ ಒಟ್ಟು 141109 ಫಲಾನುಭವಿಗಳಿಗೆ ತಲಾ ರೂ.5000/- ಗಳಂತೆ ನೇರ ನಗದು ವರ್ಗಾವಣೆ ಮಾಡುವ ಮೂಲಕ **ಒಟ್ಟು ರೂ.70.55 ಕೋಟಿ ಆರ್ಥಿಕ ನೆರವು.**

ವಿದ್ಯುತ್ ಸಹಾಯಧನ ಯೋಜನೆ

2023-24ನೇ ಸಾಲಿನಲ್ಲಿ 10 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ 29919 ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ರೂ.132.00 ಕೋಟಿ ವಾರ್ಷಿಕ ವೆಚ್ಚದಲ್ಲಿ ಉಚಿತ ವಿದ್ಯುತ್ ಸೌಲಭ್ಯ ಹಾಗೂ 10 ರಿಂದ 20 ಹೆಚ್.ಪಿ. ಹೊಂದಿರುವವರಿಗೆ ಪ್ರತಿ ಯೂನಿಟ್‌ಗೆ ರೂ.1.25 ರಿಯಾಯಿತಿ ದರದಲ್ಲಿ ವಿದ್ಯುತ್ ಒದಗಿಸಲು ಪ್ರಸ್ತಾವನೆ.

2 ವಿದ್ಯುತ್‌ಮಗ್ಗ ಖರೀದಿ ಹಾಗೂ ಎಲೆಕ್ಟ್ರಾನಿಕ್ ಜಕಾರ್ಡ್‌ಗಳ ಖರೀದಿ ಯೋಜನೆ:- ವಿದ್ಯುತ್ ಮಗ್ಗ ಘಟಕಗಳ ಸ್ಥಾಪನೆಗೆ 94 ನೇಕಾರರಿಗೆ ರೂ.230 ಲಕ್ಷಗಳು ಹಾಗೂ ಉತ್ತಮ ವಿನ್ಯಾಸಗಳ ಅಳವಡಿಕೆಗೆ 128 ವಿದ್ಯುತ್ ಮಗ್ಗ ನೇಕಾರರಿಗೆ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಅಳವಡಿಸಲು ರೂ.352 ಲಕ್ಷಗಳ ಸಹಾಯಧನ ಬಿಡುಗಡೆ.

ವಿದ್ಯುತ್ ಮಗ್ಗ ನೇಕಾರರು/ಮಗ್ಗ ಪೂರ್ವ ಘಟಕಗಳ ಕೆಲಸಗಾರರಿಗೆ ಒಟ್ಟು 1,17,040 ಸ್ಮಾರ್ಟ್ ಕಾರ್ಡ್ ವಿತರಣೆ.

SCSP/TSP SME ಜವಳಿ ಘಟಕ ಸ್ಥಾಪನೆ ಯೋಜನೆ: 2023-24ನೇ ಸಾಲಿನಲ್ಲಿ, ಸಣ್ಣ ಮತ್ತು ಅತಿ ಸಣ್ಣ ಜವಳಿ ಘಟಕಗಳ ಸ್ಥಾಪನೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಶೀಲರನ್ನು ಪ್ರೋತ್ಸಾಹಿಸಲು 55 SCSP/TSP SME ಜವಳಿ ಘಟಕಗಳಿಗೆ ರೂ.35 ಕೋಟಿ ಸಹಾಯಧನ ಬಿಡುಗಡೆ ಹಾಗೂ ಉದ್ಯಮಶೀಲರನ್ನು ಪ್ರೋತ್ಸಾಹಿಸಲು ವಿಶೇಷ ಘಟಕ ಯೋಜನೆಯಡಿ ಮತ್ತು ಗಿರಿಜನ ಉಪಯೋಜನೆಯಡಿ ಒಟ್ಟು 65 ಘಟಕಗಳ ಸ್ಥಾಪನೆಗೆ ಮಂಜೂರಾತಿ.

ನೇಕಾರರ ಮಕ್ಕಳಿಗೆ ವಿದ್ಯಾರ್ಥಿವೇತನ: ನೇಕಾರರ ಮಕ್ಕಳ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು 4457 ವಿದ್ಯಾರ್ಥಿಗಳಿಗೆ ನೇರ ನಗದು ವರ್ಗಾವಣೆ ಮುಖಾಂತರ ರೂ.2.23 ಕೋಟಿಗಳ ವಿದ್ಯಾರ್ಥಿವೇತನದ ಬಿಡುಗಡೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಕಲಬುರಗಿಯಲ್ಲಿ 1000 ಎಕರೆ ಪ್ರದೇಶದಲ್ಲಿ **PM-MITRA Park** ಸ್ಥಾಪನೆ ಹಾಗೂ ಕೇಂದ್ರ, ರಾಜ್ಯ ಮತ್ತು ಖಾಸಗಿ ಸಹಭಾಗಿತ್ವದೊಂದಿಗೆ ರೂ.1500 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಮೂಲಕ ಸುಮಾರು ಒಂದು ಲಕ್ಷ ನೇರ ಉದ್ಯೋಗ ಹಾಗೂ ಎರಡು ಲಕ್ಷ ಪರೋಕ್ಷ ಉದ್ಯೋಗ ಸೃಷ್ಟಿ.

ಕೈಮಗ್ಗ ನೇಕಾರರಿಗೆ ರಿಬೇಟ್‌ನ್ನು ಶೇ.20 ರಿಂದ ಶೇ.40ಕ್ಕೆ ಹೆಚ್ಚಿಸಲು ಚಿಂತನೆ.

ಶಿಕ್ಷಣ ಇಲಾಖೆಯಿಂದ ಕೆ.ಹೆಚ್.ಡಿ.ಸಿ.ಗೆ ಪಾವತಿಸಲು ಬಾಕಿ ಇದ್ದ ರೂ.14.28 ಕೋಟಿ ಬಿಡುಗಡೆ.

ಕೆ.ಹೆಚ್.ಡಿ.ಸಿ.ಯಲ್ಲಿ ನೋಂದಣಿಯಾಗಿರುವ ನೇಕಾರರಿಗೆ ವರ್ಷಪೂರ್ತಿ ಕಚ್ಚಾ ಸಾಮಗ್ರಿ ಮತ್ತು ಮಜೂರಿ ನೀಡಲು ಅನುಕೂಲವಾಗುವಂತೆ ನೇಕಾರರ ವಿಶೇಷ ಪ್ಯಾಕೇಜ್ ಅಡಿಯಲ್ಲಿ ರೂ.12 ಕೋಟಿ ಹಣ ಪೂರೈಕೆ.

ನುಡಿದಂತೆ ನಡೆದಿದ್ದೇವೆ...

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹ ಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ

ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂಎಸ್‌ಎಂಇ ಮತ್ತು ಗಣಿ)

ಎರಡು ಹಂತದಲ್ಲಿ ಪಟ್ಟಿ ಪ್ರಕಟ • ಮೊದಲ ಸುತ್ತಿನಲ್ಲಿ ಜೆಡಿಎಸ್‌ಗೆ ಎರಡು ಕ್ಷೇತ್ರ ಬಿಟ್ಟುಕೊಟ್ಟ 'ಕೇಸರಿ ಪಡೆ'

14 ಅಭ್ಯರ್ಥಿಗಳ ಬಿಜೆಪಿ ಪಟ್ಟಿ ಅಂತಿಮ?

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಕರ್ನಾಟಕದ 14 ಕ್ಷೇತ್ರಗಳಿಗೆ ಬಿಜೆಪಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧವಾಗಿದ್ದು, 12 ಕ್ಷೇತ್ರಗಳಿಗೆ ಅಭ್ಯರ್ಥಿಗಳಿಗೆ ಯಾರು ಎಂಬುದು ಇತ್ಯರ್ಥವಾಗಿಲ್ಲ. ಮಂಡ್ಯ ಹಾಗೂ ಹಾಸನ ಕ್ಷೇತ್ರಗಳನ್ನು ಜೆಡಿಎಸ್ ಪಕ್ಷಕ್ಕೆ ನೀಡಿರುವುದಾಗಿ ಗೊತ್ತಾಗಿದೆ.

ಬೆಂಗಳೂರು ಉತ್ತರ, ಉಡುಪಿ-ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಬೀದರ, ರಾಯಚೂರು, ಉತ್ತರ ಕನ್ನಡ, ಕೋಲಾರ, ಚಿತ್ರದುರ್ಗ, ದಕ್ಷಿಣ ಕನ್ನಡ, ಚಾಮರಾಜನಗರದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಿಲ್ಲ.

ಕರ್ನಾಟಕದ ಲೋಕಸಭಾ ಕ್ಷೇತ್ರಗಳೂ ಸೇರಿದಂತೆ 150 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲು ಬಿಜೆಪಿ ವರಿಷ್ಠರು ಸೋಮವಾರ ತಡರಾತ್ರಿಯ ವರೆಗೆ ಕಸರತ್ತು ನಡೆಸಿದರು.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತಿತರರು ಭಾಗಿಯಾದರು.

ಬಿಜೆಪಿಯು 195 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದೆ. ಎರಡನೇ ಪಟ್ಟಿಯನ್ನು ಮಂಗಳವಾರ ಅಥವಾ ಬುಧವಾರ ಪ್ರಕಟಿಸುವ ನಿರೀಕ್ಷೆ ಇದೆ. ಮೈಸೂರು ಕ್ಷೇತ್ರದ ಸಂಸದ ಪ್ರತಾಪಸಿಂಹ ಅವರಿಗೆ ಟಿಕೆಟ್ ಕೈ ತಪ್ಪುವುದು ಬಹುತೇಕ ಖಚಿತವಾಗಿದ್ದು, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಟಿಕೆಟ್‌ಎಂ ದೊರೆಯುವುದು ಬಹುತೇಕ ಖಚಿತವಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಉತ್ತರ ಕನ್ನಡ, ಉಡುಪಿ-ಚಿಕ್ಕಮಗಳೂರು, ಬೆಂಗಳೂರು ಉತ್ತರ, ಚಿಕ್ಕಬಳ್ಳಾಪುರ ಸೇರಿದಂತೆ ಎಂಟು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಬಿಜೆಪಿಗೆ ಕಗ್ಗಂಟಾಗಿದೆ. ಹಾಲಿ ಸಂಸದರಾದ ಅನಂತ ಕುಮಾರ್ ಹೆಗಡೆ, ನಳಿನ್ ಕುಮಾರ್ ಕಟೀಲ್, ಭಗವಂತ ಖೂಬಾ, ಪ್ರತಾಪ ಸಿಂಹ, ಶೋಭಾ ಕರಂದ್ಲಾಜೆ ಕಾರ್ಯವೈಖರಿಗೆ ಬಿಜೆಪಿಯಲ್ಲೇ ಅಸಮಾಧಾನ ವ್ಯಕ್ತವಾಗಿದೆ. ಆದರೆ, ಶೋಭಾ ಕರಂದ್ಲಾಜೆ ಅವರ ಬೆನ್ನಿಗೆ ಬಿ.ಎಸ್. ಯಡಿಯೂರಪ್ಪ ನಿಂತಿದ್ದು, ಶೋಭಾ ಅವರನ್ನು ಕಣಕ್ಕಿಳಿಸಲು ಪ್ರಯತ್ನಿಸುತ್ತಿದ್ದಾರೆ.

ಬಣ ಕಿತ್ತಾಟದಿಂದ ಅಭ್ಯರ್ಥಿಗಳ ಆಯ್ಕೆ ಮಾಡುವುದು ಕಮಲ ಪಾಳಯಕ್ಕೆ ಸವಾಲಾಗಿದೆ. ಸಂವಿಧಾನ ಬದಲಿಸುವ ಹೇಳಿಕೆ ನೀಡಿರುವ ಅನಂತಕುಮಾರ್ ಹೆಗಡೆ ವಿರುದ್ಧ ಅಸಮಾಧಾನ ವ್ಯಕ್ತವಾಗಿದ್ದು, ಟಿಕೆಟ್ ಕೈ ತಪ್ಪುವ ಸಾಧ್ಯತೆ ಇದೆ.

ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಯುವ ಮುಖ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರಿಗೆ ಮಣೆ ಹಾಕುವ ಸಾಧ್ಯತೆ ಇದೆ. ಬೆಂಗಳೂರು ಗ್ರಾಮಾಂತರದಿಂದ ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ಕಣಕ್ಕಿಳಿಸಲು ವರಿಷ್ಠರು ಉತ್ಸುಕರಾಗಿದ್ದಾರೆ. ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಅಚ್ಚರಿಯ ಅಭ್ಯರ್ಥಿಯ ಆಯ್ಕೆ ಮಾಡುವ ಬಗ್ಗೆ ಚರ್ಚೆಗಳು ಆಗಿವೆ. ಯುವ ಮುಖಂಡರಾದ ಸಪ್ತಗಿರಿ ಗೌಡ, ಡಾ.ನಿರಂತರ ಗಣೇಶ್ ಹೆಸರುಗಳು ಮುಂಚೂಣಿಗೆ ಬಂದಿವೆ.

ಮಾಜಿ ಸಚಿವ ಸಿ.ಟಿ. ರವಿ ಅವರನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಕಣಕ್ಕಿಳಿಸುವ ಬಗ್ಗೆಯೂ ಚರ್ಚೆಗಳು ನಡೆದಿವೆ. ಗ್ರಾಮಾಂತರದಿಂದ ಸ್ಪರ್ಧಿಸಲು ಅವರು ಒಪ್ಪಿಲ್ಲ. ಬೆಂಗಳೂರು ಉತ್ತರ ಅಥವಾ ಉಡುಪಿ ಚಿಕ್ಕಮಗಳೂರಿಗೆ ತಮ್ಮನ್ನು ಪರಿಗಣಿಸುವಂತೆ ವರಿಷ್ಠರಿಗೆ ಕೋರಿದ್ದಾರೆ. ತಮ್ಮ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ ಎಂದೂ ಮುನಿಸಿಕೊಂಡಿದ್ದಾರೆ. ಬಿ.ವೈ.ವಿಜಯೇಂದ್ರ, '28 ಕ್ಷೇತ್ರಗಳ ಬಗ್ಗೆಯೂ ಚರ್ಚೆಯಾಗಿದೆ. ಎರಡು ಹಂತದಲ್ಲಿ ಪಟ್ಟಿ ಪ್ರಕಟವಾಗಲಿದೆ. ಎರಡು ಮೂರು ದಿನಗಳಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ' ಎಂದು ತಿಳಿಸಿದರು.

ಸಂಭವನೀಯ ಅಭ್ಯರ್ಥಿಗಳು

ಮೈಸೂರು	ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್
ಬೆಂಗಳೂರು ದಕ್ಷಿಣ	ತೇಜಸ್ವಿ ಸೂರ್ಯ
ಬೆಂಗಳೂರು ಕೇಂದ್ರ	ಪಿ.ಸಿ.ಮೋಹನ್
ಬೆಂಗಳೂರು ಗ್ರಾಮಾಂತರ	ಸಿ.ಎನ್. ಮಂಜುನಾಥ್
ಬಳ್ಳಾರಿ	ಶ್ರೀರಾಮುಲು
ಹಾವೇರಿ	ಬಸವರಾಜ ಬೊಮ್ಮಾಯಿ
ಕಲಬುರಗಿ	ಉಮೇಶ್ ಜಾಧವ್
ಬಾಗಲಕೋಟೆ	ಪಿ.ಸಿ. ಗದ್ದಿಗೌಡರ
ವಿಜಯಪುರ	ರಮೇಶ ಜಿಗಜಿಣಗಿ
ಚಿಕ್ಕೋಡಿ	ಅಣ್ಣಾಸಾಹೇಬ ಜೊಲ್ಲೆ
ಶಿವಮೊಗ್ಗ	ಬಿ.ವೈ.ರಾಘವೇಂದ್ರ
ಬೆಳಗಾವಿ	ಜಗದೀಶ್ ಶೆಟ್ಟರ್
ಧಾರವಾಡ	ಪ್ರಲ್ಹಾದ್ ಜೋಶಿ
ಕೊಪ್ಪಳ	ಸಂಗಣ್ಣ ಕರಡಿ

21 ಕ್ಷೇತ್ರಗಳಿಗೆ 'ಕೈ' ಅಭ್ಯರ್ಥಿ: ಸ್ಕ್ರೀನಿಂಗ್ ಸಮಿತಿ ಚರ್ಚೆ

ಬೆಂಗಳೂರು: ರಾಜ್ಯದ 21 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಿ ಕೇಂದ್ರ ಚುನಾವಣಾ ಸಮಿತಿಗೆ (ಸಿಇಸಿ) ಶಿಫಾರಸು ಮಾಡುವ ಕುರಿತಂತೆ ಚರ್ಚಿಸಲು ಎಐಸಿಸಿ ಸ್ಕ್ರೀನಿಂಗ್ ಸಮಿತಿ ಸಭೆ ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆಯಿತು.

ಒಟ್ಟು 28 ಕ್ಷೇತ್ರಗಳ ಪೈಕಿ ಏಳು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಸಿಇಸಿ ಈಗಾಗಲೇ ಪ್ರಕಟಿಸಿದೆ.

'ಸಂಭವನೀಯ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಎಐಸಿಸಿ, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸಿದ್ಧಪಡಿಸಿರುವ ಪ್ರತ್ಯೇಕ ಪಟ್ಟಿಗಳ ಕುರಿತು ಸ್ಕ್ರೀನಿಂಗ್ ಸಮಿತಿ ಸಭೆಯಲ್ಲಿ ಚರ್ಚೆ ನಡೆದಿದೆ. ಅಭ್ಯರ್ಥಿ ಹೆಸರು ಅಂತಿಮಗೊಳಿಸಲು ಬಾಕಿ ಇರುವ ಎಲ್ಲ 21 ಕ್ಷೇತ್ರಗಳಿಗೂ ಒಂದೊಂದು ಹೆಸರು ಶಿಫಾರಸು ಮಾಡಲು ಸಮಿತಿ ನಿರ್ಧರಿಸಿದೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ, ಉಡುಪಿ-ಚಿಕ್ಕಮಗಳೂರು, ಚಿಕ್ಕೋಡಿ, ಮೈಸೂರು, ಚಿತ್ರದುರ್ಗ, ರಾಯಚೂರು ಮತ್ತು ಬಳ್ಳಾರಿ ಕ್ಷೇತ್ರಗಳ ಅಭ್ಯರ್ಥಿ ಹೆಸರಿನ ಬಗ್ಗೆ ಗಂಭೀರ ಚರ್ಚೆ ನಡೆದಿದೆ' ಎಂದು ಮೂಲಗಳು ತಿಳಿಸಿವೆ.

ಸಮಿತಿಯ ಅಧ್ಯಕ್ಷ ಹರೀಶ್ ಚೌಧರಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪಕ್ಷದ ಉಸ್ತುವಾರಿಯೂ ಆಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಮಿತಿ ಸದಸ್ಯರಾದ ಜಿಗ್ನೇಶ್ ಮೇವಾನಿ, ವಿಶ್ವಜಿತ್ ಕದಂ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಭೆಯಲ್ಲಿ ಭಾಗವಹಿಸಿದರು.

ಸುರ್ಜೇವಾಲಾ ಭೇಟಿ ಮಾಡಿದ ಸುಧೀರ್ ಮುರೊಳ್ಳಿ: ಸಭೆಗೂ ಮೊದಲು ಸುರ್ಜೇವಾಲಾ ಅವರನ್ನು ಉಡುಪಿ- ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿರುವ ಸುಧೀರ್ ಕುಮಾರ್ ಮುರೊಳ್ಳಿ ಅವರು ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ ಜೊತೆ ತೆರಳಿ ಭೇಟಿ ಮಾಡಿದರು. ಮಾಜಿ ಶಾಸಕ ಬಿ.ಎಂ. ಸುಕುಮಾರ ಶೆಟ್ಟಿ ಕೂಡ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಸುಧೀರ್ ಮುರೊಳ್ಳಿ

ಹಿಂದುಳಿದ ವರ್ಗಗಳ ಆಯೋಗದ ನಿಕಟಪೂರ್ವ ಅಧ್ಯಕ್ಷ, ಸದ್ಯ ಬಿಜೆಪಿಯಲ್ಲಿರುವ ಕೆ. ಜಯಪ್ರಕಾಶ್ ಹೆಗ್ಡೆ ಅವರನ್ನು ಸೆಳೆದುಕೊಂಡು ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್ ನೀಡಲು ಕಾಂಗ್ರೆಸ್ ನಾಯಕರು ಚರ್ಚೆ ನಡೆಸಿದ್ದಾರೆ. ಆದರೆ, ತಮಗೇ ಟಿಕೆಟ್ ನೀಡಬೇಕು ಎಂದು ಮುರೊಳ್ಳಿ ಬೇಡಿಕೆ ಇಟ್ಟಿದ್ದಾರೆ.

ರಾಜ್ಯದ 7 ಕ್ಷೇತ್ರಗಳ ಸಹಿತ ಒಟ್ಟು 39 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಕಾಂಗ್ರೆಸ್ ಸಿಇಸಿ ಮಾರ್ಚ್ 8ರಂದು ಪ್ರಕಟಿಸಿದೆ. ಎರಡನೇ ಪಟ್ಟಿ ಬಿಡುಗಡೆಗೆ ದೆಹಲಿಯಲ್ಲಿ ಸೋಮವಾರ ಸಂಜೆ ಸಿಇಸಿ ಸಭೆ ನಡೆದಿದೆ. ಈ ಸಭೆಯಲ್ಲಿ ಸಮಿತಿಯ ಸದಸ್ಯರೂ ಆಗಿರುವ ಇಂಧನ ಸಚಿವ ಕೆ.ಜೆ. ಜಾರ್ಜ್ ಭಾಗವಹಿಸಿದ್ದಾರೆ. ಆದರೆ, ಈ ಸಭೆಯಲ್ಲಿ ರಾಜ್ಯದ ಯಾವುದೇ ಕ್ಷೇತ್ರಕ್ಕೆ ಅಭ್ಯರ್ಥಿ ಹೆಸರು ಘೋಷಣೆಯಾಗುವ ಸಾಧ್ಯತೆ ಇಲ್ಲ ಎಂದೂ ಮೂಲಗಳು ತಿಳಿಸಿವೆ.

ನನಗೆ ಟಿಕೆಟ್ ಸಿಗುವ ವಿಶ್ವಾಸ ಇದೆ: ಕಾಂತೇಶ

ಹಾವೇರಿ: 'ರಾಜ್ಯದಲ್ಲಿ ಬಿಜೆಪಿ 28 ಕ್ಷೇತ್ರಗಳನ್ನು ಗೆಲ್ಲುತ್ತೆ. ಟಿಕೆಟ್ ಹಂಚಿಕೆ ವಿಷಯದಲ್ಲಿ ಗೊಂದಲವಿಲ್ಲ. ಟಿಕೆಟ್ ಕೇಳುವುದು ಕಾರ್ಯಕರ್ತರ ಹಕ್ಕು. ಹೈಕಮಾಂಡ್ ನಿಶ್ಚಯಿಸಿ, ಯಾರಿಗೆ ಟಿಕೆಟ್ ಕೊಡುತ್ತದೋ ಉಳಿದವರು ಅವರಿಗೆ ಬೆಂಬಲ ನೀಡುವ ಪದ್ಧತಿ ಬಿಜೆಪಿಯಲ್ಲಿದೆ. ಗುರು-ಹಿರಿಯರ ಆಶೀರ್ವಾದದಿಂದ ನನಗೆ ಟಿಕೆಟ್ ಸಿಗುವ ವಿಶ್ವಾಸವಿದೆ' ಎಂದು ಕೆ.ಇ. ಕಾಂತೇಶ ಹೇಳಿದರು.

ನಗರದ ಸೋಮವಾರ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅನೇಕ ವರ್ಷದಿಂದ ಸಿಂದಗಿಮಠಕ್ಕೆ ನಡೆದುಕೊಂಡು ಬರುತ್ತಿದ್ದೇವೆ. ಯಡಿಯೂರಪ್ಪ ಅವರು ನಿನ್ನೆ ಆಶೀರ್ವಾದ ಮಾಡಿದ್ದಾರೆ. ನಾನು, ನನ್ನ ತಂದೆ ದೆಹಲಿಗೆ ಹೋಗುತ್ತಿಲ್ಲ. ಸಭೆ ಮುಗಿದ ಮೇಲೆ ಸಿಹಿ ಸುದ್ದಿ ಸಿಗುತ್ತದೆ. ಎಲ್ಲರ ಬೆಂಬಲ ಬಿಜೆಪಿ ಮೇಲಿರಲಿ' ಎಂದರು.

ಸುದ್ದಿ 2 ನಿಮಿಷ

ಬಿಜೆಪಿ ಆಮಿಷ ಸುಳ್ಳು: ಶಾಮನೂರು ಶಿವಶಂಕರಪ್ಪ

ದಾವಣಗೆರೆ: 'ನನ್ನನ್ನು ಬಿಜೆಪಿಯತ್ತ ಸೆಳೆಯಲು ಯಾರೂ ಬಂದಿಲ್ಲ. ಈ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಲಾಗಿದೆ' ಎಂದು ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

'ರಾಜ್ಯ ಸರ್ಕಾರ ಪತನಗೊಳಿಸಲು ಶಾಮನೂರು ಶಿವಶಂಕರಪ್ಪ ಸೇರಿದಂತೆ ಕಾಂಗ್ರೆಸ್ ಶಾಸಕರಿಗೆ ₹ 50 ಕೋಟಿ ನೀಡಿ ಬಿಜೆಪಿ ಮತ್ತು ಜೆಡಿಎಸ್‌ನವರು ತಮ್ಮತ್ತ ಸೆಳೆಯಲು ಯತ್ನಿಸಿದ್ದರು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದರು.

'ರಾಜ್ಯಸಭೆ ಚುನಾವಣೆ ವೇಳೆ ಕೆಲವರು ತಮ್ಮ ಅಭ್ಯರ್ಥಿಗೆ ಮತ ಹಾಕಿ ಎಂದಿದ್ದರು. ನಾವು ಒಪ್ಪಿಲ್ಲ. ಬೇಕಿದ್ದರೇ ನಾವೇ ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದೆವು' ಎಂದು ಸೋಮವಾರ ತಿಳಿಸಿದರು.

'ಬಿಜೆಪಿಯವರ ಬಳಿ ಹಣ ಇದೆ. ಆಫರ್ ಕೊಡುತ್ತಾರೆ. ನನ್ನ ಹತ್ತಿರ ಬಂದಿಲ್ಲ. ಡಿ.ಕೆ. ಶಿವಕುಮಾರ್ ಏಕೆ ಹೀಗೆ ಹೇಳಿದ್ದಾರೋ ಗೊತ್ತಿಲ್ಲ. ನಮ್ಮನ್ನು ಯಾರೂ ಭೇಟಿ ಮಾಡಿಲ್ಲ. ಭೇಟಿ ಮಾಡುವ ಪ್ರಸಂಗವೂ ಒದಗಿಲ್ಲ' ಎಂದು ಸ್ಪಷ್ಟನೆ ನೀಡಿದರು.

ಟಿಡಿಪಿ, ಜನಸೇನಾ, ಬಿಜೆಪಿ ಮುಖಂಡರ, ಭೇಟಿ– ಚರ್ಚೆ

ಅಮರಾವತಿ, ಆಂಧ್ರಪ್ರದೇಶ (ಪಿಟಿಐ): ಬಿಜೆಪಿ ನಾಯಕರು ಸೋಮವಾರ ಇಲ್ಲಿ ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಮತ್ತು ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರನ್ನು ಭೇಟಿಯಾಗಿದ್ದು, ಲೋಕಸಭೆ ಮತ್ತು ಆಂಧ್ರಪ್ರದೇಶ ವಿಧಾನಸಭೆ ಚುನಾವಣೆಗೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚಿಸಿದರು.

ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್, ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಬೈಜಯಂತ್ ಜಯ್ ಪಾಂಡಾ ಅವರು ಉಭಯ ನಾಯಕರನ್ನು ಭೇಟಿಯಾಗಿದ್ದರು ಎಂದು ಟಿಡಿಪಿ ಮೂಲಗಳು ತಿಳಿಸಿವೆ.

ಈಗಾಗಲೇ ಅಂತಿಮಗೊಂಡಂತೆ ಕ್ಷೇತ್ರಗಳ ಸಂಖ್ಯೆ ನಿಗದಿಯಾಗಿದೆ. ಈಗ ಮೈತ್ರಿಪಕ್ಷಗಳು ಸ್ಪರ್ಧಿಸಬೇಕಾದ ಕ್ಷೇತ್ರಗಳ ಚರ್ಚೆ ನಡೆದಿದೆ. ಚರ್ಚೆ ಪ್ರಕಾರ, ಬಿಜೆಪಿ ಲೋಕಸಭೆಯ 6 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದು, ಯಾವ ಕ್ಷೇತ್ರ ಮತ್ತು ಯಾರು ಸ್ಪರ್ಧಿಸಬೇಕು ಎಂಬುದನ್ನು ಆ ಪಕ್ಷದ ಮುಖಂಡರು ಅಂತಿಮಗೊಳಿಸುವರು ಎಂದು ವಿವರಿಸಿವೆ.

ಮೈತ್ರಿ ಪ್ರಕಾರ, ಬಿಜೆಪಿ ತಲಾ ಆರು ಲೋಕಸಭೆ, ವಿಧಾನಸಭೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಜನಸೇನಾ ಪಕ್ಷ ವಿಧಾನಸಭೆಯ 24, ಲೋಕಸಭೆಯ 2 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ. ಟಿಡಿಪಿಯು ವಿಧಾನಸಭೆಯ 145, ಲೋಕಸಭೆಯ 17 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಆಂಧ್ರದಲ್ಲಿ ಲೋಕಸಭೆಯ 25 ಕ್ಷೇತ್ರಗಳು, ವಿಧಾನಸಭೆಯ 175 ಕ್ಷೇತ್ರಗಳಿವೆ.

ಭದ್ರಕೋಟೆಗಳೂ ಬದಲಾಗುತ್ತವೆ ನಟ ಶಿವರಾಜಕುಮಾರ್ ವಿಶ್ವಾಸ

ಪ್ರಜಾವಾಣಿ ವಾರ್ತೆ

ಶಿವರಾಜಕುಮಾರ್

ದಾವಣಗೆರೆ: 'ಪತ್ನಿ ಗೀತಾ ಶಿವಮೊಗ್ಗದಲ್ಲೇ ಹುಟ್ಟಿದವರು. ಯಾವಾಗಲೂ ಶಿವಮೊಗ್ಗಕ್ಕೆ ಹೋಗಿ ಬರುತ್ತಿರುತ್ತಾರೆ. ಅವರಿಗೆ ಅಲ್ಲಿನ ಸಮಸ್ಯೆ ಬಗ್ಗೆ ಗೊತ್ತಿದೆ. ಈ ಬಾರಿ ಮತದಾರರು ಲೋಕಸಭೆ ಚುನಾವಣೆಯಲ್ಲಿ ಅವರನ್ನು ಆಶೀರ್ವದಿಸಲಿದ್ದಾರೆ' ಎಂದು ನಟ ಶಿವರಾಜಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ತಮ್ಮ ಅಭಿನಯದ 'ಕರಟಕ ದಮನಕ' ಚಿತ್ರದ ವಿಜಯಯಾತ್ರೆಯಲ್ಲಿ ಪಾಲ್ಗೊಳ್ಳಲು ಸೋಮವಾರ ನಗರಕ್ಕೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಗೀತಾ ಅವರು ಈಗಾಗಲೇ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಶಿವಮೊಗ್ಗ ಬಿಜೆಪಿ ಭದ್ರಕೋಟೆ ಎಂದು ಹೇಳುತ್ತಾರೆ. ಆದರೆ ಈಗ ಅದೆಲ್ಲ ಇಲ್ಲ. ಭದ್ರಕೋಟೆಗಳೂ ಬದಲಾಗುತ್ತವೆ' ಎಂದರು.

'ಗೀತಾ ಗೆಲ್ಲುವ ವಿಶ್ವಾಸ ಇದೆ' ಹೊಸಪೇಟೆ (ವಿಜಯನಗರ): 'ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಗೆಲ್ಲುವ ಭರವಸೆ ಇರುವ ಕಾರಣ ಗೀತಾ ಈ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ' ಎಂದು ನಟ ಶಿವರಾಜಕುಮಾರ್ ಹೇಳಿದರು.

'ಕರಟಕ ದಮನಕ' ಸಿನಿಮಾ ಪ್ರಚಾರದ ಹಿನ್ನೆಲೆಯಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾಂಗ್ರೆಸ್‌ನಿಂದ ಗೀತಾ ಸ್ಪರ್ಧಿಸಿದ ಕಾರಣಕ್ಕೆ ಬೇರೆ ಪಕ್ಷದ ಬೆಂಬಲಿಗರು ನಮ್ಮಿಂದ ದೂರ ಆಗುವರು ಅಥವಾ ಅವರನ್ನು ನಾವು ಕಡೆಗಣಿಸುತ್ತೇವೆ ಎಂದೇನಿಲ್ಲ. ನಾವು ಎಲ್ಲರನ್ನೂ ಸಮಾನ ಕಾಣುತ್ತೇವೆ. ಎಲ್ಲರ ಪ್ರೀತಿ, ವಿಶ್ವಾಸ ಬೇಕು' ಎಂದರು.

ಕಣಕ್ಕಿಳಿಯಲು ಮಂಜುನಾಥ್ ಸಮ್ಮತಿ

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಡಿ.ಕೆ. ಸುರೇಶ್ ಎದುರಿಸಲು ಸಜ್ಜು

ಪ್ರಜಾವಾಣಿ ವಾರ್ತೆ



ಡಾ. ಸಿ.ಎನ್ ಮಂಜುನಾಥ್

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಕಣಕ್ಕಿಳಿಯಲು ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಒಪ್ಪಿಕೊಂಡಿದ್ದಾರೆ.

ಸೋಮವಾರ ನಡೆದ ಜೆಡಿಎಸ್ ನಾಯಕರ ಸಭೆಯಲ್ಲಿ ಅವರು ಸ್ಪರ್ಧೆಗೆ ಸಮ್ಮತಿ ಸೂಚಿಸಿದ್ದಾರೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ತಮ್ಮ ಮಾವ ಎಚ್.ಡಿ. ದೇವೇಗೌಡ ಅವರನ್ನು ಭಾನುವಾರ ರಾತ್ರಿ ಭೇಟಿಮಾಡಿದ್ದ ಮಂಜುನಾಥ್, ಎರಡು ಗಂಟೆಗಳ ಕಾಲ ಚರ್ಚಿಸಿದ್ದರು.

ದೆಹಲಿಗೆ ಬರಲು ಎಚ್‌ಡಿಕೆಗೆ ಆಹ್ವಾನ

ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್‌ಗೆ ರಾಜ್ಯದಲ್ಲಿ ದೊರಕುವ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸುವ ಕುರಿತು ಚರ್ಚಿಸಲು ಮಂಗಳವಾರ ಅಥವಾ ಬುಧವಾರ ದೆಹಲಿಗೆ ಬರುವಂತೆ ಬಿಜೆಪಿ ವರಿಷ್ಠರು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಆಹ್ವಾನ ನೀಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪಕ್ಷದ ರಾಮನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಮುಖಂಡರ ಜತೆ ಸೋಮವಾರ ಸಭೆ ನಡೆಸಿದರು. ಮಂಜುನಾಥ್ ಕೂಡ ಸಭೆಯಲ್ಲಿ ಭಾಗವಹಿಸಿದ್ದು, ಚುನಾವಣೆಗೆ ಸ್ಪರ್ಧಿಸಬೇಕೆಂಬ ಒತ್ತಾಯಕ್ಕೆ ಮಣಿದರು.

ಮಂಜುನಾಥ್ ಬೆಂಗಳೂರು ಗ್ರಾಮಾಂತರದಲ್ಲಿ ಬಿಜೆಪಿ ಅಭ್ಯರ್ಥಿಯಾಗಲಿದ್ದಾರೆಯೆ? ಅಥವಾ ಜೆಡಿಎಸ್‌ನಿಂದ ಕಣಕ್ಕಿಳಿಯಲಿದ್ದಾರೆಯೆ? ಎಂಬುದು ಇನ್ನೂ ಅಂತಿಮಗೊಂಡಿಲ್ಲ. ದೆಹಲಿಯಲ್ಲಿ ಮಂಗಳವಾರ ನಡೆಯುವ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಸಭೆಯಲ್ಲಿ ಈ ಕುರಿತು ಅಂತಿಮ ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ.

ಸಭೆಯಲ್ಲಿ ಮಾತನಾಡಿದ ಕುಮಾರಸ್ವಾಮಿ, 'ಬಿಜೆಪಿಯ ರಾಷ್ಟ್ರೀಯ ಮತ್ತು ರಾಜ್ಯ ನಾಯಕರು ಬೆಂಗಳೂರು ಗ್ರಾಮಾಂತರದಲ್ಲಿ ಮಂಜುನಾಥ್ ಅವರ ಸ್ಪರ್ಧೆಯನ್ನು ಬಯಸಿದ್ದಾರೆ. ಈ ಕುರಿತು ದೇವೇಗೌಡರ ಜತೆ ಭಾನುವಾರ ರಾತ್ರಿ ಎರಡು ಗಂಟೆಗಳ ಕಾಲ ಚರ್ಚಿಸಿದ್ದೇನೆ. ಅವರ ಸ್ಪರ್ಧೆಯ ಅನಿವಾರ್ಯವನ್ನು ಮನವರಿಕೆ ಮಾಡಿದ್ದೇನೆ' ಎಂದರು.

'ಸಿ.ಪಿ. ಯೋಗೇಶ್ವರ್ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡುವಂತೆ ಬಿಜೆಪಿ ನಾಯಕರ ಮುಂದೆ ನಾನೇ ಪ್ರಸ್ತಾವ ಇರಿಸಿದ್ದೆ. ಆದರೆ, ಯೋಗೇಶ್ವರ್ ಅವರೂ ಮಂಜುನಾಥ್ ಅವರೇ ಸ್ಪರ್ಧಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಮಿತ್ರ ಪಕ್ಷದ ಭಾವನೆಗಳನ್ನು ನಾವು ಗೌರವಿಸಬೇಕು' ಎನ್ನುವ ಮೂಲಕ ಮಂಜುನಾಥ್ ಅವರನ್ನು ಕಣಕ್ಕಿಳಿಸುವ ನಿರ್ಧಾರವನ್ನು ಅಂತಿಮಗೊಳಿಸಿರುವ ಸುಳಿವು ನೀಡಿದರು.

'ವಿರೋಧಿಗಳನ್ನು ಮಣಿಸಲೇಬೇಕು': 'ಮಂಜುನಾಥ್ ಅವರನ್ನು ರಾಜಕೀಯ ಕ್ಷೇತ್ರಕ್ಕೆ ಕರೆತರುವುದು ಅವರ ಪತ್ನಿಗೆ ಇಷ್ಟವಿಲ್ಲ. ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಸದಂತೆ ನನ್ನ ಸಹೋದರಿ ಕಣ್ಣೀರು ಹಾಕುತ್ತಿದ್ದಾರೆ. ಆದರೆ, ವಿರೋಧಿಗಳನ್ನು ಮಣಿಸಲೇಬೇಕು, ಇದು ನನ್ನ ಗುರಿ' ಎಂದು ಕುಮಾರಸ್ವಾಮಿ ಸಭೆಯಲ್ಲಿ ಹೇಳಿದರು.

ಪಂಜಾಬ್‌ಗೆ ₹8 ಸಾವಿರ ಕೋಟಿ ತಡೆಹಿಡಿದ ಕೇಂದ್ರ: ಕೇಜ್ರಿವಾಲ್

ಮೊಹಾಲಿ (ಪಿಟಿಐ): ಕೇಂದ್ರ ಸರ್ಕಾರವು ಪಂಜಾಬ್‌ಗೆ ಬಿಡುಗಡೆ ಆಗಬೇಕಿದ್ದ ₹ 8 ಸಾವಿರ ಕೋಟಿಯನ್ನು ತಡೆಹಿಡಿದಿದೆ. ಇದು ದೊಡ್ಡ ಮೊತ್ತ, ಈ ಹಣದಿಂದ ಎಷ್ಟು ಶಾಲೆ, ಮೊಹಲ್ಲಾ ಕ್ಲಿನಿಕ್, ಆಸ್ಪತ್ರೆಗಳ ಅಭಿವೃದ್ಧಿ ಸಾಧ್ಯವಿತ್ತು ಎಂದು ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ಹೇಳಿದರು.

ಲೋಕಸಭೆ ಚುನಾವಣೆಯ ಪಕ್ಷದ ಪ್ರಚಾರ ಕಾರ್ಯಕ್ಕೆ ಇಲ್ಲಿ ಚಾಲನೆ ನೀಡಿದ, ದೆಹಲಿ ಮುಖ್ಯಮಂತ್ರಿಯೂ ಆದ ಅವರು, 'ಶಾಸಕರ ಖರೀದಿ ಮೂಲಕ ಭಗವಂತ ಮಾನ್ ಸರ್ಕಾರದ ಪದಚ್ಯುತಿಗೆ ಬಿಜೆಪಿ ಯತ್ನಿಸಿತ್ತು' ಎಂದೂ ಆರೋಪಿಸಿದರು.

'ರಾಜ್ಯದ ಎಲ್ಲ 13 ಕ್ಷೇತ್ರಗಳಲ್ಲಿ ಎಎಪಿ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದ ಅವರು, ಈ ಗೆಲುವು ನಮಗಾಗಿ ಅಲ್ಲ; ನಿಮ್ಮ ಮತ್ತು ನಿಮ್ಮ ಕುಟುಂಬದ ಏಳಿಗೆಗಾಗಿ. ಪಂಜಾಬ್‌ನ ಅಭಿವೃದ್ಧಿಗಾಗಿ' ಎಂದು ಹೇಳಿದರು.

'ಪಂಜಾಬ್‌ನ ಅಭಿವೃದ್ಧಿಗಾಗಿ ರಾಜ್ಯದ ಎಲ್ಲ 13 ಕ್ಷೇತ್ರಗಳಲ್ಲಿ ಗೆಲುವು ಅಗತ್ಯ. ಸಂಸತ್ತಿನಲ್ಲಿ ಪಂಜಾಬ್‌ನ ಧ್ವನಿ ಮೊಳಗಿಸಲು ಇದು ನೆರವಾಗಲಿದೆ' ಎಂದರು.

'ಕೇಂದ್ರ ಸರ್ಕಾರದವರು ಮತ್ತು ಪಂಜಾಬ್‌ನ ರಾಜ್ಯಪಾಲರು ಪ್ರತಿ ನಿತ್ಯವೂ ಮುಖ್ಯಮಂತ್ರಿ ಭಗವಂತ ಮಾನ್ ಅವರಿಗೆ ಕಿರುಕುಳ ನೀಡುತ್ತಿದ್ದಾರೆ. ಭಗವಂತ ಮಾನ್ ಮಾತ್ರ ನಿಮ್ಮ ಪರವಾಗಿ ಹೋರಾಟ ಮಾಡುತ್ತಿದ್ದಾರೆ. ನೀವು ಹೆಚ್ಚು ಸದಸ್ಯರನ್ನು ಗೆಲ್ಲಿಸಿದಷ್ಟೂ ಅವರ ಬಲ ಹೆಚ್ಚಾಗಲಿದೆ' ಎಂದು ಹೇಳಿದರು.

ಲಂಬಾಣಿ ನೃತ್ಯ

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗೊಂದಿಯಲ್ಲಿ ಸೋಮವಾರ ನಡೆದ ಉತ್ಸವದ ಮೆರವಣಿಗೆಯ ಸಂದರ್ಭದಲ್ಲಿ ಲಂಬಾಣಿ ಸಮುದಾಯದ ನೃತ್ಯ ಪ್ರದರ್ಶಿಸಿದ ಮಹಿಳೆಯರು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಬಾಗಲಕೋಟೆ ಲೋಕಸಭಾ ಕ್ಷೇತ್ರ: ನಾಲ್ಕೂ ಚುನಾವಣೆಗಳಲ್ಲಿ ದಕ್ಕದ ಗೆಲುವು

ಅಭ್ಯರ್ಥಿಯನ್ನು 'ಕೈ' ಮತ್ತೆ ಬದಲಿಸುವುದೇ?

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಒಂದು ಕಾಲದಲ್ಲಿ ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಬಾಗಲಕೋಟೆ ಲೋಕಸಭಾ ಕ್ಷೇತ್ರವನ್ನು ಮತ್ತೆ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಕಾಂಗ್ರೆಸ್ ಪ್ರಯತ್ನ ನಡೆಸಿದೆ. ಕಳೆದ ನಾಲ್ಕೂ ಚುನಾವಣೆಗಳಲ್ಲಿ ಅಭ್ಯರ್ಥಿಗಳನ್ನು ಬದಲಿಸಿದರೂ ಗೆಲುವು ದಕ್ಕಿಲ್ಲ. ಈ ಸಲವೂ ಅಭ್ಯರ್ಥಿಯನ್ನು ಬದಲಿಸುವುದೇ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ನಡೆದಿದೆ.

ಪಿ.ಸಿ.ಗದ್ದಿಗೌಡರ

ಆನಂದ

1999ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಆರ್.ಎಸ್.ಪಾಟೀಲ ಗೆದ್ದಿದ್ದರು. ಜೆಡಿಯು ಸಮೀಪದ ಸ್ಪರ್ಧಿಯಾಗಿತ್ತು. 2004ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಪಿ.ಸಿ. ಗದ್ದಿಗೌಡರ ಅವರು ಆರ್.ಎಸ್. ಪಾಟೀಲರನ್ನು ಸೋಲಿಸಿ ಮೊದಲ ಬಾರಿಗೆ ಕಮಲ ಅರಳಿಸಿದ್ದರು.

2009ರ ಚುನಾವಣೆಯಲ್ಲಿ ಗದ್ದಿಗೌಡರ ಅವರನ್ನು ಮಣಿಸಲು ಕಾಂಗ್ರೆಸ್ ಜೆ.ಟಿ. ಪಾಟೀಲ (ಹಾಲಿ ಬೀಳಗಿ ಶಾಸಕ) ಅವರನ್ನು ಕಣಕ್ಕಿಳಿಸಿದ್ದರೂ ಗೆಲುವು ಸಾಧಿಸಲು ಆಗಲಿಲ್ಲ.

2014ರ ಚುನಾವಣೆ ಸಂದರ್ಭದಲ್ಲಿ ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇತ್ತು. ಜಿಲ್ಲೆಯಲ್ಲಿ ಐವರು ಕಾಂಗ್ರೆಸ್ ಶಾಸಕರಿದ್ದರು. 1998ರ ಚುನಾವಣೆಯಲ್ಲಿ ಲೋಕಜನ ಶಕ್ತಿಯಿಂದ ಸಂಸದರಾಗಿ ಆಯ್ಕೆಯಾಗಿದ್ದ ಅಜಯಕುಮಾರ ಸರನಾಯಕ ಅವರನ್ನು ಕಾಂಗ್ರೆಸ್‌ಗೆ ಕರೆ ತಂದು ಕಣಕ್ಕಿಳಿಸಿದರೂ ಗೆಲುವು ದಕ್ಕಲಿಲ್ಲ.

2019ರ ಚುನಾವಣೆಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಅವರನ್ನು ಕಣಕ್ಕಿಳಿಸಿದರೂ ಪ್ರಧಾನಿ ನರೇಂದ್ರ ಮೋದಿ ಅವರ ಅಲೆಯಲ್ಲಿ ಬಿಜೆಪಿ ಅಭ್ಯರ್ಥಿ ಗದ್ದಿಗೌಡರ ಸತತ ನಾಲ್ಕನೇ ಬಾರಿಗೆ ಗೆಲುವು ಸಾಧಿಸಿದ್ದರು. ಈ ಹಿಂದೆ ಗದ್ದಿಗೌಡರ ವಿರುದ್ಧ ಸ್ಪರ್ಧಿಸಿರುವ ವೀಣಾ ಕಾಶಪ್ಪನವರ, ಅಜಯಕುಮಾರ ಸರನಾಯಕ ಈಗ ಆಕಾಂಕ್ಷಿಗಳಾಗಿದ್ದಾರೆ. ಇವರ ಜತೆಗೆ ಮಾಜಿ ಶಾಸಕ ಆನಂದ ನ್ಯಾಮಗೌಡ ಹೆಸರೂ ಪ್ರಬಲವಾಗಿ ಕೇಳಿ ಬರುತ್ತಿದೆ.

ಬಿಜೆಪಿಯಿಂದ ಗದ್ದಿಗೌಡರ ಸ್ಪರ್ಧಿಸುವುದು ಇನ್ನೂ ಖಚಿತವಾಗಿಲ್ಲ. ಆದರೆ, ಕಾಂಗ್ರೆಸ್ ಮತ್ತೊಮ್ಮೆ ಅಭ್ಯರ್ಥಿಯನ್ನು ಮತ್ತೊಮ್ಮೆ ಬದಲಿಸುವುದೇ ಎಂಬುದೇ ಕುತೂಹಲ.

ಸಚಿವರ ಮಕ್ಕಳಿಗೇ ಟಿಕೆಟ್: ನಿಲ್ಲದ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲೋಕಸಭೆ ಚುನಾವಣೆಗೆ ಬೆಳಗಾವಿ ಕ್ಷೇತ್ರದಿಂದ ಮೃಣಾಲ್ ಹೆಬ್ಬಾಳಕರ ಹಾಗೂ ಚಿಕ್ಕೋಡಿ ಕ್ಷೇತ್ರದಿಂದ ಪ್ರಿಯಾಂಕಾ ಜಾರಕಿಹೊಳಿ ಅವರಿಗೆ ಟಿಕೆಟ್ ಅಂತಿಮವಾಗಿದೆ ಎಂಬ ಸುದ್ದಿ ಜಿಲ್ಲೆಯಲ್ಲಿ ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಆದರೆ, ಸಚಿವರ ಆಪ್ತ ಮೂಲಗಳು ಈ ಬಗ್ಗೆ ಅಂತಿಮವಾಗಿಲ್ಲ. ಇನ್ನೂ ಚರ್ಚೆ ನಡೆದಿದೆ ಎಂದು ಹೇಳಿವೆ.

ಬೆಳಗಾವಿ ಕ್ಷೇತ್ರದಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಪುತ್ರ ಮಣಾಲ್ ಹಾಗೂ ಡಾ.ಗಿರೀಶ ಸೋನವಾಲ್ಕರ ಅವರ ಹೆಸರುಗಳನ್ನು ಅಂತಿಮ ಪಟ್ಟಿಯಲ್ಲಿ ಕಳುಹಿಸಲಾಗಿತ್ತು. ಡಾ.ಗಿರೀಶ ಸ್ಪರ್ಧೆಗೆ ಸ್ವತಃ ಲಕ್ಷ್ಮಿ ಹೆಬ್ಬಾಳಕರ ಸಹಮತ ವ್ಯಕ್ತಪಡಿಸಿದ್ದರು. ಆದರೆ, ಸೋಮವಾರ ಇದ್ದಕ್ಕಿದ್ದಂತೆ ಪಕ್ಷದ ನಡೆ ಬದಲಾಗಿದೆ ಎಂಬ ಮಾತುಗಳು ಪಕ್ಷದಲ್ಲಿ ಹರಿದಾಡುತ್ತಿವೆ.

ಚಿಕ್ಕೋಡಿ ಕ್ಷೇತ್ರದಿಂದ ಕೂಡ ಪ್ರಿಯಾಂಕಾ ಜಾರಕಿಹೊಳಿ ಹಾಗೂ ಕುರುಬ ಸಮಾಜದ ಮುಖಂಡ ಲಕ್ಷ್ಮಣರಾವ್ ಚಿಂಗಳೆ ಅವರ ಹೆಸರು ಸೂಚಿಸಲಾಗಿತ್ತು. ತಮ್ಮ ಪುತ್ರಿ ಯಾವುದೇ ಕಾರಣಕ್ಕೂ ಸ್ಪರ್ಧಿಸುವುದಿಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳುತ್ತಲೇ ಇದ್ದರು.

'ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಹೈಕಮಾಂಡ್ ತೀರ್ಮಾನವೇ ಅಂತಿಮ. ಜಿಲ್ಲಾ ಮುಖಂಡರು ಹಾಗೂ ವರಿಷ್ಠರು ಈ ಕುರಿತು ತೀರ್ಮಾನ ಕೈಗೊಳ್ಳುವರು' ಎಂದು ಲಕ್ಷ್ಮಿ ಹೆಬ್ಬಾಳಕರ ಹೇಳಿದರೆ, 'ಚಿಕ್ಕೋಡಿಯಲ್ಲಿ ತಮ್ಮ ಪುತ್ರಿಯೇ ಸ್ಪರ್ಧಿಸುತ್ತಾರೆ ಎಂಬುದು ಇನ್ನೂ ಅಂತಿಮವಾಗಿಲ್ಲ' ಎಂದು ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್ ಸೇರಿದ ಬಿಜೆಪಿ ಸಂಸದ

ಜೈಪುರ (ಪಿಟಿಐ): ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ನಿರಾಕರಣೆಯಾದ ಕಾರಣ ರಾಜಸ್ಥಾನದ ಚೂರೂ ಕ್ಷೇತ್ರದ ಸಂಸದ ರಾಹುಲ್ ಕಾಸ್ವಾನ್ ಅವರು ಬಿಜೆಪಿ ತೊರೆದು ಸೋಮವಾರ ಕಾಂಗ್ರೆಸ್ ಸೇರ್ಪಡೆಯಾದರು. ಇದೇ ವೇಳೆ, ಲೋಕಸಭಾ ಸದಸ್ಯತ್ವಕ್ಕೂ ರಾಜೀನಾಮೆ ನೀಡಿದರು.

'ಎಕ್ಸ್' ವೇದಿಕೆಯಲ್ಲಿ ರಾಜೀನಾಮೆ ವಿಚಾರ ಬಹಿರಂಗಪಡಿಸಿರುವ ಕಾಸ್ವಾನ್, 'ರಾಜಕೀಯ ಕಾರಣಗಳಿಗಾಗಿ ನಾನು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ' ಎಂದು ಬರೆದಿದ್ದಾರೆ.

ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕ ಅಶೋಕ್ ಗೆಹಲೋತ್ ಮತ್ತಿತರ ನಾಯಕರು ಕಾಸ್ವಾನ್ ಅವರ ನಡೆಯನ್ನು ಸ್ವಾಗತಿಸಿದ್ದಾರೆ.

ಬಿಜೆಪಿ ಸಂಸದ ರಾಹುಲ್ ಕಾಸ್ವಾನ್ ಅವರನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷಕ್ಕೆ ದೆಹಲಿಯಲ್ಲಿ ಸೋಮವಾರ ಬರಮಾಡಿಕೊಂಡರು –ಪಿಟಿಐ ಚಿತ್ರ

ಮೌಲ್ಯಮಾಪನ: ತಿಂಗಳಿಗೊಂದರಂತೆ 3 ಪರೀಕ್ಷೆ ನಡೆಸುವ, ಫಲಿತಾಂಶ ನೀಡುವ ಒತ್ತಡ

ಬೋಧನಾನುಭವ ಇಲ್ಲದವರಿಗೂ ಮಣೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಮೂರು ಪರೀಕ್ಷೆಗಳನ್ನು ನಡೆಸುವ ಒತ್ತಡಕ್ಕೆ ಸಿಲುಕಿರುವ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಕನಿಷ್ಠ ಬೋಧನಾ ಅನುಭವವಿಲ್ಲದವರನ್ನೂ ಮೌಲ್ಯಮಾಪನ ಕಾರ್ಯಕ್ಕೆ ಬಳಸಿಕೊಳ್ಳಲು ಮುಂದಾಗಿದೆ.

ದ್ವಿತೀಯ ಪದವಿಪೂರ್ವ ಶಿಕ್ಷಣದ ಮೊದಲ ಮುಖ್ಯ ಪರೀಕ್ಷೆ ಇದೇ ಮಾರ್ಚ್ 22ಕ್ಕೆ ಮುಗಿಯಲಿದೆ. 26ರಿಂದ ಮೌಲ್ಯಮಾಪನ ಕಾರ್ಯ ಆರಂಭವಾಗಲಿದೆ. ಏಪ್ರಿಲ್ ಹಾಗೂ ಮೇ ನಲ್ಲೇ ಉಳಿದ ಎರಡು ಪರೀಕ್ಷೆಗಳನ್ನು ನಡೆಸಬೇಕಿದೆ. ಹಾಗಾಗಿ, ಮೊದಲ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಿ, ಏ.10ರ ಒಳಗೆ ಫಲಿತಾಂಶ ನೀಡಲು ಮಂಡಳಿ ಸಿದ್ಧತೆ ಮಾಡಿಕೊಂಡಿದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಯುವ ಸಿಇಟಿಗೆ ಮುನ್ನ ಎರಡು ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದರೆ, ವಿದ್ಯಾರ್ಥಿಗಳು ಯಾವುದರಲ್ಲಿ ಹೆಚ್ಚು ಅಂಕಗಳನ್ನು ಪಡೆದಿರುತ್ತಾರೋ ಆ ಅಂಕಪಟ್ಟಿ ಪಡೆದು ಮುಂದಿನ ಶಿಕ್ಷಣಕ್ಕೆ ಅಗತ್ಯವಾದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂಬ ವಿದ್ಯಾರ್ಥಿ ಸ್ನೇಹಿ ಲೆಕ್ಕಾಚಾರವಿದೆ. ಆದರೆ, ಕಡಿಮೆ ಸಮಯದಲ್ಲಿ ಫಲಿತಾಂಶ ಕೊಡುವ ಭರದಲ್ಲಿ, ನಿಯಮದಂತೆ ಮೂರು ವರ್ಷಗಳ ಬೋಧನಾ ಅನುಭವ ಇಲ್ಲದವರಿಗೂ ಮಣೆ ಹಾಕುತ್ತಿರುವುದಕ್ಕೆ ಉಪನ್ಯಾಸಕರ ವಲಯದಲ್ಲೇ ಆಕ್ಷೇಪ ವ್ಯಕ್ತವಾಗಿದೆ.

ಪದವಿಪೂರ್ವ ಕಾಲೇಜುಗಳು

1,232	ಸರ್ಕಾರಿ
825	ಅನುದಾನಿತ
3,567	ಖಾಸಗಿ
18	ಬಿಬಿಎಂಪಿ
5,642	ಒಟ್ಟು

ಬೋಧನಾನುಭವ ಇಲ್ಲದವರನ್ನು 2023ರಲ್ಲಿ ಮೌಲ್ಯಮಾಪನಕ್ಕೆ ಬಳಸಿಕೊಂಡ ಮಾಹಿತಿ ಇಲ್ಲ. ಈ ಬಾರಿ ಅವರಿಗೆ ಅವಕಾಶ ನೀಡುವ ಅಥವಾ ನೀಡದಿರುವ ಕುರಿತು ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ

ಎನ್.ಮಂಜುಶ್ರೀ, ಅಧ್ಯಕ್ಷೆ, ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ

'ಮೌಲ್ಯಮಾಪನ ಕಾರ್ಯದಲ್ಲಿ ಲೋಪ ಎಸಗಿದ ಉಪನ್ಯಾಸಕರ ವಿರುದ್ಧ ಕ್ರಮಕ್ಕೆ ಅವಕಾಶವಿದೆ. ಮೂರು ವೇತನ ಬಡ್ತಿಗಳನ್ನೂ ತಡೆಯಬಹುದು. ಇದು ಸರ್ಕಾರಿ, ಅನುದಾನಿತ ಕಾಲೇಜುಗಳ ಉಪನ್ಯಾಸಕರಿಗೆ ಅನ್ವಯವಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಬಹುತೇಕ ಉಪನ್ಯಾಸಕರು ಒಂದೇ ಕಡೆ ಹೆಚ್ಚು ಸಮಯ ಕಾರ್ಯನಿರ್ವಹಿಸುವುದಿಲ್ಲ. ಅಂಥವರ ಮೇಲೆ ಸರ್ಕಾರಕ್ಕೆ ಹಿಡಿತವೂ ಇರುವುದಿಲ್ಲ. ಹಿಂದೆ ಆಯಾ ಕಾಲೇಜುಗಳ ಪ್ರಾಂಶುಪಾಲರ ಲಾಗಿನ್ ಮೂಲಕ ಮೌಲ್ಯಮಾಪನಕ್ಕೆ ಹೆಸರು ಶಿಫಾರಸು ಮಾಡಲಾಗುತ್ತಿತ್ತು. ಲೋಪಕ್ಕೆ ಕಾಲೇಜಗಳನ್ನೂ ಹೊಣೆ ಮಾಡಲಾಗುತ್ತಿತ್ತು. ಈಗ ಮಂಡಳಿಯಲ್ಲೇ ನೇರ ನೊಂದಣಿಗೆ ಅವಕಾಶ ಮಾಡಿಕೊಡಲಾಗಿದೆ. ಇದು ಸರಿಯಾದ ಕ್ರಮವಲ್ಲ' ಎನ್ನುತ್ತಾರೆ ನಿವೃತ್ತ ಪ್ರಾಂಶುಪಾಲ ರಾಜಣ್ಣ ರೆಡ್ಡಿ.

55 ಸಾವಿರಕ್ಕೂ ಹೆಚ್ಚು ನೋಂದಣಿ

ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಲು ಬಯಸುವ ಉಪನ್ಯಾಸಕರಿಗೆ ಮೌಲ್ಯನಿರ್ಣಯ ಮಂಡಳಿ ಇದೇ ಮೊದಲ ಬಾರಿ ನೋಂದಣಿ ಪ್ರಕ್ರಿಯೆ ಆರಂಭಿಸಿತ್ತು. 55 ಸಾವಿರಕ್ಕೂ ಹೆಚ್ಚು ಉಪನ್ಯಾಸಕರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಅವರಲ್ಲಿ 20 ಸಾವಿರಕ್ಕೂ ಹೆಚ್ಚು ಉಪನ್ಯಾಸಕರ ಸೇವಾ ಅನುಭವ ಮೂರು ವರ್ಷಕ್ಕಿಂತ ಕಡಿಮೆ ಇದೆ.

'ಪಿಯು ವಾರ್ಷಿಕ ಪರೀಕ್ಷೆಯ ನಂತರ ಒಂದು ಪೂರಕ ಪರೀಕ್ಷೆ ನಡೆಸಲಾಗುತ್ತಿತ್ತು. ಕನಿಷ್ಠ 12ದಿನಗಳಿಂದ 25 ದಿನ ಮೌಲ್ಯಮಾಪನ ನಡೆಯುತ್ತಿತ್ತು. ಸರ್ಕಾರಿ ಕಾಲೇಜಿನ ಎಂಟು ಸಾವಿರ ಸೇರಿದಂತೆ ಸುಮಾರು 25 ಸಾವಿರ ಉಪನ್ಯಾಸಕರು ಭಾಗಿಯಾಗುತ್ತಿದ್ದೆವು. 2023ರ ವಾರ್ಷಿಕ ಪರೀಕ್ಷೆಯ ನಂತರ ಎರಡು ಪೂರಕ ಪರೀಕ್ಷೆ ನಡೆಸಲಾಗಿತ್ತು. ಆಗಲೂ ಬೋಧನಾ ಅನುಭವ ಇಲ್ಲದವರಿಗೆ ಅವಕಾಶ ಕೊಡಲಾಗಿತ್ತು. ಈ ಬಾರಿ ಮೂರೂ ಮುಖ್ಯ ಪರೀಕ್ಷೆಗಳೇ. ಹಾಗಾಗಿ, ಹೆಚ್ಚಿನ ವಿದ್ಯಾರ್ಥಿಗಳು ಮರು ಮೌಲ್ಯಮಾಪನ, ಮರು ಎಣಿಕೆಗೆ ಆಸಕ್ತಿ ತೋರದೇ ಇರಬಹುದು. ಅನುಭವ ಇಲ್ಲದವರು ಸರಿಯಾಗಿ ಮೌಲ್ಯಮಾಪನ ಮಾಡದೇ ಹೋದರೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ' ಎನ್ನುತ್ತಾರೆ ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಪಿಯು ಕಾಲೇಜಿನ ಉಪನ್ಯಾಸರೊಬ್ಬರು.

ಮಂಗಳವಾರ, ಮಾರ್ಚ್ 12, 2024 | ₹ 7.00
● www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಣ್ಣೋಟ
ದೆಹಲಿಯಲ್ಲಿ ನಡೆದ 'ಯೋಧ' ಸಿನಿಮಾ ಪ್ರಚಾರ ಕಾರ್ಯಕ್ರಮದಲ್ಲಿ ನಟ ದಿಶಾ ಪಾಟನಿ ಫೋಟೊಗೆ ಫೋಸು ಕೊಟ್ಟಿದ್ದು ಹೀಗೆ...

ಸತ್ಯಮೇವ ಜಯತೇ
Government of India

ಮೋದಿ ಸರ್ಕಾರದ ಗ್ಯಾರಂಟಿ

ಭಾರತೀಯ ರೈಲ್ವೆಯ ಆಧುನೀಕರಣ

₹ 85 ಸಾವಿರ ಕೋಟಿಗೂ ಅಧಿಕ ಮೌಲ್ಯದ 6000 ರೈಲ್ವೆ ಯೋಜನೆಗಳ ಉಡುಗೊರೆ

ಶಿಲಾನ್ಯಾಸ ಮತ್ತು ಲೋಕಾರ್ಪಣೆ

- 50 ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳು
- 222 ರೈಲ್ವೆ ಗೂಡ್ಸ್-ಷೆಡ್‌ಗಳು
- 51 ಗತಿ ಶಕ್ತಿ ಮಲ್ಟಿ-ಮೊಡಲ್ ಕಾರ್ಗೊ ಟರ್ಮಿನಲ್‌ಗಳು
- 2646 ನಿಲ್ದಾಣಗಳ ಡಿಜಿಟಲ್ ಕಂಟ್ರೋಲಿಂಗ್
- 35 ರೈಲ್ವೆ ಕಾರ್ಯಾಗಾರಗಳು, ಲೊಕೊ ಷೆಡ್‌ಗಳು, ಪಿಟ್ ಲೈನ್ಸ್/ಕೋಚಿಂಗ್ ಡಿಪೋಗಳು
- 1500 ಕಿ.ಮೀ. ರೈಲ್ವೆ ಲೈನ್‌ಗಳ ಡಬ್ಲಿಂಗ್/ಮಲ್ಟಿ ಟ್ರ್ಯಾಕಿಂಗ್ ಮತ್ತು ಗೇಜ್ ಕನ್ವರ್ಷನ್
- 1045 ಕಿ.ಮೀ. ಉದ್ದಕ್ಕೆ 80 ರೈಲ್ ಲೈನ್ ಸೆಕ್ಷನ್‌ಗಳ ಆಟೋಮ್ಯಾಟಿಕ್ ಬ್ಲಾಕ್ ಸಿಗ್ನಲ್ಲಿಂಗ್
- 35 ರೈಲ್ ಕೋಚ್ ರೆಸ್ಟೋರೆಂಟ್‌ಗಳು
- 1500ಕ್ಕೂ ಹೆಚ್ಚು 'ಒಂದು ನಿಲ್ದಾಣ ಒಂದು ಉತ್ಪನ್ನ' ಮಳಿಗೆಗಳು
- 975 ಸೌರ ಚಾಲಿತ ನಿಲ್ದಾಣಗಳು/ಸೇವಾ ಕಟ್ಟಡಗಳು
- 2135 ಕಿ.ಮೀ. ರೈಲ್ ಲೈನ್ ಸೆಕ್ಷನ್‌ಗಳ ವಿದ್ಯುದೀಕರಣ
- 401 ಕಿ.ಮೀ. ಉದ್ದದ ನ್ಯೂ ಖುರ್ಜಾ – ಸಾನೆಹ್‌ವಾಲ್ ಈಸ್ಟರ್ನ್ ಡೆಡಿಕೇಟೆಡ್ ಫ್ರೈಟ್ ಕಾರಿಡಾರ್ ಸೆಕ್ಷನ್
- 244 ಕಿ.ಮೀ. ಉದ್ದದ ನ್ಯೂ ಮಕರಪುರ – ನ್ಯೂ ಘೊಲವಾಡ್ ವೆಸ್ಟರ್ನ್ ಡೆಡಿಕೇಟೆಡ್ ಫ್ರೈಟ್ ಕಾರಿಡಾರ್ ಸೆಕ್ಷನ್
- ಆಪರೇಶನ್ ಕಂಟ್ರೋಲ್ ಸೆಂಟರ್, ಅಹ್ಮದಾಬಾದ್
- ಫಲ್ಟನ್ – ಬಾರಾಮತಿ ನೂತನ ರೈಲ್ ಲೈನ್
- 9 ಇಲೆಕ್ಟ್ರಿಕ್ ಟ್ರಾಕ್ಷನ್ ಸಿಸ್ಟಮ್ ಉನ್ನತೀಕರಣ ಕಾಮಗಾರಿ

ವಂದೇ ಭಾರತ್ ಮತ್ತು ಇನ್ನಿತರ ರೈಲುಗಳ ಶುಭಾರಂಭ

- ಮೈಸೂರು – ಚೆನ್ನೈ
- ಲಕ್ನೋ – ಡೆಹ್ರಾಡೂನ್
- ಕಲಬುರಗಿ – ಬೆಂಗಳೂರು (ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್)
- ರಾಂಚಿ – ವಾರಾಣಸಿ
- ದೆಹಲಿ (ನಿಜಾಮುದ್ದೀನ್) – ಖಜುರಾಹೊ
- ಸಿಕಂದರಾಬಾದ್ – ವಿಶಾಖಪಟ್ಟಣಂ
- ನ್ಯೂ ಜಲಪಾಯ್‌ಗುಡಿ – ಪಾಟ್ನಾ
- ಪಾಟ್ನಾ – ಲಕ್ನೋ
- ಅಹ್ಮದಾಬಾದ್ – ಮುಂಬೈ ಸೆಂಟ್ರಲ್
- ಪುರಿ – ವಿಶಾಖಪಟ್ಟಣಂ

– ಮತ್ತು ಇನ್ನಿತರ ರೈಲು ಸೇವೆಗಳು

ಈ ಯೋಜನೆಗಳ ಲಾಭಗಳು

- ವಿಮಾನಯಾನಕ್ಕೆ ಸರಿಸಮನಾದ ಅತ್ಯಾಧುನಿಕ ಸೌಲಭ್ಯಗಳು
- ತ್ವರಿತ, ಅಡಚಣೆ ರಹಿತ ಮತ್ತು ಆರಾಮದಾಯಕ ಪ್ರಯಾಣದ ಅನುಭವ
- ಸಾಗಾಣಿಕೆ ವೆಚ್ಚದಲ್ಲಿ ಕಡಿತ ಮತ್ತು ಪ್ರಾದೇಶಿಕ ಆರ್ಥಿಕತೆಗೆ ಉತ್ತೇಜನ
- ಅಹ್ಮದಾಬಾದ್ ಆಪರೇಶನ್ ಕಂಟ್ರೋಲ್ ಸೆಂಟರ್‌ನಲ್ಲಿ, ವಿಶ್ವದ ಅತಿದೊಡ್ಡ ಕಂಟ್ರೋಲ್ ಸೆಂಟರ್‌ಗಳಿಗೆ ಸಮನಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ.
- ಪ್ರಧಾನ ಮಂತ್ರಿ ಜನೌಷಧಿ ಕೇಂದ್ರ ಯೋಜನೆ ಅಡಿಯಲ್ಲಿ ಪ್ರತಿಯೊಬ್ಬರಿಗೂ ಕನಿಷ್ಠ 75% ಕಡಿಮೆ ಖರ್ಚನ್ನು ಮತ್ತು ಉತ್ತಮ ಗುಣಮಟ್ಟದ ಜೆನರಿಕ್ ಔಷಧಗಳನ್ನು ಸುನಿಶ್ಚಿತಗೊಳಿಸಲಾಗಿದೆ.
- ವಿಶೇಷ ಭೋಜನದ ಅನುಭೂತಿ ಉಂಟು ಮಾಡಲು ರೈಲ್ವೆ ಒಳಾಂಗಣ ಪರಕಲ್ಪನೆಯುಳ್ಳ ರೆಸ್ಟೋರೆಂಟ್‌ಗಳು.

ಇವರಿಂದ

ನರೇಂದ್ರ ಮೋದಿ

ಪ್ರಧಾನಮಂತ್ರಿ

ಗಣ್ಯ ಉಪಸ್ಥಿತರು

ಆಚಾರ್ಯ ದೇವವ್ರತ್
ರಾಜ್ಯಪಾಲರು, ಗುಜರಾತ್

ಭೂಪೇಂದ್ರ ಭಾಯ್ ಪಟೇಲ್
ಮುಖ್ಯಮಂತ್ರಿ, ಗುಜರಾತ್

ಅಶ್ವಿನಿ ವೈಷ್ಣವ್
ಕೇಂದ್ರ ಸಚಿವರು, ರೈಲ್ವೆ, ಸಂವಹನ ಮತ್ತು ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ

ರಾವ್‌ಸಾಹೇಬ್ ಪಾಟೀಲ ದಾನವೆ
ರಾಜ್ಯ ಕೇಂದ್ರ ಸಚಿವರು, ರೈಲ್ವೆ, ಕಲ್ಲಿದ್ದಲು ಮತ್ತು ಗಣಿಗಳ ಖಾತೆ

ದರ್ಶನ ಜರದೋಶ್
ಕೇಂದ್ರ ರಾಜ್ಯ ಸಚಿವರು, ರೈಲ್ವೆ ಮತ್ತು ಜವಳಿ ಖಾತೆ

ಮಂಗಳವಾರ, 12 ಮಾರ್ಚ್, 2024, ಬೆಳಗ್ಗೆ 08:00 ಗಂಟೆ

ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ ವೀಕ್ಷಿಸಿ DD NEWS

ಮೈಸೂರು ಪೇಂಟ್ಸ್: ಶೀಘ್ರ ಬ್ರ್ಯಾಂಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ಬಣ್ಣ ಮತ್ತು ಅರಗಿನ ಕಾರ್ಖಾನೆಯ ಉತ್ಪಾದನೆ ಮತ್ತು ಆರ್ಥಿಕ ವಹಿವಾಟು ಹೆಚ್ಚಿಸಿ ಬ್ರ್ಯಾಂಡ್ ವರ್ಚಸ್ಸು ನೀಡಲು ಯೋಜನೆ ರೂಪಿಸಲಾಗಿದೆ' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಕಾರ್ಖಾನೆಯ ಆಡಳಿತ ಮಂಡಳಿಯ ಸಭೆ ಬಳಿಕ ಮಾತನಾಡಿದ ಅವರು, 'ಕಾರ್ಖಾನೆಯು ಸದ್ಯಕ್ಕೆ ವಾರ್ಷಿಕ ₹35 ಕೋಟಿಯಷ್ಟು ವಹಿವಾಟು ನಡೆಸುತ್ತಿದೆ. ಲೋಕಸಭಾ ಚುನಾವಣೆ ಬಂದಿರುವುದರಿಂದ ಶಾಯಿ ತಯಾರಿಕೆಗೆ ಬೇಡಿಕೆ ಬಂದಿದೆ. ಈ ವರ್ಷ ವಹಿವಾಟು ₹77 ಕೋಟಿ ತಲುಪುವ ನಿರೀಕ್ಷೆಯಿದೆ' ಎಂದರು.

'ಮನೆ ಗೋಡೆಗೆ ಬಳಿಯುವಂತಹ ಬಣ್ಣಗಳನ್ನು ತಯಾರಿಸಲು ಸೂಚಿಸಲಾಗಿದೆ. ಮುಕ್ತ ಮಾರುಕಟ್ಟೆ ಅಲ್ಲದೆ, ಸರ್ಕಾರಿ ಕಟ್ಟಡಗಳು, ಶಾಲಾ-ಕಾಲೇಜು, ಹಾಸ್ಟೆಲ್‌ಗಳಿಗೆ ಬೇಕಾಗುವ ಬಣ್ಣ, ಎಮಲ್ಶನ್ ಇತ್ಯಾದಿಗಳನ್ನು ಈ ಕಾರ್ಖಾನೆಯಲ್ಲೇ ತಯಾರಿಸುವ ಚಿಂತನೆ ಇದೆ. ಇದಕ್ಕಾಗಿ, ಬಣ್ಣಗಳ ಉದ್ಯಮದಲ್ಲಿ ಪಳಗಿರುವ ಪರಿಣತರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳಲು ಸಭೆಯಲ್ಲಿ ಅನುಮತಿ ನೀಡಲಾಗಿದೆ' ಎಂದರು.

'ವೈಜ್ಞಾನಿಕವಾಗಿ ಮಾರುಕಟ್ಟೆಯನ್ನೂ ವಿಸ್ತರಿಸಿ, ಸ್ಪರ್ಧಾತ್ಮಕ ಬೆಲೆಯಲ್ಲಿ ಪೇಂಟ್ ಸಿಗುವಂತೆ ಮಾಡಲಾಗುವುದು. ಇದಕ್ಕೆ ಬೇಕಾದ ಸಿದ್ಧತೆಗಳನ್ನು ಈಗಾಗಲೇ ಆರಂಭಿಸಲಾಗಿದೆ' ಎಂದೂ ಅವರು ಮಾಹಿತಿ ನೀಡಿದರು.

ಮಾರ್ಗಸೂಚಿಯಂತೆ ತೆರಿಗೆ ನಿಗದಿ • ಗರಿಷ್ಠ ಹೆಚ್ಚಳ ಮಿತಿ ಶೇಕಡ 10 • ಡಿಕೆಶಿ ವಿವರಣೆ

ಆಸ್ತಿ ತೆರಿಗೆ ಸರಾಸರಿ ಶೇ 6.5 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಆಸ್ತಿಗಳಿಗೆ ಮಾರ್ಗಸೂಚಿ ದರದ ಆಧಾರದಲ್ಲಿ ತೆರಿಗೆ ವಿಧಿಸುವ ಹೊಸ ಪದ್ಧತಿಯಲ್ಲಿ ಅಲ್ಪ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ.

ಹೊಸ ಪದ್ಧತಿಯಂತೆ ಆಸ್ತಿಗಳ ತೆರಿಗೆ ಪ್ರಮಾಣವು ಸರಾಸರಿ ಶೇಕಡ 6.5 ರಷ್ಟು ಹೆಚ್ಚಾಗಲಿದೆ. ಇದರಂತೆ ಖಾಲಿ ನಿವೇಶನದ ಆಸ್ತಿ ತೆರಿಗೆ ಅತಿಹೆಚ್ಚಿನ ಪ್ರಮಾಣದಲ್ಲಿ ಅಧಿಕವಾಗಲಿದೆ.

'ಹೊಸ ಆಸ್ತಿ ತೆರಿಗೆ ವ್ಯವಸ್ಥೆಯಿಂದ ತೆರಿಗೆ ಹೊರೆಯನ್ನು ಹೆಚ್ಚಿಸುವುದಲ್ಲ. ಆದರೆ ವಿಧಾನವನ್ನು ಸರಳಗೊಳಿಸುವುದಾಗಿದೆ. ಪ್ರತಿ ಆಸ್ತಿಗೆ ತೆರಿಗೆಯ ಗರಿಷ್ಠ ಹೆಚ್ಚಳವನ್ನು ಶೇ 10ಕ್ಕೆ ಮಿತಿಗೊಳಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

2008ರಲ್ಲಿ ಯುನಿಟ್ ವಿಸ್ತೀರ್ಣ ಮೌಲ್ಯ (ಯುಎವಿ) ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಪ್ರಸ್ತುತ ಈ ಪದ್ಧತಿಯಲ್ಲಿ 18 ವಿವಿಧ ವರ್ಗಗಳಲ್ಲಿ ಇಡೀ ನಗರವನ್ನು ಆರು ವಲಯಗಳಾಗಿ ವಿಂಗಡಿಸಿ ಆಸ್ತಿ ತೆರಿಗೆ ವಿಧಿಸಲಾಗುತ್ತಿದೆ. ನಾಗರಿಕರಿಗೆ ಸ್ವಯಂ–ಘೋಷಣೆ ಸಲ್ಲಿಸಲೂ ಗೊಂದಲವಾಗಿದೆ.

ಆಸ್ತಿ ತೆರಿಗೆ ಹೆಚ್ಚಳದ ಲೆಕ್ಕಾಚಾರ

ಸ್ವತ್ತಿನ ವರ್ಗ	ಹೊಸ ಪದ್ಧತಿ (ಮಾರ್ಗಸೂಚಿ ದರದಂತೆ ಶೇಕಡವಾರು)	ಹಳೆ ಪದ್ಧತಿಯಂತೆ ಸರಾಸರಿ ₹ಗಳಲ್ಲಿ	ಹೊಸ ಪದ್ಧತಿಯಂತೆ ನಿರೀಕ್ಷಿತ ಸರಾಸರಿ ₹ಗಳಲ್ಲಿ	ಶೇಕಡ ಹೆಚ್ಚಳ
ವಸತಿ	ಸ್ವಂತ: 0.075 ಬಾಡಿಗೆ: 0.075+0.15	4,942	5,274	6.7
ವಸತಿಯೇತರ	0.37	69,525	74,040	6.5
ಕೈಗಾರಿಕೆ	0.15	80,550	84,816	5.3
ತಾರಾ ಹೋಟೆಲ್	0.75	1,21,60,791	1,29,63,392	6.6
ಖಾಲಿ ನಿವೇಶನ	0.03	1,460	1,580	8.2
ಹೊಸ ಪದ್ಧತಿಯಂತೆ ಒಟ್ಟಾರೆ ಪ್ರಮಾಣ				6.5

ಹೀಗಾಗಿ ಹೊಸ ಆಸ್ತಿ ತೆರಿಗೆ ಪದ್ಧತಿಯಲ್ಲಿ ಆರು ವರ್ಗಗಳಲ್ಲಿ ಮಾತ್ರ ಆಸ್ತಿಗಳನ್ನು ವರ್ಗೀಕರಿಸಿ, ತೆರಿಗೆ ವ್ಯವಸ್ಥೆಯನ್ನು ಸರಳೀಕರಿಸಲಾಗಿದೆ ಎಂದು ಹೇಳಿದರು.

ವಸತಿ (ಸ್ವಂತ ಮತ್ತು ಬಾಡಿಗೆ), ವಾಣಿಜ್ಯ, ಕೈಗಾರಿಕೆ, ಸ್ಟಾರ್ ಹೋಟೆಲ್, ವಿನಾಯಿತಿ ಕಟ್ಟಡಗಳು, ಸಂಪೂರ್ಣ ಖಾಲಿ ನಿವೇಶನಗಳು ಎಂಬ ಆರು ವರ್ಗಗಳಲ್ಲಿ ನಿವೇಶನ ವಿಸ್ತೀರ್ಣ, ಕಟ್ಟಡ ಪ್ರದೇಶ, ಸ್ವತ್ತಿನ ಬಳಕೆ, ಸ್ವತ್ತಿಗೆ ಅನ್ವಯವಾಗುವ ಪ್ರಸ್ತುತ ಮಾರ್ಗಸೂಚಿ ದರವನ್ನು ಆಧರಿಸಿ ಆಸ್ತಿ ತೆರಿಗೆ ಲೆಕ್ಕಹಾಕಲಾಗುವುದು. ನಾಗರಿಕರು ಮಾರ್ಗಸೂಚಿ ದರ ನಮೂದಿಸಬಹುದು. ಒಂದು ವೇಳೆ ಕಡಿಮೆ ಕ್ಲೇಮ್ ಮಾಡಿದ್ದರೆ ಆನ್‌ಲೈನ್‌ನಲ್ಲಿಯೇ ಮೂರು ತಿಂಗಳೊಳಗೆ ಬಿಬಿಎಂಪಿ ಅದನ್ನು ಸರಿಪಡಿಸುತ್ತದೆ. ಈ ಅವಧಿಯಲ್ಲಿ ನಿರ್ಧಾರವಾಗದಿದ್ದರೆ ನಾಗರಿಕರ ಕ್ಲೇಮ್ ಸ್ವೀಕರಿಸಿ ಪರಿಗಣಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಆಸ್ತಿ ತೆರಿಗೆಯನ್ನು 2016ರಲ್ಲಿ ಪರಿಷ್ಕರಿಸಲಾಗಿದ್ದು, ಆಗ ವಸತಿ ಆಸ್ತಿಗಳಿಗೆ ಶೇ 20 ಹಾಗೂ ವಸತಿಯೇತರ ಆಸ್ತಿಗಳಿಗೆ ಶೇ 25ರಷ್ಟು ಹೆಚ್ಚಿಸಲಾಗಿತ್ತು. ಇದೀಗ ಹೊಸ ಪದ್ಧತಿಯಂತೆ ಆಸ್ತಿ ತೆರಿಗೆ ಹೆಚ್ಚಳದ ಸರಾಸರಿ ಶೇ 6.5ರಷ್ಟಿದ್ದು, ಎಂಟು ವರ್ಷಗಳಿಗೆ ಹೋಲಿಸಿದರೆ ವಾರ್ಷಿಕ ಶೇ 1ಕ್ಕಿಂತ ಕಡಿಮೆ ಹೆಚ್ಚಳವಾಗಿದೆ ಎಂದು ಹೇಳಿದರು.

ಮಾ. 20ರಿಂದ ಆನ್‌ಲೈನ್‌ನಲ್ಲಿ ಖಾತಾ

ಆಸ್ತಿ ಮಾಲೀಕರು ಖಾತಾಗಳನ್ನು ಪಡೆಯಲು 'ಬಿಬಿಎಂಪಿ ಆಸ್ತಿ ತೆರಿಗೆ ನೋಂದಣಿ' ಆನ್‌ಲೈನ್ ವ್ಯವಸ್ಥೆಯನ್ನು ಮಾರ್ಚ್ 20ರಿಂದ ಜಾರಿಗೆ ತರಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಆನ್‌ಲೈನ್‌ನಲ್ಲಿ ಆಸ್ತಿಗಳನ್ನು ನಮೂದಿಸಿ, ಮಾಲೀಕರು ಆಸ್ತಿ ತೆರಿಗೆಯನ್ನು ತಕ್ಷಣವೇ ಪಾವತಿಸಬಹುದು. ಅವರಿಗೆ ಆಸ್ತಿ ತೆರಿಗೆ ಸಂಖ್ಯೆ ನೀಡಲಾಗುತ್ತದೆ. ಮೊಬೈಲ್ ಸಂಖ್ಯೆ, ಆಧಾರ್, ಮಾಲೀಕರು ಮತ್ತು ಆಸ್ತಿಯ ಚಿತ್ರ, ಜಿಪಿಎಸ್ ಅನ್ನು ಅಪ್‌ಲೋಡ್ ಮಾಡಬೇಕು. ನೋಂದಣಿ ಪತ್ರ ಸೇರಿದಂತೆ ಎಲ್ಲ ದಾಖಲೆಗಳನ್ನೂ ಸಲ್ಲಿಸಬೇಕು. ಇದನ್ನು ಖಾತಾಗಾಗಿ ಸಲ್ಲಿಸಿರುವ ಅರ್ಜಿ ಎಂದು ಪರಿಗಣಿಸಲಾಗುತ್ತದೆ ಎಂದರು.

ಹೊಸದಾಗಿ ತೆರಿಗೆ ಪಾವತಿಸುವವರು, ಖಾತಾ ಬದಲಾಯಿಸುವವರು ಬಿಬಿಎಂಪಿಯ ವೆಬ್‌ಸೈಟ್‌ನಲ್ಲಿ ಮಾರ್ಚ್ 20ರಿಂದ ಅರ್ಜಿ ಸಲ್ಲಿಸಬಹುದು. 'ಬೆಂಗಳೂರು ಒನ್' ಕೇಂದ್ರಗಳಲ್ಲೂ ಅರ್ಜಿ ಸಲ್ಲಿಸುವ ವ್ಯವಸ್ಥೆ ಶೀಘ್ರವೇ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ಏಪ್ರಿಲ್‌ನಿಂದ ಜಾರಿ ಇಲ್ಲ?

ಹೊಸ ಆಸ್ತಿ ತೆರಿಗೆ ಯಾವ ಆರ್ಥಿಕ ವರ್ಷದಿಂದ ಜಾರಿಯಾಗುತ್ತದೆ ಎಂಬ ಮಾಹಿತಿಯನ್ನು ಉಪ ಮುಖ್ಯಮಂತ್ರಿಯವರೂ ನೀಡಲಿಲ್ಲ, ಬಿಬಿಎಂಪಿ ಅಧಿಕಾರಿಗಳಿಗೂ ಈ ಬಗ್ಗೆ ಸ್ಪಷ್ಟತೆ ಇಲ್ಲ. ಹೊಸ ಆಸ್ತಿ ತೆರಿಗೆ ಪದ್ಧತಿಗೆ ಸಂಬಂಧಿಸಿದಂತೆ ಕರಡು ಅಧಿಸೂಚನೆ ಫೆಬ್ರುವರಿ 20ರಂದು ಪ್ರಕಟಗೊಂಡಿತ್ತು. ನಾಗರಿಕರ ಆಕ್ಷೇಪಣೆಗೆ 15 ದಿನಗಳ ಅವಕಾಶ ನೀಡಲಾಗಿತ್ತು. ಅಂತಿಮ ಅಧಿಸೂಚನೆ ಇನ್ನೂ ಹೊರಬಿದ್ದಿಲ್ಲ. ಇದರ ಪ್ರಕಟಣೆ ಬಗ್ಗೆ ಬಿಬಿಎಂಪಿ ಅಧಿಕಾರಿಗಳಲ್ಲೂ ಸ್ಪಷ್ಟ ಮಾಹಿತಿ ಇಲ್ಲ.

'ಏಪ್ರಿಲ್‌ನಿಂದ ಹೊಸ ಪದ್ಧತಿ ಜಾರಿಯಾಗುವುದಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಹಿರಿಯ ಅಧಿಕಾರಿ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

'ಹೆಗಡೆ ವಿರುದ್ಧ ದೂರು ದಾಖಲಿಸಿ'

ಬೆಂಗಳೂರು: ಭಾರತದ ಸಂವಿಧಾನ ಬದಲಿಸುತ್ತೇವೆ ಎನ್ನುವುದು ದೇಶದ್ರೋಹದ ಹೇಳಿಕೆ. ಪದೇಪದೇ ಇಂತಹ ಹೇಳಿಕೆ ನೀಡುತ್ತಿರುವ ಉತ್ತರ ಕನ್ನಡದ ಸಂಸದ ಅನಂತ ಕುಮಾರ್ ಹೆಗಡೆ ವಿರುದ್ಧ ರಾಜ್ಯ ಸರ್ಕಾರ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕು ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಒತ್ತಾಯಿಸಿದ್ದಾರೆ.

ರಾಜ್ಯದ ಜನರು ಬಿಜೆಪಿಯನ್ನು ಅಧಿಕಾರದಿಂದ ಹೊರಗೆ ದಬ್ಬಿದ್ದಾರೆ. ಗೃಹ ಸಚಿವ ಜಿ. ಪರಮೇಶ್ವರ ಅವರು ಗಟ್ಟಿಗುಂಡಿಗೆಯ ನಿರ್ಧಾರ ಕೈಗೊಳ್ಳಬೇಕು. ಎಲ್ಲ ವಿಚಾರಕ್ಕೂ ಹೆದರಿಕೊಂಡು ಕುಳಿತು ಕೊಳ್ಳುವುದು ತಮ್ಮ ಹುದ್ದೆಗೆ ಶೋಭೆ ತಾರದು. ಅನಂತ ಕುಮಾರ್ ಹೆಗಡೆ ಹೇಳಿಕೆ ಅವರ ವೈಯಕ್ತಿಕವಲ್ಲ. ಏಕೆಂದರೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಮೂಲ ಉದ್ದೇಶವೇ ಸಂವಿಧಾನ ಬದಲಿಸುವುದು. ಬಿಜೆಪಿಗೆ ನೈತಿಕತೆ ಇದ್ದರೆ ತಕ್ಷಣ ಅವರನ್ನು ಉಚ್ಚಾಟಿಸಬೇಕು ಎಂದು ಆಗ್ರಹಿಸಿದ್ದಾರೆ.

ಜನರು ಈ ಬಾರಿ ಬಿಜೆಪಿಗೆ ಮತ ಹಾಕಿದರೆ ಶಾಶ್ವತವಾಗಿ ಮತದಾನದ ಹಕ್ಕು ಕಳೆದುಕೊಳ್ಳುವರು. ದೇಶದಲ್ಲಿ ಮುಂದೆ ಚುನಾವಣೆಗಳೇ ನಡೆಯುವುದಿಲ್ಲ. ಜನಾಂಗೀಯ ದ್ವೇಷಕ್ಕೆ ದೇಶದಲ್ಲಿ ರಕ್ತಪಾತವೇ ಆಗುತ್ತದೆ ಎಂದು ಚಂದ್ರು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ವಿಮಾನ ನಿಲ್ದಾಣದ ಬಳಿ ಮತ್ತೊಂದು ಇಂದಿರಾ ಕ್ಯಾಂಟೀನ್

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಬಳಿಯೂ ಮತ್ತೊಂದು ಇಂದಿರಾ ಕ್ಯಾಂಟೀನ್ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಿ–7 ಪಾರ್ಕಿಂಗ್ ಸಮೀಪ ಸೋಮವಾರ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ ಅವರು ಮಾತನಾಡಿದರು.

ವಿಮಾನ ನಿಲ್ದಾಣದ ಬಳಿ ಇಂದಿರಾ ಕ್ಯಾಂಟೀನ್ ಆರಂಭಿಸಬೇಕೆಂಬ ಟ್ಯಾಕ್ಸಿ ಚಾಲಕರು ಹಾಗೂ ಇತರ ವಾಹನ ಚಾಲಕರ ಬೇಡಿಕೆಗೆ ಸ್ಪಂದಿಸಿ ಕ್ಯಾಂಟೀನ್ ತೆರೆಯಲಾಗಿದೆ. ರಾಜ್ಯದಾದಂತ್ಯ ಇರುವ 600 ಕ್ಯಾಂಟೀನ್‌ಗಳು ಕೂಲಿ ಕಾರ್ಮಿಕರು, ಬಡವರ ಹಸಿವು ನೀಗಿಸುತ್ತಿದೆ. ಕುಳಿತು ಆಹಾರ ಸೇವಿಸಲು ಅನುಕೂಲ ಆಗುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಮೂಲಸೌಕರ್ಯ ಯೋಜನೆ: ಅಂತಿಮ ಕಂತು ಬಿಡುಗಡೆ

ಪಾಲಿಕೆಗೆ ₹300 ಕೋಟಿ ಕಡಿತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪಾಲಿಕೆಗೆ ನೀಡಿದ್ದ ಅನುದಾನದ ಪಾಲು ಚಂದಾಪುರ ಕೆರೆ ಅಭಿವೃದ್ಧಿಗೆ
- ತನ್ನ ನಡೆಯನ್ನು ಸಮರ್ಥಿಸಿಕೊಂಡ ಸರ್ಕಾರ

ಬೆಂಗಳೂರು: ಸರ್ಕಾರದ 2023–24ನೇ ಸಾಲಿನ ಆಯವ್ಯಯದಲ್ಲಿ 'ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆ'ಯ ಅಡಿ ಬಿಬಿಎಂಪಿಗೆ ಹಂಚಿಕೆ ಮಾಡಲಾಗಿದ್ದ ₹3 ಸಾವಿರ ಕೋಟಿ ಅನುದಾನದಲ್ಲಿ ₹300 ಕೋಟಿ ಕಡಿತವಾಗಿದೆ.

ಬಿಬಿಎಂಪಿಗಾಗಿ ಪ್ರಕಟಿಸಲಾಗಿದ್ದ ₹3 ಸಾವಿರ ಕೋಟಿ ಅನುದಾನದಲ್ಲಿಯೇ ₹300 ಕೋಟಿಯನ್ನು ಚಂದಾಪುರ ಕೆರೆ ಪುನಶ್ಚೇತನಕ್ಕೆ ನೀಡಲಾಗಿದೆ. ಮೂಲ ಸೌಕರ್ಯಕ್ಕೆ ಇನ್ನಷ್ಟು ಹೆಚ್ಚು ಅನುದಾನವನ್ನು ಬಯಸಿದ್ದ ಪಾಲಿಕೆಗೆ, ಬರುವುದರಲ್ಲೂ ಕಡಿತವಾಗಿದೆ.

₹3 ಸಾವಿರ ಕೋಟಿ ಅನುದಾನದಲ್ಲಿ ಮೂರು ತ್ರೈಮಾಸಿಕ ಕಂತುಗಳಲ್ಲಿ ತಲಾ ₹675 ಕೋಟಿಯಂತೆ ಒಟ್ಟು ₹2,025 ಕೋಟಿಯನ್ನು ಸರ್ಕಾರ 2024ರ ಜನವರಿ 23ರವರೆಗೆ ಬಿಡುಗಡೆ ಮಾಡಿತ್ತು. ಅಂತಿಮ ಕಂತಿನಲ್ಲಿ ಇನ್ನುಳಿದ ₹975 ಕೋಟಿ ಲಭ್ಯವಾಗುವ ನಿರೀಕ್ಷೆ ಇತ್ತು.

'ಎನ್‌ಜಿಟಿ ತೀರ್ಪಿನಂತೆ ಚಂದಾಪುರ ಕೆರೆ ಪುನಶ್ಚೇತನಕ್ಕಾಗಿ ₹300 ಕೋಟಿಯನ್ನು 'ಸದಸ್ಯ ಕಾರ್ಯದರ್ಶಿ–ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ' ಹೆಸರಿನಲ್ಲಿ ಪ್ರತ್ಯೇಕ ಖಾತೆ ತೆರೆದು ಠೇವಣಿ ಇಡಲಾಗಿದೆ. ಈ ಮೊತ್ತವನ್ನು ಬಿಬಿಎಂಪಿಯ 'ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆ' ಅನುದಾನದಲ್ಲಿಯೇ ಬಿಡುಗಡೆ ಮಾಡಲಾಗಿದೆ. ಆದರೆ, ಚಂದಾಪುರ ಕೆರೆ ಬಿಬಿಎಂಪಿ ವ್ಯಾಪ್ತಿಗೆ ಒಳಪಡುವುದಿಲ್ಲ. ಹೀಗಾಗಿ, ಪಾಲಿಕೆಗೆ ಹಂಚಿಕೆ ಮಾಡಲಾಗಿರುವ ಅನುದಾನದಲ್ಲಿ ಯಾವುದೇ ಕಡಿತ ಮಾಡದೆ ಉಳಿದಿರುವ ₹975 ಕೋಟಿಯನ್ನು ಬಿಡುಗಡೆ ಮಾಡಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಮನವಿ ಮಾಡಿದ್ದಾರೆ.

'ಇದಲ್ಲದೆ, ಪಾಲಿಕೆ ವ್ಯಾಪ್ತಿಯಲ್ಲಿ ಬೃಹತ್ ನೀರುಗಾಲುವೆ, ಬೃಹತ್ ರಸ್ತೆಗಳು, ಮೇಲ್ಸೇತುವೆ, ಕಾರಿಡಾರ್ ಮುಂತಾದ ಯೋಜನೆಗಳು ಪ್ರಗತಿಯಲ್ಲಿದ್ದು, 2024ರ ಮಾರ್ಚ್‌ವರೆಗೆ ₹3,500 ಕೋಟಿಯಷ್ಟು ಬಿಲ್‌ಗಳ ಪಾವತಿ ಬಾಕಿ ಇರುತ್ತದೆ. ಈ ಬಿಲ್‌ಗಳನ್ನು ಸಕಾಲದಲ್ಲಿ ಪಾವತಿಸದಿದ್ದಲ್ಲಿ ಕಾಮಗಾರಿಗಳ ಪ್ರಗತಿಗೆ ಕುಂಠಿತವಾಗುವ ಸಂಭವವಿದೆ. ಆದ್ದರಿಂದ ಅನುದಾನ ಕಡಿತ ಮಾಡುವುದು ಬೇಡ' ಎಂದು ಪ್ರಸ್ತಾವದಲ್ಲಿ ವಿವರಿಸಿದ್ದಾರೆ.

ಬಿಬಿಎಂಪಿಯ ಮನವಿಯನ್ನು ಪರಿಗಣಿಸದ ಸರ್ಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ₹300 ಕೋಟಿ ಬಿಡುಗಡೆ ಮಾಡಿರುವುದನ್ನು ಸಮರ್ಥಿಸಿಕೊಂಡಿದೆ. 'ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆ' ಅನುದಾನದ ನಾಲ್ಕನೇ ಹಾಗೂ ಅಂತಿಮ ತ್ರೈಮಾಸಿಕ ಕಂತಿನಲ್ಲಿ ₹675 ಕೋಟಿಯನ್ನಷ್ಟೇ ಬಿಡುಗಡೆಗೊಳಿಸಿ ಮಾರ್ಚ್ 7ರಂದು ಆದೇಶ ಹೊರಡಿಸಿದೆ.

'ನಂಬಿಕೆ ನಕ್ಷೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕಚೇರಿಗೆ ಹೋಗದೆ 15 ದಿನಗಳಲ್ಲಿ ಕಟ್ಟಡ ನಕ್ಷೆ ಪಡೆಯುವ 'ನಂಬಿಕೆ ನಕ್ಷೆ'–ನಂಬಿಕೆಯೊಂದಿಗೆ ಪರಿಶೀಲಿಸುವ ವ್ಯವಸ್ಥೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಚಾಲನೆ ನೀಡಿದರು.

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯ ಅಡಿಯಲ್ಲಿ ಈ ಯೋಜನೆ ಜಾರಿಗೆ ತರಲಾಗಿದ್ದು, 50X80 ಅಡಿ ಅಳತೆಯವರೆಗಿನ ಕಟ್ಟಡಗಳಿಗೆ ಆಟೊಮೆಟೆಡ್ ಕಟ್ಟಡ ನಕ್ಷೆಗೆ ಮಂಜೂರಾತಿ 15 ದಿನಗಳಲ್ಲಿ ಸಿಗಲಿದೆ. ಸಕಾರಣ ನೀಡಿ ಅರ್ಜಿಯನ್ನು ತಿರಸ್ಕರಿಸದೆ ಇದ್ದರೆ ಅಥವಾ ಅರ್ಜಿಯನ್ನು ಪರಿಶೀಲಿಸದೆ ಇದ್ದರೆ 15 ದಿನಗಳಲ್ಲಿ ಸ್ವಯಂ ಚಾಲಿತವಾಗಿ ನಕ್ಷೆ ಮಂಜೂರಾಗುತ್ತದೆ ಎಂದು ಶಿವಕುಮಾರ್ ಅವರು ತಿಳಿಸಿದರು.

ಪ್ರಕ್ರಿಯೆ ಹೇಗೆ?: ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bpas.bbmpgov.in/BPAMSClient4/Default.aspx?TAV-1) ಪ್ರಮಾಣೀಕೃತ ಆರ್ಕಿಟೆಕ್ಟ್‌ಗಳು ಅಥವಾ ಎಂಜಿನಿಯರ್‌ಗಳು, ಮಾಲೀಕರು ಒದಗಿಸುವ ದಾಖಲೆಗಳು ಮತ್ತು ಕಟ್ಟಡ ನಕ್ಷೆಯನ್ನು ನಿಯಮಾನುಸಾರ ಅಪ್‌ಲೋಡ್ ಮಾಡಬೇಕು.

ಡಿ.ಕೆ. ಶಿವಕುಮಾರ್

ಆಸ್ತಿ ದಾಖಲೆ ಹಾಗೂ ನಕ್ಷೆಯನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರದ (ಕೆಎಸ್‌ಆರ್‌ಎಸ್‌ಎಸಿ) ವತಿಯಿಂದ ಆನ್‌ಲೈನ್ ಮೂಲಕವೇ ಪರಿಶೀಲಿಸಿ, ಕೆರೆ, ಸರ್ಕಾರಿ ಪ್ರದೇಶಗಳ ಯಾವುದೇ ಬಫರ್ ಝೋನ್‌ನಲ್ಲಿ ಈ ಕಟ್ಟಡ ಬರುವುದಿಲ್ಲ ಎಂಬುದನ್ನು ಖಚಿತ ಮಾಡಿಕೊಳ್ಳಲಾಗುತ್ತದೆ. ಆಟೊ ಡಿಸಿಆರ್ ಮೂಲಕ ವರದಿ ಸಿದ್ಧಗೊಂಡು, ಪಾವತಿ ಶುಲ್ಕದ ವಿವರವನ್ನು ಕೂಡ ನೀಡಲಾಗುತ್ತದೆ.

ಇ–ಪೇಮೆಂಟ್ ಮಾಡಿದ ಕೂಡಲೇ ತಾತ್ಕಾಲಿಕ ನಕ್ಷೆ ಹಾಗೂ ಅನುಮತಿ ಪತ್ರವನ್ನು ನೀಡಲಾಗುತ್ತದೆ.

ಇದಾದ ನಂತರದ 15 ದಿನಗಳಲ್ಲಿ, ಕಂದಾಯ ಅಧಿಕಾರಿಗಳು, ನಗರ ಯೋಜನೆ ಅಧಿಕಾರಿಗಳು ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನಕ್ಷೆಯನ್ನು ಮಂಜೂರು ಮಾಡುತ್ತಾರೆ.

ದಾಖಲೆಗಳಲ್ಲಿ ಯಾವುದಾದರೂ ಸಮಸ್ಯೆ ಇದ್ದರೆ ಅಥವಾ ತಪ್ಪು ಇದ್ದರೆ ಬಿಬಿಎಂಪಿ ಕಾಯ್ದೆಗೆ ಅನುಗುಣವಾಗಿ ಕಾನೂನು ಕ್ರಮವನ್ನು ಕೈಗೊಳ್ಳಲಾಗುತ್ತದೆ. ಹಾಗೂ 'ತಾತ್ಕಾಲಿಕ ನಕ್ಷೆ'ಯನ್ನು ರದ್ದುಗೊಳಿಸಿ, ಕಟ್ಟಡವನ್ನು ನಿರ್ಮಿಸದಂತೆ ನಿರ್ಬಂಧ ವಿಧಿಸಲಾಗುತ್ತದೆ.

ಕಟ್ಟಡ ಕಾಮಗಾರಿ ಆರಂಭ ಆಗಿದ್ದರೆ ನಿಯಮಗಳಿಗೆ ಅನುಗುಣವಾಗಿ ಕ್ರಮ ಆಗುತ್ತದೆ.

ವೆಬ್‌ಸೈಟ್ ಮೂಲಕ ವಿವರ: ಗಿರೀಶ್

'ನಂಬಿಕೆ ನಕ್ಷೆ' ವ್ಯವಸ್ಥೆಯಲ್ಲಿ ಯಾವ ಆರ್ಕಿಟೆಕ್ಟ್ ಅಥವಾ ಎಂಜಿನಿಯರ್‌ಗಳ ಮೂಲಕ ಅರ್ಜಿ ಸಲ್ಲಿಸಬಹುದು ಎಂಬ ಮಾಹಿತಿ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ನೋಂದಣಿಯಾಗಿ ಪ್ರಮಾಣೀಕೃತಗೊಂಡವರಿಂದ ನಾಗರಿಕರು ಅರ್ಜಿ ಸಲ್ಲಿಸಬಹುದು' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್ ತಿಳಿಸಿದರು.

'ಬಿಬಿಎಂಪಿಯ ದಾಸರಹಳ್ಳಿ ಹಾಗೂ ಆರ್.ಆರ್. ನಗರ ವಲಯದ ಎಲ್ಲ ವಾರ್ಡ್‌ಗಳಲ್ಲಿ 'ನಂಬಿಕೆ ನಕ್ಷೆ' ವ್ಯವಸ್ಥೆಯಡಿ ಕಟ್ಟಡ ನಕ್ಷೆಯನ್ನು ನೀಡುವ ಪ್ರಕ್ರಿಯೆ ಆರಂಭವಾಗಿದೆ. ಇನ್ನು 15 ದಿನಗಳಲ್ಲಿ ಎಲ್ಲ ವಲಯಗಳಲ್ಲೂ ಈ ವ್ಯವಸ್ಥೆ ಜಾರಿಯಾಗಲಿದೆ' ಎಂದರು.

ಲಾರಿ– ಬೈಕ್ ಅಪಘಾತ: ಸವಾರ ಸಾವು

ಬೆಂಗಳೂರು: ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ಕಾಂಕ್ರೀಟ್ ಮಿಕ್ಸರ್ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ದೇವಸುಂದರ್ ಯಾದವ್ ಮೃತಪಟ್ಟಿದ್ದಾರೆ. 'ಬಿಹಾರದ ದೇವಸುಂದರ್, ನಗರದ ಹೋಟೆಲ್‌ವೊಂದರಲ್ಲಿ ಅಡುಗೆ ಕೆಲಸ ಮಾಡುತ್ತಿದ್ದರು. ಪಟ್ಟಂದೂರು ಅಗ್ರಹಾರದಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ದೇವಸುಂದರ್ ಅವರು ಭಾನುವಾರ ಮಧ್ಯಾಹ್ನ ಬೈಕ್‌ನಲ್ಲಿ ವರ್ತೂರು ಕೋಡಿ ಸಮೀಪದಲ್ಲಿ ಹೊರಟಿದ್ದರು. ಕಾಂಕ್ರೀಟ್ ಮಿಕ್ಸರ್ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್‌ನಿಂದ ಬಿದ್ದು ತೀವ್ರ ಗಾಯಗೊಂಡು ದೇವಸುಂದರ್ ಮೃತಪಟ್ಟಿದ್ದಾರೆ. ಲಾರಿ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ASTRO YATRA

CONNECT ಕ್ಲಾಸಿಫೈಡ್ಸ್

JOB OPPORTUNITIES

Drivers

HAEID REQUIRES Experienced Educated 4WH Automatic car Driver at Rajajinagar, Bangalore. Attractive package & immediate placement. CONTACT: 6366443134.

Multiple Vacancy

PERSONAL

Change of Name

CHANGE OF NAME
I, JOY BERYL JOHN, Residing at # 2/4, Damodara Mudaliar Street, 1st Cross, Halasuru, Bengaluru - 08, declare that in some documents my name is mentioned as JOY BERYL JOHN & JOY GEOFFREY, Both the names pertain to me. vide affidavit dt. 26-02-2024, before Notary M.Rajendra, Bengaluru. Henceforth I shall be called JOY BERYL JOHN only

I, YALLAMMA, have changed my name to LAKSHMIDEVI, Vide Affidavit dated 11.03.2024 sworn before advocate and notary Ambujakshi, Bangalore

I, NADA ZOBAIR AYUBI aged about 32 years D/o Mohammad Zobair Ayubi residing at Flat No. 303, MIMS HABITAT, Chikkagubbi Road, Bairathi Village, Kothanur, B'lore-77 have changed/corrected my Name from Nada Zubair Ayubi to Nada Zobair Ayubi vide Affidavit dated 09/03/2024, before Notary Uday Kumar K.

I SRIRAMULU S/o Maddireddy Residing at no,75 3rd Main Amarjyothi Layout Cholanagar R.T.Nagar Post Bengaluru-560032, Passport no L9208190 have changed my name to SREERAMULU REDDY MADDIREDDY, Vide affidavit Dated:07-03-2024 before notary Chandrashekaraiah.S, Bengaluru.

I SUNIL kumar, residing at Flat 203 SMR Vinay Regency, Horamavu Bengaluru, have changed my son name from Sanchit to Sanchit Hudgikar

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

CHANGE OF NAME
I, PARVIN THAJ Residing at No.268-1068, Patel Road, Nizam Mohalla, Malur, Kolar District-563130, have change my name PARVEEN TAJ vide affidavit date 02/03/2024 before Notary Puttaraju Bangalore. Henceforth I shall be called as PARVEEN TAJ Only.

CHANGE OF NAME
I,SHIKHAR SHAILENDRA PAL, S/o Shri Shailendra Kumar Pal, Residing at Bengaluru, have changed my name to SHIKHAR PAL, vide affidavit dated 07.03.2024, before notary H. Sridhar Rao, Bengaluru. Henceforth I shall be called SHIKHAR PAL only.

CHANGE OF NAME
I,CLEMENT ANANDHI SELVARAJ, W/o Selvaraj A, Residing at # 110, 3rd D Cross, Kasturi Nagar, East of NGEF, Bengaluru-560043, have changed my name to CLEMENT ANANTHI SELVARAJ vide affidavit dated 11.03.2024, before notary K. Venkateshan Bengaluru. Henceforth I shall be called CLEMENT ANANTHI SELVARAJ only.

CHANGE OF NAME
I, KHADER SHARIEFF Residing at No.268-1068, Patel Road, Nizam Mohalla, Malur, Kolar District - 563130, have change my Name to KHADAR SHARIFF vide affidavit date 02/03/2024 before Notary Puttaraju Bangalore. Hence forth I shall be called as KHADAR SHARIFF Only.

CHANGE OF NAME
I, SHAILENDRA KUMAR ARJUN PAL, S/o Shri Late Arjun Pal, Residing at Bengaluru have changed my name to SHAILENDRA KUMAR PAL, vide affidavit dated 07.03.2024, before notary H. Sridhar Rao, Bengaluru. Henceforth I shall be called SHAILENDRA KUMAR PAL only.

I, NEHA SHARMA Residing at #709, Balaji Aavaas Apt, Channasandra Main Road, Near Hope Farm Junction, Whitefield, Bengaluru-560066, have changed my Name to NEHA KHARKWAL vide Affidavit dated 09-03-2024, sworn before NOTARY VEENA .J, BANGALORE.

ಮಂಗಳೂರು ಕಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ (ನಿ.)
MCC BANK Estd - 1912
ಆಡಳಿತ ಕಛೇರಿ : ಎಂ.ಸಿ.ಸಿ. ಬ್ಯಾಂಕ್ ಬಿಲ್ಡಿಂಗ್, ಹಂಪನಕಟ್ಟ, ಮಂಗಳೂರು 575001
ದೂರವಾಣಿ: 0824–2445746
Email: hohrd@mccbank.in / gm@mccbank.in | Website: www.mccbank.in
ನೇಮಕಾತಿ ಪ್ರಕಟಣೆ
ಮಂಗಳೂರು ಕಥೋಲಿಕ್ ಕೋಅಪರೇಟಿವ್ ಬ್ಯಾಂಕ್ ನಿ, ಮಂಗಳೂರು ಇಲ್ಲಿ ಖಾಲಿ ಇರುವ ಈ ಕೆಳಕಂಡ 50 ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ 12.03.2024ರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ವಿವರ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
1	ಹಿರಿಯ ಪ್ರಬಂಧಕರು/Senior Manager	30400–51300	2
2	ಶಾಖಾ ಪರಿವೀಕ್ಷಕರು/Branch Inspector	30400–51300	1
3	ವಸೂಲಾತಿ ಅಧಿಕಾರಿ/Recovery Officer	30400–51300	1
4	ಶಾಖಾ ವ್ಯವಸ್ಥಾಪಕರು/Branch Manager	28100–50100	2
5	ಸುಪರ್‌ವೈಸರ್/ Supervisor	28100–50100	1
6	ಮುಖ್ಯ ಅಕೌಂಟೆಂಟ್/Chief Accountant	28100–50100	1
7	ಅಕೌಂಟೆಂಟ್/Accountant	26000–47700	5
8	ಡೇಟಾಬೇಸ್ ಅಡ್ಮಿನಿಸ್ಟ್ರೇಟರ್/DBA	26000–47700	2
9	ಕಿರಿಯ ಅಧಿಕಾರಿ/Junior Officer	24000–45300	10
10	ಹಿರಿಯ ಸಹಾಯಕ/Senior Assistant	21600–40050	8
11	ಕಿರಿಯ ಸಹಾಯಕ/Junior Assistant	20000–36300	13
12	ಅಟೆಂಡರ್/ಡ್ರೈವರ್/Attender/Driver	16000–29000	4
	ಒಟ್ಟು ಹುದ್ದೆಗಳು		50

ಅರ್ಜಿ ನಮೂನೆ/ವಿದ್ಯಾರ್ಹತೆ/ವಯೋಮಿತಿ/ಅರ್ಜಿ ಶುಲ್ಕ/ಆಯ್ಕೆ ವಿಧಾನ/ಲಗತ್ತಿಸಬೇಕಾದ ಪ್ರಮಾಣ ಪತ್ರಗಳು, ನಿಬಂಧನೆಗಳು ಮತ್ತು ಸೂಚನೆಗಳು ಇತ್ಯಾದಿ ವಿವರಗಳು ಬ್ಯಾಂಕಿನ Website :www.mccbank.in ರಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ 26.03.2024 ಸಂಜೆ 5.00 ಗಂಟೆಯೊಳಗೆ ಖುದ್ದಾಗಿ/ ಅಂಚೆ/ ಕೊರಿಯರ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.
ಸ್ಥಳ : ಮಂಗಳೂರು
ದಿನಾಂಕ : 11.03.2024
ಸಹಿ/– ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ ಮಹಾಪ್ರಬಂಧಕರು (ಪ್ರ)

BUSINESS

Business Offers

General

Opportunity for FREE LANCER WITH ZERO COST IN BANGALORE JOIN US TO EARN upto 5 LAKHS IN 90 DAYS
Govt. Approved
Min.12th Pass
Age: 30 years and above
To Apply Call 888 424 3839

ಬೆಂಗಳೂರು ಉತ್ಸವ
Bengaluru Utsava
Art, Craft, Handloom & Lifestyle Exhibition
Date: 8th March 2024 to 17th March 2024
Timings: 11:00 AM to 7:00 PM
(10 Days Exhibition)
Arts | Handicraft | Clothings
Fashion Accessories | Home Decor & More

Venue: Karnataka Chitrakala Parishath, Kumara Krupa Road, Bengaluru
Contact : 6364685716 / 9036658774
100+ Shopping Stalls | Live Performance | 10 Days Exhibition | Free Entry

EDUCATION
To Place your Classified Ads Contact: 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

ಮಂಗಳವಾರ, ಮಾರ್ಚ್ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 72 | ಪುಟ 18

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಸಿದ್ಧವಿರುವ ಮಾಹಿತಿ ನೀಡಲು ಹಲವಾರು ನೆವ

ಭೋಜಶಾಲಾ: ಸಮೀಕ್ಷೆಗೆ ಆದೇಶ 11

‘ತಿನಿಸುಗಳಿಗೆ ಕೃತಕ ಬಣ್ಣ ನಿಷೇಧ’ 8

ಸೆನ್ಸೆಕ್ಸ್	ನಿಫ್ಟಿ	₹/$
73,502	22,332	82.77

ನೆರೆ ದೇಶಗಳಿಂದ ಬಂದ ಮುಸ್ಲಿಮೇತರರಿಗೆ ಭಾರತದ ಪೌರತ್ವ

ದೇಶದಾದ್ಯಂತ ಸಿಎಎ ಜಾರಿ

ನವದೆಹಲಿ (ಪಿಟಿಐ): ‘ಪೌರತ್ವ ತಿದ್ದುಪಡಿ ಕಾಯ್ದೆ’ಯು ಜಾರಿಗೆ ಬಂದಿದೆ ಎಂಬ ಘೋಷಣೆಯನ್ನು ಕೇಂದ್ರ ಸರ್ಕಾರವು ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹೊತ್ತಿನಲ್ಲಿ ಮಾಡಿದೆ. ಯಾವುದೇ ದಾಖಲೆಗಳು ಇಲ್ಲದೆ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನದಿಂದ 2014ರ ಡಿಸೆಂಬರ್ 31ಕ್ಕೆ ಮೊದಲು ಭಾರತ ಪ್ರವೇಶಿಸಿದ ಮುಸ್ಲಿಮೇತರರಿಗೆ ಭಾರತದ ಪೌರತ್ವವನ್ನು ಈ ಕಾಯ್ದೆಯು ನೀಡುತ್ತದೆ.

ಪೌರತ್ವ ತಿದ್ದುಪಡಿ ಕಾಯ್ದೆ -2019ಕ್ಕೆ (ಸಿಎಎ) ಸಂಬಂಧಿಸಿದ ನಿಯಮಗಳನ್ನು ಕೇಂದ್ರವು ಸೋಮವಾರ ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಈ ಮೂರು ದೇಶಗಳಲ್ಲಿ ದೌರ್ಜನ್ಯಕ್ಕೆ ಗುರಿಯಾಗಿ ಭಾರತಕ್ಕೆ ಬಂದ ಹಿಂದೂ, ಸಿಖ್, ಜೈನ, ಬೌದ್ಧ, ಪಾರ್ಸಿ ಮತ್ತು ಕ್ರೈಸ್ತ ಸಮುದಾಯದವರಿಗೆ ಭಾರತದ ಪೌರತ್ವ ನೀಡುವ ಕಾರ್ಯವನ್ನು ಕೇಂದ್ರ ಸರ್ಕಾರವು ಇನ್ನು ಆರಂಭಿಸಲಿದೆ.

ಪೌರತ್ವ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿಯವರು 2019ರ ಡಿಸೆಂಬರ್‌ನಲ್ಲಿ ಅಂಕಿತ ಹಾಕಿದ್ದರು. ಆದರೆ ಈ ಕಾನೂನು ವಿರೋಧಿಸಿ ದೇಶದ ಹಲವು ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿದ್ದವು. ಈ ಕಾಯ್ದೆಯು ತಾರತಮ್ಯದಿಂದ ಕೂಡಿದೆ ಎಂದು ಹಲವು ರಾಜಕೀಯ ಪಕ್ಷಗಳು ಆರೋಪಿಸಿದ್ದವು. ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಇದುವರೆಗೆ ಅಧಿಸೂಚನೆಯಲ್ಲಿ ಪ್ರಕಟಿಸಿರಲಿಲ್ಲ. ಹೀಗಾಗಿ ಕಾಯ್ದೆಯು ಜಾರಿಗೆ ಬಂದಿರಲಿಲ್ಲ.

‘ಪೌರತ್ವ (ತಿದ್ದುಪಡಿ) ನಿಯಮಗಳು–2024 ಹೆಸರಿನ ಈ ನಿಯಮಗಳು, ಸಿಎಎ–2019 ಕಾಯ್ದೆಯ ಪ್ರಕಾರ ಅರ್ಹರಾದವರಿಗೆ ಭಾರತೀಯ ಪೌರತ್ವ ನೀಡಲು ಅವಕಾಶ ಕಲ್ಪಿಸಲಿವೆ’ ಎಂದು ಕೇಂದ್ರ ಗೃಹ ಸಚಿವಾಲಯದ ವಕ್ತಾರರೊಬ್ಬರು ತಿಳಿಸಿದರು.

ಪೌರತ್ವ ಕೋರುವ ಅರ್ಜಿಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಇದಕ್ಕಾಗಿ ಪ್ರತ್ಯೇಕ ವೆಬ್ ಪೋರ್ಟಲ್ ಆರಂಭಿಸಲಾಗಿದೆ ಎಂದು ಅವರು ತಿಳಿಸಿದರು.

‘ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನದಲ್ಲಿ ಧರ್ಮದ ಕಾರಣಕ್ಕಾಗಿ ದೌರ್ಜನ್ಯಕ್ಕೆ ಗುರಿಯಾದ ಅಲ್ಪಸಂಖ್ಯಾತರಿಗೆ ನಮ್ಮ ದೇಶದ ಪೌರತ್ವ ಪಡೆದುಕೊಳ್ಳಲು ಈ ನಿಯಮಗಳು ನೆರವಾಗಲಿವೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ.

ಭಾರತದಲ್ಲಿ ಇರುವ ಪಾಕಿಸ್ತಾನದ ಹಿಂದೂ ನಿರಾಶ್ರಿತರು ಕೇಂದ್ರದ ನಡೆಯನ್ನು ಸ್ವಾಗತಿಸಿದ್ದಾರೆ. ಸಮುದಾಯದ ಸರಿಸುಮಾರು ಐದು ಸಾವಿರ ಮಂದಿ ಈಗ ಪೌರತ್ವ ಪಡೆಯಲಿದ್ದಾರೆ ಎಂದು ದೆಹಲಿಯಲ್ಲಿ ವಾಸಿಸುತ್ತಿರುವ ಪಾಕಿಸ್ತಾನದ ಹಿಂದೂ ಕುಟುಂಬಗಳ ನಾಯಕ ಧರ್ಮವೀರ ಸೋಲಂಕಿ ಪ್ರತಿಕ್ರಿಯೆ ನೀಡಿದ್ದಾರೆ.

ಸಂಸದೀಯ ಕಾರ್ಯಗಳ ಕೈಪಿಡಿಯಲ್ಲಿ ಇರುವ ವಿವರಗಳ ಪ್ರಕಾರ, ರಾಷ್ಟ್ರಪತಿಯವರ ಅಂಕಿತ ದೊರೆತಿರುವ ಯಾವುದೇ ಕಾಯ್ದೆಗೆ ಅಂಕಿತ ದೊರೆತ ಆರು ತಿಂಗಳಲ್ಲಿ ನಿಯಮಗಳನ್ನು ರೂಪಿಸಬೇಕು. ಅದು ಸಾಧ್ಯವಾಗದಿದ್ದರೆ ಲೋಕಸಭೆ ಮತ್ತು ರಾಜ್ಯಸಭೆಯ ಅಧೀನ ಶಾಸನ ಸಮಿತಿಗಳಿಂದ ಸರ್ಕಾರವು ಹೆಚ್ಚಿನ ಕಾಲಾವಕಾಶ ಪಡೆದುಕೊಳ್ಳಬೇಕು.

9ನೇ ಪುಟ ನೋಡಿ

31 ಸಾವಿರ ಮಂದಿಗೆ ತಕ್ಷಣ ಅನುಕೂಲ?

ಮಸೂದೆಯ ಹಿಂದಿನ ಕರಡನ್ನು ಪರಿಶೀಲಿಸಿದ್ದ ಸಂಸತ್ತಿನ ಜಂಟಿ ಸಮಿತಿಯ ವರದಿ ಪ್ರಕಾರ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನದಿಂದ ಭಾರತಕ್ಕೆ ಬಂದ 31,313 ಮಂದಿ ಅಲ್ಪಸಂಖ್ಯಾತರು ಭಾರತದ ಪೌರತ್ವ ಪಡೆಯುವ ಅರ್ಹತೆಯನ್ನು ತಕ್ಷಣಕ್ಕೆ ಪಡೆದುಕೊಳ್ಳಲಿದ್ದಾರೆ.

ತಮ್ಮ ದೇಶದಲ್ಲಿ ಧರ್ಮದ ಕಾರಣಕ್ಕೆ ದೌರ್ಜನ್ಯ ನಡೆದಿದೆ, ತಮಗೆ ಭಾರತದ ಪೌರತ್ವ ಬೇಕು ಎಂದು ಅವರು ಕೇಳಿಕೊಂಡಿದ್ದ ಕಾರಣ ಅವರಿಗೆ ದೀರ್ಘಾವಧಿ ವೀಸಾ ನೀಡಲಾಗಿದೆ. 31,313 ಮಂದಿಯ ಪೈಕಿ 25,447 ಮಂದಿ ಹಿಂದೂಗಳು, 5,807 ಮಂದಿ ಸಿಖ್ಖರು, 55 ಮಂದಿ ಕ್ರೈಸ್ತರು ಹಾಗೂ ತಲಾ ಇಬ್ಬರು ಬೌದ್ಧ ಮತ್ತು ಪಾರ್ಸಿಗಳು ಇದ್ದಾರೆ ಎಂದು ಗುಪ್ತದಳವು ಸಮಿತಿಗೆ ತಿಳಿಸಿತ್ತು. ಪೌರತ್ವ ಪಡೆಯಲು ಇವರು, ಧರ್ಮದ ಕಾರಣಕ್ಕಾಗಿ ದೌರ್ಜನ್ಯ ನಡೆದಿದ್ದರಿಂದಾಗಿ ತಾವು ಭಾರತಕ್ಕೆ ಬರಬೇಕಾಯಿತು ಎಂಬುದನ್ನು ಸಾಬೀತು ಮಾಡಬೇಕು ಎಂದು ಗುಪ್ತದಳವು ಸಮಿತಿಗೆ ಹೇಳಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ತಾವು ನೀಡಿದ್ದ ಇನ್ನೊಂದು ಆಶ್ವಾಸನೆಯನ್ನು ಈಡೇರಿಸಿದ್ದಾರೆ. ಈ ಮೂಲಕ ಸಂವಿಧಾನ ರೂಪಿಸಿದವರು ನೀಡಿದ್ದ ಭರವಸೆಯನ್ನು ಸಾಕಾರಗೊಳಿಸಿದ್ದಾರೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ನಿಯಮ ಜಾರಿಗೆ ಬರುವುದಕ್ಕಾಗಿ ನನ್ನ ಕುಟುಂಬವು ದಶಕಕ್ಕೂ ಹೆಚ್ಚಿನ ಕಾಲದಿಂದ ಕಾಯುತ್ತಿತ್ತು. ನಾವು ಅಂತೂ ಭಾರತೀಯ ನಾಗರಿಕರು ಎಂದು ಕರೆಸಿಕೊಳ್ಳಲಿದ್ದೇವೆ ಎಂಬ ಕಾರಣಕ್ಕಾಗಿ ನನಗೆ ಸಂತಸವಾಗುತ್ತಿದೆ

ಧರ್ಮವೀರ ಸೋಲಂಕಿ
ದೆಹಲಿಯಲ್ಲಿರುವ ಪಾಕಿಸ್ತಾನದ ಹಿಂದೂ ನಿರಾಶ್ರಿತರ ನಾಯಕ

ಚುನಾವಣಾ ಬಾಂಡ್

ಇಂದೇ ಮಾಹಿತಿ ಹಂಚಿಕೊಳ್ಳಲು ಎಸ್‌ಬಿಐಗೆ ‘ಸುಪ್ರೀಂ’ ತಾಕೀತು

- ಜೂನ್ 30ರ ವರೆಗೆ ಸಮಯಾವಕಾಶ ಕೋರಿ ಎಸ್‌ಬಿಐ ಸಲ್ಲಿಸಿದ್ದ ಅರ್ಜಿ ವಜಾ
- ಆದೇಶ ಪಾಲಿಸದಿದ್ದರೆ ಕಾನೂನು ಕ್ರಮದ ಪ್ರಕ್ರಿಯೆ ಆರಂಭ: ಪೀಠ ಎಚ್ಚರಿಕೆ
- ಮಾರ್ಚ್ 15ರ ಸಂಜೆ 5ರ ಒಳಗಾಗಿ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಮಾಹಿತಿ ಲಭ್ಯವಿರಬೇಕು: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಕುರಿತ ವಿವರಗಳನ್ನು ಸಲ್ಲಿಸಲು ನೀಡಿದ್ದ ಗಡುವು ವಿಸ್ತರಿಸುವಂತೆ ಕೋರಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ್ದು, ಮಂಗಳವಾರ (ಮಾರ್ಚ್ 12) ಕಚೇರಿ ವ್ಯವಹಾರದ ಅವಧಿ ಒಳಗಾಗಿ ಎಲ್ಲ ಮಾಹಿತಿಯನ್ನು ಒದಗಿಸುವಂತೆ ತಾಕೀತು ಮಾಡಿದೆ.

ತಾನು ನೀಡಿರುವ ನಿರ್ದೇಶನಗಳು ಮತ್ತು ಗಡುವು ಪಾಲಿಸಲು ವಿಫಲವಾದಲ್ಲಿ, ಫೆಬ್ರುವರಿ 15ರ ತೀರ್ಪಿಗೆ ‘ಉದ್ದೇಶಪೂರ್ವಕ ಅವಿಧೇಯತೆ’ ತೋರಿದ್ದಕ್ಕಾಗಿ ಕಾನೂನು ಕ್ರಮ ಕೈಗೊಳ್ಳಲು ಪ್ರಕ್ರಿಯೆ ಆರಂಭಿಸುವುದಾಗಿ ಎಚ್ಚರಿಕೆಯನ್ನೂ ಕೊಟ್ಟಿದೆ. ಸುಪ್ರೀಂ ಕೋರ್ಟ್‌ನ ಆದೇಶವು, ದೇಶದ ಅತಿದೊಡ್ಡ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಎಸ್‌ಬಿಐಗೆ ಆಗಿರುವ ಭಾರಿ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಬ್ಯಾಂಕ್ ಹಂಚಿಕೊಂಡ ವಿವರಗಳನ್ನು ಮಾರ್ಚ್ 15ರ ಸಂಜೆ 5ರ ಒಳಗಾಗಿ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು ಸೋಮವಾರ ನಿರ್ದೇಶನ ನೀಡಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದ ಚುನಾವಣಾ ಬಾಂಡ್ ಯೋಜನೆಯು ‘ಅಸಾಂವಿಧಾನಿಕ’ ಎಂದು ಸುಪ್ರೀಂ ಕೋರ್ಟ್ ಫೆ.15ರಂದು ಮಹತ್ವದ ತೀರ್ಪು ನೀಡಿತ್ತು.

2019ರ ಏಪ್ರಿಲ್ 12ರ ನಂತರದಲ್ಲಿ ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆದ ಪಕ್ಷಗಳ ವಿವರವನ್ನು ಸಲ್ಲಿಸುವಂತೆ ಎಸ್‌ಬಿಐಗೆ ಸೂಚಿಸಿತ್ತು. ರಾಜಕೀಯ ಪಕ್ಷಗಳು ನಗದೀಕರಿಸಿಕೊಂಡ ಬಾಂಡ್‌ಗಳ ವಿವರ, ಪಕ್ಷಗಳು ಯಾವ ದಿನಾಂಕಕ್ಕೆ ಬಾಂಡ್ ನಗದು ಮಾಡಿಕೊಂಡವು, ಯಾವ ಮೌಲ್ಯದ ಬಾಂಡ್ ನಗದು ಮಾಡಿಕೊಂಡವು ಎಂಬುದನ್ನು ಮಾರ್ಚ್ 6ರೊಳಗೆ ಆಯೋಗಕ್ಕೆ ಸಲ್ಲಿಸಬೇಕು ಎಂದು ಸೂಚಿಸಿತ್ತು.

ಎಸ್‌ಬಿಐ ಕಡೆಯಿಂದ ಸಿಗುವ ವಿವರಗಳನ್ನು ಚುನಾವಣಾ ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಮಾರ್ಚ್ 13ಕ್ಕೆ ಮೊದಲು ಪ್ರಕಟಿಸಬೇಕು ಎಂದೂ ಆದೇಶಿಸಿತ್ತು.

9ನೇ ಪುಟ ನೋಡಿ

‘ತಾಳೆ ಮಾಡಲು ನಾವು ಹೇಳಿಲ್ಲ’

ಎಸ್‌ಬಿಐ ಪರ ಹಾಜರಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರು, ‘ಬಾಂಡ್‌ಗಳ ವಿವರಗಳನ್ನು ಎರಡು ಕಡೆ ಪ್ರತ್ಯೇಕವಾಗಿ ಸಂಗ್ರಹಿಸಿಡಲಾಗಿದೆ. ಎಲ್ಲ ಮಾಹಿತಿ ಕಲೆಹಾಕಿ ತಾಳೆ ಮಾಡುವ ಕೆಲಸಕ್ಕೆ ಹೆಚ್ಚಿನ ಕಾಲಾವಕಾಶ ಬೇಕು’ ಎಂದು ಪೀಠವನ್ನು ಕೇಳಿಕೊಂಡರು.

ಈ ವಾದ ಒಪ್ಪಿಕೊಳ್ಳದ ಪೀಠ, ‘ತಾಳೆ ಮಾಡುವ ಕೆಲಸ ಕೈಗೊಳ್ಳುವಂತೆ ನಾವು ನಿಮಗೆ ಸೂಚಿಸಿಲ್ಲ. ವಿವರಗಳನ್ನು ಬಹಿರಂಗಪಡಿಸಲಷ್ಟೇ ಹೇಳಿದ್ದೇವೆ’ ಎಂದಿತು. ‘ಮುಚ್ಚಿದ ಲಕೋಟೆ ತೆರೆದು ಅದರಲ್ಲಿರುವ ವಿವರಗಳನ್ನು ನೀಡುವುದಷ್ಟೇ ನಿಮ್ಮ ಕೆಲಸ’ ಎಂದು ನ್ಯಾಯಮೂರ್ತಿ ಸಂಜೀವ್ ಖನ್ನಾ ಹೇಳಿದರು.

ವಿವರಗಳನ್ನು ಬಹಿರಂಗಪಡಿಸಿದರೆ ದೇಣಿಗೆ ನೀಡಿದವರು ಬ್ಯಾಂಕ್ ವಿರುದ್ಧ ಕಾನೂನು ಕ್ರಮ ಜರುಗಿಸಬಹುದು ಎಂದು ಸಾಳ್ವೆ ಹೇಳಿದರು. ಅದಕ್ಕೆ ನ್ಯಾಯಮೂರ್ತಿ ಬಿ.ಆರ್. ಗವಾಯಿ, ‘ನೀವು ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಈ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಮೇಲೆ ಕಾನೂನು ಕ್ರಮಕ್ಕೆ ಮುಂದಾಗುವ ಪ್ರಶ್ನೆ ಎಲ್ಲಿದೆ’ ಎಂದು ಕೇಳಿದರು.

‘26 ದಿನಗಳಿಂದ ನೀವು ಏನು ಮಾಡುತ್ತಿದ್ದಿರಿ?’

ಫೆಬ್ರುವರಿ 15ರ ತೀರ್ಪಿನಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡದಿರುವುದಕ್ಕೆ ಪೀಠವು, ಬ್ಯಾಂಕ್‌ಅನ್ನು ತರಾಟೆಗೆ ತೆಗೆದುಕೊಂಡಿತು.

‘ಕಳೆದ 26 ದಿನಗಳಲ್ಲಿ ನೀವು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ನಿಮ್ಮ ಅರ್ಜಿಯಲ್ಲಿ ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ’ ಎಂದು ಪೀಠವು ಹೇಳಿತು.

ಪೀಠದಲ್ಲಿದ್ದವರು

- ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್,
- ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ,
- ಬಿ.ಆರ್. ಗವಾಯಿ,
- ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ

ಬ್ಯಾಡಗಿ ಎಪಿಎಂಸಿಯಲ್ಲಿ ಮೆಣಸಿನಕಾಯಿ ದರ ದಿಢೀರ್ ಕುಸಿತಕ್ಕೆ ಕೋಪ

ರೈತರ ಆಕ್ರೋಶ: ವಾಹನಗಳಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಹಾವೇರಿ: ಬ್ಯಾಡಗಿ ಮೆಣಸಿನಕಾಯಿ ದರ ಕುಸಿದಿದೆ ಎಂದು ಆರೋಪಿಸಿದ ರೈತರು ಸೋಮವಾರ ಬ್ಯಾಡಗಿ ಪಟ್ಟಣದ ಎಪಿಎಂಸಿ ಕಚೇರಿಗೆ ನುಗ್ಗಿ ಪೀಠೋಪಕರಣ ಧ್ವಂಸಗೊಳಿಸಿ, ವಾಹನಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಕಚೇರಿಯಲ್ಲಿದ್ದ ಕಡತಗಳು ಬೆಂಕಿಗೆ ಆಹುತಿಯಾದವು.

ಎಪಿಎಂಸಿ ಕಚೇರಿಯತ್ತ ಕಲ್ಲು ತೂರಿದ ಪರಿಣಾಮ ಕಚೇರಿಯ ಕಿಟಕಿ ಗಾಜುಗಳು ಪುಡಿಪುಡಿಯಾದವು. ನಂತರ ಕಚೇರಿಯ ಮುಂಭಾಗ ಇದ್ದ ಎಪಿಎಂಸಿ ಅಧ್ಯಕ್ಷರ ಕಾರಿಗೆ ಕಲ್ಲು ತೂರಿ ಗಾಜುಗಳನ್ನು ಪುಡಿ ಮಾಡಿ, ಬೆಂಕಿ ಹಚ್ಚಿದರು. ಆವರಣದಲ್ಲಿದ್ದ ಜೀಪು, ಕಾರು, ಸ್ವಚ್ಛತಾ ವಾಹನಗಳನ್ನು ಜಖಂಗೊಳಿಸಿದರು. 15ಕ್ಕೂ ಹೆಚ್ಚು ಬೈಕ್‌ಗಳು ಬೆಂಕಿಯ ಕೆನ್ನಾಲಿಗೆಗೆ ತುತ್ತಾದವು. ಘಟನೆ ನಿಯಂತ್ರಿಸಲು ಸ್ಥಳಕ್ಕೆ ಬಂದ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿಯನ್ನು ಪ್ರತಿಭಟನಾಕಾರರು ಓಡಿಸಿಕೊಂಡು ಹೋಗಿ, ಹಲ್ಲೆ ನಡೆಸಿದರು. ಘಟನೆಯಲ್ಲಿ 20ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ. ನಂತರ ಬೆಂಕಿ ನಂದಿಸಲು ಬಂದ ಅಗ್ನಿಶಾಮಕ ವಾಹನಕ್ಕೂ ಬೆಂಕಿ ಹಚ್ಚಿದ ಪರಿಣಾಮ ಉದ್ವಿಗ್ನ ಪರಿಸ್ಥಿತಿ ಉಂಟಾಯಿತು.

ಘಟನೆಯಲ್ಲಿ ಖಾಸಗಿ ವಾಹಿನಿಯ ಛಾಯಾಗ್ರಾಹಕನಿಗೆ ತೀವ್ರ ಗಾಯಗಳಾಗಿದ್ದು, ಬ್ಯಾಡಗಿಯಿಂದ ಆಂಬುಲೆನ್ಸ್‌ನಲ್ಲಿ ಕರೆ ತಂದು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬ್ಯಾಡಗಿ ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರ ಪ್ರತಿಭಟನೆ ವೇಳೆ ಜೀಪು ಮತ್ತು ಅಗ್ನಿಶಾಮಕ ವಾಹನಕ್ಕೆ ಬೆಂಕಿ ಹಚ್ಚಲಾಯಿತು

5ನೇ ಪುಟ ನೋಡಿ

ಕಾಂಗ್ರೆಸ್ ಪ್ರತಿಭಟನೆ ಇಂದಿನಿಂದ

ನವದೆಹಲಿ: ಸಂವಿಧಾನ ಬದಲಾವಣೆ ಮಾಡಲು ಬಿಜೆಪಿಗೆ 400ಕ್ಕೂ ಹೆಚ್ಚು ಸ್ಥಾನಗಳ ಅಗತ್ಯವಿದೆ ಎಂಬುದಾಗಿ ಬಿಜೆಪಿ ಸಂಸದ ಅನಂತ ಕುಮಾರ್ ಹೆಗಡೆ ನೀಡಿದ ಹೇಳಿಕೆ ವಿಚಾರವಾಗಿ ಬಿಜೆಪಿ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಸೋಮವಾರ ನಿರ್ಧರಿಸಿದೆ. 8

ಒಳ ಪುಟಗಳು

ಮಹಿಳಾ ಶಕ್ತಿ ವರ್ಧನೆ: ಮೋದಿ 11
ಮಣಿಪುರ ಸರ್ಕಾರಕ್ಕೆ ‘ಸುಪ್ರೀಂ’ ನೋಟಿಸ್ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ADVERTORIAL

ಮಂಡಿನೋವಿಗೆ ನೈಸರ್ಗಿಕ ಸ್ಟೆಮ್-ಸೆಲ್ ಥೆರಪಿ

9000ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ಅಲಿವಿಯೇಟ್ ನೀಡಿದೆ

ಮೊಣಕಾಲಿನ ಸಂಧಿವಾತಕ್ಕೆ ಸ್ಟೆಮ್ ಸೆಲ್ ಚಿಕಿತ್ಸೆ (ಪುನರುತ್ಪಾದಕ ಚಿಕಿತ್ಸೆ) ಅಂಗಾಂಶ ಗುಣಪಡಿಸುವಿಕೆಯನ್ನು ಉತ್ತೇಜಿಸಲು ಮತ್ತು ಸಂಧಿವಾತದಿಂದ ಪ್ರಭಾವಿತವಾಗಿರುವ ಮೊಣಕಾಲಿನ ಜಂಟಿ ಉರಿಯೂತವನ್ನು ಕಡಿಮೆ ಮಾಡಲು ಕಾಂಡಕೋಶಗಳ ವಿಶಿಷ್ಟ ಗುಣಲಕ್ಷಣಗಳನ್ನು ಬಳಸಿಕೊಳ್ಳುತ್ತದೆ. ಈ ಚಿಕಿತ್ಸೆಯ ಗುರಿಯು ನೋವನ್ನು ಹಂತ ಹಂತವಾಗಿ ಉಪಶಮನಗೊಳಿಸುವುದು, ಜಂಟಿ ಕಾರ್ಯವನ್ನು ಇನ್ನಷ್ಟು ಉತ್ತೇಜಿಸುವುದು ಮತ್ತು ಸಂಧಿವಾತದ ಪ್ರಗತಿಯನ್ನು ನಿಧಾನಗೊಳಿಸುವುದು ಆಗಿರುತ್ತದೆ.



ಮೊಣಕಾಲು ನೋವಿನ ಉಪಶಮನಕ್ಕೆ ಕಾಂಡಕೋಶಗಳ ಚುಚ್ಚುಮದ್ದು

ಈ ಚಿಕಿತ್ಸೆಯನ್ನು ಏಕೆ ಆಯ್ಕೆ ಮಾಡುವುದು?

- 30 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು

ಮೊಣಕಾಲಿನ ಸಂಧಿವಾತದ ವಿಷಯದಲ್ಲಿ, ಹಾನಿಗೊಳಗಾದ ಜಂಟಿ ಅಥವಾ ಕ್ಷೀಣಿಸಿದ ಅಂಗಾಂಶಗಳನ್ನು ಪುನರುತ್ಪಾದಿಸುವಲ್ಲಿ ಕಾಂಡಕೋಶಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಸ್ಟೆಮ್ ಸೆಲ್ ಚಿಕಿತ್ಸೆಯ ವಿಧಾನವು ಹೀಗಿದೆ:

1. ಕಾಂಡಕೋಶಗಳ ಕೊಯ್ಲು:

ಈ ಪ್ರಕ್ರಿಯೆಯು ಕಾಂಡಕೋಶಗಳ ಸಂಗ್ರಹದೊಂದಿಗೆ ಪ್ರಾರಂಭವಾಗುತ್ತದೆ. ಮೂಳೆ ಮಜ್ಜೆ ಅಥವಾ ಅಡಿಪೋಸ್ (ಕೊಬ್ಬು) ಅಂಗಾಂಶ ಸೇರಿದಂತೆ ದೇಹದ ವಿವಿಧ ಸ್ಥಳಗಳಿಂದ ಈ ಕೋಶಗಳನ್ನು ಪಡೆಯಬಹುದು.

2. ಕಾಂಡಕೋಶಗಳನ್ನು ಸಂಸ್ಕರಿಸುವುದು ಮತ್ತು ಕೇಂದ್ರೀಕರಿಸುವುದು:

ಕೊಯ್ಲು ಮಾಡಿದ ನಂತರ, ಆಧುನಿಕ ವಿಧಾನಗಳನ್ನು ಬಳಸಿಕೊಂಡು, ಕಾಂಡಕೋಶಗಳನ್ನು ಇತರ ಘಟಕಗಳಿಂದ ಬೇರ್ಪಡಿಸಲಾಗುತ್ತದೆ.

3.ಮೊಣಕಾಲು ಜಂಟಿಗೆ ಚುಚ್ಚುಮದ್ದು

ನಂತರ ಸಂಸ್ಕರಿಸಿ ಕೇಂದ್ರೀಕರಿಸಿದ ಕಾಂಡಕೋಶಗಳನ್ನು ನೇರವಾಗಿ ಪೀಡಿತ ಮೊಣಕಾಲಿನ ಜಂಟಿಗೆ ಚುಚ್ಚಲಾಗುತ್ತದೆ. ಈ ಚುಚ್ಚುಮದ್ದನ್ನು ಸಾಮಾನ್ಯವಾಗಿ ಅಲ್ಟ್ರಾಸೌಂಡ್ ಅಥವಾ ಫ್ಲೋರೋಸ್ಕೋಪಿಯಂತಹ ಆಧುನಿಕ ಇಮೇಜಿಂಗ್ ತಂತ್ರಗಳಿಂದ ಗಮನಿಸಿ ಮಾರ್ಗದರ್ಶಿಸಲಾಗುತ್ತದೆ. ಇದನ್ನು ಬಳಸುವುದರಿಂದ, ಮೊಣಕಾಲಿನ ಪೀಡಿತ ಪ್ರದೇಶದಲ್ಲಿ ಕಾಂಡಕೋಶಗಳನ್ನು ನಿಖರವಾಗಿ ಇರಿಸಲಾಗುತ್ತದೆ, ಇದರಿಂದಾಗಿ ನೋವು ಕ್ರಮೇಣ ಉಪಶಮನಳ್ಳುತ್ತದೆ.

ನೀವು ಅಸ್ಥಿಸಂಧಿವಾತದಿಂದ ಬಳಲುತ್ತಿರುವ ರೋಗಿಗಳಲ್ಲಿ ಒಬ್ಬರಾಗಿದ್ದರೆ, ಚಿಂತಿಸಬೇಡಿ. ಶೇ. 90 ರಷ್ಟು ಜನರಿಗೆ ಸಂಧಿವಾತ ನೋವನ್ನು ಸರ್ಜರಿ ಇಲ್ಲದೇ ಉಪಶಮನಗೊಳಿಸುವ ಭರವಸೆ ಅಲಿವಿಯೇಟ್ ನೀಡುತ್ತದೆ. ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಪರಿಣಾಮಕಾರಿ ಚಿಕಿತ್ಸೆ.

ಅಲಿವಿಯೇಟ್

ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲವೆ:
- ಪೀಣ್ಯಾ ದಾಸರಹಳ್ಳಿ
- ಸದಾಶಿವನಗರ
- ವೈಟ್‌ಫೀಲ್ಡ್
- ಜಯನಗರ
- ಇಂದಿರಾನಗರ

CALL NOW 84949 73146 080 23614888

ನಿಮ್ಮ ಮಾರುಕಟ್ಟೆಯ ವಿನಿಯೋಜನೆಗೆ ಜೀವ ವಿಮೆಯ ಲಾಭವನ್ನು ಸೇರಿಸಿರಿ

ಯುನಿಟ್ ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ಇಂಡಿವಿಜ್ಯುಯಲ್ ಲೈಫ್ ಇನ್ಶೂರನ್ಸ್ ಪ್ಲಾನ್

- ಅತ್ಯಂತ ಕಡಿಮೆ ಮಾಸಿಕ ಪ್ರೀಮಿಯಂ ₹2500/- ನೊಂದಿಗೆ ಪ್ರಾರಂಭಿಸಿ
- ಆಯ್ಕೆಗೆ ಎರಡು ಫಂಡ್‌ಗಳಿವೆ – ನಿಫ್ಟಿ 50 (ಫ್ಲೆಕ್ಸಿಸ್ಮಾರ್ಟ್ ಗ್ರೋಥ್ ಫಂಡ್) ಅಥವಾ ನಿಫ್ಟಿ 100 (ಫ್ಲೆಕ್ಸಿಗ್ರೋಥ್ ಫಂಡ್)ನ ಆಯ್ದ ಸ್ಟಾಕ್‌ಗಳಲ್ಲಿ 100% ವರೆಗೆ ವಿನಿಯೋಜನೆ
- ಖಾತರಿ ಪಡಿಸಿದ ಸೇರ್ಪಡೆಯೊಂದಿಗೆ*

* ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

LIC
ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

LIC/P1/2023-24/21/KAN

ವಿವರಗಳಿಗಾಗಿ ನಿಮ್ಮ ಏಜಂಟರನ್ನು /ಸಮೀಪದ ಎಲ್ಐಸಿ ಶಾಖೆಯನ್ನು ಸಂಪರ್ಕಿಸಿರಿ ಅಥವಾ ನಿಮ್ಮ ನಗರದ ಹೆಸರನ್ನು 56767474ಗೆ SMS ಮಾಡಿ

ಡೌನ್‌ಲೋಡ್ ಮಾಡಿರಿ ಎಲ್ಐಸಿ ಮೊಬೈಲ್ ಆ್ಯಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827 | ನಮ್ಮ ವಾಟ್ಸ್‌ಆ್ಯಪ್ ನಂ. 8976862090 Hi ಹೇಳಿರಿ | ನಮ್ಮನ್ನು ಫಾಲೋ ಮಾಡಿರಿ: LIC India Forever | IRDAI Regn No.: 512

ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಶೂರನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೋಲಿಸರಲ್ಲಿ ದೂರು ನೀಡಬೇಕಾಗಿ ವಿನಂತಿ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

‘ಸೈಬರ್ ಕ್ರೈಂ ತಡೆ: ಶೀಘ್ರ ಆದೇಶ’

ಬೆಂಗಳೂರು: ‘ಸುಳ್ಳು ಸುದ್ದಿ ಹರಡುವುದು, ಫೋಟೊ, ವಿಡಿಯೊ ತಿರುಚಿ ಬಿತ್ತರಿಸುವುದು ಸೇರಿದಂತೆ ವಿವಿಧ ರೀತಿಯ ಸೈಬರ್ ಕ್ರೈಂ ಪ್ರಕರಣಗಳಿಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ಇನ್ನೆರಡು ದಿನ ಗಳಲ್ಲಿ ಆದೇಶ ಹೊರಡಿಸಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸೈಬರ್ ಕ್ರೈಂ ವಿಷಯಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯ ಬಳಿಕ ಅವರು ಮಾತನಾಡಿದರು.

‘ಹಿರಿಯ ಪೊಲೀಸ್ ಅಧಿಕಾರಿ ಮುಖ್ಯಸ್ಥರಾಗಿರುವ ಬಹು ಇಲಾಖೆಗಳ ಸಮನ್ವಯ ಸಮಿತಿ ರಚಿಸಲಾಗಿದೆ. ಈ ಸಮಿತಿಗೆ ನೋಡಲ್ ಅಧಿಕಾರಿ ನೇಮಿಸಿ, ಜವಾಬ್ದಾರಿ ನೀಡಲಾಗುವುದು ’ ಎಂದರು.

ಆಸ್ಕರ್: ‘ಓಪನ್ ಹೈಮರ್’ಗೆ 7 ವಿಭಾಗದಲ್ಲಿ ಪ್ರಶಸ್ತಿ

ನವದೆಹಲಿ (ಪಿಟಿಐ): ಕ್ರಿಸ್ಟೋಫರ್ ನೋಲನ್ ಅವರ ಆತ್ಮಚರಿತ್ರೆ ಆಧರಿತ ಚಿತ್ರ ‘ಓಪನ್ ಹೈಮರ್’ ಗರಿಷ್ಠ ಸಂಖ್ಯೆಯ ಆಸ್ಕರ್ ಪ್ರಶಸ್ತಿಗಳನ್ನು ಗೆದ್ದುಕೊಳ್ಳುವ ಮೂಲಕ ಪ್ರಾಬಲ್ಯ ಮೆರೆದಿದೆ.

ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ 96ನೇ ಆವೃತ್ತಿ ಪ್ರಶಸ್ತಿ ಸಮಾರಂಭದಲ್ಲಿ ಓಪನ್ ಹೈಮರ್ ಚಿತ್ರ ವಿವಿಧ ಏಳು ಪ್ರಶಸ್ತಿಗಳನ್ನು ಗೆದ್ದುಕೊಂಡಿತು.

ಓಪನ್ ಹೈಮರ್‌ನ ಚಿತ್ರದ ನಟ ಸಿಲ್ಲಿಯನ್ ಮರ್ಫಿ (ಅತ್ಯುತ್ತಮ ನಟ), ರಾಬರ್ಟ್ ಡೌನಿ ಜ್ಯೂನಿಯರ್ (ಉತ್ತಮ ಪೋಷಕ ನಟ), ಹಾಯ್ಟೆ ವಾನ್ ಹಾಯ್ಟೆಮಾ (ಉತ್ತಮ ಚಿತ್ರಕತೆ), ಜೆನ್ನಿಫರ್ ಲೇಮ್ (ಉತ್ತಮ ಸಂಕಲನ) ಸೇರಿ 7 ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಅತ್ಯುತ್ತಮ ನಟಿ ಪ್ರಶಸ್ತಿಯು ‘ಪೂರ್ ಥಿಂಗ್ಸ್’ ಚಿತ್ರದ ನಟನೆಗಾಗಿ ಎಮ್ಮಾ ಸ್ಟೋನ್ ಅವರಿಗೆ ಸಂದಿತು. ಇವರು 2017ರಲ್ಲಿಯೇ ಅತ್ಯುತ್ತಮ ನಟಿ ಪ್ರಶಸ್ತಿಗೆ ಪಾತ್ರರಾಗಿದ್ದರು.

ಬಿಬಿಎಂಪಿ, ಬಿಡಿಎ, ಕೆಐಎಡಿಬಿ ಧೋರಣೆಗೆ ತೀವ್ರ ಅಸಮಾಧಾನ

ಕೋರ್ಟ್‌ಗೆ ಅಂಟಿದ ಅನಿಷ್ಟ ವ್ಯಾಜ್ಯಕರ್ತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಶಾಲೆ ಗಳೆಂದರೆ ಅಲ್ಲಿ ದಲಿತ ಮಕ್ಕಳೇ ಹೆಚ್ಚಾಗಿ ಕಲಿಯುತ್ತಾರೆ. ಇಂತಹ ಶಾಲೆಗಳ ಮೂಲಸೌಕರ್ಯದ ಸ್ಥಿತಿಗತಿ ಏನು’ ಎಂದು ಪ್ರಶ್ನಿಸಿರುವ ಹೈಕೋರ್ಟ್, ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ವ್ಯಾಜ್ಯಗಳು ಕೋರ್ಟ್‌ಗೆ ಅಂಟಿರುವ ಅನಿಷ್ಟದಂತೆ’ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಶಿಕ್ಷಣ ಹಕ್ಕು ಕಾಯ್ದೆ ಅಡಿಯಲ್ಲಿ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಸೇರಿಸಬೇಕು ಎಂಬ ನಿಯಮ ಪಾಲನೆ ಹಾಗೂ ಸರ್ಕಾರಿ ಶಾಲೆಗಳ ಮೂಲಸೌಕರ್ಯದ ಕೊರತೆಗೆ ಸಂಬಂಧಿಸಿದಂತೆ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿಯೂ ಆದ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರು, ‘ಬಿಬಿಎಂಪಿ ವ್ಯಾಪ್ತಿಯಲ್ಲಿನ 123 ಶಾಲೆಗಳಲ್ಲಿ ಒಂದೇ ಒಂದು ಶೌಚಾಲಯ ಇಲ್ಲ. ಅದರಲ್ಲೂ 69 ಶಾಲೆಗಳ ಸ್ಥಿತಿಯಂತೂ ದಯನೀಯವಾಗಿದೆ. ಈ 69 ಶಾಲೆಗಳಲ್ಲಿ ಕೇವಲ ಒಂದೇ ಒಂದು ಶೌಚಾಲಯವಿದೆ. ಈ ಕುರಿತಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಯಾವುದೇ ಸಮೀಕ್ಷೆ ನಡೆದಿಲ್ಲ. ಶಾಲೆಗಳ ಬಗ್ಗೆ ನಮಗೆ ಯಾವುದೇ ಮಾಹಿತಿಯೂ ಲಭ್ಯವಾಗುತ್ತಿಲ್ಲ. ಇಮೇಲ್ ಕಳುಹಿಸಿದರೂ ಬಿಬಿಎಂಪಿ ಮಾಹಿತಿ ನೀಡುತ್ತಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ ‘ಈ ಕುರಿತ ಸಮಗ್ರ ವರದಿ ಎಲ್ಲಿದೆ’ ಎಂದು ಬಿಬಿಎಂಪಿ ಪರ ವಕೀಲ ಎನ್.ಕೆ.ರಮೇಶ್ ಅವರನ್ನು ಪ್ರಶ್ನಿಸಿತು. ಇದಕ್ಕೆ ರಮೇಶ್, ‘ಇನ್ನೊಂದು ವಾರದಲ್ಲಿ ಸಲ್ಲಿಸಲಾಗುವುದು’ ಎಂದರು.

ಈ ಉತ್ತರಕ್ಕೆ ಅಸಮಾಧಾನ ಹೊರ ಹಾಕಿದ ನ್ಯಾಯಪೀಠ, ‘ನೀವೇನೊ ಇನ್ನೊಂದು ವಾರದಲ್ಲಿ ವರದಿ ಸಲ್ಲಿಸುತ್ತೇನೆ ಎಂದು ಹೇಳುತ್ತೀರಿ ಸರಿ. ಆದರೆ, ಅಲ್ಲೆಲ್ಲಾ ದಲಿತ ಮಕ್ಕಳೇ ಹೆಚ್ಚಾಗಿ ಕಲಿಯುತ್ತಾರಲ್ಲವೇ?, ಇದನ್ನೆಲ್ಲಾ ನೋಡುತ್ತಿದ್ದರೆ ಬಿಬಿಎಂಪಿ, ಬಿಡಿಎ ಮತ್ತು ಕೆಐಎಡಿಬಿಗಳು ಅನಿಷ್ಟದ ವ್ಯಾಜ್ಯಕರ್ತರಂತಿದ್ದಾರೆ. ನಿಮ್ಮ ವರ್ತನೆಗೆ ದಂಡ ಹಾಕಿದರೂ ಪ್ರಯೋಜನವಾಗಿಲ್ಲ’ ಎಂದು ಕಿಡಿ ಕಾರಿ, ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿತು.

ವಿವೇಕ ಸ್ಮಾರಕ: ಇದೇ ವೇಳೆ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರು, ‘ಈ ಪ್ರಕರಣದಲ್ಲಿ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿನ ಎನ್‌ಟಿಎಂ ಶಾಲೆಯಲ್ಲಿ ಕಲಿಯುತ್ತಿದ್ದ ಮಕ್ಕಳಿಗೆ ಪರಿಹಾರ ನೀಡಬೇಕು ಎಂದು ಕೋರಿ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ. ಆದರೆ, ಈ ಶಾಲೆಯಲ್ಲಿ ಕಲಿಯುತ್ತಿದ್ದ 60 ಮಕ್ಕಳನ್ನು ಈಗಾಗಲೇ ಸಮೀಪದ ದೇವರಾಜ ಶಾಲೆಗೆ ಸೇರಿಸಲಾಗಿದೆ’ ಎಂದರು.

‘ಈಗ ಈ ಸ್ಥಳದಲ್ಲಿ ರಾಮಕೃಷ್ಣಾಶ್ರಮದ ವತಿಯಿಂದ ವಿವೇಕ ಸ್ಮಾರಕ ನಿರ್ಮಾಣವಾಗುತ್ತಿದೆ. ಎನ್‌ಟಿಎಂ ಶಾಲೆಯ ಸ್ಥಳದಲ್ಲಿ ವಿವೇಕ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದ ಹಲವು ಸುತ್ತಿನ ವ್ಯಾಜ್ಯಗಳಲ್ಲಿ ಹೈಕೋರ್ಟ್ ಈಗಾಗಲೇ ರಾಮಕೃಷ್ಣಾಶ್ರಮದ ಪರ ತೀರ್ಪು ನೀಡಿದೆ. ಆದರೂ, ಕೆಲವರು ಮಕ್ಕಳಿಂದ ಈ ಮಧ್ಯಂತರ ಅರ್ಜಿ ಸಲ್ಲಿಸಿ ಅನಗತ್ಯ ಹಸ್ತಕ್ಷೇಪ ಮಾಡಿದ್ದಾರೆ. ಆದ್ದರಿಂದ, ಈ ಅರ್ಜಿ ವಜಾಗೊಳಿಸಬೇಕು’ ಎಂದು ಕೋರಿದರು. ಇದನ್ನು ಆಲಿಸಿದ ನ್ಯಾಯಪೀಠ ಮುಂದಿನ ವಿಚಾರಣೆಯಲ್ಲಿ ಮಧ್ಯಂತರ ಅರ್ಜಿ ವಜಾ ಮಾಡುವುದಾಗಿ ತಿಳಿಸಿತು.

₹ 8 ಸಾವಿರ ಕೋಟಿ ಟೆಂಡರ್: ಯಥಾಸ್ಥಿತಿಗೆ ಆದೇಶ

ಬೆಂಗಳೂರು: ₹8 ಸಾವಿರ ಕೋಟಿ ವೆಚ್ಚದ ಶರಾವತಿ ಜಲವಿದ್ಯುತ್ ಯೋಜನೆ ಟೆಂಡರ್‌ಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪ್ರಶ್ನಿಸಿ ಲಾರ್ಸನ್ ಅಂಡ್ ಟೂಬ್ರೊ (ಎಲ್&ಟಿ) ಕಂಪನಿ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ಮನವಿ ಮೇರೆಗೆ ತುರ್ತು ವಿಚಾರಣೆ ನಡೆಸಿದ ನ್ಯಾಯಪೀಠ, ಟೆಂಡರ್‌ನ ಕಾರ್ಯಾದೇಶವನ್ನು ಅಮಾನತ್ತಿನಲ್ಲಿಡುವಂತೆ ಪ್ರತಿವಾದಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ (ಕೆಪಿಸಿಎಲ್) ನಿರ್ದೇಶಿಸಿತು.

ಎಲ್&ಟಿ ಸಂಸ್ಥೆ ಪರ ವಾದ ಮಂಡಿಸಿದ ಹಿರಿಯ ವಕೀಲ ಉದಯ್ ಹೊಳ್ಳ ಅವರು, ‘ಪಾರದರ್ಶಕ ಕಾಯ್ದೆಯ ಪ್ರಕಾರ ಟೆಂಡರ್‌ಗೆ 30 ದಿನಗಳ ಕಾಲಾವಕಾಶ ನೀಡಬೇಕು. ಆದರೆ, ಇದಕ್ಕೆ ವಿರುದ್ಧವಾಗಿ ಕೇವಲ 21 ದಿನಗಳ ಟೆಂಡರ್ ನೀಡಲಾಗುತ್ತಿದೆ. ಕೆಪಿಸಿಎಲ್‌ನಿಂದ ಕೆಲ ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಟೆಂಡರ್ ನೀಡಲಾಗುತ್ತಿದೆ’ ಎಂದು ಆಕ್ಷೇಪಿಸಿದರು.

‘ಐದು ವರ್ಷಗಳ ಯೋಜನಾ ಅವಧಿಯ ಸುಮಾರು ₹ 8 ಸಾವಿರ ಕೋಟಿ ಮೊತ್ತದ ಬೃಹತ್ ಯೋಜನೆಗೆ ಕೇವಲ 21 ದಿನಗಳ ಟೆಂಡರ್ ಅವಕಾಶ ನೀಡಲಾಗಿದೆ. ಚುನಾವಣಾ ನೀತಿ ಸಂಹಿತೆಯಿಂದ ಪಾರಾಗಲು ತರಾತುರಿಯಲ್ಲಿ ಟೆಂಡರ್ ಅಖೈರುಗೊಳಿಸಲಾಗುತ್ತಿದೆ. ಈ ಕುರಿತ ಎಲ್ & ಟಿ ಆಕ್ಷೇಪಣೆಯನ್ನು ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ. ಏಕಸದಸ್ಯ ನ್ಯಾಯಪೀಠದ ಆದೇಶದ ಪ್ರತಿಯೂ ದೊರೆತಿಲ್ಲ. ಆದ್ದರಿಂದ, ಆದೇಶಕ್ಕೆ ಮಧ್ಯಂತರ ತಡೆ ನೀಡಬೇಕು’ ಎಂದು ಕೋರಿದರು.

ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ‘30 ದಿನಗಳ ಟೆಂಡರ್ ಅವಧಿಯನ್ನು ಕಡಿತಗೊಳಿಸಲು ಪ್ರಾಧಿಕಾರಕ್ಕೆ ಅಧಿಕಾರವಿದೆ. ಈಗಾಗಲೇ ಬಿಡ್ ತೆರೆಯಲಾಗಿದ್ದು ಕಾರ್ಯಾದೇಶ ಕೂಡ ನೀಡಲಾಗಿದೆ. ಹೀಗಾಗಿ, ತಡೆ ನೀಡಬಾರದು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪಿನ ಪ್ರತಿ ಇನ್ನೂ ಲಭ್ಯವಾಗಿಲ್ಲ’ ಎಂಬ ಹಿನ್ನೆಲೆಯಲ್ಲಿ ಗುತ್ತಿಗೆಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: ಟೆಂಡರ್ ನಿಯಮಗಳಲ್ಲಿ ಬದಲಾವಣೆ ಮಾಡಿ 30 ದಿನಗಳ ಅವಧಿಯನ್ನು 21 ದಿನಗಳಿಗೆ ಇಳಿಸಿದ ಕ್ರಮವನ್ನು ಪ್ರಶ್ನಿಸಿ ಎಲ್&ಟಿ ಕಂಪನಿ ಏಕಸದಸ್ಯ ನ್ಯಾಯಪೀಠದಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಕಂಪನಿಯ ವಾದವನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಕಂಪನಿ ವಿಭಾಗೀಯ ನ್ಯಾಯಪೀಠದಲ್ಲಿ ಈ ಮೇಲ್ಮನವಿ ಸಲ್ಲಿಸಿದೆ.

ಶಿವಮೂರ್ತಿ ಶರಣರ ವಿರುದ್ಧದ ವಿಚಾರಣೆಗೆ ಅಸ್ತು

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧದ; ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರದ ಆರೋಪಗಳ ವಿಚಾರಣೆಗೆ ಹಸಿರು ನಿಶಾನೆ ತೋರಿಸಿರುವ ಹೈಕೋರ್ಟ್, ಈ ಸಂಬಂಧ ಚಿತ್ರದುರ್ಗ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಈಗಾಗಲೇ ಹೊರಿಸಿರುವ ದೋಷಾರೋಪಗಳನ್ನು ಮರು ನಿಗದಿಗೊಳಿಸಿ ವಿಚಾರಣೆ ಆರಂಭಿಸುವಂತೆ ಆದೇಶಿಸಿದೆ.

‘ಅಂಗನವಾಡಿ: ಬೇಡಿಕೆ ಈಡೇರಿಕೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರು ಮತ್ತು ಅಂಗವಿಕಲರ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲು ಪ್ರಯತ್ನಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಮ್ಮನ್ನು ಭೇಟಿ ಮಾಡಿದ ಅಂಗನವಾಡಿ ಮತ್ತು ಅಂಗವಿಕಲರ ಸಂಘಟನೆಗಳ ನಿಯೋಗಕ್ಕೆ ಮುಖ್ಯಮಂತ್ರಿ ಈ ಭರವಸೆ ನೀಡಿದರು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಗೌರವ ಧನವ ಹೆಚ್ಚಿಸಬೇಕೆಂದು ವಿವಿಧ ಸಂಘಟನೆಗಳ ಮುಖಂಡರು ಒತ್ತಾಯಿಸಿದರು. ಕೇಂದ್ರದಿಂದ ಅನುದಾನ ಬಾರದೇ ಇರುವುದರಿಂದ ಆಗುತ್ತಿರುವ ಸಮಸ್ಯೆಗಳನ್ನು ಮುಖ್ಯಮಂತ್ರಿಯ ಮುಂದಿಟ್ಟ ಕಾರ್ಯಕರ್ತೆಯರು, ನೆರವು ನೀಡುವಂತೆ ಮನವಿ ಮಾಡಿದರು.

ಅಂಗನವಾಡಿ ಕೇಂದ್ರಗಳಿಗೆ ಉಚಿತ ವಿದ್ಯುತ್ ನೀಡಬೇಕೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಮುಖ್ಯಮಂತ್ರಿಗೆ ಮನವಿ ಮಾಡಿದರು. ಅಂಗನವಾಡಿ ಕಾರ್ಯಕರ್ತೆಯರ ಸಹಾಯಧನವನ್ನು ₹ 1 ಸಾವಿರ ಹೆಚ್ಚಿಸುವಂತೆ ಕೋರಿದರು. ಅದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಮುಂದಿನ ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಸಂಘಟನೆಗಳ ಪದಾಧಿಕಾರಿಗಳು ಮುಖ್ಯಮಂತ್ರಿ ಜತೆಗೆ ಚರ್ಚಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಸಿಐಟಿಯು ಅಧ್ಯಕ್ಷೆ ವರಲಕ್ಷ್ಮಿ ಇದ್ದರು.

ದಾವಣಗೆರೆ ವಿ.ವಿ: ಮೂವರಿಗೆ ಗೌರವ ಡಾಕ್ಟರೇಟ್

ದಾವಣಗೆರೆ: ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಕೆ. ಸಿದ್ದಪ್ಪ, ಹಾಗೂ ವ್ಯಂಗ್ಯಚಿತ್ರಕಾರ, ದಾವಣಗೆರೆಯ ಎಚ್.ಬಿ. ಮಂಜುನಾಥ ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯದ ಪ್ರಸಕ್ತ ಸಾಲಿನ ಗೌರವ ಡಾಕ್ಟರೇಟ್ ಘೋಷಿಸಲಾಗಿದೆ. ಮಂಗಳವಾರ ನಡೆಯಲಿರುವ 11ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರು ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ ಎಂದು ಕುಲಪತಿ ಪ್ರೊ. ಬಿ.ಡಿ. ಕುಂಬಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮೂವರಿಗೆ ಎಸ್‌ವಿಎನ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಸೇವಾ ಮಂಡಲಿ ಟ್ರಸ್ಟ್ ಸಂಸ್ಥಾಪಕ ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮರಣಾರ್ಥ ನೀಡುವ ಎಸ್‌ವಿಎನ್ ರಾಷ್ಟ್ರೀಯ ಪ್ರಶಸ್ತಿಗೆ ತಾಳ ವಾದಕ (ಘಟಂ) ವಿದ್ವಾನ್ ಟಿ.ಎಚ್. ವಿನಾಯಕರಾಮ್, ಸಂಗೀತ ಕಲಾ ಆಚಾರ್ಯ ಸಹೋದರರಾದ ಟಿ.ಎನ್. ತ್ಯಾಗರಾಜನ್, ಟಿ.ಎನ್. ತಾರನಾಥನ್ ಅವರನ್ನು ಆಯ್ಕೆ ಮಾಡಲಾಗಿದೆ.

ಮಾರ್ಚ್ 16ರಂದು ಕನಕಪುರ ರಸ್ತೆಯ ನೆಟ್ಟಿಗೆರೆ ಎಸ್‌ವಿಎನ್ ಸ್ಮಾರಕ ಸಭಾಂಗಣದಲ್ಲಿ ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮರಣಾರ್ಥ ಸಂಗೀತ ಹಬ್ಬ ನಡೆಯಲಿದೆ. ಮಾರ್ಚ್ 17ರಂದು ಬಸವನಗುಡಿ ಎಪಿಎಸ್ ಕಾಲೇಜು ಸಭಾಂಗಣದಲ್ಲಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ಮಾಜಿ ಸಂಸದ ಕೆ.ಸಿ. ರಾಮಮೂರ್ತಿ, ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಮತ್ತಿತರರು ಭಾಗವಹಿಸುವರು ಎಂದು ರಾಮಸೇವಾ ಮಂಡಲಿ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಎನ್. ರಾಮಪ್ರಸಾದ್ ತಿಳಿಸಿದ್ದಾರೆ.



ಕ್ಷೇಮ ಕುಶಲ

ಸೋಲಿಗೆ ಹೆದರಬೇಡಿ

ರಮ್ಯಾ ಶ್ರೀಹರಿ

ನಮ್ಮ ಜೀವನದ ಅನುಭವಗಳನ್ನು, ಆಗುಹೋಗುಗಳನ್ನು 'ಸೋಲು-ಗೆಲುವು' ಎನ್ನುವ ಸಂಕುಚಿತ ದೃಷ್ಟಿಕೋನದಿಂದ ನೋಡುವುದು ನಾವು ಬೆಳೆಯಬಹುದಾದ ಅನೇಕ ಅವಕಾಶಗಳನ್ನು ನಮ್ಮಿಂದ ಕಿತ್ತುಕೊಳ್ಳುವುದರೊಂದಿಗೆ ನಮ್ಮ ಮನಃಶಾಂತಿಗೂ ಕೇಡು ಮಾಡುತ್ತದೆ. ಬೇಕಾದ್ದು ಸಿಕ್ಕಿದರೆ ಗೆಲುವು, ನಾವು ಬಯಸಿದ್ದು ನೆರವೇರದಿದ್ದರೆ ಸೋಲು; ಗೆಲುವೆಂದರೆ ಸಮ್ಮಾನ, ಸ್ವೀಕಾರ; ಸೋಲೆಂದರೆ ಅವಮಾನ, ತಿರಸ್ಕಾರ ಮುಂತಾದ ಮಾನಸಿಕ ಚಿತ್ರಣಗಳು ನಮ್ಮನ್ನು ಹಿಂಸಿಸುತ್ತವೆ.

ಸೋಲು-ಗೆಲುವು ಆಟದ ಪರಿಭಾಷೆ, ಆಟದಲ್ಲಿ ಸೋಲು-ಗೆಲುವು ಸಹಜ ಕೂಡ; ಆದರೆ ಆ ಸೋಲು-ಗೆಲುವು ಆ ಆಟದ ಅವಧಿಗಷ್ಟೇ ಸೀಮಿತವಾದದ್ದು, ಆಟದ ಚೌಕಟ್ಟನಾಚೆಗೆ ಆ ಸೋಲು-ಗೆಲುವುಗಳಿಗೆ ಯಾವ ಅರ್ಥವೂ ಇಲ್ಲ; ಒಂದು ಪಂದ್ಯದಲ್ಲಿ ಸೋತವರು ಮುಂದೆಂದೂ ಆಟವನ್ನೇ ಆಡಬಾರದೆಂಬ ನಿಯಮವೂ ಇಲ್ಲ. ಆದರೆ ಸೋಲು-ಗೆಲುವುಗಳನ್ನು ನಾವು ಜೀವನಕ್ಕೆ ಅಳವಡಿಸಿಕೊಂಡಾಗ ವಿಚಿತ್ರವಾಗಿ ಕಾಣುತ್ತದೆ. ಜೀವನದಲ್ಲಿ ಸೋಲೆಂದರೆ ಏನು, ಗೆಲುವೆಂದರೆ ಏನು ಎಂದು ನಿರ್ಧರಿಸುವವರು ಯಾರು? ಸ್ಪರ್ಧೆ ಯಾರ ಜೊತೆ, ಯಾಕೆ? ಪಂದ್ಯವನ್ನು ಆಯೋಜಿಸಿರುವವರು ಯಾರು, ಅದರಿಂದ ಅವರಿಗೇನು ಲಾಭ? ಆಟದ ನೀತಿ–ನಿಯಮಗಳೇನು? ಗೆದ್ದವರು ಪಡೆಯುವುದೇನು, ಸೋತವರು ಕಳೆದುಕೊಳ್ಳುವುದೇನು? ಸೋತವರು ಮುನ್ನಡೆಯದೇ ಆಟದಿಂದಲೇ ನಿರ್ಗಮಿಸುವಷ್ಟು ಧೃತಿಗೆಡುವುದೇಕೆ? ಈ ಪ್ರಶ್ನೆಗಳಿಗೆ ಸರ್ವಸಮ್ಮತವಾದ, ಸ್ಪಷ್ಟವಾದ ಉತ್ತರಗಳಿಲ್ಲ.

ನಮ್ಮ ಸುತ್ತಲಿನವರು, ನಮ್ಮ ಸಮುದಾಯ ನಮಗೊಂದು ನಕ್ಷೆಯನ್ನು ತಯಾರು ಮಾಡಿಕೊಡುತ್ತದೆ; ಆ ನಕ್ಷೆಯಂತೆ ಬಾಳಿದರೆ ಗೆಲುವು, ಅದರಲ್ಲಿದ್ದಂತೆ ಬಾಳಲು ಸಾಧ್ಯವಾಗದಿದ್ದರೆ ಸೋಲು ಎಂಬುದನ್ನು ಸ್ವಲ್ಪವೂ ವಿಮರ್ಶೆ ಮಾಡದೆ ಒಪ್ಪಿಕೊಂಡು ಒಂದು ರೀತಿ ಯಾಂತ್ರಿಕವಾಗಿ, ಅಪ್ರಜ್ಞಾಪೂರ್ವ ಸ್ಥಿತಿಯಲ್ಲಿ ಬದುಕುತ್ತಿರುತ್ತೇವೆ. ನಾವಂದುಕೊಂಡ ಸೋಲು–ಗೆಲುವುಗಳು ನಿಜವಾದ ಸೋಲು–ಗೆಲುವುಗಳೇ ಹೌದೇ? ಅವುಗಳ ಮೂಲಸ್ವರೂಪವೇನು ಎಂಬ ಜಿಜ್ಞಾಸೆ ಮಾಡುವುದನ್ನು ಮರೆತು ದಿನ ದೂಡುತ್ತೇವೆ.

> ಪ್ರಪಂಚದ ಮನ್ನಣೆಗೆ ಕಾತರಿಸದೆ ನಮ್ಮನ್ನು ನಾವು ಸ್ವೀಕರಿಸಿಕೊಳ್ಳುವುದೇ ನಿಜವಾದ ಗೆಲುವು. ಹೀಗೆ ಸ್ವೀಕರಿಸುವುದರಿಂದ ಹೊರಪ್ರಪಂಚದ ಸೋಲಿನ ಬಗ್ಗೆ ಭಯ ಇರದು.

ಹುಟ್ಟಿದ ಮಗು ಇಂತಿಂಥ ಬೆಳವಣಿಗೆಯ ಹಂತಗಳನ್ನು ಇಷ್ಟು ಸಮಯದಲ್ಲಿ ದಾಟಬೇಕು, ಶಾಲೆಯಲ್ಲಿ ಇಂತಿಂಥದ್ದನ್ನು ಹೀಗೆಯೇ ಕಲಿಯಬೇಕು, ಇಂಥದ್ದೇ ಓದಬೇಕು, ಇಂಥ ವೃತ್ತಿಯನ್ನೇ ಮಾಡಬೇಕು, ಭಾವನೆಗಳನ್ನು ಹೀಗೆಯೇ ತೋರ್ಪಡಿಸಬೇಕು ಇಲ್ಲ ಅದುಮಿಡಬೇಕು, ಸಂಬಂಧಗಳು ಹೀಗಿದ್ದಾಗ ಅದು ಯಶಸ್ವಿ ಬಾಂಧವ್ಯ; ಇವುಗಳಲ್ಲಿ ಎಲ್ಲಿ ಸ್ವಲ್ಪ ಏರುಪೇರಾದರೂ ಅದು ನಮ್ಮ ಸೋಲು. ಎಲ್ಲಕ್ಕಿಂತಲೂ ಮಿಗಿಲಾಗಿ ನಮ್ಮ ಸುತ್ತಲಿನವರು ತಮ್ಮ ಜೀವನವನ್ನು ಹೇಗೆ ನಡೆಸುತ್ತಿದ್ದಾರೆ ಎನ್ನುವುದನ್ನು ಗಮನಿಸುತ್ತಾ ಅವರಿಗಿಂತಾ ಚೆನ್ನಾಗಿ ಬದುಕಿದರೆ ಅದು ನಮ್ಮ ಗೆಲುವು, ಬೇರೆಯವರಿಗಿಂತ ಹೆಚ್ಚು ಸಂತೋಷವಾಗಿರುವುದೇ ನಮ್ಮ ಯಶಸ್ಸು ಎನ್ನುವ ದೃಷ್ಟಿಕೋನದಿಂದ ನೋಡಿದಾಗ ಸೋಲೆಂದರೆ ಭಯ ಉಂಟಾಗದೇ ಇರದು.

ಗೆಲುವು ಒಬ್ಬಬ್ಬರಿಗೆ ಒಂದೊಂದು ಬಗೆಯದಾಗಿರುತ್ತದೆ. ಅನಕ್ಷರಸ್ಥ ಕುಟುಂಬದ ಮಗುವೊಂದು ಪದವಿಯವರೆಗೆ ಕಲಿತರೆ ಅದು ಆ ಕುಟುಂಬದ ಗೆಲುವು. ಸದಾ ಸಿಟ್ಟಾಗಿ ಕೂಗಾಡುವ ವ್ಯಕ್ತಿಯೊಬ್ಬ ತಾನೇಕೆ ಸಮಾಧಾನದಿಂದ ಇರಲಾಗುತ್ತಿಲ್ಲ ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುವುದೇ ಆ ವ್ಯಕ್ತಿಯ ಪಾಲಿನ ಗೆಲುವು, ತನ್ನ ಮಗು ಇತರ ಮಕ್ಕಳಂತೆ ಇಲ್ಲವಲ್ಲ ಎಂದು ಕೊರಗುವ ತಾಯಿ ಅಂಥ ಹೋಲಿಕೆಗಳನ್ನು ಮಾಡುವುದು ಬಿಟ್ಟು ಮಗುವನ್ನು ಅದಿರುವಂತೆಯೇ ಪ್ರೀತಿಸಿದರೆ ಅದು ಆ ತಾಯಿಯ ಗೆಲುವು - ಹೀಗೆ ಒಬ್ಬೊಬ್ಬರ ಗುರಿಯೂ ಅವರಿಗೇ ವಿಶಿಷ್ಟವಾದದ್ದು. ಇಷ್ಟಕ್ಕೂ ನಾವು ಗೆಲುವಿಗೆ ಇಷ್ಟೊಂದು ಕಾತರಿಸುವುದೇಕೆ?, ಸೋಲಿಗೆ ಇಷ್ಟು ಹೆದರುವುದೇಕೆ? ಸಮಾಜದ, ಕುಟುಂಬದ, ಆತ್ಮೀಯರ ಪ್ರೀತಿ, ಮನ್ನಣೆ, ಅವರಿಂದ ಸ್ವೀಕೃತವಾದಂತಹ ಭಾವ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲೊಂದು. ಸಮಾಜದಿಂದ ತಿರಸ್ಕೃತಗೊಳ್ಳುವುದು ಅಸಾಮಾನ್ಯವಾದ ನೋವನ್ನು ತರುತ್ತದೆ. ಆ ನೋವಿನಿಂದ ತಪ್ಪಿಸಿಕೊಳ್ಳಲು, ಪ್ರಪಂಚದ ಮನ್ನಣೆ ಪಡೆಯಲು ಏನು ಮಾಡಬೇಕೆನ್ನುವುದನ್ನು ನಾವು ನಮಗೇ ಗೊತ್ತಿಲ್ಲದಂತೆ ಅಂತರ್ಗತಗೊಳಿಸಿ ಕೊಂಡಿರುತ್ತೇವೆ.

ಸಮಾಜದ ರೀತಿ–ನೀತಿಗಳನ್ನು ಒಪ್ಪಿ ಬದುಕು ಕಟ್ಟಿಕೊಳ್ಳುವುದು ಅಪೇಕ್ಷಣೀಯವೇ ಹೌದು. ಅದರಿಂದ ವ್ಯಕ್ತಿಗೂ ಸಮಾಜಕ್ಕೂ ಹಿತ. ಆದರೆ ಪ್ರಪಂಚದ ಮನ್ನಣೆ ಮತ್ತು ಸ್ವೀಕೃತಿಯ ಮೇಲೆಯೇ ನಮ್ಮ ಗೆಲುವು ಅವಲಂಬಿತವಾಗಿದ್ದರೆ ನಿರಾಸೆ ಖಚಿತ. ಹೊರಗಿನಿಂದ ಮನ್ನಣೆ ನಮಗೆ ಸುಲಭವಾಗಿ ಸಿಗುವುದಿಲ್ಲ. ಅದಕ್ಕೆ ಕಾರಣಗಳು ಹಲವು, ಮನ್ನಣೆ ಪ್ರೀತಿ ಹೊರಗಿನಿಂದ ಸಿಕ್ಕರೂ ಅದು ತೃಪ್ತಿ ನೀಡದೇ ಹೋಗುವ ಸಾಧ್ಯತೆಯೇ ಹೆಚ್ಚು. ನಮ್ಮ ಕಲ್ಪನೆಯ ಬದುಕೊಂದಿರುತ್ತದೆ, ಅದನ್ನು ಸಾಕಾರಗೊಳಿಸಿಕೊಳ್ಳಲು ಹೋದಾಗ ಕಲ್ಪನೆಗೂ ವಾಸ್ತವಕ್ಕೂ ಇರುವ ಅಪಾರ ವ್ಯತ್ಯಾಸ ತಿಳಿಯುತ್ತದೆ; ಆ ಕಲ್ಪನೆಯ ಬದುಕು ಕನಸಾಗೇ ಉಳಿದಾಗ ಅದು ಯಾತನೆಯನ್ನು ತರುತ್ತದೆ ಹಾಗೂ ನಾವು ನಮ್ಮ ಕಲ್ಪನೆಯ ಬದುಕಿನಲ್ಲೇ ಸಿಲುಕಿಕೊಂಡ ಕಾರಣ ನಿಜದ ನಮ್ಮ ಬದುಕನ್ನು ನಿರ್ಲಕ್ಷಿಸುತ್ತೇವೆ. ಕೊನೆಗೆ ಎಲ್ಲೂ ನಮ್ಮನ್ನು ನಾವು ನೆಲೆಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂಬ ಭಾವಕ್ಕೆ ಸೋಲೆಂದು ಹೆಸರಿಡುತ್ತೇವೆ.

'ನಮ್ಮ ಗೆಲುವು' ಎಂದರೇನೆಂದು ಅರಿಯದೆ, ಪ್ರಪಂಚ ಗುರುತಿಸುವ ಗೆಲುವುಗಳನ್ನು ಅರಸಿಕೊಂಡು ಹೋಗುವ ಭರದಲ್ಲಿ, ಪ್ರಪಂಚಕ್ಕೆ ನಾವು ಹೊಂದಿಕೊಳ್ಳಲು ಅನುಕೂಲವಾಗುವಂತೆ ನಮ್ಮನ್ನು ನಾವು ಮಾರ್ಪಡಿಸಿಕೊಳ್ಳುವುದೇ ಬೇರೆ (fitting in) ನಮ್ಮನ್ನು ನಾವು ಕಂಡುಕೊಂಡೂ ಎಲ್ಲರೊಳು ಒಂದಾಗಿ ಬಾಳುವುದೇ ಬೇರೆ (belonging).

ಪ್ರಪಂಚಕ್ಕೆ ಹೊಂದಿಕೊಳ್ಳುವಂತೆ ನಮ್ಮನ್ನು ನಾವು ಮಾರ್ಪಡಿಸಿಕೊಂಡಾಗ ಮನ್ನಣೆ ಸಿಕ್ಕರೆ ಅದು ಗೆಲುವು ಮನ್ನಣೆ ಸಿಗದೆಹೋದರೆ ಸೋಲು ಎಂಬಂತಾಗುತ್ತದೆ, ಇಂತಹ ಸೋಲಿನಿಂದ ಕೀಳರಿಮೆ ಮತ್ತು ಅವಮಾನ ಸಹಜ. ಸೋಲಿಗೆ ನಾವೇಕೆ ಹೆದರುತ್ತೇವೆಂದರೆ ನಾವು ಅವಮಾನಕ್ಕೆ ಹೆದರುತ್ತೇವೆ, ನಮ್ಮ ಕಣ್ಣಲ್ಲೇ ನಾವು ಸಣ್ಣವರಾಗುವ ನೋವು ನಮ್ಮನ್ನು ಬಾಧಿಸುತ್ತದೆ.

ಪ್ರಪಂಚದ ಮನ್ನಣೆಗೆ ಕಾತರಿಸದೆ ನಮ್ಮನ್ನು ನಾವು ಸ್ವೀಕರಿಸಿಕೊಳ್ಳುವುದೇ ನಿಜವಾದ ಗೆಲುವು. ಹೊರಪ್ರಪಂಚದ ಸೋಲು ಗೆಲುವುಗಳ, ಅವಮಾನದ ಭಯವಿರದ ನಮ್ಮ ಆತ್ಮತೃಪ್ತಿಗಾಗಿಯೇ ನಾವು ನಮ್ಮ ಕೆಲಸಗಳನ್ನು, ಕರ್ತವ್ಯವನ್ನು ನಿರ್ವಹಿಸಿದಾಗ ನಾವು ಊಹಿಸಿದ್ದು ನಡೆಯದಿದ್ದಾಗಲೂ ಅದು ಸೋಲೆಂದು ನಮಗನಿಸುವುದಿಲ್ಲ, ಆತ್ಮಸಂತೋಷಕ್ಕಾಗಿ ಮಾಡಿದ ಕೆಲಸ ನಿರೀಕ್ಷಿತ ಫಲಿತಾಂಶ ತರದಿದ್ದರೂ ನಮ್ಮನ್ನು ಕಂಗೆಡಿಸುವುದಿಲ್ಲ. ಬೇರೆಯವರು ತಮ್ಮ ಅನುಕೂಲಕ್ಕೆ ತಕ್ಕಂತೆ, ತಮ್ಮ ತಿಳಿವಳಿಕೆಗೆ ನಿಲುಕಿದಂತೆ ನಮ್ಮನ್ನು ಸ್ವೀಕರಿಸುತ್ತಾರೆ ಅಥವಾ ತಿರಸ್ಕರಿಸುತ್ತಾರೆ; ಅದರ ಮೇಲೆ ನಮ್ಮ ಮೌಲ್ಯ ನಿರ್ಧಾರಿತವಾದರೆ ಸೋಲು–ಗೆಲುವುಗಳ ಹಿಡಿತದಲ್ಲಿ ನಾವು ಸೀಮಿತವಾಗಿ ಬದುಕುತ್ತೇವೆ. ಆದರೆ ನಮ್ಮೊಳಗಿನ ಬೆಳಕಿಗೆ ನಿಷ್ಠರಾಗಿ ಬದುಕಿದಾಗ ಪ್ರತಿಯೊಂದು ಅನುಭವವೂ ನಮ್ಮನ್ನು ನಾವು ವಿಕಾಸಗೊಳಿಸಿಕೊಳ್ಳುವುದಕ್ಕೆ, ವಿಸ್ತರಿಸಿಕೊಳ್ಳುವುದಕ್ಕೆ ನೆರವಾಗುತ್ತವೆ. ಆಗ ಸೋಲಿಗೆ ಹೆದರದೆ ಮುನ್ನುಗ್ಗುವ ಸ್ವಭಾವವೂ ನಮ್ಮದಾಗುತ್ತದೆ. ❖

ಬಿಸಿಲ ಬೇಗೆಯಲ್ಲಿ ಕಾಯಿಲೆಗಳಿಗೆ ತಡೆ

ಶಿವರಾತ್ರಿ ಎಂದರೆ 'ಶಿವ ಶಿವಾ' ಎಂದು ಚಳಿ ಓಡಿ ಹೋಗುವ ವಿದ್ಯಮಾನ ಹಿಂದಿನದಾಗಿತ್ತು. ಈ ವಾಡಿಕೆಯ ಮಾತು ಇಂದು ಅನ್ವಯವಾಗದು.

ಡಾ. ಸತ್ಯನಾರಾಯಣ ಭಟ್ ಪಿ.

ಯುಗಾದಿಯ ಮೊದಲ ದಿನದಿಂದ ವಸಂತ ಋತು. ಅನಂತರ ಗ್ರೀಷ್ಮ ಅಥವಾ ಅತಿ ಬಿಸಿಲಿನ ದಿನಗಳ ಎರಡು ತಿಂಗಳು. ಮುಂದಿನದು ಮಳೆಗಾಲದ ಎರಡು ತಿಂಗಳು. ಅದುವೆ ವರ್ಷಋತು. ಅನಂತರದ್ದು ಶರದೃತು, ಹೇಮಂತ ಋತುಗಳು. ಈ ಬಾರಿಯ ಋತುವೈಪರೀತ್ಯದಿಂದ ನಮ್ಮ ದೇಹಬಲ ವಾಸ್ತವವಾಗಿ ವರ್ಷ, ಶರದ್ ಮತ್ತು ಹೇಮಂತದ ದಿನಗಳಲ್ಲಿ ಸರಿಯಾಗಿ ಕುದುರಿಕೊಳ್ಳಲಿಲ್ಲ ಎಂಬ ಸಂಗತಿ ನೆನಪಿಡಿರಿ. ಹಾಗಾಗಿ ನಾವು ಸಾಕಷ್ಟು ಮುನ್ನೆಚ್ಚರಿಕೆಗಳನ್ನು ವಹಿಸಿ ದೇಹಬಲವನ್ನು ಕಾಪಾಡಿಕೊಳ್ಳಬೇಕು.

ಶಿವರಾತ್ರಿ ಎಂದರೆ 'ಶಿವ ಶಿವಾ' ಎಂದು ಚಳಿ ಓಡಿ ಹೋಗುವ ವಿದ್ಯಮಾನ ಹಿಂದಿನದಾಗಿತ್ತು. ಈ ವಾಡಿಕೆಯ ಮಾತು ಇಂದು ಅನ್ವಯವಾಗದು. ಸೂರ್ಯತಾಪಮಾನ ಈ ಬಾರಿ ರಥಸಪ್ತಮಿಗೆ ಮೊದಲೇ ಏರುಮುಖ. ಆಗಲೇ ನಮ್ಮ ದೇಹಬಲ ಕುಗ್ಗಲಾರಂಭ. ದೇಹ ಮತ್ತು ದೇಶದ ಸಂಗತಿಗಳು ಒಂದೇ ತೆರ ಎನ್ನುತ್ತವೆ, ಆಯುರ್ವೇದ ಸಂಹಿತೆಗಳು. ಭೂಮಿಯ ಅಂತರ್ಜಲ ಕುಸಿಯುವ ಸುದ್ದಿ ದಿನ ದಿನದ ವಿದ್ಯಮಾನ. ಅಂತೆಯೇ ರಸ, ರಕ್ತಾದಿ ಧಾತುಗಳು ನಮ್ಮ ದೇಹದೊಳಗೂ ಒಣಗುವುವು. ಆಗ ದೇಹಬಲ ಕ್ಷೀಣಿಸುತ್ತದೆ. ಈ ಕಾಲದಲ್ಲಿ ಸೂರ್ಯನು ತನ್ನ ಪ್ರಖರ ಕಿರಣಗಳಿಂದ ಪ್ರಪಂಚದ 'ಸ್ನೇಹ' ಭಾಗವನ್ನು ಒಣಗಿಸುತ್ತಾನೆ. ಸ್ನೇಹಕ್ಕೆ ಮೈತ್ರಿಯೆಂಬ ಅರ್ಥದ ಜತೆಗೆ ಜಿಡ್ಡು ಎಂಬ ಅರ್ಥವಿದೆಯಷ್ಟೆ!. ಇಂತಹ ಪ್ರಖರತೆಯ ಪ್ರತಿಕೂಲ ಸನ್ನಿವೇಶದ ಅಪಾಯ ಎದುರಿಸುವ ನಮ್ಮ ಸಿದ್ಧತೆ ಹೀಗಿರಲಿ. ಅತ್ಯಂತ ಖಾರ, ಕಹಿರಸಗಳು ವಾತದೋಷದ ವೃದ್ಧಿಗೆ ಕಾರಣ. ಅಂಥವನ್ನು ಖಂಡಿತ ದೂರವಿಡೋಣ. ಯುಗಾದಿ ಬೇವು ಕಹಿ ನಿಜ. ಆದರೆ ಬೆಲ್ಲದ ಸಂಗಡ ಮೆಲ್ಲುವಾ. ಅದರ ತೀಕ್ಷ್ಣತೆಗೆ ಕಡಿವಾಣ. ಶಿಶಿರ ಮುಗಿದು ವಸಂತಾಗಮನದ ಸಂದರ್ಭದಲ್ಲಿ ಈ ರೀತಿಯ ಪ್ರವೃತ್ತಿಯಿಂದ ಆರೋಗ್ಯ. ಏಕೆಂದರೆ ವಸಂತಕಾಲದಲ್ಲಿ ಖಂಡಿತ ಕಫ ಸಂಚಯಕ್ಕಿದೆ ವಿಪುಲ ಅವಕಾಶ. ಅದರ ಕಡಿವಾಣವೇ ಶಿವರಾತ್ರಿಯ ಜಾಗರಣೆಯ ಮೂಲ ಉದ್ದೇಶ. ಜೊತೆಗಿದೆ ಕಥಾಕಾಲಕ್ಷೇಪಗಳಿಂದ ಮಾನಸಿಕ ನೆಮ್ಮದಿ. ಪ್ರಖರ ಸೂರ್ಯರಶ್ಮಿಯ ದೆಸೆಯಿಂದ ದೇಹದ ಕಫ ಧಾತು ಕರಗಿ ಕಾಯಾಗ್ನಿ (ಹಸಿವೆ) ಬಾಧಿಸುತ್ತದೆ. ವಮನ (ವಾಂತಿ) ಮಾಡಿಸುವ ಆಯುರ್ವೇದ ಚಿಕಿತ್ಸೆಗೆ ಆಯರ್ವೇದಶಾಸ್ತ್ರವು ಒತ್ತು ಕೊಡುತ್ತದೆ. ಜೀರ್ಣವಾಗದ, ಅಥವಾ ನಿಧಾನ ಅರಗುವ ಆಹಾರ ಈಗ ಸಲ್ಲದು. ಹುಳಿರಸದ ಅತಿಯಾದ ಸೇವನೆಗಿರಲಿ ಕಡಿವಾಣ. ದೇಹದ ಕಾವು ಇಳಿಸುವ ಚಂದನ, ಅಗರು ಲೇಪನದಿಂದ ಲಾಭವಿದೆ. ಗೋಪಿಚಂದನದ ಲೇಪನದಿಂದ ಅಗ್ಗದ ಚಿಕಿತ್ಸೆಯ ಹಾದಿ ಸಾಧ್ಯ. ಮುಲ್ತಾನೀ ಮಿಟ್ಟೀ ಹೆಸರಿನ ಪುಡಿ ಅಥವಾ ಗೋಪಿಚಂದನದ ಹೆಂಟೆ ನೀರಲ್ಲರೆದು ಸ್ನಾನಾನಂತರವೂ ಹಚ್ಚಿಕೊಳಲಾದೀತು. ಮುಖದ 'ಫೇಸ್ ಪ್ಯಾಕ್' ಎಲ್ಲರೂ ಬಲ್ಲ ಪರಿಭಾಷೆ. ಇದರಿಂದ ಮುಖದ ಒಣಗುವಿಕೆಗೆ ಕಡಿವಾಣವಾಗುತ್ತದೆ.

ಹಿತಮಿತದ ವ್ಯಾಯಾಮ ಸಾಕು. ಹದ ಬಿಸಿಯ ಎಳ್ಳೆಣ್ಣೆಯನ್ನು ಪೂಸಿಕೊಳ್ಳಿರಿ. ಸೀಗೆಬಾಗೆಯ ಪುಡಿ, ಕಡಲೆಹಿಟ್ಟಿನ ಸಂಗಡ ಮೈಗೆ ಉಜ್ಜಿದರೆ ಚರ್ಮಾರೋಗ್ಯ ವರ್ಧನೆ. ಮಲಗುವ ಕೋಣೆಗೆ ಏಲಕ್ಕಿಸಿಪ್ಪೆ, ಲಕ್ಕಿಎಲೆ, ಶ್ರೀಗಂಧದ ಪುಡಿಯ ಹೊಗೆ ಕೊಟ್ಟರೆ ಹಿತ. ಧಗೆಯಿಂದ ಪಾರಾಗಲು ಯದ್ವಾ ತದ್ವಾ ಎ.ಸಿ, ಫ್ಯಾನ್, ಕೂಲರ್ ಬಳಕೆಗೆ ಆಯುರ್ವೇದ ಒತ್ತನ್ನು ನೀಡದು. ಬೇಗ ಅರಗುವ ಆಹಾರವಸ್ತು ಸೇವನೆ ಉತ್ತಮ. ಜವೆ ಗೋಧಿ, ಗೋಧಿಗಿರಲಿ ಪ್ರಾಶಸ್ತ್ಯ. ಹಗಲುನಿದ್ದೆಗೆ ಆಯುರ್ವೇದ ಶಾಸ್ತ್ರವು ನಿಷೇಧ ಹೇರುತ್ತದೆ. ಬಾಲರು ಮತ್ತು ವೃದ್ಧರಿಗೆ ವಿನಾಯಿತಿ ಇದೆ. ಆದರೆ ಕುಳಿತ ಭಂಗಿಯ ನಿದ್ದೆ ಲೇಸು. ಹಾಸಿಗೆಯ ಮೇಲೆ ಉರುಳಿದ ಸ್ಥಿತಿಯ ನಿದ್ದೆ ಕೂಡದು. ತೆಂಗಿನೆಣ್ಣೆ, ತುಪ್ಪ ಸಹಿತ ಆಹಾರಸೇವನೆ ಹಿತಮಿತವಾಗಿರಲಿ. ಸಿಹಿರಸದಿಂದ ಲಾಭವಿದೆ. ಉಪ್ಪು, ಖಾರ, ಅತಿ ಮದ್ಯಪಾನ ಖಂಡಿತ ಬೇಡ. ಶೀತಲ ಹವೆಯ, ಚಂದ್ರನ ಬೆಳದಿಂಗಳ ಅಂಗಳದ ವಿಹಾರದ ಸಂಗೀತ, ಗೀತ ನೃತ್ಯಾದಿಗಳ ಕಲಾಪಗಳ ವಿಸ್ತೃತ ಬಣ್ಣನೆ ವಾಗ್ಭಟನ ಸಂಹಿತೆಯ ಹೂರಣ. ಕೊಳ, ಸರೋವರ, ಪಕ್ಷಿಗಳ ಕಲರವದ ಪರಿಸರದ ಚಿತ್ತಾಕರ್ಷಕ ಸನ್ನಿವೇಶದ ಸೃಷ್ಟಿ ಅಂದಿನ ಕಾಲದ ಸಹಜ ವಾತಾವರಣ. ಇಂಥ ವಿಹಾರದಿಂದ ದೇಹ ಮತ್ತು ಮನದ ದುಗುಡ ದುಮ್ಮಾನಗಳನ್ನು ಕಳೆದುಕೊಳ್ಳುವ ವಿಧಾನ ಇಂದಿಗೂ ಪ್ರಸ್ತುತ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

28) ಚಿತ್ರದಲ್ಲಿ ಒಂದು ವೃತ್ತದ AB ಮತ್ತು CD ಜ್ಯಾಗಳು ವೃತ್ತದ ಹೊರಭಾಗದ P ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ (ವೃದ್ಧಿಸಿದಾಗ) ಆದರೆ **(i) Δ PAC ~ Δ PDB**

(ii) PA . PB = PC . PD. ಎಂದು ಸಾಧಿಸಿ



ಉತ್ತರ:– (.........ಹಿಂದಿನ ಸಂಚಿಕೆಯಿಂದ)

(ii) ಮೇಲಿನ ಸಮಸ್ಯೆಯಲ್ಲಿ ΔAPC ~ ΔDPB ಎಂದು ಸಾಧಿಸಿದ್ದೇವೆ

ΔAPC ~ ΔDPB

$$\frac{AP}{DP} = \frac{PC}{PB} = \frac{CA}{BD}$$

$$\frac{AP}{DP} = \frac{PC}{PB}$$

∴ AP. PB = PC. DP

29) ಈ ಕೆಳಗಿನ ಯಾವ ಸಂದರ್ಭವನ್ನು ಗಮನಿಸಿ

ಒಬ್ಬ ಮಾಲೀಕ ಬಾವಿಯನ್ನು ತೋಡುವಾಗ ಕಾರ್ಮಿಕನೊಬ್ಬನಿಗೆ ಮೊದಲ ಮೀಟರ್‌ಗೆ ರೂ. 150/– ನಂತರದ ಪ್ರತಿ ಮೀಟರ್‌ಗೆ ರೂ. 50/–ರಂತೆ ಹೆಚ್ಚಾಗುತ್ತಾ ಹೋಗುವಂತೆ ಕೂಲಿ ನಿರ್ಧರಿಸಿದ್ದಾನೆ. ಹಾಗಾದರೆ ಕೊಟ್ಟಿರುವ ಈ ಸಂದರ್ಭವು ಸಮಾಂತರ ಶ್ರೇಢಿಯನ್ನುಂಟು ಮಾಡುತದೆಯೇ? ಏಕೆ?

ಉತ್ತರ:

ಬಾವಿಯನ್ನು ತೋಡುವಾಗ ಮೊದಲ ಮೀಟರ್‌ಗೆ ರೂ. 150/– = a_1

ಬಾವಿಯನ್ನು ತೋಡುವಾಗ ಎರಡನೇ ಮೀಟರ್‌ಗೆ =

ರೂ 150+ ರೂ.50 = 200 = a_2

ಬಾವಿಯನ್ನು ತೋಡುವಾಗ ಮೂರನೇ ಮೀಟರ್‌ಗೆ =

ರೂ. 200+ರೂ.50=250 = a_3

ಬಾವಿಯನ್ನು ತೋಡುವಾಗ ನಾಲ್ಕನೇ ಮೀಟರ್‌ಗೆ =

ರೂ. 250+ರೂ.50=300 = a_4

ಹೀಗೆಯೇ ಮುಂದುವರಿಯುವುದು

$$\Rightarrow a_2 - a_1 = \text{Rs. } 200 - \text{Rs. } 150 = \text{Rs.}50$$

$$\Rightarrow a_3 - a_2 = \text{Rs.}250 - \text{Rs.}200 = \text{Rs.}50$$

$$\Rightarrow a_4 - a_3 = \text{Rs.}300 - \text{Rs.}250 = \text{Rs.}50$$

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ $d = 50$ ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

30) $\frac{x+1}{2} = \frac{1}{x}$ ನ್ನು ವರ್ಗಸಮೀಕರಣದ ಆದರ್ಶ ರೂಪದಲ್ಲಿ ಬರೆಯಿರಿ (ಜೂನ್2020)

ಪರಿಹಾರ:–

$$\frac{x+1}{2} = \frac{1}{x}$$

$$x^2 + x = 2$$

$$x^2 + x - 2 = 0$$

31) ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ನೆಲದೊಂದಿಗೆ 30^0 ಕೋನವನ್ನು ಉಂಟು ಮಾಡಿದೆ. ಮತ್ತು ಮರದ್ದ ತುದಿಯು ಮರದ ಬುಡದಿಂದ 8ಮೀ. ದೂರದಲ್ಲಿ ನೆಲಕ್ಕೆ ತಾಗಿದೆ. ಹಾಗಾದರೆ ಮುರಿದು ಬೀಳುವ ಮುನ್ನ ಮರದ ಎತ್ತರ ಎಷ್ಟಿತ್ತು ಎಂಬುದನ್ನು ಕಂಡುಹಿಡಿಯಿರಿ.

ಪರಿಹಾರ:–

ಚಿತ್ರದಲ್ಲಿ ACಯನ್ನು ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ಕೊಂಬೆ ಎಂದು ಭಾವಿಸೋಣ. ಕೋನ C= 30°

BC = 8 m



ಮುರಿದು ಬೀಳುವ ಮುನ್ನ ಮರದ ಎತ್ತರ = AB+AC

ಲಂಬಕೋನ ತ್ರಿಭುಜ ΔABCದಲ್ಲಿ,

Using Cosine and tangent angles,

cos 30° = BC/AC

ನಮಗೆ ಗೊತ್ತಿರುವಂತೆ cos 30° = √3/2

√3/2 = 8/AC

AC = 16/√3 ....(1)

ಇದೇ ರೀತಿ

tan 30° = AB/BC

1/√3 = AB/8

AB = 8/√3 ....(2)

ಮುರಿದು ಬೀಳುವ ಮುನ್ನ ಮರದ ಎತ್ತರ = AB + AC

= 16/√3 + 8/√3

= 24/√3

= 8√3 m.

32) ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ. ಎಂಬುದನ್ನು ಸಾಧಿಸಿ

ರಚನೆ: ΔABCಯಲ್ಲಿ BCಗೆ ಸಮಾನಾಂತರವಾಗಿರುವಂತೆ ಎಳೆದ ರೇಖೆಯು AB ಮತ್ತು AC ಗಳನ್ನು ಕ್ರಮವಾಗಿ D ಮತ್ತು E ಬಿಂದುಗಳಲ್ಲಿ ಛೇದಿಸಿವೆ (ಚಿತ್ರ ನೋಡಿ)



ನಾವು ಸಾಧಿಸಬೇಕಾಗಿರುವುದು $\frac{AD}{AE} = \frac{DB}{EC}$,

ಸಾಧನೆ:– BE ಮತ್ತು CD ಗಳನ್ನು ಸೇರಿಸಬೇಕು. ಮತ್ತು DM ⊥ AC ಮತ್ತು EN ⊥ AB ಎಳೆಯಬೇಕು

(ಮುಂದುವರಿಯುವುದು.......)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET CHEMISTRY

12) Sucrose is NOT a reducing sugar since

a) it is chemically stable

b) it contains no free aldehydes or keto group adjacent to a CH-OH group

c) it is built up of a fructose unit

d) it is optically active

Ans:- b

13) Which of the following is the strongest base?

a) OH^- b) CH_3O^-

c) CH_3COO^- d) Cl^-

Ans : (a)

Expln:- To check the basicity of an ion, the conjugate acid must be weak. The conjugate acids are given below: H_2O, CH_3OH, CH_3COOH and HCl.

We know that methanol is a stronger acid than water. Weaker the acid, stronger is the conjugate base, by that logic, OH^- is the strongest base among the given options.

14) Which one of the following is NOT true regarding electromeric effect?

a) It results in the appearance of partial charges on the carbon atoms

b) It is a temporary effect

c) It operates on multiple bonds

d) It requires an attacking reagent

Ans:- a

15) An organic compound 'A' burns with a sooty flame. It is negative towards Tollen's reagent test and positive for Borsche's reagent test. The compound 'A' is -

a) Benzaldehyde b) Acetophenone

c) Acetone d) Salicylic acid

Ans:- b

16) Out of the below two compounds the vapour pressure of (B) at a particular temperature is ……



(A) (B)

a) lower than that of (A)

b) higher than that of (A)

c) same as that of (A)

d) higher or lower than (A), depending on the size of the vessel

Ans:- b

17) Adenosine is an example of………

a) Purine base b) Nucleoside

c) Nucleotide d) Pyrimidine base

Ans: b

Expl:- When adenine (purine base) combines with ribose sugar, adenosine is formed. It is a nucleoside.

18) Graphite is a soft solid lubricant extremely difficult to melt. The reason for this anomalous behavior is that graphite -

a) has molecules of variable molecular masses like polymers

b) has carbon atoms arranged in large plates of rings of strongly bound carbon atoms with weak interpolate bonds

c) is a non-crystalline substance

d) is an allotropic form of carbon

Ans:- b

19) In electrophilic aromatic substitution reaction, the nitro group is meta directing because it

a) increases electron density at meta position

b) increases electron density at ortho and para positions

c) decreases electron density at ortho and para positions

d) decreases electron density at meta position

Ans:- c

20) The correct arrangement for the ions in the increasing order of their radii is……..

a) Na^+, Cl^-, Ca^{2+} b) Ca^{2+}, K^+, S^{2-}

c) Na^+, AL^{3+}, Be^{2+} d) Cl^-, F^-, S^{2-}

Ans:- b

Expln:-

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

21) 0.06% (w/v) aqueous solution of urea is isotonic with

a) 0.6% glucose solution

b) 0.1 M glucose solution

c) 0.06% glucose solution

d) 0.01 M glucose solution

Ans: (d)

$$\text{Expln:}-\text{Molarity of urea solution} = \frac{0.06 \times 10}{60} = 0.01\text{ M.}$$

ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ವರದಿಯಂತೆ ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಆಗ್ರಹ

‘ಪ್ರಾಂಶುಪಾಲ ಹುದ್ದೆಗೆ ಬಡ್ತಿ: ಪರಿಶಿಷ್ಟರಿಗೆ ಅನ್ಯಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆ ನೀಡಿದ್ದ ವರದಿಯನ್ನು ಬದಿಗಿಟ್ಟು, ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿರುವುದಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪನ್ಯಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

> **ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ವರದಿ ನೀಡಿರುವುದು ನಿಜ. ಆದರೆ, ಡಿಪಿಎಆರ್ ಅಭಿಪ್ರಾಯದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.**
> **ರಿತೇಶ್‌ಕುಮಾರ್ ಸಿಂಗ್,** ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

‘ಪರಿಶಿಷ್ಟರಿಗೆ ಅನ್ಯಾಯ ಎಸಗಿ ಕಾನೂನುಬಾಹಿರವಾಗಿ ಮುಂಬಡ್ತಿ ನೀಡಿದರೆ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಮತ್ತು ಕರ್ತವ್ಯ ಲೋಪದಡಿ ಪ್ರಕರಣದಡಿ ಪ್ರಕರಣ ದಾಖಲಿಸಲಾಗುವುದು’ ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಎಚ್ಚರಿಕೆ ನೀಡಿದ್ದಾರೆ.

‘2016ರ ಅಕ್ಟೋಬರ್ 31ರಿಂದ 2022ನೇ ಸಾಲಿನವರೆಗೆ ನೀಡಿರುವ ಮುಂಬಡ್ತಿಯ ಸಂದರ್ಭದಲ್ಲಿ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಪಾಲಿಸದೇ ಇರುವುದರಿಂದ ಪರಿಶಿಷ್ಟ ಸಮುದಾಯದ ಉಪನ್ಯಾಸಕರಿಗೆ ಅನ್ಯಾಯವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು 2023ರ ಜುಲೈ 7ರಂದೇ ವರದಿ ನೀಡಿದ್ದಾರೆ. ಆದರೆ, ಇಲಾಖೆಯ ಹಿರಿಯ ಅಧಿಕಾರಿಗಳು ಈ ವರದಿಯನ್ನು ಪರಿಗಣಿಸದೆ ಬಡ್ತಿ ನೀಡಲು ಮಂಗಳವಾರ (ಮಾರ್ಚ್ 12) ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ಸಭೆ ನಡೆಸಲು ಮುಂದಾಗಿದ್ದಾರೆ’ ಎಂದು ಎಸ್‌ಸಿ, ಎಸ್‌ಟಿ ಉಪನ್ಯಾಸಕರು ಆರೋಪಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಜುಲೈ 7ರಂದು ನೀಡಿದ್ದ ವರದಿಯಲ್ಲಿ, ಪ್ರಾಂಶುಪಾಲರ ವೃಂದಕ್ಕೆ ಬಡ್ತಿ ನೀಡುವ ವೇಳೆ ಪರಿಶಿಷ್ಟ ಜಾತಿಗೆ 60, ಪರಿಶಿಷ್ಟ ಪಂಗಡಕ್ಕೆ 11 ಸೇರಿ 71 ಹುದ್ದೆಗಳು ಮತ್ತು ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದದಲ್ಲಿ ಪರಿಶಿಷ್ಟ ಜಾತಿಯ 7, ಪರಿಶಿಷ್ಟ ಪಂಗಡದ 2 ಸೇರಿ 9 ಹುದ್ದೆ ಒಟ್ಟು 80 ಹುದ್ದೆಗಳಿಗೆ ವಂಚನೆಯಾಗಿದೆ ಎಂದು ವರದಿ ನೀಡಿದ್ದರು. ಆ ಬಳಿಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕೋರಿದ್ದ ವರದಿಗೆ ಮಾಹಿತಿ ನೀಡಿದ್ದ ಆಯುಕ್ತರು, ಜುಲೈ 7 ವರದಿಯಂತೆ ಕ್ರಮ ವಹಿಸಬೇಕು ಎಂದು ತಿಳಿಸಿದ್ದರು. ಅದನ್ನು ಪರಿಗಣಿಸಿಲ್ಲ ಎಂದು ದೂರಿದ್ದಾರೆ.

ಕೆಪಿಎಸ್‌ಸಿ ಸದಸ್ಯರಾಗಿ ರಾಮಕೃಷ್ಣ ಪ್ರಸಾದ್ ನೇಮಕ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರಾಗಿ ಕೆಎಸ್‌ಆರ್‌ಪಿ ಡಿಐಜಿ ಎಂ.ವಿ. ರಾಮಕೃಷ್ಣ ಪ್ರಸಾದ್ ಅವರನ್ನು ನೇಮಿಸಿ ಅಧಿಸೂಚನೆ ಹೊರಡಿಸಲಾಗಿದೆ.

ರಾಮಕೃಷ್ಣ ಪ್ರಸಾದ್

ಕೋಲಾರದ ಕೆಜಿಎಫ್ ತಾಲ್ಲೂಕಿನವರಾದ ರಾಮಕೃಷ್ಣ ಪ್ರಸಾದ್ ಅವರನ್ನು ಅಧಿಕಾರಿ ವಿಭಾಗದಿಂದ ಖಾಲಿ ಇರುವ ಸದಸ್ಯ ಸ್ಥಾನಕ್ಕೆ ನೇಮಿಸಲಾಗಿದೆ.

ಶೀಘ್ರ 188 ಇಂದಿರಾ ಕ್ಯಾಂಟೀನ್

ದೇವನಹಳ್ಳಿ: ರಾಜ್ಯದಲ್ಲಿ ಹೊಸದಾಗಿ 188 ಇಂದಿರಾ ಕ್ಯಾಂಟೀನ್‌ಗಳನ್ನು ಶೀಘ್ರ ಆರಂಭಿಸಲಾಗುವುದು. ಈ ಪೈಕಿ ಈಗಾಗಲೇ 40 ಸಿದ್ಧವಾಗಿದ್ದು, ಉಳಿದವು ಸಿದ್ಧಗೊಳ್ಳುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಿ-7 ಪಾರ್ಕಿಂಗ್ ಸಮೀಪ ಸೋಮವಾರ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ ಅವರು ಮಾತನಾಡಿದರು.

ರೈತರ ಆಕ್ರೋಶ: ವಾಹನಗಳಿಗೆ ಬೆಂಕಿ

ಒಂದನೇ ಪುಟದಿಂದ

‘ಬ್ಯಾಡಗಿ ಎಪಿಎಂಸಿ ಕಚೇರಿ ಮತ್ತು ವಾಹನಗಳಿಗೆ ಬೆಂಕಿ ಹಚ್ಚಿದ ಪರಿಣಾಮ ಗಾಢ ಹೊಗೆ ಆವರಿಸಿದ್ದು, ಉಸಿರುಗಟ್ಟುವ ವಾತಾವರಣ ನಿರ್ಮಾಣವಾಯಿತು. ಪ್ರತಿಭಟನಕಾರರ ಸಂಖ್ಯೆಗಿಂತ ಪೊಲೀಸ್ ಸಿಬ್ಬಂದಿ ಸಂಖ್ಯೆ ಕಡಿಮೆ ಇದ್ದ ಕಾರಣ ಪರಿಸ್ಥಿತಿ ನಿಯಂತ್ರಣಕ್ಕೆ ತರಲು ತೊಡಕಾಯಿತು’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಿಂದ ಬ್ಯಾಡಗಿ ಎಂಪಿಎಂಸಿ ಮಾರುಕಟ್ಟೆಗೆ ರೈತರು ಸೋಮವಾರ ಮೆಣಸಿನಕಾಯಿ ತಂದಿದ್ದರು. ಬ್ಯಾಡಗಿ ಮೆಣಸಿನಕಾಯಿ ಸರಾಸರಿ ದರದಲ್ಲಿ ಕ್ವಿಂಟಲ್‌ಗೆ ₹3 ಸಾವಿರದಿಂದ ₹5 ಸಾವಿರದವರೆಗೆ ದರ ಕುಸಿತವಾಗಿದೆ ಎಂದು ಆರೋಪಿಸಿದ ರೈತರು ಬ್ಯಾಡಗಿ ಎಂಪಿಎಂಸಿ ಕಚೇರಿಯತ್ತ ನುಗ್ಗಿ ದಾಂದಲೆ ನಡೆಸಿದರು.

‘ನಾವು 300 ರಿಂದ 400 ಕಿ.ಮೀ. ದೂರದಿಂದ ವಾಹನಗಳಿಗೆ ಸಾವಿರಾರು ರೂಪಾಯಿ ಬಾಡಿಗೆ ಕೊಟ್ಟು, ಬ್ಯಾಡಗಿ ಎಪಿಎಂಸಿಗೆ ಮೆಣಸಿನಕಾಯಿ ತಂದಿದ್ದೆವು. ಇಲ್ಲಿ ಉತ್ತಮ ದರ ಸಿಗುತ್ತದೆ ಎಂಬ ನಿರೀಕ್ಷೆಯಿತ್ತು. ಆದರೆ, ನಾವು ತಂದ ಒಣ ಮೆಣಸಿನಕಾಯಿಗೆ ಕಳೆದ ವಾರಕ್ಕಿಂತ ದರ ಕುಸಿದಿದೆ’ ಎಂದು ಆಂಧ್ರ, ತೆಲಂಗಾಣ, ಶಹಾಪುರ, ಬಳ್ಳಾರಿಯಿಂದ ಬಂದ ರೈತರು ದೂರಿದರು.

ಬಿಗು ವಾತಾವರಣ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ನೇತೃತ್ವದಲ್ಲಿ ಬ್ಯಾಡಗಿಯಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯುತ್ ಪೂರೈಕೆ ಇಲ್ಲದೇ ಎಪಿಎಂಸಿ ಮಾರುಕಟ್ಟೆಯಲ್ಲಿ ಕತ್ತಲೆ ಆವರಿಸಿದೆ. ಎಪಿಎಂಸಿ ಕಚೇರಿ ಮುಂಭಾಗ ರೈತರ ಪ್ರತಿಭಟನೆ ಮುಂದುವರಿದಿದೆ.

ಕರಾಳ ದಿನ: ‘ಮೆಣಸಿನಕಾಯಿ ಗುಣಮಟ್ಟಕ್ಕೆ ತಕ್ಕಂತೆ ನಾವು ದರ ನೀಡಿದ್ದೇವೆ. ದರದಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ. ಎಷ್ಟೇ ಮೆಣಸಿನಕಾಯಿ ಬಂದರೂ ನಾವು ಖರೀದಿಸುತ್ತೇವೆ. ದರ ಕುಸಿದಿದೆ ಎಂದಾದರೆ, ರೈತರು ಚರ್ಚಿಸಬೇಕಿತ್ತು. ಆದರೆ, ಹೀಗೆ ಹಿಂಸಾತ್ಮಕ ರೂಪದಲ್ಲಿ ಆಕ್ರೋಶಗೊಂಡಿದ್ದು ಮನಸ್ಸಿಗೆ ತುಂಬಾ ನೋವು ಮಾಡಿದೆ. ಮಾರುಕಟ್ಟೆ ಇತಿಹಾಸದಲ್ಲೇ ಇದು ಕರಾಳ ದಿನ’ ಎಂದು ವರ್ತಕರ ಸಂಘದ ಅಧ್ಯಕ್ಷ ಸುರೇಶಗೌಡ ಪಾಟೀಲ ತಿಳಿಸಿದರು.

ವರದಿ ಆಧರಿಸಿ ಕ್ರಮ: ಪರಮೇಶ್ವರ

ಬೆಂಗಳೂರು: ‘ಮೆಣಸಿನಕಾಯಿ ದರ ಒಂದೇ ದಿನದಲ್ಲಿ ಕ್ವಿಂಟಲ್‌ಗೆ ₹ 20 ಸಾವಿರದಿಂದ ₹ 8 ಸಾವಿರಕ್ಕೆ ಕುಸಿತವಾಗಿದೆ. ಒಂದೇ ದಿನದಲ್ಲಿ ₹ 12 ಸಾವಿರ ದರ ಕುಸಿಯಲು ಕಾರಣವೇನು ಎಂಬುದನ್ನು ತಿಳಿದು ವರದಿ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ದರ ಕುಸಿತದ ಕಾರಣಕ್ಕೆ ಹಾವೇರಿ ಎಪಿಎಂಸಿ ಮಾರುಕಟ್ಟೆಯಲ್ಲಿ ಗಲಾಟೆಯಾಗಿದೆ. ಎಪಿಎಂಸಿ ಕಚೇರಿಗೆ ನುಗ್ಗಿ ಪೀಠೋಪಕರಣ ಧ್ವಂಸ ಮಾಡಲಾಗಿದೆ. ಎಲ್ಲ ಎಪಿಎಂಸಿ ಮಾರುಕಟ್ಟೆಗಳಲ್ಲಿ ದರ ಕುಸಿತ ಆಗಿದೆಯೇ ಅಥವಾ ಹಾವೇರಿ ಮಾರುಕಟ್ಟೆಯಲ್ಲಿ ಮಾತ್ರವೇ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದೂ ಹೇಳಿದರು.

ಟೆಂಡರ್ ಅಕ್ರಮ: ಸತೀಶ್ ಕುಮಾರ್ ಹೊಸಮನಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 20 ಕೋಟಿ ಮೌಲ್ಯದ ಪುಸ್ತಕಗಳನ್ನು ಖರೀದಿಸಿ, ಗ್ರಂಥಾಲಯಗಳಿಗೆ ರವಾನಿಸದೇ ಇರುವುದು, ಮಂಜೂರಾತಿಗಿಂತ ಹೆಚ್ಚು ಮೊತ್ತದ ಪುಸ್ತಕ ಖರೀದಿ, ಟೆಂಡರ್‌ಗಳಲ್ಲಿ ಅಕ್ರಮ ಸೇರಿದಂತೆ ಹಲವು ಆರೋಪಗಳ ಮೇಲೆ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶ್ ಕುಮಾರ್ ಎಸ್. ಹೊಸಮನಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಸತೀಶ್ ಕುಮಾರ್ ವಿರುದ್ಧದ ಆರೋಪಗಳ ಕುರಿತು ತನಿಖೆಗಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿ ರಚಿಸಲಾಗಿತ್ತು. ತನಿಖಾ ಸಮಿತಿ ನೀಡಿರುವ ವರದಿ ಆಧರಿಸಿ ಗ್ರಂಥಾಲಯ ಇಲಾಖೆ ನಿರ್ದೇಶಕರನ್ನು ಅಮಾನತುಗೊಳಿಸಿ

ಸತೀಶ್ ಕುಮಾರ್

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

‘₹6.5 ಕೋಟಿ ಮೌಲ್ಯದ ಪುಸ್ತಕಗಳ ಖರೀದಿಗೆ ಮಾತ್ರ ಅವಕಾಶ ಇದ್ದರೂ, ₹ 20.57 ಕೋಟಿ ಮೌಲ್ಯದ ಪುಸ್ತಕ ಖರೀದಿಸಿ ಅಕ್ರಮ ಎಸಗಿದ್ದಾರೆ. ಡಿಜಿಟಲ್ ಗ್ರಂಥಾಲಯ ಯೋಜನೆ ಅನುಷ್ಠಾನ ಯಶಸ್ವಿಯಾಗಿರುವ ಕುರಿತು ಪ್ರಮಾಣ ಪತ್ರವನ್ನೇ ಪಡೆದಿಲ್ಲ. ಕೆಲವು ಟೆಂಡರ್ ಪ್ರಕ್ರಿಯೆಗಳಲ್ಲಿ ಆಯ್ದವರಿಗೆ ಗುತ್ತಿಗೆ ನೀಡುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ್ದಾರೆ’ ಎಂದು ತನಿಖಾ ಸಮಿತಿ ವರದಿಯಲ್ಲಿ ತಿಳಿಸಿದೆ.

ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.) ಮೈಸೂರು
ನಂ. 2166, ನ್ಯೂ ನಂ. 38, ಅಕ್ಬರ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು–01

ಇದರ ರಿಟರ್ನಿಂಗ್ ಆಫೀಸ್‌ರವರ ಕಾರ್ಯಾಲಯದಿಂದ **ಪತ್ರಿಕಾ ಪ್ರಕಟಣೆ**
ಮೇಲ್ಕಂಡ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯು ದಿ: 24–03–2024ಕ್ಕೆ ನಿಗಧಿಯಾಗಿದ್ದು, ಸಂಘದ ಕಛೇರಿಯಲ್ಲಿ ನಾಮಪತ್ರ ಸಲ್ಲಿಕೆಯು ದಿ: 10–03–2024 ರಂದು ಪ್ರಾರಂಭವಾಗಲಿದ್ದು, ದಿ: 16–03–2024 ರವರೆಗೆ ನಾಮಪತ್ರ ಸಲ್ಲಿಸಲು ಕೊನೆ ದಿನಾಂಕವಾಗಿರುತ್ತದೆ. ದಿ: 17–03–2024 ರಂದು ನಾಮಪತ್ರ ಪರಿಶೀಲಿಸಲಾಗುವುದು. ದಿ: 18–03–2024 ರಂದು ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿರುತ್ತದೆ. ಅವಶ್ಯವಿದ್ದಲ್ಲಿ ದಿ: 24–03–2024ರ ಭಾನುವಾರ ಬೆಳಗ್ಗೆ 9–00 ಗಂಟೆಯಿಂದ ಸಾಯಂಕಾಲ 4–00 ಗಂಟೆಯವರೆಗೆ ಚುನಾವಣೆ ನಡೆಯಲಿದ್ದು ಅರ್ಹ ಮತದಾರರು ಭಾಗವಹಿಸುವಂತೆ ಈ ಮೂಲಕ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ/ ರಿಟರ್ನಿಂಗ್ ಆಫೀಸರ್‌ರವರನ್ನು ಭೇಟಿ ಮಾಡತಕ್ಕದ್ದು.
ದಿ: 11–03–2024 ಸಹಿ/– (ಮನುಮಂಜುಳ ಬಿ.ಹೆಚ್.), ರಿಟರ್ನಿಂಗ್ ಆಫೀಸರ್
ಸ್ಥಳ : ಮೈಸೂರು ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.) ಮೈಸೂರು

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತಾಧಿಕಾರಿಗಳ ಕಚೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560065
ಫ್ಯಾಕ್ಸ್: (91–080)233302521, ಫೋನ್: 23332521, 23330153 extn.:259
http://www.uasbangalore.edu.in
ಸಂಖ್ಯೆ: ಆಕ/ಸಿನೇವಿ/ನೇರ ನೇಮಕಾತಿ / ಸಹಾಯಕ / ಹುದ್ದೆ / 2023–24 ದಿ.: 11.03.2024
ಪ್ರಕಟಣೆ
ವಿಷಯ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಹುದ್ದೆಗಳ ನೇರ ನೇಮಕಾತಿ
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ವೃಂದದ 20 ಬೋಧಕೇತರ ಹುದ್ದೆಗಳನ್ನು ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನೊಳಗೊಂಡ ಅಧಿಸೂಚನೆ, ಅರ್ಜಿ ನಮೂನೆ ಹಾಗೂ ಇತರೆ ವಿವರಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ (www.uasbangalore.edu.in) ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ 10.04.2024.
ಸಹಿ/– ಆದೇಶದ ಮೇರೆಗೆ
ಆಡಳಿತಾಧಿಕಾರಿಗಳು

ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ
(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಸಹಭಾಗಿತ್ವದ ಒಂದು ಉದ್ಯಮ)
ಇ–ಮೇಲ್: contracts@bmrc.co.in ವೆಬ್‌ಸೈಟ್: www.bmrc.co.in
ಆರ್‌ಎಫ್‌ಪಿ ಸಂಖ್ಯೆ:ಬಿಎಂಆರ್‌ಸಿಎಲ್/ಹಂತ–3/ಸಲಹೆ / ಭೂಮಿ ಮಾರುಕಟ್ಟೆ ಮೌಲ್ಯ/2024/107 ದಿನಾಂಕ:12.03.2024
ಪ್ರಸ್ತಾವನೆ ಕೋರಿಕೆ (ಆರ್.ಎಫ್.ಪಿ) ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್, ಇವರ ಪರವಾಗಿ ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು), ಇವರು **ಬೆಂಗಳೂರು ಮೆಟ್ರೋ ರೈಲು ಯೋಜನೆ, ಹಂತ–3ರ ಪ್ರಸ್ತಾವಿತ ಪಂಕ್ತೀಕರಣದ ಒಟ್ಟು 44.65 ಕಿ.ಮೀ. ಉದ್ದ ಮತ್ತು 31 ನಿಲ್ದಾಣಗಳನ್ನೊಳಗೊಂಡ ಎರಡು ಎತ್ತರಿಸಿದ ಮಾರ್ಗಗಳ ನಿರ್ಮಾಣಕ್ಕಾಗಿ** ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡ ಮಾರ್ಗಗಳಿಗೆ ಭೂಮಿ ಮಾರುಕಟ್ಟೆ ಮೌಲ್ಯ ನಿಗದಿ ಮಾಡಲು ಪ್ರಸ್ತಾವನೆ ಕೋರಿಕೆಗಳನ್ನು ಆಹ್ವಾನಿಸಿರುತ್ತಾರೆ.
(ಅ) ಮಾರ್ಗ–1: 32.15 ಕಿ.ಮೀ. ಉದ್ದ ಮತ್ತು 22 ನಿಲ್ದಾಣಗಳನ್ನೊಳಗೊಂಡ ಜೆ.ಪಿ.ನಗರ 4ನೇ ಹಂತದಿಂದ ಕೆಂಪಾಪುರದವರೆಗೆ (ಪಶ್ಚಿಮ ಹೊರವರ್ತುಲ ರಸ್ತೆ ಮುಖಾಂತರ), ಮತ್ತು (ಆ) ಮಾರ್ಗ–2: 12.50 ಕಿ.ಮೀ. ಉದ್ದ ಮತ್ತು 9 ನಿಲ್ದಾಣಗಳನ್ನೊಳಗೊಂಡ ಹೊಸಹಳ್ಳಿಯಿಂದ ಕಡಬಗೆರೆವರೆಗೆ (ಮಾಗಡಿ ರಸ್ತೆಯಲ್ಲಿ).
ಬಿಡ್ ಭದ್ರತಾ ಮೊತ್ತ: **ರೂ.50,000/–**. ಆರ್‌ಎಫ್‌ಪಿ ದಸ್ತಾವೇಜುಗಳ ಮಾರಾಟ (ಆನ್ ಲೈನ್ ಮಾತ್ರ): **12.03.2024 ರಿಂದ 16.04.2024.** ಆರ್‌ಎಫ್‌ಪಿ ಸಲ್ಲಿಸುವ ದಿನಾಂಕ ಮತ್ತು ಸಮಯ: **17.04.2024 ರಂದು 10.00 ಗಂಟೆ ಇಂದ 15.00 ಗಂಟೆಯವರೆಗೆ.** ಆರ್‌ಎಫ್‌ಪಿ ತೆರೆಯುವ ದಿನಾಂಕ ಮತ್ತು ಸಮಯ: **17.04.2024 ರಂದು 15.30 ಗಂಟೆಗೆ.** ಆರ್‌ಎಫ್‌ಪಿ ದಸ್ತಾವೇಜುಗಳ ಮೊತ್ತ: **ರೂ.2,360/–.** ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್ **www.bmrc.co.in** ರಲ್ಲಿ **ದಿನಾಂಕ 12.03.2024** ರಿಂದ ಪರಿವೀಕ್ಷಿಸಬಹುದು.
ಸಹಿ/– ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು)

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕ್ ವ್ಯಾಪ್ತಿಯ 02 ಸಂಖ್ಯೆ ಸೇತುವೆ ಕಾಮಗಾರಿಗಳು ಹಾಗೂ ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕು ವ್ಯಾಪ್ತಿಯ 01 ಸಂಖ್ಯೆ ವಿದ್ಯುತ್ ಕಾಮಗಾರಿಯ ಒಟ್ಟಾರೆ ಟೆಂಡರ್ ಗಿಟ್ಟ ಮೊತ್ತ ಕನಿಷ್ಠ ರೂ.14.04 ಲಕ್ಷಗಳಿಂದ ಗರಿಷ್ಠ ರೂ.119.90 ಲಕ್ಷಗಳ ಕಾಮಗಾರಿಗಳಿಗೆ “ಶೇಕಡಾವಾರು ದರಗಳಲ್ಲಿ” ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟ್‌ಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಾಜರಾಜೇಶ್ವರಿ ನಗರ ವಿಭಾಗ, ಬಿಬಿಎಂಪಿ ಕಚೇರಿ, ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ, ಮತ್ತಿಕೆರೆ, ಬೆಂಗಳೂರು–54.
ಸಂಖ್ಯೆ:ಕಾಪಾಅ/ರಾರಾನವಿ/ಟೆಂಡರ್/14/2023–24 ದಿನಾಂಕ: 07-03-2024
ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ಕೆಡಬ್ಲ್ಯೂ–3)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)
ಕೆಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ, ಬೆಂಗಳೂರು ರವರು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ ಬಿಡಬ್ಲ್ಯೂಎಸ್‌ಎಸ್‌ಬಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ
1)	2023–24ನೇ ಸಾಲಿಗೆ (ಎ) ವಾರ್ಡ್ ಸಂ.36ರ ಆರ್.ಆರ್.ನಗರ ವಿಭಾಗದ ಜಾಲಹಳ್ಳಿಯಲ್ಲಿ ಸಿಸಿ ರಸ್ತೆಗಳ ನಿರ್ಮಾಣ, ಆರ್‌ಸಿಸಿ ಒಳಚರಂಡಿಗಳು ಮತ್ತು ಉದ್ಯಾನವನಗಳ ಸುಧಾರಣಾ ಕಾಮಗಾರಿಗಳು (ಬಿ) ಸಾರ್ವಜನಿಕ ಶೌಚಾಲಯದ ಪುನರ್‌ನಿರ್ಮಾಣ ಹಾಗೂ ಇತರ ಸಂಬಂಧಿತ ಕಾಮಗಾರಿಗಳು (ಪ್ಯಾಕೇಜ್ ನಂ.02 ರಾರಾನವ – ರಾರಾನವಿ) ಕರೆ–2. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **74.15.** ಇಎಂಡಿ (ರೂ.ಗಳಲ್ಲಿ): **1,48,000/-** (ಇತರೆ)
2)	ವಾರ್ಡ್ ನಂ.160ರ ಆರ್.ಆರ್.ನಗರ ವಿಭಾಗದ ರಾಜರಾಜೇಶ್ವರಿ ನಗರದ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಮತ್ತು ಕಲ್ವರ್ಟ್‌ಗಳ ದುರಸ್ತಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **82.64..** ಇಎಂಡಿ (ರೂ.ಗಳಲ್ಲಿ): **1,28,000/-** (ಇತರೆ)
3)	ವಾರ್ಡ್ ನಂ 160ರ ಆರ್.ಆರ್.ನಗರ ವಿಭಾಗದ ರಾಜರಾಜೇಶ್ವರಿ ನಗರದ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಹಾಗೂ ಒಳಚರಂಡಿಗಳ ಹೂಳು ತೆಗೆಯುವ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **82.64..** ಇಎಂಡಿ (ರೂ.ಗಳಲ್ಲಿ): **1,28,000/-** (ಇತರೆ)

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ **ದಿನಾಂಕ: 12–03–2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **2.** ಪೂರ್ವ ಬಿಡ್ ಸಭೆಯು **ಮುಖ್ಯ ಅಭಿಯಂತರರ ಕಛೇರಿ (ರಾರಾನವ), 18ನೇ ಕ್ರಾಸ್, ಐಡಿಯಲ್ ಹೋಮ್ಸ್, ಆರ್‌ಆರ್ ನಗರ, ಬೆಂಗಳೂರು–98** ಇಲ್ಲಿ **ದಿನಾಂಕ: 15–03–2024ರ ಸಂಜೆ 3:30 ಗಂಟೆಗೆ** ನಡೆಸಲಾಗುವುದು. **3.** ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ **20–03–2024 ರಂದು ಸಂಜೆ 4.00 ಗಂಟೆಗೆ ಅಥವಾ ಮೊದಲು ಸಲ್ಲಿಸಬೇಕು. 4.** ಬಿಡ್ ತೆರೆಯುವ **ದಿನಾಂಕ: 21–03–2024ರ ಸಂಜೆ 4:30 ಗಂಟೆಗೆ.**
ಸಹಿ/– ಕಾರ್ಯಪಾಲಕ ಅಭಿಯಂತರರು,
ರಾಜರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ.

ಕರ್ನಾಟಕ ಸರಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು ಮಂಗಳೂರು ವಿಭಾಗ
ಲೋಕೋಪಯೋಗಿ ಕಟ್ಟಡ, ನೆಹರೂ ಮೈದಾನದ ಬಳಿ, ಮಂಗಳೂರು – 575001
ಸಂಖ್ಯೆ:ಆಯವ್ಯಯ/ವಿವ-4/ ಮುಂದುವರಿದ ಕಾಮಗಾರಿ ಟೆಂಡರ್/2024-25 ದಿನಾಂಕ: 07.03.2024
ಇ–ಟೆಂಡರ್ ಪ್ರಕಟಣೆ
2024-25ನೇ ಸಾಲಿನಲ್ಲಿ ಮಂಗಳೂರು ವಿಭಾಗದ ವ್ಯಾಪ್ತಿಗೊಳಪಡುವ ವಿವಿಧ ವಲಯಗಳಲ್ಲಿ ವಿವಿಧ ಯೋಜನೆಯಡಿ ನೆಡುತೋಪು ನಿರ್ಮಾಣ ಮತ್ತು ಪೋಷಣೆ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ- ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.inನಲ್ಲಿ ಪಡೆದು ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22-03-2024 ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 25-03-2024 ರಂದು ಪೂರ್ವಾಹ್ನ 11.00 ಗಂಟೆಗೆ ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ-ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಇ-ಟೆಂಡರನ್ನು ಆಹ್ವಾನಿಸಲಾಗಿದ್ದು, ಮರು ಟೆಂಡರನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 02-04-2024 ರಂದು ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 04-04-2024 ರಂದು ಪೂರ್ವಾಹ್ನ 11.00 ಗಂಟೆಗೆ ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.
ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು
DIPR / MNG /1567/ MPL / 23-24

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ. ತುಮಕೂರು–572 103,
ಸಂಖ್ಯೆ:ತುವಿ/ತಾವಿ/ಟೆಂ.ಪ್ರ/2023–24/33 ದಿನಾಂಕ: 07.03.2024.
ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ಒಳಾಂಗಣ ಕ್ರೀಡಾಂಗಣ (Indoor Stadium) ನಿರ್ಮಾಣ ಕಾಮಗಾರಿಯನ್ನು ರೂ.496.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ನಿಯಮಾನುಸಾರ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ದಿನಾಂಕ: 06.04.2024 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ವಿವರಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಸಂಪರ್ಕಿಸಬಹುದು ಅಥವಾ ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.
ಸಹಿ/–ಕುಲಸಚಿವರು,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು
ಸಂ.: ಕರಾಸಾ/ವಿನಿ/ಕೆಂಬನಿ/ವಾ/1344/2023–24 ದಿನಾಂಕ: 09/03/2024
ಇ–ಟೆಂಡರು/ಸಂಧಾನ ಪ್ರಕಟಣೆ ಸಂಖ್ಯೆ: 09/2023–24
ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು 3 ರಲ್ಲಿ ಖಾಲಿ ಇರುವ/ ಖಾಲಿಯಾಗಲಿರುವ ಮಳಿಗೆ ಸಂಖ್ಯೆ 46, 124, 01 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ 09 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದ ಮೂಲಕ ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯ) ಕೆಳಮಹಡಿ, ನೆಲಮಹಡಿ, ಮೊದಲನೇ, ಎರಡನೇ ಮಹಡಿ ಮತ್ತು ಪೀಣ್ಯದ ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 24, 48 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 04, 05, 06, 15, 31 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ ದಿನಾಂಕ: 12.03.2024 ರಿಂದ 01.04.2024 ರವರೆಗೆ ಟೆಂಡರ್ / ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ/ವಿವರಗಳಿಗಾಗಿ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ +91–0846010000/+91–8068948777.
ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಬನಿ ವಿಭಾಗ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/4183/ಆಕಾರ್/2023–24

ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ
ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ–ಟೆಂಡರ/2023–24/1563 ದಿ:11.03.2024
ಅಲ್ಪಾವಧಿ ಟೆಂಡರ ಪ್ರಕಟಣೆ –/2023–24 (ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
ವಿಷಯ : ಅಲ್ಪಾವಧಿ ಟೆಂಡರನ ಮುಂದೂಡಿದ ಪ್ರಕಟಣೆ ಕುರಿತು.
ಉಲ್ಲೇಖ: 1.ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ–ಟೆಂಡರ/2023–24/1525 ದಿನಾಂಕ:02.03.2024
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಡಿಯ ಕಲಘಟಗಿ ತಾಲೂಕಿನ ಕಾಮಗಾರಿಯನ್ನು ತಾಂತ್ರಿಕ ಕಾರಣದಿಂದ ಮೂಂದೂಡಲಾಗಿದೆ. ವಿವರ ಈ ಕೆಳಗಿನಂತಿದೆ.
ಕಾಮಗಾರಿಯ ವಿವರ ಈ ಕೆಳಗಿನಂತಿದೆ.
ಕಲಘಟಗಿ ತಾಲೂಕ: ವರ್ಗ: ಪರಿಶಿಷ್ಟ ಜಾತಿ
ಇಂಡೆಂಟ್ ಸಂಖ್ಯೆ: RWSSD/2023-24/WS/WORK_INDENT7921
ಟೆಂಡರಗಿಟ್ಟ ಮೊತ್ತ: 14.80 ಲಕ್ಷಗಳು
ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events)
1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: **14.03.2024 ಸಾಯಂಕಾಲ 4.00 ಘಂಟೆಗೆ**
2) ಆರ್ಥಿಕ ಬಿಡ್ ತೆರೆಯುವ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (For Single Cover) **15.03.2024 ಸಾಯಂಕಾಲ 4.30 ಘಂಟೆಗೆ**
ಸದರಿ ಕಾಮಗಾರಿಗಳ ಅಂತೀಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ kppp.karnataka.gov.in ನಲ್ಲಿ ಪಡೆಯಬಹುದು. ಟೆಂಡರ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ kppp.karnataka.gov.in ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ–ಪ್ರೋಕ್ಯೂರಮೆಂಟ ವೆಬಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ
ವಾ.ಸಾ.ಇ/ಧಾರವಾಡ/898/ದೇಶಪಾಂಡೆಪಬ್ಲಿಸಿಟಿ/2023–24

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/AE-1/JE/2023-24/1480 Date:11.03.2024
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ.3&4)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು “ಕೆಪಿಪಿಪಿ” ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಗೋಕಾಕ/ಬೆಳಗಾವಿ ಉಪವಿಭಾಗದಡಿಯ ಒಟ್ಟು 03 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.210.00ಲಕ್ಷಗಳು ಹಾಗೂ ಕನಿಷ್ಠ ರೂ.70.00 ಲಕ್ಷಗಳು. 1.ಪೂರ್ವ ಟೆಂಡರ ಸಭೆ ದಿನಾಂಕ: 18–03–2024 ಬೆಳಿಗ್ಗೆ 11.00 ಗಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:19–03–2024 ಸಾಯಂಕಾಲ 4.00 ಗಂಟೆಯವರೆಗೆ, 3. ಟೆಂಡರ ತೆರೆಯುವ ದಿನಾಂಕ: 20–03–2024 ಸಾಯಂಕಾಲ 4.30 ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1369/KSMCA/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, (ಬೆಂಗಳೂರು ದಕ್ಷಿಣ ಕ್ಷೇತ್ರ)
ಕೆರೆಗಳ ವಿಭಾಗ, ರೂಂ ನಂ.309, 3ನೇ ಮಹಡಿ, ನ್ಯೂ ಬಿಲ್ಡಿಂಗ್, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ: ಕಾಅ–ಬೆಂದಕ್ಷೇ(ಕೆರೆಗಳು)/ಟೆಂಡರ್–06/2023–24 ದಿನಾಂಕ: 11–03–2024
ಅಲ್ಪಾವಧಿ ಟೆಂಡರ್ ಪ್ರಕಟಣೆ – (2ನೇ ಕರೆ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ಕ್ಷೇತ್ರ, ಕೆರೆಗಳ ವಿಭಾಗ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ಅಥವಾ ಯಾವುದೇ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಬೊಮ್ಮನಹಳ್ಳಿ ವಲಯದ ಪರಪ್ಪನ ಅಗ್ರಹಾರ ಕೆರೆಯಲ್ಲಿ ತೇವ ಭೂಮಿಯ ಸುಧಾರಣೆ ಕಾಮಗಾರಿ. **(2ನೇ ಕರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 150000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **15–03–2024 ರಂದು 15.00 ಗಂಟೆಗೆ ಕೇಂದ್ರ ಕಛೇರಿಯಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **22–03–2024 ರಂದು 16.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25–03–2024 ರಂದು 16.30 ಗಂಟೆಗೆ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ಇ–ಪೋರ್ಟಲ್ ಮೂಲಕ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
(ಬೆಂಗಳೂರು ದಕ್ಷಿಣ ಕ್ಷೇತ್ರ), ಕೆರೆಗಳ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJM:20–21:2023–24/2742
ದಿನಾಂಕ: 07.03.2024
1. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:06/2023–24 (ದ್ವಿ–ಲಕೋಟೆ ಪದ್ಧತಿ)5ನೇ ಕರೆ
2. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:09/2023–24 (ಏಕ–ಲಕೋಟೆ ಪದ್ಧತಿ)3ನೇ ಕರೆ
3. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:07/2023–24 (ಏಕ–ಲಕೋಟೆ ಪದ್ಧತಿ)4ನೇ ಕರೆ (kppp portal)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ನಾಗಮಂಗಲ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಉಳಿಕೆ ಪರಿಮಾಣಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಐಟಂಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ.69.73 ಲಕ್ಷಗಳು.** ಪೂರ್ವಭಾವಿ ಸಭೆ **ದಿನಾಂಕ:16.03.2024 ಸಮಯ: ಬೆಳಿಗ್ಗೆ11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ)** ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ:18–03–2024 ಸಂಜೆ:5:00 ಗಂಟೆಗೆ, ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ ದಿನಾಂಕ:19–03–2024 ಸಂಜೆ:05:05 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ:**20–03–2024 ಬೆಳಿಗ್ಗೆ: 11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://kppp. karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232–222363.
ಸಹಿ/–ಕಾರ್ಯಪಾಲಕ ಇಂಜಿನಿಯರರು,
ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/654/2023–24

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಗ್ರಾಅಪಂರಾಇಂಯೋವಿಕ/ತಾಶಾ/ಟೆಂಡರ/2023–24/855 ದಿನಾಂಕ : 29/02/2024
ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ–ಲಕೋಟೆ ಪದ್ಧತಿಯಲ್ಲಿ

1.	ಕಾಮಗಾರಿಗಳ ಹೆಸರು ಇಂಡೆಂಟ್ ಸಂಖ್ಯೆ	**Package of 4 Works 1.a) Improvements to Road From Bhankur to Kanti Basaveshwar Temple,b).Kadehalli to Daadaa peer Darga c).Sawathkhed Cross to Kamaknoor Road 2) Improvements to Road From Wadi to Chamanoor 3) Improvements to Road From Sannatti Nalwar MDR to Kollur Village 4) Construction of BT Road From Tahasil Office to Railway Station Via Muncipal office, Raghavendra Hotel & Pathan House in Chittapur Town in Chittapur Taluka Kalaburagi District Under KKRDB 2023-24 Micro Project. Indent No.KRRDA/2023-24/RD/WORK_INDENT34**
2.	ಲೆಕ್ಕ ಶೀರ್ಷಿಕೆ	2023–24ನೇ ಸಾಲಿನ (ಮೈಕ್ರೋ ಯೋಜನೆ) ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
3.	ಟೆಂಡರಿಗಿಟ್ಟ ಅಂದಾಜು ಮೊತ್ತ	**₹ 173853731.54**
4.	ಗುತ್ತಿಗೆದಾರರ ಅರ್ಹತೆ	1ನೇ ದರ್ಜೆ ಮತ್ತು ಮೇಲ್ಪಟ್ಟು
5.	ಟೆಂಡರ ಅರ್ಜಿ ಬೆಲೆ	ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ
6.	ಇ.ಎಂ.ಡಿ.	ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ
7.	ಟೆಂಡರ ಸಲ್ಲಿಸುವ ದಿನಾಂಕ	29–02–2024 ರಿಂದ 15–03–2024 16:00 ಗಂಟೆವರೆಗೆ
8.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	16–03–2024 16:00 ಗಂಟೆ ನಂತರ
9.	ಆರ್ಥಿಕ ಬಿಡ್ ತೆರೆಯುವ ದಿನಾಂಕ	18–03–2024 ಬೆಳಿಗ್ಗೆ 11:00 ಗಂಟೆ ನಂತರ
10.	ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ	ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಗ್ರಾಮಿಣಾಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ, ಕಲಬುರಗಿ E-mail : kn-gul-1@pmgsy.nic.in
11.	ಅಂತರಜಾಲ ತಾಣದ ವಿಳಾಸ	www.kppp.karnataka.gov.in

ಸಹಿ/– **ಸೈಯದ್ ಜಮಾಲುದ್ದಿನ್ ಖಾದ್ರಿ**
ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್
ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಕಾರ್ಯಪಾಲಕ ಇಂಜಿನಿಯರ್, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ (ನಿ), ತುರುವೇಕೆರೆ. ತುಮಕೂರು ಜಿಲ್ಲೆ, ಪಿನ್–572227
ಸಂ:04–/2023–24 ದಿನಾಂಕ: 02.03.2024
ಅಲ್ಪಾವಧಿ ಕೆ.ಪಿ.ಪಿ.ಪಿ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.04 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿನಿ, ತುರುವೇಕೆರೆ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರ್‌ನ ಕಾಮಗಾರಿಗಳಿಗೆ KW-1 KW-2 ಹಾಗೂ KW-4 “ ಐಟಂವಾರು ಏಕ ಲಕೋಟೆ ಮತ್ತು ಎರಡು ಲಕೋಟೆ “ ಪದ್ಧತಿಯಲ್ಲಿ & ನಿಬಂಧನೆಗಳೊಂದಿಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನ ಮೂಲಕ ಆಹ್ವಾನಿಸಲಾಗಿದೆ.
General Works:- 1. Indent No : 851 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.3.55 ಲಕ್ಷ, ಇ.ಎಂ.ಡಿ. ಮೊತ್ತ ರೂ.8,900/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು (ಏಕ ಲಕೋಟೆ ಪದ್ಧತಿ) 2. Indent No: 847 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ:126.54 ಲಕ್ಷ, ಇ.ಎಂ.ಡಿ. ಮೊತ್ತ ರೂ.2,00,000/– KPWD Class III ಮತ್ತು ಮೇಲ್ಪಟ್ಟ ಗುತ್ತಿಗೆದಾರರು (ಎರಡು ಲಕೋಟೆ ಪದ್ಧತಿ) 3. Indent No : 848 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.33.30 ಲಕ್ಷ, ಇ.ಎಂ.ಡಿ. ಮೊತ್ತ ರೂ.67,000/– KPWD Class III ಮತ್ತು ಮೇಲ್ಪಟ್ಟ ಗುತ್ತಿಗೆದಾರರು (ಏಕ ಲಕೋಟೆ ಪದ್ಧತಿ)
* ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 11–03–2024 ಸಂಜೆ 16.00 ಗಂಟೆವರೆಗೆ * ಕೆ.ಪಿ.ಪಿ.ಪಿ ಪೋರ್ಟ್‌ಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:–06–03–2024 ರಿಂದ 16–03–2024 ಸಂಜೆ 16.00 ಗಂಟೆ ರವರೆಗೆ. * ತಾಂತ್ರಿಕ / ಟೆಂಡರ್ ತೆರೆಯುವ ದಿನಾಂಕ: 16–03–2024 ಸಂಜೆ 4:30 ಗಂಟೆ ವರೆಗೆ. * ಆರ್ಥಿಕ ಬಿಡ್ ತೆರೆಯುವ ದಿನಾಂಕ:– 19–03–2024 (ಇಂಡೆಂಟ್ ಸಂಖ್ಯೆ : 847) ಅಥವಾ (ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ). ಕಾಮಗಾರಿ ವಿವರ, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ತುರುವೇಕೆರೆ.
DIPR/TUM/629/KSMCA/2023-24

ರಾಜ್ಯದ 33 ಸರ್ಕಾರಿ ಆಸ್ಪತ್ರೆಗಳಲ್ಲಿ ಮೆದುಳು ಆರೋಗ್ಯ ಕೇಂದ್ರಗಳಿಗೆ ಸೋಮವಾರ ನಗರದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು. ವಿಧಾನ ಪರಿಷತ್ ಸದಸ್ಯರಾದ ಯು.ಬಿ.ವೆಂಕಟೇಶ್, ಉಮಾಶ್ರೀ, ಆರೋಗ್ಯ ಇಲಾಖೆಯ ಅಧಿಕಾರಿಗಳು, ನಿಮ್ಹಾನ್ಸ್ ಅಧಿಕಾರಿಗಳು ಭಾಗವಹಿಸಿದ್ದರು

ಜಿಲ್ಲಾ ಆಸ್ಪತ್ರೆಗಳಲ್ಲಿ ಮೆದುಳು ಆರೋಗ್ಯ ಸೇವೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಮ್ಹಾನ್ಸ್ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಮೆದುಳು ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಿಮ್ಹಾನ್ಸ್ ಸಹಯೋಗದಲ್ಲಿ ಬಿಬಿಎಂಪಿ, ನಗರ ಜಿಲ್ಲಾ ಆಸ್ಪತ್ರೆ ಸೇರಿ ರಾಜ್ಯದ 33 ಸರ್ಕಾರಿ ಆಸ್ಪತ್ರೆಗಳಲ್ಲಿ ಮೆದುಳು ಆರೋಗ್ಯ ಕೇಂದ್ರಗಳಿಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲಿ ಇದೊಂದು ಮಾದರಿ ಕಾರ್ಯಕ್ರಮವಾಗಲಿದೆ. ಮೆದುಳು ಹಾಗೂ ನರ ಸಮಸ್ಯೆಗಳಿಗೆ ರಾಜ್ಯದ ಜನರು ಬೆಂಗಳೂರಿನ ನಿಮ್ಹಾನ್ಸ್‌ಗೆ ಬರಬೇಕಾಗಿತ್ತು. ಇದು ಹೆಚ್ಚಿನ ಒತ್ತಡ ನಿರ್ಮಾಣ ಮಾಡಿತ್ತು. ಈ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ, ಜಿಲ್ಲಾ ಮಟ್ಟದಲ್ಲಿಯೇ ರೋಗಿಗಳಿಗೆ ಚಿಕಿತ್ಸೆ ನೀಡಲು ಮೆದುಳು ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಹೇಳಿದರು.

ನಿಮ್ಹಾನ್ಸ್ ತಜ್ಞ ವೈದ್ಯರ ಸಲಹೆ ಪಡೆದುಕೊಂಡು ಜಿಲ್ಲಾ ಕೇಂದ್ರಗಳಲ್ಲಿಯೇ ಹೆಚ್ಚಿನ ಚಿಕಿತ್ಸೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಪಾರ್ಶ್ವವಾಯು, ಅಪಸ್ಮಾರ, ಮರೆವಿನ ಕಾಯಿಲೆ ಮತ್ತು ತಲೆನೋವು ಸೇರಿದಂತೆ ನರವೈಜ್ಞಾನಿಕ ಕಾಯಿಲೆಗಳ ಹೆಚ್ಚಾಗುತ್ತಿದೆ. ಇದನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಆರೋಗ್ಯ ಕೇಂದ್ರಗಳು ಸಹಕಾರಿಯಾಗಲಿವೆ. ಪ್ರತಿ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ಫಿಸಿಯೋಥೆರಪಿಸ್ಟ್, ಸ್ಪೀಚ್ ಥೆರಪಿಸ್ಟ್, ಮನಶ್ಶಾಸ್ತ್ರಜ್ಞರು, ನರ್ಸ್ ಮತ್ತು ಜಿಲ್ಲಾ ಸಂಯೋಜಕರನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದರು.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. 09/2024 ದಿನಾಂಕ: 05-03-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತ ವಿವರಣೆ: ಬಿಡಿಭಾಗಗಳು, ನಿರ್ವಹಣಾ ಉಪಕರಣಗಳು ಮತ್ತು 84 ಮೀಟರ್‌ಗಳ ಹೊದಿಕೆಯ ಪ್ರಕಾರದ ಡಿಎಸ್‌ಎಲ್ ನೊಂದಿಗೆ ಇಓಟಿ ಕ್ರೇನ್ 10ಟ ಸಾಮರ್ಥ್ಯದ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ. (ಟೆಂಡರ್ ಸಂಖ್ಯೆ: L8245254) (ಪ್ರಮಾಣ: 1 ಸೆಟ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29-03-2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು ಬೆಂಗಳೂರು

PUB/731/AAV/PRB/SWR/2023-24

South Western Railway-SWR SWRRLY SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. 08/2024 ದಿನಾಂಕ: 04-03-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತ ವಿವರಣೆ: 4 ಕೋರ್ x 240 ಚದರ ಮಿಮೀ 1100 ವಿ ಗ್ರೇಡ್, ಸ್ಟ್ರಾಂಡೆಡ್ ಅಲ್ಯೂಮಿನಿಯಂ ಕಂಡಕ್ಟರ್ ಗ್ಯಾಲ್ವನೈಸ್ಡ್ ಸ್ಟೀಲ್ ಸ್ಟ್ರಿಪ್ ಆರ್ಮರ್ಡ್, ಎಕ್ಸ್‌ಎಲ್‌ಪಿಇ ಕೇಬಲ್‌ನ ಪೂರೈಕೆ (ಟೆಂಡರ್ ಸಂಖ್ಯೆ: L8236468) (ಪ್ರಮಾಣ: 4200 ಮೀಟರ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25-03-2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು ಬೆಂಗಳೂರು

PUB/733/AAV/PRB/SWR/2023-24

South Western Railway-SWR SWRRLY SWRRLY

BANGALORE TURF CLUB LTD
Post Box No. 5038, Race Course Road, Bangalore-560001,
Email: secretary@btcraces.com, Telephone: 22262391/2/3, Extn: 9,480,
CIN : U99999KA1962PLC001449

TENDER NOTICE - 11.03.2024

Sealed Tenders are invited separately for below mentioned Services at the **Bangalore Turf Club Ltd** premises :
(1) Canteen - Public & Club House (Veg & Non Veg)
(2) Cycle stand / Scooter Parking Service for Public
(3) Manure and other Waste Collection
(4) Security Service
Visit www.bangaloreraces.com for more details.
Last date and time for submission of quotation along with the necessary accompanying documents on or before, below said dates:
(Sl No.1 to 3)Tuesday, 26th March 2024 at 11.00 AM
(Sl No.4) Wednesday, 10th April 2024 at 11.00 AM.
Date : 11.03.2024 SD/- CEO & Secretary

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಚೇರಿ : ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು-560 038.
ವೆಬ್‌ಸೈಟ್ : www.kuidfc.com
ಸಂಖ್ಯೆ: ಕನಮೂಅಹನಿ/ಹ&ಲೆ/ಹೂಡಿಕೆ/ಎಫ್‌ಡಿ/2023-24/14 ದಿನಾಂಕ: 02.03.2024

ಇ-ಹರಾಜು ಅಧಿಸೂಚನೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ-ಹರಾಜು ಮೂಲಕ ಫಿಕ್ಸೆಡ್ ಡೆಪಾಸಿಟ್‌ಗಳಲ್ಲಿ ಹೂಡಿಕೆ ಮಾಡಲು ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಇ-ಬಿಡ್‌ಗಳನ್ನು KUIDFCಯು ಆಹ್ವಾನಿಸುತ್ತದೆ. ಇ-ಹರಾಜಿನಲ್ಲಿ ಭಾಗವಹಿಸಲು ಷರತ್ತು ಮತ್ತು ಮಾನದಂಡಗಳ ವಿವರಗಳು https://www.kppp.karnataka.gov.in ನಲ್ಲಿ ಲಭ್ಯವಿರುತ್ತದೆ,ಸಂಕ್ಷಿಪ್ತ ವಿವರಗಳು:

	ವಿವರಗಳು	ಇ-ಹರಾಜು
1	ಎಫ್‌ಡಿ ಹೂಡಿಕೆ ಗಾಗಿ ಲಭ್ಯವಿರುವ ಮೊತ್ತ	42.70 ಕೋಟಿಗಳು
2	ಇ-ಹರಾಜು ಪ್ರಕಟಿಸಿದ ದಿನಾಂಕ	05.03.2024
3	ಇ-ಹರಾಜಿನ ದಾಖಲೆಗಳು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	14.03.2024
4	ಇ-ಹರಾಜು ಲೈವ್ ಬಿಡ್ಡಿಂಗ್ ದಿನಾಂಕ (ಹಣಕಾಸು)	18.03.2024

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಆವರಣ, ಚಿಕ್ಕಬಳ್ಳಾಪುರ
Email ID: dsocbpura@gmail.com. Ph.No:08156-277038
ಸಂಖ್ಯೆ:ಡಿ.ಎಸ್.ಓ/ಚಿಪುರ/ಎನ್.ಎಫ್.ಡಿ.ಎಸ್-02/06/2023-24
ದಿನಾಂಕ:06.03.2024

GEM ಟೆಂಡರ್ ಅಧಿಸೂಚನೆ

ಉಲ್ಲೇಖ: (1) NHM/NFDS/PHC-UPHC-SC/15th FC Grant Rel/49/2023-24, Dated: 20.02.2024. (2) ಡಿ.ಎಸ್.ಓ/ಎನ್.ಎಫ್.ಡಿ.ಎಸ್-02/ಚಿಪುರ/2023-24, ದಿನಾಂಕ: 26.02.2024

ಮೇಲ್ಕಂಡ ಉಲ್ಲೇಖದನುಸಾರ 2023-24ನೇ ಸಾಲಿನಲ್ಲಿ ಜಿಲ್ಲಾ ಸರ್ವೇಕ್ಷಣಾ ವಿಭಾಗದ ಎನ್.ಎಫ್.ಡಿ.ಎಸ್ ಕಾರ್ಯಕ್ರಮದಡಿಯಲ್ಲಿ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿನ ಎಲ್ಲಾ ಪ್ರಯೋಗಾಲಯಗಳಿಗೆ ಅಗತ್ಯವಿರುವ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳನ್ನು ಖರೀದಿಸಲು GEM ತಂತ್ರಾಂಶದ ಮೂಲಕ ಟೆಂಡರ್ ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ. ವಿವರ: (1) ಟೆಂಡರ್ ಪ್ರಕಟಣೆಯ ದಿನಾಂಕ: 06.03.2024. (2) ಇ.ಎಂ.ಡಿ ಮೊತ್ತ: ರೂ. 2,50,000/-. (3) ಟೆಂಡರ್ ಪ್ರಾರಂಭದ ದಿನಾಂಕ (GEM Portal): 06.03.2024. (4) ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: ದಿನಾಂಕ: 16.03.2024. (5) ಪ್ರಯೋಗಶಾಲೆಯ ಉಪಕರಣಗಳ ಪ್ರಾತ್ಯಕ್ಷಿಕೆ, ಡಿ.ಎಚ್.ಓ ಕಚೇರಿ, ಚಿಕ್ಕಬಳ್ಳಾಪುರ.: ಸಾಧ್ಯವಾದಲ್ಲಿ ದಿನಾಂಕ: 20.03.2024. (6) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: ದಿನಾಂಕ: 17.03.2024. (7) ಸಾಧ್ಯವಾದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: 22.03.2024. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಿ ಪಡೆಯಬಹುದು. ದೂ: 08156-277038.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:314/ಕೆಎಸ್‌ಎಂಸಿಎ/2023-24

ಆಮೆಗತಿಯಲ್ಲಿ ಸಾಗಿದ ಕೆಲಸ ●ಹಣ ನೀಡಿದರೂ ಸಿಗದ ಟ್ಯಾಂಕರ್‌ಗಳು ●ಕೆಲಸವಿಲ್ಲದೇ ಕಾರ್ಮಿಕರ ಪರದಾಟ

ಮನೆ, ಕಟ್ಟಡ ನಿರ್ಮಾಣಕ್ಕೆ ನೀರಿನ ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಎದುರಾಗಿರುವ ನೀರಿನ ಅಭಾವದಿಂದಾಗಿ ಮನೆ- ಕಟ್ಟಡ ನಿರ್ಮಾಣ ಕೆಲಸಗಳು ನಿಧಾನಗತಿಯಲ್ಲಿ ಸಾಗಿದ್ದು, ಸ್ವಂತ ಸೂರಿನ ಕನಸು ಕಾಣುತ್ತಿರುವ ಮಾಲೀಕರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ನೀರಿನ ಕೊರತೆಯಿಂದಾಗಿ ನಿರ್ಮಾಣ ಕೆಲಸವೂ ಕಡಿಮೆಯಾಗಿದ್ದು, ಕಾರ್ಮಿಕರ ದುಡಿಮೆಗೂ ಹೊಡೆತ ಬಿದ್ದಿದೆ.

ಮೈಸೂರು ರಸ್ತೆ, ತುಮಕೂರು ರಸ್ತೆ, ಕನಕಪುರ ರಸ್ತೆ, ಮಾಗಡಿ ರಸ್ತೆ ಹಾಗೂ ಪ್ರಮುಖ ಪ್ರದೇಶಗಳಲ್ಲಿ ಹೊಸ ಬಡಾವಣೆಗಳು ನಿರ್ಮಾಣವಾಗುತ್ತಿವೆ. ಜೊತೆಗೆ, ನಗರದೊಳಗಿನ ಬಡಾವಣೆಗಳಲ್ಲಿ ಹಳೇ ಕಟ್ಟಡಗಳನ್ನು ತೆರವುಗೊಳಿಸಿ ಹೊಸ ಕಟ್ಟಡ ನಿರ್ಮಿಸುವ ಕೆಲಸಗಳು ನಡೆಯುತ್ತಿವೆ. ಇದರ ಜೊತೆಯಲ್ಲಿ, ಸರ್ಕಾರದಿಂದಲೇ ಪಾದಚಾರಿ ಮಾರ್ಗ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳು ಚಾಲ್ತಿಯಲ್ಲಿವೆ.

ಮನೆ, ಕಟ್ಟಡ, ಅಪಾರ್ಟ್‌ಮೆಂಟ್ ಸಮುಚ್ಚಯ, ಪಾದಚಾರಿ ಮಾರ್ಗ... ಹೀಗೆ ಎಲ್ಲ ರೀತಿಯ ನಿರ್ಮಾಣ ಕೆಲಸಗಳಿಗೂ ನೀರು ಅಗತ್ಯವಾಗಿದೆ. ಆದರೆ, ಫೆಬ್ರುವರಿ ಆರಂಭದಿಂದಲೇ ನೀರಿನ ಅಭಾವ ಕಾಣಿಸಿಕೊಂಡಿದೆ. ಇದರಿಂದಾಗಿ ನಿರ್ಮಾಣ ಕೆಲಸಕ್ಕೆ ಅಡ್ಡಿ ಉಂಟಾಗಿದ್ದು, ಲಭ್ಯವಾಗುವ ನೀರಿನಲ್ಲೇ ನಿಧಾನಗತಿಯಲ್ಲಿ ಕೆಲಸ ನಡೆಯುತ್ತಿದೆ. ಸ್ವಂತ ಕೊಳವೆ ಬಾವಿ ಹಾಗೂ ಟ್ಯಾಂಕರ್ ಹೊಂದಿರುವವರ ಕೆಲಸಗಳು ಮಾತ್ರ ಸರಾಗವಾಗಿ ಸಾಗಿದೆ. ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಸರ್ಕಾರದ ಕೆಲಸಗಳಿಗೆ ಸದ್ಯಕ್ಕೆ ನೀರಿನ ಅಭಾವ ಉಂಟಾಗಿಲ್ಲ.

'ಸ್ವಂತ ಮನೆ ಹೊಂದುವ ಆಸೆಯಿಂದ ನಿವೇಶನ ಖರೀದಿಸಿದ್ದೇನೆ. 2023ರ ಅಕ್ಟೋಬರ್‌ನಿಂದ ಮನೆ ನಿರ್ಮಾಣ ಕೆಲಸ ಆರಂಭಿಸಿದ್ದೇನೆ. ಅಂದು ಬೇಡಿಕೆಗೆ ತಕ್ಕಷ್ಟು ಟ್ಯಾಂಕರ್ ನೀರು ಸಿಗುತ್ತಿತ್ತು. ಹೀಗಾಗಿಯೇ, ಕೊಳವೆ ಬಾವಿ ಕೊರೆಸಿರಲಿಲ್ಲ. ಅಡಿಪಾಯ ಭದ್ರಪಡಿಸುವವರೆಗೂ ನೀರಿನ ಸಮಸ್ಯೆ ಇರಲಿಲ್ಲ. ಆದರೆ, ಫೆಬ್ರುವರಿಯಿಂದ ನೀರಿನ ಸಮಸ್ಯೆ ಹೆಚ್ಚಾಗಿದೆ' ಎಂದು ಕೆಂಗೇರಿಯ ಆರ್. ಷಣ್ಮುಗಂ 'ಪ್ರಜಾವಾಣಿ'ಗೆ ತಿಳಿಸಿದರು.

'ಆರು ತಿಂಗಳಿನಲ್ಲಿ ಮನೆ ನಿರ್ಮಾಣ ಮುಗಿಸುವ ಕನಸಿತ್ತು. ಆದರೆ, ನಿರ್ಮಾಣ ಕೆಲಸಕ್ಕೆ ನೀರು ಸಿಗುತ್ತಿಲ್ಲ. ಇದರಿಂದಾಗಿ ಸಿಮೆಂಟ್ ಮಿಶ್ರಣದಿಂದ ಹಿಡಿದು, ಗೋಡೆಗೆ ನೀರು ಉಣಿಸುವ ಕೆಲಸ ನಿಧಾನವಾಗಿದೆ. ಕೊಳವೆ ಬಾವಿ ಇರುವವರ ಬಳಿ ಡ್ರಮ್‌ನಲ್ಲಿ ನೀರು ತಂದು ಕೆಲಸ ಮುಂದುವರಿಸಿದ್ದೇವೆ. ಕ್ಯೂರಿಂಗ್ ಸಹ ಸರಿಯಾಗಿ ಆಗುತ್ತಿಲ್ಲ' ಎಂದರು.

ರಾಜರಾಜೇಶ್ವರಿನಗರದ ಶ್ರೀ ದುರ್ಗಾ ಪರಮೇಶ್ವರಿ ಬಡಾವಣೆಯಲ್ಲಿ ನೀರು ಕೊರತೆಯಿಂದ ನಿಧಾನಗತಿಯಲ್ಲಿ ನಡೆಯುತ್ತಿರುವ ಮನೆ ನಿರ್ಮಾಣ ಕೆಲಸ ಪ್ರಜಾವಾಣಿ ಚಿತ್ರ/ ರಂಜು ಪಿ.

ನಾಗರಬಾವಿ ಬಳಿ ಐದು ಅಂತಸ್ತಿನ ಬಹುಮಹಡಿ ಕಟ್ಟಡ ನಿರ್ಮಿಸುತ್ತಿರುವ ಗುತ್ತಿಗೆದಾರ ಎಂ. ರಾಮಾಂಜನಪ್ಪ, 'ಕಟ್ಟಡ ನಿರ್ಮಿಸಲು ಆರಂಭಿಸಿದ್ದ ದಿನಗಳಲ್ಲಿ ನೀರಿನ ಕೊರತೆ ಇರಲಿಲ್ಲ. ನಿಗದಿಯಂತೆ ಕೆಲಸ ನಡೆಯುತ್ತಿತ್ತು. ಆದರೆ, ಫೆಬ್ರುವರಿಯಿಂದ ನೀರಿನ ಅಭಾವವಿದೆ' ಎಂದರು.

'ನೀರು ಪೂರೈಕೆ ಸಂಬಂಧ ಟ್ಯಾಂಕರ್ ಮಾಲೀಕರ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಅಷ್ಟಾದರೂ ಅಗತ್ಯವಿರುವಷ್ಟು ಟ್ಯಾಂಕರ್ ನೀರು ಸಿಗುತ್ತಿಲ್ಲ. ಹೀಗಾಗಿ, ಎರಡು ದಿನಕ್ಕೊಮ್ಮೆ ಮಾತ್ರ ಕೆಲಸ ಮಾಡಲಾಗುತ್ತಿದೆ' ಎಂದು ಹೇಳಿದರು.

ಹಣ ನೀಡಿದರೂ ಸಿಗದ ಟ್ಯಾಂಕರ್‌ಗಳು: ನಿರ್ಮಾಣ ಕೆಲಸಕ್ಕೆ ಕೊಳವೆ ಬಾವಿ ಅಥವಾ ಟ್ಯಾಂಕರ್ ನೀರು ಬಳಸಲು ಮಾತ್ರ ಅನುಮತಿ ಇದೆ. ಕೆಲವರು, ಕೊಳವೆ ಬಾವಿ ಕೊರೆಸಿ ಕಟ್ಟಡ ನಿರ್ಮಾಣ ಆರಂಭಿಸುತ್ತಿದ್ದಾರೆ. ಹಲವರು, ಟ್ಯಾಂಕರ್ ನೀರು ನೆಚ್ಚಿಕೊಂಡು ನಿರ್ಮಾಣ ಕೆಲಸ ಶುರು ಮಾಡುತ್ತಿದ್ದಾರೆ.

ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಕೊಳವೆ ಬಾವಿಗಳಲ್ಲೂ ನೀರು ಕಡಿಮೆಯಾಗಿದೆ. ಹೀಗಾಗಿ, ಎಲ್ಲರೂ ಟ್ಯಾಂಕರ್ ನೀರಿನ ಮೊರೆ ಹೋಗುತ್ತಿದ್ದಾರೆ. ಇದರಿಂದಾಗಿ ಟ್ಯಾಂಕರ್‌ಗಳಿಗೆ ಬೇಡಿಕೆ ಬಂದಿದೆ. ಹಣ ನೀಡಿದರೂ ಟ್ಯಾಂಕರ್‌ಗಳು ಸಿಗುತ್ತಿಲ್ಲವೆಂದು ಬಹುತೇಕರು ಅಳಲು ತೋಡಿಕೊಳ್ಳುತ್ತಿದ್ದಾರೆ.

'ಮನೆ ನಿರ್ಮಾಣಕ್ಕೆ ಕನಿಷ್ಠ ವಾರಕ್ಕೊಂದು ಟ್ಯಾಂಕರ್ ಬೇಕು. ಟ್ಯಾಂಕರ್ ಕಳುಹಿಸುವಂತೆ ಮಾಲೀಕರಿಗೆ ಕರೆ ಮಾಡಿದರೆ, ಸದ್ಯಕ್ಕೆ ಟ್ಯಾಂಕರ್ ಸಿಗುವುದಿಲ್ಲವೆಂದು ಹೇಳುತ್ತಿದ್ದಾರೆ. ಜನವರಿಯಲ್ಲಿ ₹1,200 ಕೊಟ್ಟು ಟ್ಯಾಂಕರ್ ನೀರು ತರಿಸಲಾಗಿತ್ತು. ಆದರೆ, ಈಗ ₹3 ಸಾವಿರದಿಂದ ₹4 ಸಾವಿರ ಕೇಳುತ್ತಿದ್ದಾರೆ. ಕೆಲಸ ನಿಲ್ಲಬಾರದೆಂಬ ಕಾರಣಕ್ಕೆ ಹಣ ನೀಡಲು ಸಿದ್ಧರಿದ್ದರೂ ಕೇಳಿದ ಸಮಯಕ್ಕೆ ಟ್ಯಾಂಕರ್ ಕಳುಹಿಸುತ್ತಿಲ್ಲ. ಸರ್ಕಾರವೇ ಟ್ಯಾಂಕರ್ ಪೂರೈಸುವತ್ತ ಗಮನ ಹರಿಸಬೇಕು' ಎಂದು ಸುಂಕದಕಟ್ಟೆಯ ಲೋಕೇಶ್ ಹೇಳಿದರು.

'ನಗರದ ಬಹುತೇಕ ಟ್ಯಾಂಕರ್‌ಗಳ ಮಾಲೀಕರಿಗೆ ನಿತ್ಯವೂ ಮೇಲಿಂದ ಮೇಲೆ ಕರೆ ಮಾಡಲಾಗುತ್ತಿದೆ. ನೀರಿನ ವಿಷಯ ಕೇಳಲೇಬೇಡಿ ಎಂಬುದಾಗಿ ಮಾಲೀಕರು ಹೇಳುತ್ತಿದ್ದಾರೆ. ಇದರಿಂದ ದಿಕ್ಕು ತೋಚದಂತಾಗಿದ್ದು, ಕೆಲಸ ಅರ್ಧಕ್ಕೆ ನಿಲ್ಲಿಸುವ ಅನಿವಾರ್ಯತೆಯೂ ಬರಬಹುದು' ಎಂದು ತಿಳಿಸಿದರು.

ಮುಖ್ಯಾಂಶಗಳು

- ಕೊಳವೆ ಬಾವಿಗಳಲ್ಲಿ ತಗ್ಗಿದ ನೀರು
- ಕಾರ್ಮಿಕರಿಗೆ ಅರ್ಧ ಸಂಬಳ
- ಕೆಲಸ ಅರ್ಧಕ್ಕೆ ನಿಲ್ಲುವ ಭೀತಿ

ನೀರಿಲ್ಲ, ಕಾರ್ಮಿಕರಿಗೆ ಕೆಲಸವೂ ಇಲ್ಲ..

ಕಟ್ಟಡ ನಿರ್ಮಾಣ ಕೆಲಸ ನಂಬಿಕೊಂಡು ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಕಾರ್ಮಿಕರು ಬೆಂಗಳೂರಿಗೆ ಬಂದಿದ್ದಾರೆ. ನೀರಿನ ಕೊರತೆಯಿಂದ ಕೆಲಸ ನಿಧಾನಗತಿಯಲ್ಲಿ ಸಾಗಿದ್ದರಿಂದ, ಅರ್ಧದಷ್ಟು ಕಾರ್ಮಿಕರಿಗೆ ಕೆಲಸ ಇಲ್ಲದಂತಾಗಿದೆ.

'ಬಹುಮಹಡಿ ಕಟ್ಟಡ ನಿರ್ಮಾಣ ಶುರುವಾದಾಗ 24 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈಗ 10 ಮಂದಿ ಮಾತ್ರ ಇದ್ದಾರೆ. 24 ಮಂದಿಯನ್ನು ಕೆಲಸಕ್ಕೆ ಕರೆಸಿದರೆ, ನೀರು ಕೊಡಬೇಕು. ಈಗ ನೀರು ಇಲ್ಲ. ಅವರು ಕೆಲಸಕ್ಕೆ ಬಂದರೂ ಖಾಲಿ ಕುಳಿತುಕೊಳ್ಳುತ್ತಾರೆ. ಹೀಗಾಗಿ, ಅಗತ್ಯವಿರುವ ಕಾರ್ಮಿಕರನ್ನಷ್ಟೇ ಕೆಲಸಕ್ಕೆ ಕರೆಸಲಾಗುತ್ತಿದೆ' ಎಂದು ಗುತ್ತಿಗೆದಾರ ರಾಮಾಂಜನಪ್ಪ ತಿಳಿಸಿದರು.

ಕಟ್ಟಡ ನಿರ್ಮಾಣ ಕಾರ್ಮಿಕ ಸುಭಾಷ್, 'ಯಾದಗಿರಿಯ ಒಂದೇ ಊರಿನ 10 ಮಂದಿ ನಗರಕ್ಕೆ ಬಂದಿದ್ದೇವೆ. ಮೊದಲು 10 ಮಂದಿಯೂ ಕೆಲಸ ಮಾಡುತ್ತಿದ್ದೆವು. ಆದರೆ, ಈಗ ನೀರು ಇಲ್ಲದಿದ್ದರಿಂದ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಪಾಳಿ ಪ್ರಕಾರ ತಲಾ ಐದು ಮಂದಿ ದಿನ ಬಿಟ್ಟು ದಿನ ಕೆಲಸ ಮಾಡುತ್ತಿದ್ದೇವೆ. ಸಂಬಳವೂ ಅರ್ಧ ಮಾತ್ರ ಬರುತ್ತಿದೆ' ಎಂದು ಅಳಲು ತೋಡಿಕೊಂಡರು.

ಕಟ್ಟಡ ನಿರ್ಮಾಣ ಮಾಡುವವರು ಏನಂತಾರೆ?

ಮನೆ ನಿರ್ಮಾಣ ಕೆಲಸ ನವೆಂಬರ್‌ನಿಂದ ಆರಂಭಿಸಿದ್ದೆವು. ಕೊಳವೆ ಬಾವಿ ನೀರು ಕಡಿಮೆ ಆಗಿದ್ದು, ಪಂಪ್ ಆನ್ ಮಾಡಿದಾಗ ಐದು ನಿಮಿಷ ಮಾತ್ರ ನೀರು ಬರುತ್ತಿದೆ. ಅದೇ ನೀರನ್ನು ಡ್ರಮ್‌ನಲ್ಲಿ ಇಟ್ಟುಕೊಂಡು ಕೆಲಸ ಮುಂದುವರಿಸಿದ್ದೇವೆ. ದಿನದಿಂದ ದಿನಕ್ಕೆ ನೀರಿನ ಸಮಸ್ಯೆ ಬಿಗಡಾಯಿಸುತ್ತಿದ್ದು, ಟ್ಯಾಂಕರ್ ನೀರು ಕೊಡಿಸಲು ಸರ್ಕಾರ ಗಮನ ಹರಿಸಬೇಕು

ನಾಗರಾಜಯ್ಯ, ರಾಜರಾಜೇಶ್ವರಿನಗರದ ಶ್ರೀ ದುರ್ಗಾ ಪರಮೇಶ್ವರಿ ಬಡಾವಣೆ ನಿವಾಸಿ

ಟ್ಯಾಂಕರ್ ನೀರು ಮರೀಚಿಕೆಯಾಗಿದೆ. ಅವರಿವರ ಕೊಳವೆ ಬಾವಿಯಲ್ಲಿ ನೀರು ತಂದು ಮನೆ ಕಟ್ಟುತ್ತಿದ್ದೇವೆ. ಇನ್ನೊಂದು ವಾರವಷ್ಟೇ ನೀರು ಸಿಗಬಹುದು. ಆ ನಂತರ, ನೀರು ಸಿಗುವುದು ಅನುಮಾನ. ಕೆಲಸವನ್ನು ಅರ್ಧಕ್ಕೆ ನಿಲ್ಲಿಸುವ ಸ್ಥಿತಿ ಬರುತ್ತದೆ. ಕಾರ್ಮಿಕರಿಗೂ ಕೆಲಸವಿಲ್ಲದಂತಾಗುತ್ತದೆ

ಬಿ. ವೀರೇಶ್ ಆಚಾರ್ಯ, ಶ್ರೀಗಂಧಕಾವಲು

ನೀರಿನ ಅಭಾವದಿಂದಾಗಿ ಸದ್ಯಕ್ಕೆ ಮನೆ ನಿರ್ಮಾಣ ಕೆಲಸ ಆಮೆಗತಿಯಲ್ಲಿ ಸಾಗಿದೆ. ಮುಂದಿನ ದಿನಗಳಲ್ಲಿ ನೀರು ಸಿಗದಿದ್ದರೆ, ನಿರ್ಮಾಣ ಕೆಲಸ ಬಂದ್ ಮಾಡಲಾಗುವುದು. ನೀರು ಸಿಕ್ಕ ಬಳಿಕ ಪುನಃ ಆರಂಭಿಸಲಾಗುವುದು

ರವಿಚಂದ್ರ ಗಗನಮಾಲಿ, ಮಾರಣ್ಣ ಬಡಾವಣೆ, ಚಿಕ್ಕಬಿದರಕಲ್ಲು

ಜಲಕ್ಷಾಮದಲ್ಲೂ ಕಾಂಗ್ರೆಸ್ ಗ್ಯಾರಂಟಿ ಉತ್ಸವ: ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಜನರು ಜಲಕ್ಷಾಮದಿಂದ ಹನಿ ಹನಿ ನೀರಿಗೂ ತತ್ತರಿಸುತ್ತಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಸಮಾವೇಶದ ಹೆಸರಿನಲ್ಲಿ ಜನರ ತೆರಿಗೆ ಹಣದಿಂದ ಜಾತ್ರೆ ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ರಾಜ್ಯದಲ್ಲಿ ನೂರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಲಕ್ಷಾಂತರ ಕೃಷಿ ಕಾರ್ಮಿಕರು ಹೊಟ್ಟೆಪಾಡಿಗಾಗಿ ಊರು ಬಿಟ್ಟು ಗುಳೆ ಹೋಗಿದ್ದಾರೆ. 40 ಕ್ಕೂ ಹೆಚ್ಚು ನೇಕಾರರು ದಿಕ್ಕು ಕಾಣದೇ ಜೀವ ಬಿಟ್ಟಿದ್ದಾರೆ. ಬೆಂಗಳೂರಿನಲ್ಲಿ ಜನ ತೊಟ್ಟು ನೀರಿಗೂ ಪರದಾಡುತ್ತಿದ್ದಾರೆ' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ರಾಜ್ಯದಲ್ಲಿ ಇಂತಹ ಸೂತಕದ ವಾತಾವರಣ ಇರುವಾಗ ಗ್ಯಾರಂಟಿ ಸಮಾವೇಶದ ಹೆಸರಿನಲ್ಲಿ ಪ್ರತಿ ತಾಲ್ಲೂಕಿಗೆ ₹50 ಲಕ್ಷ, ಪ್ರತಿ ಜಿಲ್ಲೆಗೆ ₹1 ಕೋಟಿ, ಮುಖ್ಯಮಂತ್ರಿ, ಡಿಸಿಎಂ ಭಾಗವಹಿಸುವ ಕಾರ್ಯಕ್ರಮಗಳಿಗೆ ₹2 ಕೋಟಿಯಂತೆ ಖರ್ಚು ಮಾಡಿ ಉತ್ಸವ ಮಾಡುತ್ತಿರುವ ಇವರಿಗೆ ಕಿಂಚಿತ್ತಾದರೂ ಮಾನವೀಯತೆ, ಕರ್ತವ್ಯ ಪ್ರಜ್ಞೆ ಇದೆಯೇ' ಎಂದು ಪ್ರಶ್ನಿಸಿದ್ದಾರೆ.

'ಗ್ಯಾರಂಟಿ ಸಮಾವೇಶಕ್ಕಾಗಿ ನೂರಾರು ಕೋಟಿ ಪೋಲು ಮಾಡುವ ಬದಲು ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬಹುದಿತ್ತು' ಎಂದು ಅವರು ಹೇಳಿದ್ದಾರೆ.

'ಬೆಂಗಳೂರಿನ ಎಲ್ಲೆಡೆ ನೀರಿನ ಸಮಸ್ಯೆ ಇಲ್ಲ'

ಕುಡಿಯುವ ನೀರಿನ ದಂಧೆ ತಡೆಗಟ್ಟಲು ಕ್ರಮ ● 6,900 ಕೊಳವೆ ಬಾವಿಗಳು ಬತ್ತಿವೆ—ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿರುವ 13,900 ಕೊಳವೆ ಬಾವಿಗಳ ಪೈಕಿ 6,900 ಕೊಳವೆ ಬಾವಿಗಳು ಬತ್ತಿ ಹೋಗಿವೆ. ಇವುಗಳನ್ನೇ ಅವಲಂಬಿಸಿದ್ದ ಪ್ರದೇಶಗಳಲ್ಲಿ ನೀರಿನ ಅಭಾವ ಸೃಷ್ಟಿ ಯಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಕಳೆದ 30-40 ವರ್ಷಗಳಲ್ಲಿ ಇಂತಹ ಭೀಕರ ಬರಗಾಲವನ್ನು ನಾವು ನೋಡಿರಲಿಲ್ಲ. ನೀರಿನ ಪೂರೈಕೆಯಲ್ಲಿ ನಡೆಯುತ್ತಿದ್ದ ದಂಧೆಯನ್ನು ನಾವು ತಡೆದಿದ್ದೇವೆ. ಜನರಿಗೆ ಸೂಕ್ತ ದರದಲ್ಲಿ ನೀರು ಸಿಗುವಂತೆ ಮಾಡಿದ್ದೇವೆ. ಕೆಲವು ಕೊಳಗೇರಿ ಪ್ರದೇಶದಲ್ಲಿ ಉಚಿತವಾಗಿ ನೀರು ನೀಡುತ್ತಿದ್ದೇವೆ. ಉಳಿದಂತೆ ಅಪಾರ್ಟ್‌ಮೆಂಟ್‌ಗಳಿಗೆ ಪೂರೈಸುವ ನೀರಿಗೆ ದರ ನಿಗದಿ ಮಾಡಿದ್ದು, ಕೈಗಾರಿಕಾ ಬಳಕೆಗೆ ಪ್ರತ್ಯೇಕ ದರ ನಿಗದಿ ಮಾಡಲಾಗಿದೆ' ಎಂದು ವಿವರಿಸಿದರು.

'ಈಗಾಗಲೇ 1,500ಕ್ಕೂ ಹೆಚ್ಚು ಟ್ಯಾಂಕರ್‌ಗಳನ್ನು ನೋಂದಣಿ ಮಾಡಲಾಗಿದ್ದು, ಬೇರೆಯವರಿಗೆ ನೋಂದಣಿ ಮಾಡಿಕೊಳ್ಳಲು ಕಾಲಾವಕಾಶ ನೀಡಿದ್ದೇವೆ. ಪೊಲೀಸ್, ಆರ್‌ಟಿಒ, ಬಿಬಿಎಂಪಿಯವರಿಗೆ ಸೂಚನೆ ನೀಡಿ ನೋಂದಾಯಿತ ಟ್ಯಾಂಕರ್‌ಗಳ ಮೇಲೆ ಸರ್ಕಾರದ ನಾಮಫಲಕ ಅಳವಡಿಸುವಂತೆ ಮಾಡುತ್ತೇವೆ. ಆ ಮೂಲಕ ಕಾನೂನು ಬಾಹಿರವಾಗಿ ಜನರಿಂದ ಹಣ ವಸೂಲಿ ಮಾಡುವುದನ್ನು ತಡೆಗಟ್ಟುತ್ತೇವೆ. ಬೆಂಗಳೂರು ಸುತ್ತಮುತ್ತ ಇರುವ ನೀರಾವರಿ ಕೊಳವೆ ಬಾವಿಯನ್ನು ಗುರುತಿಸಿದ್ದು, ಅಗತ್ಯ ಬಿದ್ದರೆ ಅವುಗಳನ್ನೂ ಬಳಸಿಕೊಳ್ಳುತ್ತೇವೆ' ಎಂದರು.

ತಮಿಳುನಾಡಿಗೆ ನೀರು ಬಿಟ್ಟಿಲ್ಲ: 'ತಮಿಳುನಾಡಿಗೆ ನೀರು ಬಿಟ್ಟಿರುವ ಆರೋಪದಲ್ಲಿ ಹುರುಳಿಲ್ಲ. ಈ ಸಂದರ್ಭ ದಲ್ಲಿ ತಮಿಳುನಾಡಿಗೆ ನೀರು ಬಿಡುವ ಪ್ರಶ್ನೆಯೇ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಶಿವಕುಮಾರ್ ಪ್ರತಿಕ್ರಿಯಿಸಿದರು.

'ತಮಿಳುನಾಡಿಗೆ ಹರಿದು ಹೋಗುವ ಪ್ರತಿ ಹನಿ ನೀರಿಗೂ ಲೆಕ್ಕ ದಾಖಲಾಗಿರುತ್ತದೆ. ನಾವು ಬಿಜೆಪಿಯವರಂತೆ ಮೂರ್ಖರಲ್ಲ. ತಮಿಳುನಾಡು ನೀರು ಕೇಳದಿರುವಾಗ ನಾವು ಯಾಕೆ ನೀರು ಬಿಡೋಣ? ಬೆಂಗಳೂರಿನಲ್ಲಿ ನೀರಿನ ಕೊರತೆ ನೀಗಿಸಲು ಜಲಮಂಡಳಿಯ ಮನವಿ ಮೇರೆಗೆ ಕೆಆರ್‌ಎಸ್‌ನಿಂದ ನೀರು ಹರಿಸಲಾಗಿದೆಯೇ ಹೊರತು, ತಮಿಳುನಾಡಿಗೆ ಹರಿಸಲು ಅಲ್ಲ' ಎಂದರು.

'ನಾವು ತಮಿಳುನಾಡಿಗೆ ಬಿಡಬೇಕಾದ ನೀರನ್ನು ಬಿಡುತ್ತೇವೆ. ಬಿಜೆಪಿ ಪ್ರತಿಭಟನೆ ಮಾಡಬೇಕಾಗಿರುವುದು ನಮ್ಮ ವಿರುದ್ಧವಲ್ಲ. ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಬೇಕು. ಮಹದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಅನುಮತಿ ಕೊಡಿಸಲಿ' ಎಂದರು.

ಕುಡಿಯುವ ನೀರಿಗೆ ತೊಂದರೆ ಆಗದಂತೆ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು: ನಗರದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗಬಾರದು ಎಂದು ಎಲ್ಲ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಅಧಿಕಾರಿಗಳೊಂದಿಗೆ ಎರಡು-ಮೂರು ಸಭೆ ನಡೆಸಿದ್ದಾರೆ.

ಎಷ್ಟೇ ಹಣ ಖರ್ಚಾದರೂ ಲೆಕ್ಕಿಸದೆ ಬೆಂಗಳೂರಿನ ಜನರಿಗೆ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಅಧಿಕಾರಿಗೆ ನೀಡಿದ್ದಾರೆ. ನೀರಿನ ಸಮಸ್ಯೆ ಇರುವ ಕಡೆ ಕಾವೇರಿ ನೀರು, ಕೊಳವೆಬಾವಿ ಇಲ್ಲವೇ ಟ್ಯಾಂಕರ್ ಮೂಲಕ ನೀರು ಪೂರೈಸುವಂತೆ ಸೂಚನೆ ನೀಡಿದ್ದಾರೆ ಎಂದು ತಿಳಿಸಿದರು.

ಹೆಗಡೆ ವಿರುದ್ಧ ಕ್ರಮ ಏಕಿಲ್ಲ?

'ಸಂವಿಧಾನದ ಕುರಿತು ಸಂಸದ ಅನಂತಕುಮಾರ್ ಹೆಗಡೆ ಅವರ ಹೇಳಿಕೆಯಿಂದ ಬಿಜೆಪಿ ಅಂತರ ಕಾಯ್ದುಕೊಳ್ಳಲು ಹೇಗೆ ಸಾಧ್ಯ? ಈ ರೀತಿಯ ಹೇಳಿಕೆ ಕೊಡುತ್ತಿರುವುದು ಇದೇ ಮೊದಲೇನಲ್ಲ. ಆದರೂ ಅವರನ್ನು ಬಿಜೆಪಿಯಲ್ಲಿ ಉಳಿಸಿಕೊಂಡಿರುವುದು ಏಕೆ? ಅವರ ವಿರುದ್ಧ ಯಾವ ಕ್ರಮ ಕೈಗೊಂಡಿದ್ದಾರೆ' ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಬಿಜೆಪಿಯ ಆಂತರಿಕ ಧ್ವನಿಯನ್ನು ಅನಂತಕುಮಾರ್ ಹೆಗಡೆ ಹೊರಹಾಕಿದ್ದಾರೆ. ಬಿಜೆಪಿಗೆ ದೇಶದ ಐಕ್ಯತೆ ಬಗ್ಗೆ, ಸಂವಿಧಾನದ ಬಗ್ಗೆ ಗೌರವ ಇದ್ದಿದ್ದರೆ ಇಷ್ಟು ಹೊತ್ತಿಗಾಗಲೇ ಅನಂತಕುಮಾರ್ ಹೆಗಡೆ ಅವರನ್ನು ಉಚ್ಚಾಟನೆ ಮಾಡಬೇಕಿತ್ತು ಎಂದರು.

ಶೇ 50ರಷ್ಟು ಪೂರೈಕೆ ಕುಸಿತ ● ಯುಗಾದಿ ಹಬ್ಬಕ್ಕೆ ಹೂವಿನ ಕೊರತೆ ಸಾಧ್ಯತೆ

ಜಲಕ್ಷಾಮ: ಮಾರುಕಟ್ಟೆಗಿಲ್ಲ ಹೂವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಹಾಗೂ ಸುತ್ತಮುತ್ತ ಜಿಲ್ಲೆಗಳಲ್ಲಿ ಬರಗಾಲದ ಛಾಯೆ ಆವರಿಸಿದ್ದು, ನೀರಿನ ಅಭಾವದಿಂದ ಹೂವಿ ಬೆಳೆ ಒಣಗುತ್ತಿದೆ. ಇದರಿಂದಾಗಿ, ಬೆಂಗಳೂರು ಮಾರುಕಟ್ಟೆಗೆ ಬರುತ್ತಿದ್ದ ಹೂವಿನ ಪ್ರಮಾಣ ಶೇ 50ರಷ್ಟು ಕಡಿಮೆ ಆಗಿದೆ.

ಕೊಳವೆ ಬಾವಿ ಹಾಗೂ ಕೆರೆ ನೀರು ನಂಬಿಕೊಂಡು ಬಹುಪಾಲು ರೈತರು ಹೂವಿನ ಬೆಳೆ ಬೆಳೆಯುತ್ತಿದ್ದಾರೆ. ಬರಗಾಲದಿಂದಾಗಿ ಕೆರೆಯಲ್ಲಿ ನೀರು ಬತ್ತಿದ್ದು, ಕೊಳವೆ ಬಾವಿಗಳಲ್ಲಿಯೂ ನೀರು ಕಡಿಮೆಯಾಗಿದೆ. ಪರಿಣಾಮವಾಗಿ ಹೂವಿನ ಬೆಳೆಗೆ ಸಮರ್ಪಕವಾಗಿ ನೀರು ಹರಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ.

ಇದೇ ವರ್ಷದ ಜನವರಿಯಲ್ಲಿ ಉತ್ತಮ ಪ್ರಮಾಣದಲ್ಲಿ ಮಾರುಕಟ್ಟೆಗೆ ಹೂವು ಬಂದಿತ್ತು. ಫೆಬ್ರುವರಿಯಿಂದ ಹೂವಿನ ಪ್ರಮಾಣ ತೀರಾ ಕಡಿಮೆಯಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಹೂವು ಸಿಗುವುದೇ ಕಷ್ಟವಾಗುತ್ತಿರುವುದಾಗಿ ವ್ಯಾಪಾರಿಗಳು ಹೇಳುತ್ತಿದ್ದಾರೆ.

ನಗರದಲ್ಲಿ ಪೂಜೆ ಹಾಗೂ ಇತರೆ ಕಾರ್ಯಕ್ರಮಗಳಿಗೆ ಹೂವಿನ ಬೇಡಿಕೆ ಹೆಚ್ಚಿದ್ದು, ಅದಕ್ಕೆ ತಕ್ಕಷ್ಟು ಹೂವು ಪೂರೈಸಲು ಸಾಧ್ಯವಾಗುತ್ತಿಲ್ಲ. ಏಪ್ರಿಲ್‌ನಲ್ಲಿ ಯುಗಾದಿ ಹಬ್ಬವಿದ್ದು, ಈ ಸಂದರ್ಭದಲ್ಲೂ ಹೂವಿನ ಕೊರತೆ ಉಂಟಾಗಲಿದೆ ಎಂದು ವ್ಯಾಪಾರಿಗಳು ಅಭಿಪ್ರಾಯಪಟ್ಟರು.

'ನೀರಿನ ಕೊರತೆಯಿಂದಾಗಿ ನಿಗದಿಯಂತೆ ಹೂವು ಬೆಳೆಯಲು ಸಾಧ್ಯವಾಗುತ್ತಿಲ್ಲ. ಮಾರುಕಟ್ಟೆಗೆ ಬರುತ್ತಿದ್ದ ಹೂವಿನ ಪ್ರಮಾಣ ಶೇ 50ರಷ್ಟು ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಹೂವಿನ ಪೂರೈಕೆ ಮತ್ತಷ್ಟು ಕಡಿಮೆಯಾಗುವ ಸಾಧ್ಯತೆ ಇದೆ' ಎಂದು ಕೆ.ಆರ್. ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ಜಿ.ಎಂ. ದಿವಾಕರ್ ಹೇಳಿದರು.

'ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ರೈತರು, ಗುಲಾಬಿ, ಸೇವಂತಿಗೆ, ಚೆಂಡು ಹೂವು, ಕಾಕಡ, ಕನಕಾಂಬರ ಸೇರಿದಂತೆ ವಿವಿಧ ಬಗೆಯ ಹೂವುಗಳನ್ನು ಬೆಳೆಯುತ್ತಿದ್ದಾರೆ. ಇದಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಸದ್ಯ ಹೂವು ಬರುತ್ತಿಲ್ಲ. ವ್ಯಾಪಾರವೂ ಕಡಿಮೆಯಾಗಿದೆ. ಹೀಗಾಗಿ, ನಗರದಲ್ಲಿ ಹೂವು ಸಿಗುವುದು ಕಷ್ಟವಾಗಿದೆ' ಎಂದು ಹೇಳಿದರು.

'ಅತ್ತಿಬೆಲೆ, ಆನೇಕಲ್, ನೆಲಮಂಗಲ, ಕನಕಪುರ, ರಾಮನಗರ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ಹೂವಿನ ಬೆಳೆ ಒಣಗಿರುವುದು ಗೊತ್ತಾಗಿದೆ. ಚಿಕ್ಕಬಳ್ಳಾಪುರದಲ್ಲಿ ಮಾತ್ರ ಹೂವಿನ ಬೆಳೆ ಚೆನ್ನಾಗಿದೆ. ಅದೇ ಹೂವು ಇದೀಗ ಕೆ.ಆರ್.ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಒಣಗುತ್ತಿರುವ ಹೂವಿನ ಬೆಳೆ
- ನಷ್ಟದಲ್ಲಿ ಹೂವಿನ ಬೆಳೆಗಾರರು



ರೈತರ ಹೊಲದಲ್ಲಿ ನೀರಿನ ಅಭಾವದಿಂದ ಒಣಗುತ್ತಿರುವ ಚೆಂಡು ಹೂವಿನ ಬೆಳೆ

ಮಾರುಕಟ್ಟೆಯಲ್ಲಿ ಹೂವಿಗೆ ಬೇಡಿಕೆ ಇದೆ. ಆದರೆ, ಬೆಳೆಯೇ ಕಡಿಮೆಯಾಗಿದೆ. ಮಾರುಕಟ್ಟೆಗೆ ಬರುವ ಪ್ರಮಾಣವು ಕುಸಿದಿದೆ. ವ್ಯಾಪಾರವೂ ಇಲ್ಲ.

ಜಿ.ಎಂ. ದಿವಾಕರ್, ಅಧ್ಯಕ್ಷ, ಕೆ.ಆರ್. ಮಾರುಕಟ್ಟೆ ವರ್ತಕರ ಸಂಘ

ಬಿಸಿಲಿನ ಬೇಗೆ ಹೆಚ್ಚಾಗಿದೆ. ಹೀಗಾಗಿ ಫಸಲು ಕಡಿಮೆ. ಎಕರೆಗೆ 15ದಿನಗಳಿಗೆ ಒಂದೂವರೆ ಟನ್ ಹೂವು ಕೊಯ್ಯುತ್ತಿದ್ದೆವು. ಈಗ 500ಕೆಜಿಯೂ ಬರುತ್ತಿಲ್ಲ.

ಕೋದಂಡರಾಮಯ್ಯ, ಪ್ರಗತಿಪರ ರೈತ ಸಬ್‌ಮಂಗಲ, ಆನೇಕಲ್ ತಾಲ್ಲೂಕು

ಹೂವು ಬೆಳೆದು ನಷ್ಟ: 'ಉತ್ತಮ ಲಾಭದ ನಿರೀಕ್ಷೆಯಿಂದ ಸೇವಂತಿಗೆ, ಚೆಂಡು ಹೂವು ಬೆಳೆಯು ತ್ತಿದ್ದೆ. ಫಸಲು ಕೈಗೆ ಸೇರುವ ದಿನ ಹತ್ತಿರವಾಗುತ್ತಿತ್ತು. ಇದೇ ಸಂದರ್ಭ ದಲ್ಲಿ ನೀರು ಇಲ್ಲದೇ ಹೂವಿನ ಬೆಳೆ ಸಂಪೂರ್ಣ ಒಣಗಿದೆ' ಎಂದು ಶಿಡ್ಲ ಘಟ್ಟ ತಾಲ್ಲೂಕಿನ ಮುತ್ತೂರಿನ ರೈತ ದಿಲೀಪ್‌ಕುಮಾರ್ ಅಳಲು ತೋಡಿಕೊಂಡರು.

'ಹೂವು ಬೆಳೆಯಿಂದ ನಷ್ಟ ಉಂಟಾಗಿದ್ದು, ದಿಕ್ಕು ತೋಚದಂತಾಗಿದೆ. ನನ್ನಂತೆ ಹಲವರು ಹೂವು ಬೆಳೆದು ಕೈ ಸುಟ್ಟುಕೊಂಡಿದ್ದಾರೆ. ಸರ್ಕಾರ ಹೂವು ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

ನಗರದಲ್ಲಿ ಇಂದು

ರಾಘವೇಂದ್ರ ತೀರ್ಥರ 402ನೇ ಪಟ್ಟಾಭಿಷೇಕ, ರಾಘವೇಂದ್ರ ಸಪ್ತಾಹ ಮಹೋತ್ಸವ: ಭರತನಾಟ್ಯ: ಭರತನೃತ್ಯ ಸಂಗೀತ ಅಕಾಡೆಮಿ ವಿದ್ಯಾರ್ಥಿಗಳಿಂದ, ಸ್ಥಳ: ರಾಘವೇಂದ್ರಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಬೆಳಿಗ್ಗೆ 8ರಿಂದ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ: ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಲಕ್ಷ್ಮೀ ಆರ್. ಹೆಬ್ಬಾಳ್ಕರ್, ರಿಜ್ವಾನ್ ಅರ್ಷದ್, ಸ್ಥಳ: ಜವಾಹರ ಬಾಲಭವನ, ಕಬ್ಬನ್ ಪಾರ್ಕ್, ಬೆಳಿಗ್ಗೆ 10

ಗಾಂಧೀಜಿ ದಂಡಿಯಾತ್ರೆ ನೆನಪು: ಆಯೋಜನೆ: ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ, ಲೋಕಮಾನ್ಯ ಸಂಘ, ವಾಸವಿ ಕ್ಲಬ್, ಕರ್ನಾಟಕ ಲೇಖಕರ ಸಂಘ, ಸಮರ್ಪಣ ಸಂಘಟನೆ, ಕನ್ನಡ ಪಕ್ಷ, ರಾಮಯ್ಯಂಗಾರ್ ರಸ್ತೆ ನಿವಾಸಿಗಳ ಸಂಘ, ನಾಗರಿಕ ಸೇವಾ ಸಮಿತಿ, ಬಸವನಗುಡಿ, ಮಾವಳ್ಳಿ, ವಿಶ್ವೇಶ್ವರಪುರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಚಾರುಕೀರ್ತಿ ಭಟ್ಟಾರಕ ವೇದಿಕೆ, ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ, ಸ್ಥಳ: ವಿಶ್ವೇಶ್ವರಪುರ ಸಜ್ಜನ್‌ರಾವ್ ವೃತ್ತ, ಬೆಳಿಗ್ಗೆ 10

ಎಂಎಸ್‌ಎಂಇ ಅವಾರ್ಡ್-2024: ಅತಿಥಿಗಳು: ತೇಜಸ್ವಿ ಸೂರ್ಯ, ಪಿ.ರಾಮದಾಸ್, ಸಚಿನ್ ಬಿ. ಸಬ್ನಿಸ್, ಸಂಜಯ್ ಪಿ. ಭಟ್, ಆಯೋಜನೆ: ಲಘು ಉದ್ಯೋಗ ಭಾರತಿ, ಸ್ಥಳ: ಹೋಟೆಲ್ ತಾಜ್, ಯಶವಂತಪುರ, ಬೆಳಿಗ್ಗೆ 10.30

ಸಿನಿಮಾ ಸ್ಕ್ರೀನಿಂಗ್- ಕಿರುಚಿತ್ರ ಸ್ಪರ್ಧೆ (ಆತ್ಮಹತ್ಯೆ ತಡೆ ಕುರಿತ ಸಿನಿಮಾ ಕಾರ್ಯಕ್ರಮ): ಸ್ಥಳ: ಕನ್ವೆನ್ಶನ್ ಸೆಂಟರ್, ನಿಮ್ಹಾನ್ಸ್, ಮಧ್ಯಾಹ್ನ 3ಕ್ಕೆ

ಟಿಡಿಯು ವಿಶ್ವವಿದ್ಯಾಲಯದ ಘಟಿಕೋತ್ಸವ: ಅತಿಥಿಗಳು: ಕೆ. ಕಸ್ತೂರಿರಂಗನ್, ಪ್ರಮೋದಾದೇವಿ ಒಡೆಯರ್, ಪಿ. ಬಾಲನ್, ರಾಜೀವ್ ಸೇಥಿ, ಆಯೋಜನೆ ಮತ್ತು ಸ್ಥಳ: ಟ್ರಾನ್ಸ್ ಡಿಸಿಪ್ಲಿನರಿ ಹೆಲ್ತ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ವಿಶ್ವವಿದ್ಯಾಲಯ, ಜಾರಕ್‌ಬಂಡೆ ಕಾವಲ್, ಯಲಹಂಕ, ಸಂಜೆ 4

ರಾಜಲಕ್ಷ್ಮೀ ಬರಗೂರು ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಸಿ.ಎಚ್. ಹನುಮಂತರಾಯ, ಪ್ರಶಸ್ತಿ ಪ್ರದಾನ: ಉಮಾಶ್ರೀ, ಪುರಸ್ಕೃತರು: ಕೆ. ನೀಲಾ, ರಾಮಕ್ಕ, ಉಪಸ್ಥಿತಿ: ಶ್ರೀನಿವಾಸ್, ಆಯೋಜನೆ: ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಸ್ಥಳ: ಸರ್ಕಾರಿ ಕಲಾ ಕಾಲೇಜಿನ ಸಭಾಂಗಣ, ಕೆ.ಆರ್. ಸರ್ಕಲ್ ಬಳಿ, ಸಂಜೆ 5

'ಕೃಷ್ಣದೇವರಾಯ' ಐತಿಹಾಸಿಕ ನಾಟಕ: ಅತಿಥಿಗಳು: ಸುರೇಶ್ ಹೆಗಡೆ, ಸುಜ್ಞಾನ್ ದಾನಿ, ಎಂ.ಜಿ. ಗೋವಿಂದರಾಜು, ಜೆ.ಕೆ. ರಾಜಶೇಖರಮೂರ್ತಿ, ನಿಷಾ ಗಂಗಾಧರ್, ಭರತನಾಟ್ಯ: ಕೆ.ಎಂ. ದೀಪಶ್ರೀ, ಆಯೋಜನೆ: ದೃಶ್ಯರಂಗ ಕಲಾ ಸಂಘ, ಸ್ಥಳ: ನಯನಾ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

ರಾಘವೇಂದ್ರ ಗುರುಸಾರ್ವಭೌಮರ 402ನೇ ಪಟ್ಟಾಭಿಷೇಕ: ಪ್ರವಚನ: ವಿದ್ಯಾಸಾಗರ ಮಾಧವ ತೀರ್ಥರು, ಆಯೋಜನೆ ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಮಠ, ಸುಧೀಂದ್ರನಗರ, 6ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6.30

ಡಾ. ಮೃತ್ಯುಂಜಯಸ್ವಾಮಿ ನಿಧನ

ಹುಬ್ಬಳ್ಳಿ: ಆಯುರ್ವೇದ ವೈದ್ಯ, ಡಾ. ಮೃತ್ಯುಂಜಯ ಸ್ವಾಮಿ ಎಸ್. ರೋಣಿಮಠ (83) ಭಾನುವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ದೇಹವನ್ನು ಟ್ರಸ್ಟ್‌ಗೆ ನೀಡಲಾಗುತ್ತದೆ ಎಂದು ಕುಟುಂಬ ವರ್ಗ ತಿಳಿಸಿದೆ.

Ashram Bhoomi Vandana

Mahatma Gandhi Sabarmati Ashram
Restoration Project
Bhoomi Vandana By
Hon'ble Prime Minister of India
Shri Narendra Modi

12th March 2024, Tuesday | 09:30 AM Onwards | Sabarmati Ashram, Ahmedabad

Features of Ashram Restoration

- The project, planned at a cost of Rs 1200 crs aims to develop and upgrade the Ashram and surrounding infrastructure, visitors' amenities and create a world-class memorial as a tribute to Mahatma Gandhi ji.
- The project will comprise of a memorial spread over an area of 55 acres. It will serve as an inspiration for future generations, fostering Gandhian thoughts and will enliven the essence of Gandhian values.
- It involves conservation of 20 old ashram buildings, Restoration of 13 Buildings and Redevelopment of 3 buildings adhering to austere, simple and authentic architecture of the original Ashram.
- The project aims to create a serene, tranquil and lush green natural environment for the visitors.
- It is envisaged to promote values of sustainability and self reliance by creating hands-on experience for visitors of making hand-made products, which were made during Gandhiji's time in the Ashram.
- Informative Exhibitions depicting Gandhiji's Life and the Timeless Legacy of the Ashram.
- Interactive Exhibitions depicting Satyagrahas and freedom struggle initiated from the Sabarmati Ashram by Pujya Bapuji.
- Interpretation Center, Public Facilities & Amenities such as Food Court & Souvenir Shops for visitors with global accessibility standards.

The memorial will be a hub to foster the deeper understanding and appreciation of Gandhiji's contributions and ideals

Scan for more information

On the occasion of Dandi March day
A heartfelt salute to Gandhiji and all the Satyagrahis

Mahatma Gandhi Sabarmati Ashram Memorial Trust



Shri Bhupendra Patel
Chief Minister Of Gujarat

Live Broadcast on : DD NEWS D D News | CMOGuj | CMOGuj | CMOGujarat | CMOGujarat

ಸುಭಾಷಿತ

ಲಾಭವನ್ನು ಅಳೆದು, ಅದಕ್ಕೆ ತಕ್ಕಂತೆ ನಯವಾದ ಮಾತುಗಳನ್ನಾಡುವ ಗುಣವುಳ್ಳವರ ವರ್ತನೆಯನ್ನು ತೂಗಿ ನೋಡಿ, ಅವರ ಪ್ರೀತಿಯನ್ನು ಅಲಕ್ಷಿಸಬೇಕು.

-ತಿರುವಳ್ಳುವರ್

ಚುನಾವಣಾ ಆಯುಕ್ತರ ರಾಜೀನಾಮೆ ಚುನಾವಣೆ ಹೊತ್ತಲ್ಲಿ ಕಳವಳದ ನಡೆ

ಲೋಕಸಭಾ ಚುನಾವಣೆಯ ಪ್ರಕ್ರಿಯೆಗಳು ಶುರುವಾಗಲು ಕೆಲವೇ ದಿನಗಳು ಇರುವ ಹೊತ್ತಿನಲ್ಲಿ ಕೇಂದ್ರ ಚುನಾವಣಾ ಆಯೋಗದ ಉನ್ನತ ಹಂತದಲ್ಲಿ ಇಬ್ಬರು ಚುನಾವಣಾ ಆಯುಕ್ತರು ಇಲ್ಲದಂತೆ ಆಗಿರುವುದು ಕಳವಳ ಮೂಡಿಸುವ ಸಂಗತಿ. ಚುನಾವಣಾ ಆಯೋಗವು ಇನ್ನು ಕೆಲವು ದಿನಗಳಲ್ಲಿ ಲೋಕಸಭಾ ಚುನಾವಣೆಯ ವೇಳಾಪಟ್ಟಿಯನ್ನು ಘೋಷಿಸಬೇಕಿದೆ. ಈ ಹೊತ್ತಿನಲ್ಲಿ ಚುನಾವಣಾ ಆಯುಕ್ತ ಸ್ಥಾನಕ್ಕೆ ಅರುಣ್ ಗೋಯಲ್ ರಾಜೀನಾಮೆ ಸಲ್ಲಿಸಿದ್ದಾರೆ. ಚುನಾವಣೆಗೆ ಅಗತ್ಯವಿರುವ ಸಿದ್ಧತೆಗಳಿಗೆ ಸಂಬಂಧಿಸಿದಂತೆ ಆಯೋಗವು ಕೆಲಸಗಳನ್ನು ಶುರುಮಾಡಿದೆ, ವಿವಿಧ ಭಾಗೀದಾರರ ಜೊತೆ ಸಮಾಲೋಚನೆಯಲ್ಲಿ ತೊಡಗಿದೆ. ಈ ಹೊತ್ತಿನಲ್ಲಿ ಅವರು ಹಠಾತ್ತನೆ ರಾಜೀನಾಮೆ ನೀಡಿರುವುದು ಆಶ್ಚರ್ಯ ಮೂಡಿಸುವಂತೆ ಇದೆ. ಗೋಯಲ್ ಅವರು ಮುಖ್ಯ ಚುನಾವಣಾ ಆಯುಕ್ತ (ಸಿ.ಇ.ಸಿ) ರಾಜೀವ್ ಕುಮಾರ್ ಅವರ ಜೊತೆಗೂಡಿ ಸಮಾಲೋಚನೆಗಾಗಿ ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಕ್ಕೆ ತೆರಳಿದ್ದರು. ಅಲ್ಲಿಂದ ಅವರು ಇದ್ದಕ್ಕಿದ್ದಂತೆ ವಾಪಸಾಗಿದ್ದರು. ನಂತರ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಜೀನಾಮೆ ಪತ್ರ ರವಾನಿಸಿದರು. ರಾಜೀನಾಮೆ ನೀಡುತ್ತಿರುವ ಬಗ್ಗೆ ಅವರು ಸಿ.ಇ.ಸಿ. ಕುಮಾರ್ ಅವರಿಗೆ ಮಾಹಿತಿ ನೀಡಿರಲಿಲ್ಲ ಎಂದು ವರದಿಯಾಗಿದೆ. ರಾಜೀನಾಮೆಯನ್ನು ತಕ್ಷಣವೇ ಅಂಗೀಕರಿಸಲಾಯಿತು. ಗೋಯಲ್ ಅವರು ತೆಗೆದುಕೊಂಡ ತೀರ್ಮಾನದ ಸಂದರ್ಭ, ಹಠಾತ್ತನೆ ಅವರು ತೆಗೆದುಕೊಂಡ ತೀರ್ಮಾನ ಹಾಗೂ ಅದರ ಸುತ್ತಲಿನ ಗೋಪ್ಯತೆಯು ಹಲವು ಪ್ರಶ್ನೆಗಳು ಹಾಗೂ ಊಹಾಪೋಹಗಳು ಮೂಡಲು ಕಾರಣವಾಗಿವೆ.

ಚುನಾವಣಾ ಆಯೋಗವು ಪಾರದರ್ಶಕವಾಗಿ ಇರಬೇಕು, ವಿಶ್ವಾಸಾರ್ಹವಾಗಿ ಇರಬೇಕು. ಹಠಾತ್ ನೇಮಕ, ಹಠಾತ್ ರಾಜೀನಾಮೆಯಂತಹ ಬೆಳವಣಿಗೆಗಳು ಅದರ ವಿಶ್ವಾಸಾರ್ಹತೆಯನ್ನು ಕುಗ್ಗಿಸಬಲ್ಲವು

ಮೂವರು ಸದಸ್ಯರು ಇರುವ ಚುನಾವಣಾ ಆಯೋಗದಲ್ಲಿ ಈಗ ಸಿ.ಇ.ಸಿ. ಮಾತ್ರ ಇದ್ದಾರೆ. ಆಯೋಗವು ಒಬ್ಬರೇ ಸದಸ್ಯರನ್ನು ಇಟ್ಟುಕೊಂಡು ಈ ಹಿಂದೆ ಕೆಲಸ ಮಾಡಿದೆ ಎಂಬುದು ನಿಜ. ಆಗ ಚುನಾವಣೆಗಳನ್ನು ಅದು ಸಮರ್ಥವಾಗಿ ನಡೆಸಿದೆ ಎಂಬುದು ಕೂಡ ನಿಜ. ಆದರೆ, ಈ ವಿವರಣೆಯು ಗೋಯಲ್ ಅವರ ಹಠಾತ್ ರಾಜೀನಾಮೆಗೆ ಸಂಬಂಧಿಸಿದ ಪ್ರಶ್ನೆಗಳು ಹಾಗೂ ಇನ್ನೊಬ್ಬ ಚುನಾವಣಾ ಆಯುಕ್ತರು ಫೆಬ್ರುವರಿಯಲ್ಲಿ ನಿವೃತ್ತರಾದ ನಂತರ ಅವರ ಸ್ಥಾನವನ್ನು ತುಂಬಲು ತ್ವರಿತವಾಗಿ ಕ್ರಮ ಕೈಗೊಳ್ಳದೇ ಇರುವುದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ನೀಡುವುದಿಲ್ಲ. ಈಗ ಕೇಂದ್ರ ಸರ್ಕಾರವು ಹೊಸ ಚುನಾವಣಾ ಆಯುಕ್ತರ ನೇಮಕಕ್ಕೆ ಮುಂದಡಿ ಇರಿಸಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಯ್ಕೆ ಸಮಿತಿಯು ಮಾರ್ಚ್ 15ರ ಸುಮಾರಿಗೆ ಸಭೆ ಸೇರಲಿದೆ. ಸಮಿತಿಯಲ್ಲಿ ಕೇಂದ್ರ ಸರ್ಕಾರದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾರಣ, ನೇಮಕಾತಿಯಲ್ಲಿ ಅವರು ಹೇಳಿದ್ದೇ ಅಂತಿಮವಾಗಲಿದೆ ಎಂಬುದು ಗೊತ್ತಿರುವ ಸಂಗತಿ. ಕೇಂದ್ರವು ಚುನಾವಣಾ ಆಯುಕ್ತರ ನೇಮಕಕ್ಕೆ ಹೊಸ ಕಾನೂನನ್ನು ಕಳೆದ ವರ್ಷ ರೂಪಿಸಿದೆ. ನೇಮಕ ಪ್ರಕ್ರಿಯೆಯಲ್ಲಿ ಪಕ್ಷಪಾತದ ಧೋರಣೆ ಇರಬಾರದು, ಅಲ್ಲಿ ವಿಶ್ವಾಸಾರ್ಹತೆ ಹೆಚ್ಚಿನ ಮಟ್ಟದಲ್ಲಿ ಇರಬೇಕು ಎಂಬ ಉದ್ದೇಶದಿಂದ ಸುಪ್ರೀಂ ಕೋರ್ಟ್ ರೂಪಿಸಿದ್ದ ಪ್ರಕ್ರಿಯೆಯೊಂದಕ್ಕೆ ವಿರುದ್ಧವಾದ ಪ್ರಕ್ರಿಯೆಯನ್ನು ಕೇಂದ್ರವು ರೂಪಿಸಿದೆ.

ಗೋಯಲ್ ಅವರು ವೈಯಕ್ತಿಕ ಕಾರಣಗಳಿಗಾಗಿ ಅಥವಾ ಆರೋಗ್ಯದ ಸಮಸ್ಯೆಯಿಂದಾಗಿ ರಾಜೀನಾಮೆ ನೀಡಿದ್ದಾರೆ ಎಂದು ವರದಿಗಳು ಹೇಳುತ್ತವೆ. ಆದರೆ ಇದನ್ನು ಪೂರ್ಣ ಸತ್ಯವೆಂದು ಭಾವಿಸಲಾಗದು. ಗೋಯಲ್ ಅವರ ಸೇವಾ ಅವಧಿಯು ಇನ್ನೂ ದೀರ್ಘವಾಗಿತ್ತು. ಅವರು ಸಿ.ಇ.ಸಿ. ಆಗುವ ಸಾಧ್ಯತೆ ಹೆಚ್ಚಿತ್ತು. ಗೋಯಲ್ ಅವರನ್ನು 2022ರಲ್ಲಿ ಬಹಳ ಅವಸರದಲ್ಲಿ, ಒಂದೇ ದಿನದಲ್ಲಿ ನೇಮಕ ಮಾಡಲಾಗಿತ್ತು. ಅವರು ಈಗ ರಾಜೀನಾಮೆಯನ್ನೂ ಬಹಳ ಅವಸರದಲ್ಲಿ ನೀಡಿದಂತಿದೆ. ಗೋಯಲ್ ಅವರು ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸಿ.ಇ.ಸಿ. ಜೊತೆ ಭಿನ್ನಾಭಿಪ್ರಾಯ ಹೊಂದಿದ್ದರು ಎಂಬ ಊಹಾಪೋಹಗಳು ಇವೆ. ರಾಜೀನಾಮೆ ಸಲ್ಲಿಸುವಂತೆ ಅವರ ಮೇಲೆ ಒತ್ತಡ ಸೃಷ್ಟಿಯಾಗಿರಬಹುದು ಎಂಬ ಅಭಿಪ್ರಾಯಗಳೂ ಇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗಕ್ಕೆ ಬಹಳ ಮಹತ್ವದ ಸ್ಥಾನ ಇರುವ ಕಾರಣ ಗೋಯಲ್ ಅವರ ರಾಜೀನಾಮೆಗೆ ಕಾರಣಗಳು ಏನಿದ್ದವು, ಅವರು ರಾಜೀನಾಮೆ ನೀಡಿದ ಸಂದರ್ಭ ಏನಿತ್ತು ಎಂಬುದನ್ನು ಬಹಿರಂಗಪಡಿಸಬೇಕಿದೆ. ಆಯೋಗದ ಕಾರ್ಯವಿಧಾನಗಳ ಬಗ್ಗೆ ಸಾರ್ವಜನಿಕರಲ್ಲಿ ಕುತೂಹಲ ಇರುತ್ತದೆ. ಹೀಗಾಗಿ, ಆಯೋಗವು ಪಾರದರ್ಶಕವಾಗಿ ಇರಬೇಕು, ವಿಶ್ವಾಸಾರ್ಹವಾಗಿ ಇರಬೇಕು. ಹಠಾತ್ ನೇಮಕ, ಹಠಾತ್ ರಾಜೀನಾಮೆಯಂತಹ ಬೆಳವಣಿಗೆಗಳು ಅದರ ವಿಶ್ವಾಸಾರ್ಹತೆಯನ್ನು ಕುಗ್ಗಿಸಬಲ್ಲವು.

ದಿನದ ಟ್ವೀಟ್

ಅಡುಗೆಕೋಣೆಯಲ್ಲಿ ಹೇಳಿದ್ದಲ್ಲ...

ಸಂಸದ ಅನಂತ ಕುಮಾರ ಹೆಗಡೆ ಸಂವಿಧಾನಕ್ಕೆ ವಿರುದ್ಧವಾಗಿ ಮಾತನಾಡಿರುವುದು ವೈಯಕ್ತಿಕ ಹೇಳಿಕೆ ಎಂದು ಬಿಜೆಪಿ ತಳ್ಳಿಹಾಕಿರುವುದು ನಾಚಿಕೆಗೇಡಿನ ನಡೆಯ ಪ್ರತೀಕ ಮಾತ್ರವಲ್ಲ ನೆಲದ ಕಾನೂನಿನ ಬಗ್ಗೆ ಅವರಿಗಿರುವ ತಿರಸ್ಕಾರವೂ ಹೌದು. ಈ ಹೇಳಿಕೆಯನ್ನು ಹೆಗಡೆ ತಮ್ಮ ಮನೆಯ ಅಡುಗೆ ಕೋಣೆಯಲ್ಲಿ ನೀಡಿದ್ದಲ್ಲ, ಸಾರ್ವಜನಿಕ ಸಮಾರಂಭದಲ್ಲಿ ಸಂಸದನಾಗಿ ಮಾತನಾಡಿರುವುದು...

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕಿಡಿನುಡಿ

ಸಂವಿಧಾನವನ್ನು ಬದಲಿಸಲು ಯಾವ ಶಕ್ತಿಗೂ ಅವಕಾಶ ಇಲ್ಲ. ಕಾಂಗ್ರೆಸ್ ಫೇಕ್ ನ್ಯೂಸ್ ಫ್ಯಾಕ್ಟರಿಯಾಗಿದ್ದು, ಬಿಜೆಪಿ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿದೆ.

ಸಿ.ಟಿ.ರವಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 12-3-1999

• ಭಾಗವತ್ ಆರೋಪ: ಲೋಕಸಭೆಯಲ್ಲಿ ಚರ್ಚೆಗೆ ಉಭಯ ಪಕ್ಷಗಳ ಸಮ್ಮತಿ

ನವದೆಹಲಿ, ಮಾರ್ಚ್ 11 (ಪಿಟಿಐ, ಯುಎನ್ಐ)– ನೌಕಾಪಡೆಯ ಉಚ್ಚಾಟಿತ ಮುಖ್ಯಸ್ಥ ಅಡ್ಮಿರಲ್ ವಿಷ್ಣು ಭಾಗವತ್ ಅವರು ಮಾಡಿರುವ ಭ್ರಷ್ಟಾಚಾರದ ಆಪಾದನೆಗಳನ್ನು ಮತದಾನವಿಲ್ಲದ ಗೊತ್ತುವಳಿ ಮೂಲಕ ಲೋಕಸಭೆಯಲ್ಲಿ ಚರ್ಚಿಸಲು ಸರ್ಕಾರ ಹಾಗೂ ವಿರೋಧ ಪಕ್ಷಗಳು ಇಂದು ಸಮ್ಮತಿಸಿವೆ.

ಆದರೆ ಅವರನ್ನು ವಜಾ ಮಾಡಿದ್ದ ಬಗ್ಗೆ ಸದನದಲ್ಲಿ ಚರ್ಚೆ ಮಾಡಬಹುದೇ ಎಂಬುದನ್ನು ತೀರ್ಮಾನಿಸಲು ಹತ್ತು ಮಂದಿಯ ಸಂಸದೀಯ ಸಮಿತಿಯನ್ನು ನೇಮಿಸಲು ತೀರ್ಮಾನಿಸಲಾಗಿದೆ.

ಯುಟಿಐ ಷೇರುಗಳ ಮರುಖರೀದಿ ಹಾಗೂ ಕಬ್ಬಿಣದ ಬೆಲೆ ನಿಗದಿ ಮಾಡುವಾಗ ಸರ್ಕಾರ ಕೆಲವು ಉದ್ಯಮ ಸಂಸ್ಥೆಗಳಿಗೆ ಪಕ್ಷಪಾತ ಮಾಡಿದೆ ಎಂದು ಹಣಕಾಸು ಸಚಿವ ಯಶವಂತ ಸಿನ್ಹಾ ಅವರ ಮಾಜಿ ಸಲಹೆಗಾರ ಮೋಹನ್ ಗುರುಸ್ವಾಮಿ ಅವರು ಮಾಡಿರುವ ಆಪಾದನೆಗಳನ್ನು ಸದನದಲ್ಲಿ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

• ವೀರಪ್ಪನ್‌ಗಾಗಿ 18 ಕೋಟಿ ವೆಚ್ಚ

ಬೆಂಗಳೂರು, ಮಾರ್ಚ್ 11– ಕುಖ್ಯಾತ ಕಾಡುಗಳ್ಳ ವೀರಪ್ಪನ್‌ನನ್ನು ಹಿಡಿಯಲು ಇದುವರೆಗೆ ಸುಮಾರು ರೂ. 18 ಕೋಟಿ ವೆಚ್ಚವಾಗಿದೆ ಎಂದು ಗೃಹ ಸಚಿವ ಪಿ.ಜಿ.ಆರ್. ಸಿಂಧ್ಯ ಅವರು ಇಂದು ವಿಧಾನ ಪರಿಷತ್ತಿಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 12-3-1974

• ಕೆಳಹುದ್ದೆಗಳ ನೇಮಕಕ್ಕೆ ಇಲಾಖಾ ಸಮಿತಿ

ಬೆಂಗಳೂರು, ಮಾರ್ಚ್ 11– ಕೆಳ ಮಟ್ಟದ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಏಪ್ರಿಲ್ 1ರಿಂದ ಇಲಾಖಾ ನೇಮಕಾತಿ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಲಾಗಿದೆ ಎಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಟಿ.ವಿ. ವೆಂಕಟಸ್ವಾಮಿ ಹಾಗೂ ಪಿ. ವೆಂಕಟರಮಣ ಅವರ ಪ್ರಶ್ನೆಗಳಿಗೆ ಉತ್ತರ ನೀಡಿದ ಅರಸು ಅವರು, 59 ಇಲಾಖಾ ನೇಮಕಾತಿ ಸಮಿತಿಗಳನ್ನು ರಚಿಸಲಾಗಿದೆ ಎಂದೂ, ಇನ್ನು 3-4 ಇಲಾಖೆಗಳಿಗೆ ಸಮಿತಿಗಳನ್ನು ರಚಿಸಬೇಕಾಗಿದೆ ಎಂದೂ ನುಡಿದರು.

ಆ ಸಮಿತಿಗಳಲ್ಲಿ ಹರಿಜನ ಹಾಗೂ ಗಿರಿಜನರಿಗೆ ಪ್ರಾತಿನಿಧ್ಯ ನೀಡಲಾಗುವುದು ಎಂದರು.

• ರೈಲ್ವೆಯಲ್ಲಿ ಅದಕ್ಷತೆ, ಭ್ರಷ್ಟಾಚಾರ: ರಾಜ್ಯಸಭೆಯಲ್ಲಿ ಆರೋಪ

ನವದೆಹಲಿ, ಮಾರ್ಚ್ 10– ರೈಲ್ವೆಯಲ್ಲಿ ಭಾರಿ ಭ್ರಷ್ಟಾಚಾರ ತುಂಬಿದೆ ಹಾಗೂ ಅದಕ್ಷತೆ ಹೆಚ್ಚಿದೆ ಎಂದು ಇಂದು ರಾಜ್ಯಸಭೆಯಲ್ಲಿ ಆಪಾದಿಸಲಾಯಿತು.

ಕಲ್ಲಿದ್ದಲು ಸಾಗಣೆ ಪ್ರಶ್ನೆಗೆ ಉಪಮಂತ್ರಿ ಮಹಮದ್ ಷಫಿ ಖುರೇಷಿ ಅವರು ನೀಡಿದ ಉತ್ತರ ಕೆಲವು ಮಂದಿ ಸದಸ್ಯರಿಗೆ ಒಪ್ಪಿಗೆಯಾಗಲಿಲ್ಲ. ಕಲ್ಲಿದ್ದಲು ಕೊರತೆ ಕಾರಣದಿಂದ ಪ್ರಯಾಣಿಕರ ರೈಲನ್ನು ರದ್ದುಪಡಿಸಲಾಗಿದೆಯೇ ಎಂದು ಇನ್ನು ಕೆಲವು ಸದಸ್ಯರು ಪ್ರಶ್ನಿಸಿದರು. ವ್ಯಾಗನ್‌ಗಳ ಕೊರತೆಯೇ ಕಲ್ಲಿದ್ದಲು ಕೊರತೆಗೆ ಕಾರಣ ಎಂಬುದನ್ನು ಖುರೇಷಿ ನಿರಾಕರಿಸಿದರು.

ಎ.ಐ. ತಂತ್ರಜ್ಞಾನ ಬಳಸಿಕೊಂಡು ಸೃಷ್ಟಿಸಿದ ಉತ್ಪನ್ನಗಳಿಗೆ ಕಾಪಿರೈಟ್ ಇರುವುದೇ?

ಕೃತಕ ಬುದ್ಧಿಮತ್ತೆ: ಕೃತಿಸ್ವಾಮ್ಯಕ್ಕೆ ಸವಾಲು

ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಯಾವುದೇ ಹೊಸ ಜ್ಞಾನಶಾಖೆಯಾಗಲಿ ಅದು ಹೊತ್ತು ತರುವ ಅನುಕೂಲಗಳನ್ನು ಸದುಪಯೋಗ ಪಡಿಸಿಕೊಳ್ಳುವುದರ ಜೊತೆಗೆ ಅದು ಸೃಷ್ಟಿಸಬಹುದಾದ ಸಮಸ್ಯೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ನಾವು ಸಿದ್ಧರಾಗಬೇಕಿದೆ. ಐವತ್ತರ ದಶಕದಲ್ಲಿ ಸೈನ್ಸ್ ಫಿಕ್ಷನ್ ಎಂದು ಭಾವಿಸಿದ್ದ ಕೃತಕ ಬುದ್ಧಿಮತ್ತೆ (ಎ.ಐ) ಈಗ ಬದುಕಿನ ಎಲ್ಲ ಕ್ಷೇತ್ರಗಳನ್ನೂ ತನ್ನೊಡಲಿಗೆ ಸೇರಿಸಿಕೊಳ್ಳುತ್ತಿದೆ. ಎ.ಐನಿಂದ ಈಗಾಗಲೇ ಹಲವು ಬಗೆಯ ಪ್ರಯೋಜನಗಳನ್ನು ಪಡೆಯುತ್ತಿದ್ದೇವೆ. ಆದರೆ ಕೃತಿಸ್ವಾಮ್ಯದ (ಕಾಪಿರೈಟ್) ಮೇಲೆ ಇದೇ ಎ.ಐ ಯಾವ ಪರಿಣಾಮ ಉಂಟುಮಾಡಲಿದೆ ಮತ್ತು ಅದನ್ನು ಎದುರಿಸಲು ಏನೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ವ್ಯಾಪಕ ಚರ್ಚೆಗೆ ಒಳಪಟ್ಟಿದೆ.

ಎ.ಐ ಮತ್ತು ಕಾಪಿರೈಟ್ ವಾದ ಈಗ ನ್ಯಾಯಾಲಯದ ಮೆಟ್ಟಿಲೇರಿದೆ. ಹಿನ್ನೆಲೆ ಗಾಯಕ ದಿವಂಗತ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಧ್ವನಿಯನ್ನು ಎ.ಐ ತಂತ್ರಜ್ಞಾನ ಬಳಸಿ ಮತ್ತೊಂದು ಚಿತ್ರದಲ್ಲಿ ಬಳಸಿರುವುದು ಮತ್ತು ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರ ಹಳೆ ಚಿತ್ರವೊಂದರ ಹಾಡನ್ನು ಹೊಸ ಚಿತ್ರವೊಂದರಲ್ಲಿ ಬಳಸಿಕೊಂಡಿರುವ ಬಗ್ಗೆ ವಿವಾದ ಸೃಷ್ಟಿಯಾಗಿದೆ. ವಿವಿಧ ಕಂಪನಿಗಳ ತಂತ್ರಾಂಶ ಬಳಸಿಕೊಂಡು ಎ.ಐ ಮೂಲಕ ಸೃಷ್ಟಿಸುತ್ತಿರುವ ಉತ್ಪನ್ನಗಳ ವಿರುದ್ಧ ಕೆಲವು ಮೂಲ ಕಂಪನಿಗಳು ನ್ಯಾಯಾಲಯದಲ್ಲಿ ದೂರು ಸಲ್ಲಿಸಲು ಮುಂದಾಗಿವೆ.

ಎ.ಐ ತಂತ್ರಜ್ಞಾನ ಬಳಸಿಕೊಂಡು ಸೃಷ್ಟಿ ಮಾಡುವ ಉತ್ಪನ್ನಗಳಿಗೆ ಕಾಪಿರೈಟ್ ಇರುತ್ತದೆಯೇ ಎಂಬುದು ಈಗಿರುವ ಪ್ರಶ್ನೆ. ಭಾರತ ಸೇರಿದಂತೆ ಅನೇಕ ದೇಶಗಳಲ್ಲಿರುವ ಕಾಪಿರೈಟ್ ಕಾಯ್ದೆಯು ಕೃತಿಯನ್ನು ಸೃಷ್ಟಿಸಿದ ವ್ಯಕ್ತಿಗೆ ಕಾಪಿರೈಟ್ ಹಕ್ಕನ್ನು ನೀಡುತ್ತದೆ. ರಕ್ತ, ಮಾಂಸ ಹೊತ್ತ ಮಾನವನಿಗೆ ಮಾತ್ರ ಕಾಪಿರೈಟ್ ನೀಡಲು ಸಾಧ್ಯ. ಒಂದು ವೇಳೆ ವ್ಯಕ್ತಿಯೊಬ್ಬ ತಂತ್ರಜ್ಞಾನ ಬಳಸಿಕೊಂಡು ಕ್ರಿಯಾಶೀಲ ಕೃತಿಗಳನ್ನು ರಚಿಸಿದರೂ ಆ ವ್ಯಕ್ತಿಗೆ ಕಾಪಿರೈಟ್ ಇರುತ್ತದೆಯೇ ವಿನಾ ತಂತ್ರಜ್ಞಾನಕ್ಕಲ್ಲ. ಉದಾಹರಣೆಗೆ, ಕ್ಯಾಮೆರಾ ಉಪಯೋಗಿಸಿಕೊಂಡು ಸೃಷ್ಟಿಯಾದ ಫೋಟೊವಿನ ಕಾಪಿರೈಟ್ ಫೋಟೊ ತೆಗೆದ ವ್ಯಕ್ತಿಗೆ ಇರುತ್ತದೆ, ಕ್ಯಾಮೆರಾಗಲ್ಲ. ಆದರೆ ಕಾಪಿರೈಟ್ ದೃಷ್ಟಿಯಿಂದ ನೋಡಿದಾಗ, ಎ.ಐ ಅನೇಕ ಸಮಸ್ಯೆಗಳನ್ನು ಸೃಷ್ಟಿಸುವ ಸಾಧ್ಯತೆ ಇದೆ.

ಕಾಪಿರೈಟ್ ಕಾಯ್ದೆ ಪ್ರಕಾರ, ಆತ ಅಥವಾ ಆಕೆಯನ್ನು 'ಕೃತಿಕಾರ' ಅಥವಾ 'ಆಥರ್' ಎಂದು ಪರಿಗಣಿಸಲಾಗುತ್ತದೆ. ವ್ಯಕ್ತಿಯೊಬ್ಬ ಕಥೆ, ಕಾದಂಬರಿ, ಕವನ, ಲೇಖನದಂತಹವನ್ನು ರಚಿಸಿದರೆ ಅದರ ಕಾಪಿರೈಟ್ ಆ ಕೃತಿಕಾರನಿಗೆ ಇರುತ್ತದೆ. ಕಲಾವಿದನೊಬ್ಬನಿಗೆ ತನ್ನ ಕಲಾಕೃತಿಯ ಕಾಪಿರೈಟ್ ಇರುತ್ತದೆ. ಆದರೆ ಎ.ಐ ಸೃಷ್ಟಿಸುವ ಪುಸ್ತಕ, ಕಲಾಕೃತಿಯಂತಹ ಉತ್ಪನ್ನಗಳಿಗೆ ಯಾರನ್ನು ಕೃತಿಕಾರರು ಅಥವಾ ಆಥರ್ ಎಂದು ಗುರುತಿಸುವುದು? ಎ.ಐ ಸೃಷ್ಟಿಸಿದ ಕಲಾಕೃತಿಗಳ ಪ್ರದರ್ಶನವೊಂದು ದೆಹಲಿಯ ಕಲಾ ಗ್ಯಾಲರಿಯೊಂದರಲ್ಲಿ ಇತ್ತೀಚೆಗೆ ನಡೆಯಿತು. ನ್ಯೂಯಾರ್ಕ್‌ನಲ್ಲಿ ನಡೆದ ಹರಾಜಿನಲ್ಲಿ ಎ.ಐ ಆಧಾರಿತ ಕಲಾಕೃತಿಯೊಂದು ಅಧಿಕ ಬೆಲೆಗೆ ಮಾರಾಟವಾಗಿದೆ. ಈ ಕೃತಿಗಳ ಕಾಪಿರೈಟ್ ಯಾರಲ್ಲಿದೆ?

ಕಾಪಿರೈಟ್ ಕಾಯ್ದೆಯ ಅನುಸಾರ, ಯಾವುದೇ ಕೃತಿಗೆ ಕಾಪಿರೈಟ್ ದೊರೆಯಬೇಕಾದರೆ ಅದು ಮೂಲ ಕೃತಿಯಾಗಿರಬೇಕು. ಕೃತಿಕಾರನ ಕಲ್ಪನೆ, ಕೌಶಲ ಮತ್ತು ಕ್ರಿಯಾಶೀಲತೆಯಿಂದ ಸೃಷ್ಟಿಯಾಗಿರಬೇಕು. ಒರಿಜಿನಲ್ ಯಾವುದು ಎಂಬುದನ್ನು ಕಾಪಿರೈಟ್ ಕಾಯ್ದೆ ವಿವರಿಸಿದಿದ್ದರೂ ವ್ಯಾಜ್ಯ ಉಂಟಾದಾಗ ನ್ಯಾಯಾಲಯಗಳು ಅದನ್ನು ನಿರ್ಧರಿಸುತ್ತವೆ. ಇತರರು ರಚಿಸಿದ್ದ ಕೃತಿಯನ್ನು ತಮ್ಮ ಹೆಸರಿನಲ್ಲಿ ಪ್ರಕಟಿಸಿರುವ ಅದೆಷ್ಟೋ ಪ್ರಕರಣಗಳು ಬೆಳಕಿಗೆ ಬಂದಿವೆ. ಕೃತಿಚೌರ್ಯ ಮಾಡಿದ್ದಕ್ಕೆ ಕೆಲವರು ದಂಡವನ್ನೂ ತೆತ್ತಿದ್ದಾರೆ.

ಎ.ಐ ಸೃಷ್ಟಿಸುವ ಕೃತಿ ಒರಿಜಿನಲ್ ಎಂದು ಹೇಳಬಹುದೇ? ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ (ಎಲ್‌ಎಲ್‌ಎಂ) ಎಂಬ ಅಲ್ಗಾರಿದಮ್ ಉಪಯೋಗಿಸಿಕೊಂಡು ಎ.ಐ ಹೊಸ ಕೃತಿಯನ್ನು ಸೃಷ್ಟಿಸುತ್ತದೆ. ಓಪನ್ ಎ.ಐನ ಜಿಪಿಟಿ-3, ಗೂಗಲ್ ಅವರ ಪಾಮ್-2 ಕೆಲವು ಮಾದರಿ ಎಲ್‌ಎಲ್‌ಎಂಗಳು. ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ, ದತ್ತಾಂಶದಂತಹವನ್ನು ಉಪಯೋಗಿಸಿಕೊಂಡು ಸೃಷ್ಟಿಯಾದ ಕೃತಿ ಅಥವಾ ಉತ್ಪನ್ನ ಒರಿಜಿನಲ್ ಆಗಿರಲು ಸಾಧ್ಯವೇ? ಈ ಪ್ರಕ್ರಿಯೆಯಲ್ಲಿ ಕಾಪಿರೈಟ್ ಕಾಯ್ದೆ ಉಲ್ಲಂಘನೆ ಆಗುವ ಸಾಧ್ಯತೆ ಇದೆ. ತಾನು ಬಳಸಿಕೊಳ್ಳುವ ಮಾಹಿತಿಯಂತಹವುಗಳಿಗೆ ಅದಾಗಲೇ ಕಾಪಿರೈಟ್ ಇದೆ ಎಂದು ಎ.ಐಗೆ ಹೇಗೆ ತಿಳಿಯುತ್ತದೆ? ಎ.ಐಗೆ ಕೋಟ್ಯಂತರ ದತ್ತಾಂಶ ಅಗತ್ಯವಿರುವುದರಿಂದ ಅದನ್ನು ಸರಬರಾಜು ಮಾಡುವ ಮಾನವರಿಗೆ ಸಹ ಅದನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ.

ಕಾಪಿರೈಟ್ ಹೊಂದಿರುವ ಮಾಹಿತಿಯನ್ನು ಇತರರು ಬಳಸಿಕೊಳ್ಳುವುದಕ್ಕೆ ಕಾಪಿರೈಟ್ ಕಾಯ್ದೆಯಲ್ಲಿ ಅವಕಾಶ ಇದೆ. ಆದರೆ ಇಡೀ ಕೃತಿಯನ್ನು ಬಳಸಿಕೊಳ್ಳುವಂತಿಲ್ಲ. ಉದಾಹರಣೆಗೆ, ಒಂದು ಕಾದಂಬರಿಯ ವಿಮರ್ಶೆಗೆ ಆ ಕೃತಿಯ ನಾಲ್ಕಾರು ಸಾಲುಗಳನ್ನು ಬಳಸಿಕೊಳ್ಳಬಹುದು. ಆಗ ಅದು ಕಾಪಿರೈಟ್ ಕಾಯ್ದೆಯ ಉಲ್ಲಂಘನೆ ಆಗುವುದಿಲ್ಲ. ಎ.ಐ ತಾನು ಬಳಸಿಕೊಂಡ ಮಾಹಿತಿಯ ಮೂಲ ಕೃತಿಕಾರರಿಗೆ ಕೃತಜ್ಞತೆ ಸಲ್ಲಿಸಲು ಸಾಧ್ಯವೇ?

ಕೃತಿಚೌರ್ಯ ನಡೆದಿದೆ ಎಂದು ಖಾತರಿಯಾದಲ್ಲಿ, ಕೃತಿಕಾರರು ನ್ಯಾಯಾಲಯದಲ್ಲಿ ದೂರು ಸಲ್ಲಿಸಿ ವಿವಿಧ ರೀತಿಯ ಪರಿಹಾರ ಪಡೆಯಬಹುದು. ಉದಾಹರಣೆಗೆ, ಹಣ ಕೇಳಬಹುದು, ಕೃತಿಚೌರ್ಯದ ಕೃತಿಯನ್ನು ಹಿಂದಕ್ಕೆ ಪಡೆಯಬಹುದು, ಅದನ್ನು ಮಾರಾಟ ಮಾಡದಂತೆ ಸೂಚಿಸಬಹುದು... ಆದರೆ ಎ.ಐ ಸೃಷ್ಟಿಸಿದ ಉತ್ಪನ್ನದ ಕೃತಿಚೌರ್ಯವಾದಲ್ಲಿ ಯಾರ ವಿರುದ್ಧ ಕ್ರಮ ಕೈಗೊಳ್ಳುವುದು, ಉಲ್ಲಂಘನೆಗೆ ಯಾರನ್ನು ಶಿಕ್ಷೆಗೆ ಗುರಿಪಡಿಸುವುದು ಎಂಬೆಲ್ಲ ಪ್ರಶ್ನೆಗಳು ಉದ್ಭವಿಸುತ್ತವೆ.

ಕಾಪಿರೈಟ್ ಹೊಂದಿರುವವರು ತಮ್ಮ ಹಕ್ಕನ್ನು ಮತ್ತೊಬ್ಬರಿಗೆ ನೀಡಲು, ಮಾರಾಟ ಮಾಡಲು ಅಥವಾ ವರ್ಗಾಯಿಸಲು ಕಾಪಿರೈಟ್ ಕಾಯ್ದೆಯಲ್ಲಿ ಅವಕಾಶವಿದೆ. ಕಾಪಿರೈಟ್ ಹೊಂದಿರುವವರು ನಿಧನರಾದರೆ ಅವರ ವಾರಸುದಾರರಿಗೆ ಕಾಪಿರೈಟ್ ವರ್ಗಾಯಿಸಬಹುದು. ಮಾನವರಿಗೆ ಇರುವ ಆಯಸ್ಸಿನ ಮಿತಿ ಎ.ಐಗೆ ಇಲ್ಲದ ಕಾರಣ ಎ.ಐ ಸೃಷ್ಟಿಸುವ ಕೃತಿಗೆ ಅಥವಾ ಉತ್ಪನ್ನಕ್ಕೆ ಯಾರು ವಾರಸುದಾರರು?

ವ್ಯಕ್ತಿಯೊಬ್ಬರು ತಾವು ಸೃಷ್ಟಿಸಿದ ಕೃತಿಯನ್ನು ಮತ್ತೊಬ್ಬರು ಉಪಯೋಗಿಸಿಕೊಳ್ಳಲು ಅನುಮತಿ ನೀಡಬಹುದು. ಅಂತಹ ಸಂದರ್ಭದಲ್ಲಿ ಅವರು ಮೂಲ ಕೃತಿ ಸೃಷ್ಟಿಸಿದವರಿಗೆ ರಾಯಧನ (ರಾಯಲ್ಟಿ) ನೀಡಬೇಕಾಗುತ್ತದೆ. ಆದರೆ ಎ.ಐ ಸೃಷ್ಟಿಸಿದ ಕೃತಿಗೆ ರಾಯಧನ ಇತ್ಯರ್ಥಪಡಿಸುವವರು ಯಾರು? ಕಾಪಿರೈಟ್ ಕಾಯ್ದೆಯ ಪ್ರಕಾರ, ಒಂದು ಕೃತಿ ಮೊದಲು ಪ್ರಕಟಗೊಂಡ 60 ವರ್ಷಗಳ ನಂತರ ಅದನ್ನು ಸೃಷ್ಟಿಸಿದವರು (ಕೆಲವು ನಿಯಮಗಳಿಗೆ ಒಳಪಟ್ಟು) ತಮ್ಮ ಕಾಪಿರೈಟ್ ಕಳೆದುಕೊಳ್ಳುತ್ತಾರೆ. ಇದೇ ನಿಯಮವನ್ನು ಎ.ಐ ಸೃಷ್ಟಿಸಿದ ಕೃತಿಗಳಿಗೆ ಅನ್ವಯಿಸುವುದು ಹೇಗೆ?

ಭಾರತೀಯ ಕಾಪಿರೈಟ್ ಕಾಯ್ದೆಯು ಮೂಲ ಕೃತಿಕಾರರಿಗೆ ಎರಡು ರೀತಿಯ ನೈತಿಕ ಹಕ್ಕುಗಳನ್ನು ನೀಡುತ್ತದೆ. ಮೊದಲನೆಯದಾಗಿ, ಕಾಪಿರೈಟ್ ಹೊಂದಿರುವವರೇ ಅದನ್ನು ಸೃಷ್ಟಿಸಿದವರು ಎಂದು ನಮೂದಿಸಬೇಕಾದ ಹಕ್ಕು. ಎರಡನೆಯದು, ಮೂಲ ಕೃತಿಯನ್ನು ಬದಲಿಸುವುದು, ಅದರ ಅರ್ಥ ಬದಲಾಯಿಸುವುದು ಅಥವಾ ತಿರುಚುವುದರ ಮೂಲಕ ಮೂಲ ಕೃತಿಕಾರರಿಗೆ ಅಪಚಾರ ಮಾಡಿದರೆ ಅದರ ವಿರುದ್ಧ ಪರಿಹಾರ ಪಡೆಯುವ ಹಕ್ಕು. ಈ ನೈತಿಕ ಹಕ್ಕನ್ನು ಒಬ್ಬ ವ್ಯಕ್ತಿಗೆ ನೀಡಲು ಸಾಧ್ಯವೇ ವಿನಾ ಎ.ಐಗೆ ನೀಡಲು ಸಾಧ್ಯವಿಲ್ಲ ಎಂದು ಪ್ರಕರಣವೊಂದರಲ್ಲಿ (ಅಮರ್‌ನಾಥ್ ಸೆಹಗಲ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ) ದೆಹಲಿ ಹೈಕೋರ್ಟ್ ಹೇಳಿದೆ.

ಕಾಪಿರೈಟ್‌ಗೆ ಸಂಬಂಧಿಸಿದಂತೆ ಎ.ಐನಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಪರಿಹರಿಸಲು ಕಾಪಿರೈಟ್ ಕಾಯ್ದೆ, ಮಾಹಿತಿ ಮತ್ತು ತಂತ್ರಜ್ಞಾನ ಕಾಯ್ದೆ ಹಾಗೂ ಇತರ ನಿಯಮಗಳಿಗೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಕಾಣುತ್ತದೆ. ಬೌದ್ಧಿಕ ಆಸ್ತಿ ಹಕ್ಕನ್ನು ಪುನರವಲೋಕನ ಮಾಡಿದ ಸಂಸದೀಯ ಸ್ಥಾಯಿ ಸಮಿತಿಯು ತನ್ನ 161ನೇ ವರದಿಯಲ್ಲಿ, ಎ.ಐಗೆ ಸಂಬಂಧಿಸಿದಂತೆ ಪ್ರತ್ಯೇಕ ಹಕ್ಕುಗಳನ್ನು ರೂಪಿಸಬೇಕೆಂದು ಸಲಹೆ ಮಾಡಿದೆ.

ಎ.ಐ ಮತ್ತು ಮಾನವನ ಸಹಕಾರದೊಂದಿಗೆ ಸೃಷ್ಟಿಯಾದ ಕೃತಿಯಲ್ಲಿ ವ್ಯಕ್ತಿಯ ಪಾತ್ರ ಹೆಚ್ಚಾಗಿದ್ದರೆ ಅವರನ್ನು ಕೋ-ಆಥರ್ ಎಂದು ಪರಿಗಣಿಸಿ ಕಾಪಿರೈಟ್ ನೀಡಬಹುದು. ಆದರೆ ಇದು ಶಾಶ್ವತ ಪರಿಹಾರವಲ್ಲ. ಎ.ಐ ನಿಯಂತ್ರಣಕ್ಕೆ ಪ್ರತ್ಯೇಕ ನಿಯಂತ್ರಣ ಪ್ರಾಧಿಕಾರ ರಚಿಸಲು ಕೆಲವು ರಾಷ್ಟ್ರಗಳು ಮುಂದಾಗಿವೆ. ಈ ಪ್ರಾಧಿಕಾರಗಳು ಕಾಪಿರೈಟ್ ವಿಷಯವನ್ನು ಪರಿಗಣಿಸಬೇಕಿದೆ.

ಚುರುಮುರಿ



ಅವರಿಗೇ ಟಿಕೇಟಂತೆ...

• ಲಿಂಗರಾಜು ಡಿ.ಎಸ್.

'ಮಂಡ್ಯದ ಜನಕ್ಕೆ ರಾಜಕೀಯ ಸಲುವಲ್ಲ ಅಂತ ಯವಸಾಯ ಮಾಡಿಕ್ಯಂದು ಕಿರಿಗಂಚಿ-ಮರಿಗಂಚಿ, ನೆರವಿ ಬಾಡೂಟಕ್ಕೆ ರಾಗಿಮುದ್ದೆ ಉಂಡ್ಕಂದು, ಊರಬ್ಬ-ಮಾರಿಹಬ್ಬ, ಬಾಬಯ್ಯನ ಜಲ್ದಿ ಮಾಡಿಕ್ಯತಾ ಅಣ್ತಮ್ಮರಂಗಿದ್ದೋ' ಯಂಟಪ್ಪಣ್ಣ ನೊಂದ್ಕತಿತ್ತು.

'ಆ ಕಾಲ ಮುಗೀತು ಯಂಟಪ್ಪಣ್ಣ. ನಾಟಿ ಸ್ಟಾರ್, ಫಾರಂ ಸ್ಟಾರ್, ಹೈಬ್ರಿಡ್ ಸ್ಟಾರ್ ನಡುವೆ ಭಾರಿ ಟಿಕೇಟಂಗ್ ನಡೀತಾ ಅದೆ. ಇವರಲ್ಲಿ ಯಾರು ಮಂಡ್ಯದ ಸ್ಟಾರ್ ಆಯ್ತರೆ ಸಾ?' ತುರೇಮಣೆಗೆ ಕೇಳಿದೆ.

'ಯಾವ ಸ್ಟಾರು ತಕ್ಕಂದೇನು ಮಾಡಮು. ಗೆದ್ದೋರು ಇನ್ನೈದು ವರ್ಷ ಇಕ್ಕಡಿಕ್ಕೆ ತಲೆ ಹಾಕಿ ಮಂಗಕುಲ್ಲ. ಇವರನ್ನು ಹುಡೀಕ್ಕಂದು ಜನ ಬೆಂಗಳೂರಿಗೇ ಹೋಗಕ್ಕಾದದೆ? ಈ ಸಾರಿ ಮಂಡೇದ ಜನವೇ ಸ್ಟಾರ್ ಆಯ್ತರೆ ನೋಡ್ತಿರ್ರಿ' ಅಂದ್ರು ತುರೇಮಣೆ.

'ಪಕ್ಷಗಳು 'ಮ್ಯಾಕ್ಸಿಮಂ ಸಪೋರ್ಟ್ ಪ್ರೈಸು ಬೇಕಾ? ನಿಮ್ಮ ಯೇಗ್ತೆಗೆ ತಕ್ಕ ಗರಿಷ್ಠ ಬೆಂಬಲ ಬೆಲೆ ಕೊಡ್ತೀವಿ. ಪಕ್ಷಾಂತರಿಗಳೆಲ್ಲಾ ಬಲ್ರಿ, ಬಲ್ರೀ' ಅಂತ ಕೂಗು ಹಾಕ್ತಾವೆ. ಅದರದ್ದೇ ಗುಲ್ಲಾಗ್ಯದೆ. ಉಮ್ಮೇದಿನ ಎತ್ತುಗಳೆಲ್ಲಾ ಹಗ್ಗ-ಮೂಗುದಾರ ಕಿತ್ತಾಕಿ ರೆಡಿಯಾಗ್ಯವೆ' ಅಂದ ಚಂದ್ರು.

'ಅಲ್ಲ ಕಯಾ, ಮಂಡ್ಯದ ಸಕ್ಕರೆ ಕಾರ್ಖಾನೆ ಮುಚ್ಕೋಗ್ಯದೆ. ಕಬ್ಬು ಬೆಳೆಗಾರರ ಬಾಯಲ್ಲೂ ಸಕ್ಕರೆ ಇಲ್ಲ, ಬದುಕಲ್ಲೂ ಇಲ್ಲ. ಕೊಬ್ಬರಿ ಬೆಳೆದೋರಿಗೆ ಚಿಪ್ಪೇ ಗತಿಯಾಗ್ಯದೆ. ರೈತರ ಬದುಕು ಮೂರಾಬಟ್ಟೆಯಾಗ್ಯದೆ' ಯಂಟಪ್ಪಣ್ಣ ಸಿಟ್ಟಾಯ್ತು.

'ರೈತರಿಗೆ, ಜನಕ್ಕೇನಾದ್ರೇನು. ಕಾರ್ಯಕರ್ತರು 'ಗೋ ಬ್ಯಾಕ್' ಅಂದ್ಕಲಿ ಬುಡ್ಲಾ. ತಮ್ಮ ಕ್ಯಾಂಡಿಡೇಟ್ ಗೆಲ್ಲದು ಮುಖ್ಯ ಅಂತ ಪಕ್ಷಗಳು ಚಿಣ್ಣಿ-ದಾಂಡು ಹಿಡಕಂದು ನಿಂತವೆ. ಯಾರು ಗಿಲ್ಲಿ ಕ್ಯಾಚ್ ಹಿಡಿತರೋ ಅವರಿಗೇ ಟಿಕೇಟಂತೆ' ಅಂದ್ರು ತುರೇಮಣೆ.

'ಕರೆಕ್ಟಾಗೇಳಿದ್ರಿ ಸಾ, ಕಣ ರಾಜಕೀಯ ಅಂದ್ರೆ ಇದೇ. ತುಚೀಪ್, ತುದಾಂಡ್, ತುಬದ್ ರೆಡೀ' ಅಂತಂದೆ. ಯಂಟಪ್ಪಣ್ಣ, ಚಂದ್ರು ಟಿಕೆಟ್ವಾಟ ನೋಡ್ತಾ ಬೆಪ್ಪಾಗಿ 'ರೆಡೀ' ಅಂದ್ರು.

ಸಂಗತ

ನಮ್ಮ ಶಾಲೆ ನಮ್ಮೆಲ್ಲರ ಅಸ್ಮಿತೆ!

'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಮಹತ್ವಾಕಾಂಕ್ಷಿ ಯೋಜನೆಗೆ ಬೇಕಾಗಿದೆ ಬದ್ಧತೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಬೆಳಗಾವಿ ಜಿಲ್ಲೆಯ ಯಾದವಾಡ ಗ್ರಾಮದ ಹಿರೇಮಠಕ್ಕೆ 1960-70ರ ದಶಕದಲ್ಲಿ ಶಿವಮೂರ್ತಿ ಸ್ವಾಮೀಜಿ ಅಧ್ಯಕ್ಷರಾಗಿದ್ದರು. ಗ್ರಾಮದ ಹಿರಿಯರು ಸಭೆ ಸೇರಿ, ಮಠದ ಕಟ್ಟಡದ ನವೀಕರಣ ಹಾಗೂ ಹೊಸ ಕೊಠಡಿಗಳನ್ನು ಕಟ್ಟಲು ಹಣ ಸಂಗ್ರಹಿಸಿ ಶ್ರೀಗಳಿಗೆ ಅರ್ಪಿಸಿದರು. ಆಗ ಶ್ರೀಗಳು 'ನಾವೆಲ್ಲರೂ ಕಲಿತ ನಮ್ಮೂರ ಶಾಲೆ ಶಿಥಿಲಗೊಂಡಿದೆ, ಮಳೆಗಾಲದಲ್ಲಿ ಸೋರುತ್ತಿದೆ. ಶಾಲೆಯ ರಿಪೇರಿ ಕೆಲಸ ಮೊದಲು ಮಾಡೋಣ. ಊರಲ್ಲಿ ಹೈಸ್ಕೂಲು ಇಲ್ಲ. ಹೈಸ್ಕೂಲು ಆರಂಭಿಸೋಣ' ಎಂದು ಹೇಳಿ, ಗ್ರಾಮದ ಸ್ವಾತಂತ್ರ್ಯ ಯೋಧ ಬಸಪ್ಪ ಕಲ್ಯಾಣಿ ಅವರ ನೇತೃತ್ವದಲ್ಲಿ ವಿದ್ಯಾವರ್ಧಕ ಸಂಘ ಸ್ಥಾಪಿಸಿದರು. ಭಕ್ತರು ಕೊಟ್ಟ ಹಣವನ್ನು ಸಂಸ್ಥೆಗೆ ನೀಡಿ ಶಾಲಾ ಕಟ್ಟಡದ ರಿಪೇರಿ ಮಾಡಿಸಿದರು. ತಮ್ಮ ಗುರುವಿನ ಹೆಸರಿನಲ್ಲಿ ನೀಲಕಂಠ ಸ್ವಾಮಿ ಪ್ರೌಢಶಾಲೆಯನ್ನು ಆರಂಭಿಸಿದರು. ಅದು ಈಗ ಪದವಿಪೂರ್ವ ಕಾಲೇಜಾಗಿ ಬೆಳೆದಿದೆ. ಶ್ರೀಗಳ ದೂರದೃಷ್ಟಿಯಿಂದಾಗಿ ನಾನೂ ಸೇರಿದಂತೆ ಯಾದವಾಡ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಪಡೆಯುವ ಭಾಗ್ಯ ದೊರೆಯಿತು.

ಸರ್ಕಾರಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಎಂಬ ಮಹತ್ವಾಕಾಂಕ್ಷೆಯ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾವು ಪ್ರಾಥಮಿಕ ಶಿಕ್ಷಣ ಪಡೆದ ಮೈಸೂರು ತಾಲ್ಲೂಕಿನ ಕುಪ್ಪೇಗಾಲ ಹಾಗೂ ಸಿದ್ದರಾಮನಹುಂಡಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ತಲಾ ₹ 10 ಲಕ್ಷ ವೈಯಕ್ತಿಕ ನೆರವು ನೀಡುವ ಮೂಲಕ ಚಾಲನೆ ನೀಡಿದ ಸಂಗತಿಯನ್ನು (ಪ್ರ.ವಾ., ಮಾರ್ಚ್ 2) ಓದಿದಾಗ, ಶಿವಮೂರ್ತಿ ಸ್ವಾಮೀಜಿ ಹಚ್ಚಿದ ಬೆಳಕು ಕಾಣಿಸಿತು.

ಖಾಸಗಿ ಶಾಲೆಗಳ ಭರಾಟೆಯ ಮುಂದೆ ಸರ್ಕಾರಿ ಶಾಲೆಗಳ ಆಕರ್ಷಣೆ ಕಡಿಮೆಯಾಗಿದೆ. ಬಡವರು, ಮಧ್ಯಮ ವರ್ಗದ ಕುಟುಂಬಗಳಿಗೆ ಸೇರಿದ ಮಕ್ಕಳು ಹೆಚ್ಚಾಗಿ ಸರ್ಕಾರಿ ಶಾಲೆಗಳಲ್ಲಿ ಓದುತ್ತಾರೆ. ಈ ಮಕ್ಕಳಲ್ಲಿ ಕೀಳರಿಮೆ ಬೆಳೆಯಬಾರದು, ಆತ್ಮಶ್ರೀಗೆ ಧಕ್ಕೆ ಆಗಬಾರದು, ಉತ್ಸಾಹದಿಂದ ಓದುವ ವಾತಾವರಣ ಸೃಷ್ಟಿಯಾಗಬೇಕು, ಸಮವಸ್ತ್ರ, ಪೌಷ್ಟಿಕ ಆಹಾರ, ಶೌಚಾಲಯ, ಕಲಿಕಾ ಸಾಮಗ್ರಿ, ಇ- ಕಲಿಕಾ ಕೇಂದ್ರ, ಸ್ಮಾರ್ಟ್ ಕ್ಲಾಸ್, ಪ್ರಯೋಗಾಲಯ, ಕ್ರೀಡಾಂಗಣ, ವಾಚನಾಲಯ, ಪ್ರವಾಸ ಭಾಗ್ಯ ಈ ಮಕ್ಕಳಿಗೂ ದಕ್ಕಬೇಕು ಎಂಬುದು ಯೋಜನೆಯ ಘನ ಉದ್ದೇಶ.

ಸಂಪನ್ಮೂಲ ಕ್ರೋಡೀಕರಣಕ್ಕೆ ಸರ್ಕಾರಿ ಶಾಲೆಗಳಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳ ನೆರವು ಪಡೆಯುವುದು ಯೋಜನೆಯ ಆಶಯವಾಗಿದೆ. ಎಲ್ಲ ಸರ್ಕಾರಿ ಶಾಲೆಗಳಿಗೆ ಸ್ಥಳೀಯ ಮಟ್ಟದಲ್ಲಿ ಒಂದು ಸಂಘ ರಚಿಸಲಾಗುವುದು. ಶಾಲೆಯ ಮುಖ್ಯ ಅಧ್ಯಾಪಕರು ಗೌರವಾಧ್ಯಕ್ಷರಾಗಿರುತ್ತಾರೆ. ಸಾಮಾಜಿಕವಾಗಿ ಮನ್ನಣೆ ಪಡೆದ ಹಳೆಯ ವಿದ್ಯಾರ್ಥಿಯೊಬ್ಬರು ಅಧ್ಯಕ್ಷರಾಗಿರುತ್ತಾರೆ. ಹಳೆಯ ವಿದ್ಯಾರ್ಥಿಗಳೇ ಸದಸ್ಯರಾಗಿರುತ್ತಾರೆ. ಇದರಿಂದ ಅವರು ಕುಂದುಕೊರತೆ ಅರಿತುಕೊಂಡು ನೆರವಾಗಲು ಅನುಕೂಲವಾಗುತ್ತದೆ.

ಕಲಿತ ಶಾಲೆಯೊಂದಿಗೆ ಎಲ್ಲರೂ ಒಳ್ಳೆಯ ಅನುಬಂಧ ಹೊಂದಿರುತ್ತಾರೆ. ಇದು ಸಹಜ ಪ್ರೀತಿ. ಮನೆಯಷ್ಟೇ ಶಾಲೆಯೂ ಮನಸ್ಸಿಗೆ ಹತ್ತಿರವಾಗಿರುತ್ತದೆ. ಓದಿದ ಶಾಲೆಯ ಆವರಣದಲ್ಲಿ ನಡೆದಾಡಿದರೆ ಬಾಲ್ಯ ಮರುಕಳಿಸಿದಂತೆ ಆಗುತ್ತದೆ.

ಎಚ್.ವಿಶ್ವನಾಥ್ ಶಿಕ್ಷಣ ಸಚಿವರಾಗಿದ್ದಾಗ ಅವರ ಶ್ರೀಮಂತ ಗೆಳೆಯರೊಬ್ಬರು ತಮ್ಮ ತಾಯಿಯ ಭೇಟಿಗೆ ಮುಂಬೈಗೆ ಹೊರಟಿರುವುದಾಗಿ ಹೇಳಿದರು. 'ಇದೇ ಊರಿನಲ್ಲಿ ನಿಮ್ಮ ಇನ್ನೊಬ್ಬ ತಾಯಿ ಇದ್ದಾರೆ, ಅವರನ್ನು ಭೇಟಿಯಾಗುವುದಿಲ್ಲವೇ' ಎಂದು ವಿಶ್ವನಾಥ್ ಪ್ರಶ್ನಿಸಿದರು. ಮಾತಿನ ಅರ್ಥ ಗ್ರಹಿಸಿದ ಗೆಳೆಯ ತಾನು ಓದಿದ ಸರ್ಕಾರಿ ಶಾಲೆಗೆ ಭೇಟಿ ನೀಡಿದರು. ಶಾಲೆಯ ಸ್ಥಿತಿ ಕಂಡು ಕಳವಳಗೊಂಡು ಕೋಟಿ ರೂಪಾಯಿ ದಾನ ನೀಡಿದರು. ಬಾಗಲಕೋಟೆಯಲ್ಲಿ ನಡೆದಿದ್ದ ಶೈಕ್ಷಣಿಕ ಸಮ್ಮೇಳನದಲ್ಲಿ ವಿಶ್ವನಾಥ್ ಅವರು ಹೇಳಿದ್ದ ಈ ಸಂಗತಿ ಈಗ ನೆನಪಾಗುತ್ತಿದೆ.

ಗದಗದ ವೈದ್ಯ ಡಾ. ಎನ್.ಬಿ.ಪಾಟೀಲ ಅವರು ರಡ್ಡೇರ ತಿಮ್ಮಾಪುರ ಗ್ರಾಮದ ಶಾಲೆಯಲ್ಲಿ ಓದುತ್ತಿದ್ದಾಗ, ವಿದ್ಯಾರ್ಥಿಗಳೆಲ್ಲ ಸೇರಿ ಜಾತ್ರೆಯಲ್ಲಿ ಹೋಟೆಲ್ ನಡೆಸಿ ಹಣ ಸಂಪಾದಿಸಿ, ಶಾಲಾ ವಾಚನಾಲಯ ಕಟ್ಟಿದ ನೆನಪನ್ನು ಅವರ ಅಭಿನಂದನ ಗ್ರಂಥ 'ವೈದ್ಯವಜ್ರ'ದಲ್ಲಿ ರೋಚಕವಾಗಿ ದಾಖಲಿಸಲಾಗಿದೆ.

ಹಳೆ ವಿದ್ಯಾರ್ಥಿಗಳು ತಾವು ಕಲಿತ ಶಾಲೆಯಲ್ಲಿ ಒಟ್ಟಿಗೆ ಸೇರುವ ಕಾರ್ಯಕ್ರಮ ಬಹಳಷ್ಟು ಕಡೆ ನಡೆಯುತ್ತಿರುತ್ತದೆ. ಈಚೆಗೆ ನಡೆದ ಈ ಬಗೆಯ ಸಮ್ಮಿಲನ ಕಾರ್ಯಕ್ರಮವೊಂದಕ್ಕೆ ಉಪನ್ಯಾಸ ನೀಡಲು ಹೋಗಿದ್ದೆ. ಹಳೆ ವಿದ್ಯಾರ್ಥಿಗಳೆಲ್ಲ ಅಂದು 'ವಿದ್ಯಾರ್ಥಿ'ಗಳಾಗಿಯೇ ನಡೆದುಕೊಂಡದ್ದು ವಿಶೇಷವಾಗಿತ್ತು. ಶಾಲೆಯ ಬೆಳಗಿನ ಪ್ರಾರ್ಥನೆಯ ಗಂಟೆ ಬಾರಿಸಿತು. ಎಲ್ಲರೂ ಸೇರಿ ಪ್ರಾರ್ಥನೆ ಮಾಡಿದರು. ತರಗತಿಯಲ್ಲಿ ಕುಳಿತು ಮತ್ತೊಮ್ಮೆ ಪಾಠ ಹೇಳಿಸಿಕೊಂಡರು. ಅವರಲ್ಲಿ ಬಾಲ್ಯದ ತುಂಟತನ ಮರುಕಳಿಸಿತ್ತು. ಕೊನೆಯಲ್ಲಿ ಹೆಡ್‌ಮಾಸ್ತರ್ ವೇದಿಕೆಗೆ ಬಂದು, ನಾಲ್ವರು ಹಳೆಯ ವಿದ್ಯಾರ್ಥಿಗಳು ತಲಾ ಒಂದು ಕಂಪ್ಯೂಟರ್ ದೇಣಿಗೆ ಕೊಟ್ಟಿದ್ದು, ತಮ್ಮ ಹೆಸರು ಬಹಿರಂಗಪಡಿಸದಂತೆ ಮನವಿ ಮಾಡಿರುವುದಾಗಿ ಪ್ರಕಟಿಸಿದರು. ಚಪ್ಪಾಳೆ ಧ್ವನಿ ಜೋರಾಗಿ ಹರಡಿತು.

ಸಮುದಾಯದ ನೆರವು ಪಡೆಯುವ ಉದ್ದೇಶದಿಂದ 'ನಮ್ಮೂರ ಶಾಲೆ' ಎಂಬ ಯೋಜನೆಯನ್ನು ಹಿಂದೆ ಸರ್ಕಾರ ಜಾರಿಗೆ ತಂದಿತ್ತು. ಕ್ರಿಯಾಶೀಲತೆಯ ಕೊರತೆಯಿಂದ ಅದು ಮುಂದೆ ಸಾಗಲಿಲ್ಲ. ಒಂದು ಯೋಜನೆ ಯಶಸ್ವಿಯಾಗಲು ಯೋಜನೆಗೆ ಸ್ಪಷ್ಟ ಪರಿಕಲ್ಪನೆ, ಕ್ರಿಯಾಶೀಲತೆ, ಬದ್ಧತೆ, ಪ್ರಾಮಾಣಿಕತೆ ಬೇಕು.

'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಉತ್ತಮ ಪರಿಕಲ್ಪನೆಯಾಗಿದೆ. ಬಹಳಷ್ಟು ನೆರವು ಹರಿದುಬರುವ ನಿರೀಕ್ಷೆ ಇದೆ. ಸಹಾಯದ ಸಮರ್ಪಕ ಸದ್ಬಳಕೆ ಕೂಡ ಮುಖ್ಯವಾದುದು.

ವಾಚಕರ ವಾಣಿ

ಬ್ಯಾಂಕ್ ಕಾರ್ಯಾವಧಿ: ಬದಲಾವಣೆ ಸಲ್ಲ

ಬ್ಯಾಂಕುಗಳು ಇನ್ನು ಮುಂದೆ ವಾರದಲ್ಲಿ ಐದು ದಿನವಷ್ಟೇ ವ್ಯವಹಾರ ನಡೆಸುವ ಸಾಧ್ಯತೆ ಇದೆ ಎಂಬ ಸುದ್ದಿ ಕೇಳಿ ಬೇಸರವಾಯಿತು. ಇದು ಸರಿಯಲ್ಲ. ತಂತ್ರಜ್ಞಾನ ಎಷ್ಟೇ ಬೆಳೆದರೂ ಗ್ರಾಹಕರು ತಮ್ಮ ಹತ್ತಿರದ ಬ್ಯಾಂಕ್ ಶಾಖೆಗಳಿಗೆ ಭೇಟಿ ನೀಡುವುದು ಅನಿವಾರ್ಯ. ಅದರಲ್ಲೂ ಹಿರಿಯ ನಾಗರಿಕರಿಗೆ ಇದರ ಅವಶ್ಯಕತೆ ಹೆಚ್ಚಾಗಿ ಇರುತ್ತದೆ. ಇನ್ನು ಈ ರಜೆಗಳ ಜೊತೆ ಇತರ ಸಾರ್ವಜನಿಕ ರಜೆಗಳೂ ಜೋಡಣೆಯಾದರೆ ಅದೊಂದು ದೀರ್ಘ ರಜಾ ಸಮಯವಾಗುತ್ತದೆ. ಹೀಗಾಗಿ, ಈಗಿರುವ ಪದ್ಧತಿಯಲ್ಲಿ ಬದಲಾವಣೆ ಮಾಡದಿರುವುದು ಸೂಕ್ತ.

ಕೆ.ಎಸ್.ಸೋಮೇಶ್ವರ, ಬೆಂಗಳೂರು

ಕರ್ತವ್ಯಪಾಲನೆಗೆ ಜಾಹೀರಾತೇಕೆ?

ಪತ್ರಿಕೆಯಲ್ಲಿ ಪ್ರಕಟವಾದ ಕೇಂದ್ರ ಸರ್ಕಾರದ ಜಾಹೀರಾತೊಂದು (ಪ್ರ.ವಾ., ಮಾರ್ಚ್ 11) ಗಮನ ಸೆಳೆಯಿತು. ವಿದೇಶಗಳಲ್ಲಿ ಬಿಕ್ಕಟ್ಟು ಉಂಟಾದಾಗ, ಅಲ್ಲಿ ಉದ್ಯೋಗ, ಶಿಕ್ಷಣದ ನಿಮಿತ್ತ ನೆಲೆಸಿರುವ ಭಾರತೀಯ ಮೂಲದವರ ರಕ್ಷಣೆಗಾಗಿ ಕೈಗೊಳ್ಳುವ 'ಆಪರೇಷನ್'ಗಳ ವಿವರಣೆಯನ್ನು ಅದರಲ್ಲಿ ಕೊಡಲಾಗಿದೆ. ಭಾರತೀಯರು ಸಂಕಷ್ಟದಲ್ಲಿರುವಾಗ ರಕ್ಷಿಸಿ ಅವರನ್ನು ವಿದೇಶದಿಂದ ವಾಪಸ್ ಕರೆತರುವುದು ಕೇಂದ್ರ ಸರ್ಕಾರದ ಪ್ರಾಥಮಿಕ ಕರ್ತವ್ಯವಲ್ಲವೇ? ಹೀಗಿರುವಾಗ, ಅದನ್ನು ಜಾಹೀರಾತಿನ ಮುಖಾಂತರ ಪ್ರಕಟಿಸಿ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವುದು ಎಷ್ಟು ಸರಿ?

ಪ್ರಜೆಗಳಾದ ನಮಗೆ ಇರುವ ಹಾಗೆ ಸರ್ಕಾರಕ್ಕೂ ಕರ್ತವ್ಯಗಳು ಇದ್ದೇ ಇರುತ್ತವೆ. ಹಾಗೆ ನೋಡಿದರೆ, ಕೊರೊನಾ ಕಾಲಘಟ್ಟದಲ್ಲಿ ಬರಿಗಾಲಲ್ಲಿ ತಮ್ಮ ಮನೆಗಳಿಗೆ ಮಕ್ಕಳು ಮರಿ ಸಮೇತ ಹೊರಟಿದ್ದ ಸಾವಿರಾರು ಜನರಿಗೆ ಸಾರಿಗೆ ವ್ಯವಸ್ಥೆ, ಊಟದ ನೆರವು ನೀಡಿದ ಚಿತ್ರನಟ ಸೋನು ಸೂದ್ ಅಂತಹವರದು ಸಹೃದಯ, ಮಾನವೀಯ ಗುಣ ಅನ್ನಿಸಿಕೊಳ್ಳುತ್ತದೆ. ಅವರ ಈ ನಡೆ ಜಾಹೀರಾತು ಯೋಗ್ಯ. ಆದರೆ ಅದೇ ಕೆಲಸವನ್ನು ಸರ್ಕಾರ ಏನಾದರೂ ಮಾಡಿದ್ದಿದ್ದರೆ ಅದು ಕರ್ತವ್ಯ ಆಗುತ್ತಿತ್ತು.

ಶಾಂತಕುಮಾರ್, ಸರ್ಜಾಪುರ

ವಿಶೇಷ ಅನುದಾನ: ತಾರತಮ್ಯ ಸರಿಯಲ್ಲ

ಕಾಂಗ್ರೆಸ್ ಶಾಸಕರಿರುವ ಬೆಂಗಳೂರಿನ ಒಂಬತ್ತು ವಿಧಾನಸಭಾ ಕ್ಷೇತ್ರಗಳಿಗೆ ಮುಖ್ಯಮಂತ್ರಿಯವರ ವಿಶೇಷ ಅನುದಾನದಲ್ಲಿ ₹ 225 ಕೋಟಿ ವೆಚ್ಚದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವುದು ವರದಿಯಾಗಿದೆ. ಈ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಕ್ಷೇತ್ರಗಳ ಜನರು ಪ್ರಜೆಗಳಲ್ಲವೇ? ಅವರ ಕ್ಷೇತ್ರಗಳಿಗೂ ಇಂತಹ ವಿಶೇಷ ಅನುದಾನ ಏಕಿಲ್ಲ? ಆ ಕ್ಷೇತ್ರಗಳಲ್ಲೂ ಕಾಂಗ್ರೆಸ್‌ಗೆ ಮತ ಹಾಕಿದವರು ಇರುತ್ತಾರೆ. ಅಂತೆಯೇ, ಕಾಂಗ್ರೆಸ್ ಶಾಸಕರು ಇರುವ ಕ್ಷೇತ್ರಗಳಲ್ಲಿ ಬಿಜೆಪಿಗೆ ಮತ ಹಾಕಿದವರೂ ಇರುತ್ತಾರೆ. ಅನುದಾನ ನೀಡುವಲ್ಲಿ ಇಂತಹ ತಾರತಮ್ಯ ಸಲ್ಲದು.

ಚುನಾವಣೆಗೆ ಮುನ್ನ ಆ ಪಕ್ಷ ಈ ಪಕ್ಷ ಎಂಬ ಹೋರಾಟ ಸಹಜ. ಆದರೆ ಅಧಿಕಾರಕ್ಕೆ ಬಂದ ನಂತರ ಅದೆಲ್ಲಾ ಗೌಣವಾಗಬೇಕು. ಮುಖ್ಯಮಂತ್ರಿ ಆದವರಿಗೆ ಎಲ್ಲರೂ ಪ್ರಜೆಗಳೇ ಮತ್ತು ಎಲ್ಲ ಪ್ರಜೆಗಳಿಗೂ ಆತ ಮುಖ್ಯಮಂತ್ರಿಯೇ. ಹಾಗಾಗಿ ಮುಖ್ಯಮಂತ್ರಿ ಮತ್ತು ಆಡಳಿತವು ಎಲ್ಲ ಕ್ಷೇತ್ರಗಳನ್ನೂ ಸಮನಾಗಿಯೇ ಕಾಣಬೇಕು. ಈ ರೀತಿ ಪಕ್ಷದ ಶಾಸಕರಿಗೆ ಮಾತ್ರ ಅನುದಾನ ಹಂಚಿದರೆ ಭವಿಷ್ಯದಲ್ಲಿ ಜನರಲ್ಲೇ ಒಡಕು ಉಂಟಾಗಬಹುದು. ಸರ್ಕಾರ ಇಂತಹ ವರ್ತನೆ ಅಥವಾ ನೀತಿಯನ್ನು ಕೂಡಲೇ ಕೈಬಿಟ್ಟು ಸರ್ವರನ್ನೂ ಸಮನಾಗಿ ಕಾಣಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

'ಬಿಸಿ ತುಪ್ಪ'ವನ್ನು ಹದ್ದುಬಸ್ತಿನಲ್ಲಿ ಇಡಲಾಗದೇ?

ಸಂಸದ ಅನಂತಕುಮಾರ ಹೆಗಡೆ ಅವರು ತಮ್ಮ ವಿವಾದಾತ್ಮಕ ಹೇಳಿಕೆಗಳಿಂದ ಬಿಜೆಪಿಗೆ 'ಬಿಸಿ ತುಪ್ಪ'ವಾಗಿ ಪರಿಣಮಿಸಿದ್ದಾರೆ ಎಂದು ವರದಿಯಾಗಿದೆ (ಪ್ರ.ವಾ., ಮಾರ್ಚ್ 11). ಹಾಗಾದರೆ ಹೆಗಡೆ ಅವರಿಗೆ ಎಚ್ಚರಿಕೆ ನೀಡಿ, ವಿವಾದಾತ್ಮಕ ಹೇಳಿಕೆ ನೀಡದಂತೆ ಅವರನ್ನು ಹದ್ದುಬಸ್ತಿನಲ್ಲಿಡಲು ಆಗದಂತಹ ದುರ್ಬಲ ಸ್ಥಿತಿಗೆ ಬಿಜೆಪಿ ಹೈಕಮಾಂಡ್ ಬಂದಿದೆಯೇ ಅಥವಾ ಆ ಪಕ್ಷದ ಆಂತರ್ಯವನ್ನು ಹೆಗಡೆ ಅವರು ಆಗಾಗ್ಗೆ ಬಹಿರಂಗಪಡಿಸುತ್ತಿದ್ದಾರೆಯೇ? ಅದಕ್ಕಾಗಿ ಪಕ್ಷದ ಹೈಕಮಾಂಡ್ ಜಾಣ ಮೌನಕ್ಕೆ ಜಾರುತ್ತಿದೆಯೇ? ಇದರಲ್ಲಿ ಯಾವುದು ಸತ್ಯ?

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಕಾರ್ಯಕರ್ತರಿಗೆ ಸಿಗಲಿ ಮನ್ನಣೆ

ರಾಜ್ಯದಲ್ಲಿ ಕೆಲವೆಡೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ತಮ್ಮ ಮುಖಂಡರ ವಿರುದ್ಧ ಧ್ವನಿ ಎತ್ತುವ ಮೂಲಕ ಅವರ ನಿದ್ದೆಗೆಡಿಸಿರುವುದು ಒಂದು ಒಳ್ಳೆಯ ಬೆಳವಣಿಗೆಯೇ ಸರಿ. ಚುನಾಯಿತರಾದ ನಾಯಕರು ತಳಮಟ್ಟದ ಕಾರ್ಯಕರ್ತರನ್ನು ನಿರ್ಲಕ್ಷಿಸುವುದು ಸಾಮಾನ್ಯವಾಗಿದೆ. ಪಕ್ಷಕ್ಕೆ ನಿಷ್ಠರಾಗಿ ಹತ್ತಾರು ವರ್ಷ ಶ್ರಮವಹಿಸಿ ಕೆಲಸ ಮಾಡಿ ರಾಜಕೀಯ ಭವಿಷ್ಯ ಕಟ್ಟಿಕೊಳ್ಳಲು ಬಯಸಿದ ಹಲವರ ಕನಸು ಕನಸಾಗಿಯೇ ಉಳಿಯುತ್ತದೆ.

ಈಗಾಗಲೇ ಚುನಾಯಿತರಾದ ನಾಯಕರು ತಮ್ಮ ಹಣ ಹಾಗೂ ಜಾತಿ ಪ್ರಭಾವ ಬಳಸಿ ಹೈಕಮಾಂಡ್‌ನಿಂದ ತಮಗೆ ಅಥವಾ ತಮ್ಮ ಮಕ್ಕಳು, ಮೊಮ್ಮಕ್ಕಳಿಗೆ ಮಾತ್ರ ಟಿಕೆಟ್ ಗಿಟ್ಟಿಸಿಕೊಳ್ಳಲು ಹವಣಿಸುತ್ತಾರೆ. ಇದರಿಂದ, ಪಕ್ಷಕ್ಕೆ ತನು ಮನ ಧನ ಸಮೇತ ಸೇವೆ ಸಲ್ಲಿಸಿ, ನಾಯಕರಾಗಿ ಜನಸೇವೆ ಮಾಡುವ ಕನಸು ಕಟ್ಟಿಕೊಂಡ ಕಾರ್ಯಕರ್ತರ ಬಯಕೆ ಪೂರ್ಣಗೊಳ್ಳುವುದೇ ಇಲ್ಲ.

ಇಂತಹ ಬೆಳವಣಿಗೆಯಿಂದ, ಸರ್ವರಿಗೂ ಸಮಪಾಲು, ಸಮಬಾಳು, ಸಮನಾದ ಅಧಿಕಾರ ಎನ್ನುವ ಸಂವಿಧಾನದ ಹಕ್ಕುಗಳ ವಂಚನೆಯಾದಂತೆ ಆಗುವುದಿಲ್ಲವೇ? ಕುಟುಂಬ ರಾಜಕಾರಣವನ್ನು ವಿರೋಧಿಸುವ, ಶಿಸ್ತಿನ ಪಕ್ಷ ಎಂದು ಕರೆದುಕೊಳ್ಳುವ ಬಿಜೆಪಿಯು ಪ್ರಧಾನಮಂತ್ರಿಯವರ ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್ ಘೋಷಣೆಯನ್ನು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತರುತ್ತದೆ ಎಂಬುದನ್ನು, ಈ ಬಾರಿಯ ಲೋಕಸಭಾ ಚುನಾವಣೆಯ ಟಿಕೆಟ್ ಹಂಚಿಕೆಯ ವಿಷಯದಲ್ಲಿ ಕಾದುನೋಡಬೇಕಿದೆ.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚುನಾವಣಾ ಬಾಂಡ್

ಸಿದ್ಧವಿರುವ ಮಾಹಿತಿ ನೀಡಲು ಹಲವಾರು ನೆಪ

ಚುನಾವಣಾ ಬಾಂಡ್ ಖರೀದಿಸಿದವರ ಮಾಹಿತಿಯನ್ನು ಎಸ್‌ಬಿಐ ಸಂಗ್ರಹಿಸಲೇಬೇಕು, ಸಂಗ್ರಹಿಸಿದೆ ಕೂಡ. ಅಂತೆಯೇ ಆ ಬಾಂಡ್‌ಗಳನ್ನು ನಗದೀಕರಿಸಿಕೊಂಡವರ ಮಾಹಿತಿಯೂ ಬ್ಯಾಂಕ್‌ನಲ್ಲಿ ದಾಖಲಾಗುತ್ತದೆ. ಆ ಎರಡೂ ಮಾಹಿತಿಗಳು ಸಿದ್ಧರೂಪದಲ್ಲೇ ಇದೆ ಎಂದು ಸ್ವತಃ ಎಸ್‌ಬಿಐ ಹೇಳಿಕೊಂಡಿತ್ತು. ಈಗ ಅದೇ ಮಾಹಿತಿಯನ್ನು ನೀಡಲು ಸಮಯಾವಕಾಶ ಕೇಳಿತ್ತು. ಆ ಮನವಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ

ಪ್ರಜಾವಾಣಿ ವಾರ್ತೆ

ಚುನಾವಣಾ ಬಾಂಡ್ ಯೋಜನೆ ಜಾರಿಗೆ ತಂದಾಗ ಕೇಂದ್ರ ಸರ್ಕಾರವು, 'ಕಪ್ಪು ಹಣವು ಚುನಾವಣೆ ಮೂಲಕ ರಾಜಕೀಯಕ್ಕೆ ಬರುವುದನ್ನು ತಡೆಯಬೇಕಿದೆ. ಹೀಗಾಗಿಯೇ ಚುನಾವಣಾ ಬಾಂಡ್ ಯೋಜನೆ ತರಲಾಗುತ್ತಿದೆ' ಎಂದು ಹೇಳಿತ್ತು. ರಾಜಕೀಯ ಪಕ್ಷಗಳ ದೇಣಿಗೆ ವಿಚಾರದಲ್ಲಿ ಪಾರದರ್ಶಕತೆ ತರುವ ಉದ್ದೇಶದ ಈ ಯೋಜನೆಯು ದೇಣಿಗೆ ನೀಡಿದವರ ಮತ್ತು ಅದನ್ನು ಪಡೆದುಕೊಂಡವರ ಮಾಹಿತಿಯನ್ನು ಬಚ್ಚಿಡುತ್ತಿದ್ದುದೇ ಹೆಚ್ಚು. ಆ ಎಲ್ಲಾ ಮಾಹಿತಿಯನ್ನು ರಹಸ್ಯವಾಗಿ ಇಡಲು ಸಂಬಂಧಿತ ಕಾನೂನಿನಲ್ಲಿ ಅವಕಾಶವಿತ್ತೇ ಹೊರತು, ಮಾಹಿತಿಯನ್ನು ಸಂಗ್ರಹಿಸಲು ಯಾವುದೇ ನಿರ್ಬಂಧ ಇರಲಿಲ್ಲ. ಬಾಂಡ್ ನೀಡುವ ಮುನ್ನ, ಭಾರತೀಯ ಸ್ಟೇಟ್ ಬ್ಯಾಂಕ್, ಖರೀದಿದಾರರ ಎಲ್ಲಾ ಮಾಹಿತಿಯನ್ನು ಕಡ್ಡಾಯವಾಗಿ ಸಂಗ್ರಹಿಸಬೇಕು ಎಂದೇ ನಿಯಮದಲ್ಲಿ ಹೇಳಲಾಗಿದೆ.



SBI भारतीय स्टेट बैंक STATE BANK OF INDIA

इलेक्टोरल बॉण्ड / ELECTORAL BOND (प्रोमेसरी नोट के स्वरूप में / IN THE FORM OF PROMISSORY NOTE)

10 APR 2018

जारी करने की तिथि / DATE OF ISSUE :

जारी करने की तिथि से 15 दिनों तक वैध / VALID UPTO 15 DAYS FROM THE DATE OF ISSUE

लिखत का मूल्य / VALUE OF THE INSTRUMENT : ₹ 1,000/- (Rupees One Thousand only)

For value received, the Bank hereby promises to pay on demand to the eligible Payee which is holding this instrument, upon surrender of the original instrument in the Designated Account of the eligible Political Party with the Bank, the sum representing the value of this instrument of ₹ 1,000/- (Rupees One Thousand only) in accordance with the Scheme called "The Electoral Bond Scheme, 2018", notified by the Central Government vide Gazette Notification No. 20 dated the 2nd January, 2018.

On payment of the said amount, the liability of the Bank hereunder shall stand fully extinguished.

SAMPLE

स्थान / Place : NEW DELHI

प्राधिकृत हस्ताक्षरी Authorized Signatory

2018ರ ಜನವರಿಯಲ್ಲಿ ಜಾರಿಗೆ ಬಂದ 'ಚುನಾವಣಾ ಬಾಂಡ್ ಯೋಜನೆ'ಯ ಸೆಕ್ಷನ್ 7 ಸಂಪೂರ್ಣವಾಗಿ ಬಾಂಡ್ ಖರೀದಿದಾರರ ವೈಯಕ್ತಿಕ ಮಾಹಿತಿಗೆ ಸಂಬಂಧಿಸಿದ್ದಾಗಿದೆ. ಯಾವುದೇ ಭಾರತೀಯ ವ್ಯಕ್ತಿ, ಕುಟುಂಬ, ಕಂಪನಿ, ಸಂಸ್ಥೆ ಈ ಬಾಂಡ್‌ಗಳನ್ನು ಖರೀದಿಸಬಹುದು. ಹಾಗೆಂದು ಸೀದಾ ಎಸ್‌ಬಿಐ ಶಾಖೆಗೆ ಹೋಗಿ ಬಾಂಡ್ ಖರೀದಿಸಲು ಸಾಧ್ಯವಿಲ್ಲ. ಬಾಂಡ್ ಖರೀದಿ ಅವಧಿಗೂ ಮುನ್ನ ಎಸ್‌ಬಿಐ ಅರ್ಜಿಗಳನ್ನು ಹೊರಡಿಸುತ್ತದೆ. ಬಾಂಡ್ ಖರೀದಿಸಲು ಉದ್ದೇಶಿಸುವವರು, ಆ ಅರ್ಜಿಗಳನ್ನು ಭರ್ತಿ ಮಾಡಿ ಎಸ್‌ಬಿಐಗೆ ಸಲ್ಲಿಸಬೇಕಿತ್ತು. ಎಸ್‌ಬಿಐ ಅರ್ಜಿಗಳನ್ನು ಮಾನ್ಯ ಮಾಡಿದರಷ್ಟೇ, ಬಾಂಡ್ ಖರೀದಿಸಲು ಅವಕಾಶವಿತ್ತು.

ಚುನಾವಣಾ ಬಾಂಡ್ ಅರ್ಜಿಗಳಲ್ಲಿ ಖರೀದಿದಾರರು ನಮೂದಿಸಬೇಕಿದ್ದ ಮಾಹಿತಿ ವಿಸ್ತೃತವಾಗಿಯೇ ಇತ್ತು. ಖರೀದಿಸುವವರು ತಮ್ಮ ಹೆಸರು, ವಾಸದ ವಿಳಾಸ, ಪಾಸ್‌ಪೋರ್ಟ್/ಆಧಾರ್/ಮತದಾರರ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕಿತ್ತು. ಜತೆಗೆ ಫೋನ್ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನೂ ನೀಡಬೇಕಿತ್ತು. ಈ ಎಲ್ಲಾ ಮಾಹಿತಿಯನ್ನು ಸರಿಯಾಗಿ ಭರ್ತಿ ಮಾಡಿಯೇ ಅರ್ಜಿಗಳನ್ನು ಸಲ್ಲಿಸಬೇಕಿತ್ತು. ಅಂತಹ ಅರ್ಜಿಗಳನ್ನು ಎಸ್‌ಬಿಐ ಪರಿಶೀಲಿಸಬೇಕಿತ್ತು. ಈ ಮಾಹಿತಿಗಳು ಸರಿಯಾಗಿ ಇಲ್ಲದೇ ಇದ್ದರೆ ಅಂತಹವರಿಗೆ ಬಾಂಡ್ ಮಾರಾಟ ಮಾಡುವಂತಿಲ್ಲ ಎಂದೇ ಸೆಕ್ಷನ್ 7 ವಿವರಿಸುತ್ತದೆ.

ಈ ಪ್ರಕಾರ, ಈವರೆಗೆ ಮಾರಾಟವಾದ ಎಲ್ಲಾ ಚುನಾವಣಾ ಬಾಂಡ್‌ಗಳನ್ನು ಖರೀದಿಸಿದವರು ಯಾರು ಎಂಬ ಮಾಹಿತಿ ಎಸ್‌ಬಿಐ ಬಳಿ ಇರಲೇಬೇಕು. ಅಂತಹ ಮಾಹಿತಿ ತನ್ನ ಬಳಿ ಇದೆ ಎಂದು ಎಸ್‌ಬಿಐ ಈ ಹಿಂದೆಯೇ ಸುಪ್ರೀಂ ಕೋರ್ಟ್‌ಗೆ ಹಲವು ಬಾರಿ ಹೇಳಿದೆ. ಆದರೆ, ಅದೇ ಮಾಹಿತಿಯನ್ನು ಈಗ ನೀಡಿ ಎಂದು ಸುಪ್ರೀಂ ಕೋರ್ಟ್ ಆದೇಶಿಸಿದಾಗ, ಮಾಹಿತಿ ತಾಳೆ ನೋಡಲು ಸಮಯ ಕೇಳಿತ್ತು.

ಚುನಾವಣಾ ಬಾಂಡ್‌ಗಳಿಂದ ಅತಿ ಹೆಚ್ಚಿನ ದೇಣಿಗೆ ಬಂದಿರುವುದು ಬಿಜೆಪಿಗೆ. ಯಾವ ಉದ್ಯಮಿಯಿಂದ ಆಡಳಿತಾರೂಢ ಪಕ್ಷಕ್ಕೆ ಎಷ್ಟು ದೇಣಿಗೆ ಬಂದಿದೆ ಎಂಬುದು ಬಹಿರಂಗವಾದರೆ, ಆತ ಅಷ್ಟು ದೇಣಿಗೆ ನೀಡಿದ್ದು ಏಕೆ ಎಂಬುದೂ ಗೊತ್ತಾಗುತ್ತದೆ. ಈ ಎಲ್ಲಾ ಮಾಹಿತಿ ಬಹಿರಂಗವಾದರೆ ಚುನಾವಣೆಯಲ್ಲಿ ಬಿಜೆಪಿಗೆ ಅದರಿಂದ ಸ್ವಲ್ಪ ತೊಡಕಾಗಲಿದೆ. ಹೀಗಾಗಿಯೇ ಮಾಹಿತಿ ನೀಡಲು ಜೂನ್ ಅಂತ್ಯದವರೆಗೆ ಸಮಯ ಕೇಳಲಾಗಿತ್ತು ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಹೀಗೆ ಮಾಹಿತಿ ನೀಡಲು ಸಮಯ ಕೇಳಬಹುದು ಎಂದು ಈ ಮೊದಲೇ ಅಂದಾಜಿಸಿದ್ದ ಸುಪ್ರೀಂ ಕೋರ್ಟ್ ಫೆ.15ರ ತೀರ್ಪಿನಲ್ಲಿ ಅದನ್ನು ಉಲ್ಲೇಖಿಸಿತ್ತು. ಬಾಂಡ್‌ಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿ ಎಸ್‌ಬಿಐ ಬಳಿ, ರಾಜಕೀಯ ಪಕ್ಷಗಳ ಬಳಿ, ಬಾಂಡ್ ಮೂಲಕ ದೇಣಿಗೆ ನೀಡಿದ ಮೊತ್ತದ ಬಗ್ಗೆ ಕಂಪನಿಗಳು ತಮ್ಮ ಲೆಕ್ಕಪುಸ್ತಕದಲ್ಲಿ ಇದ್ದೇ ಇರುತ್ತದೆ. ಇನ್ನು ಮಾಹಿತಿಯನ್ನು ಸಿದ್ಧಪಡಿಸಿಟ್ಟುಕೊಳ್ಳಿ ಎಂದು 2019ರ ಮಧ್ಯಂತರ ಆದೇಶದಲ್ಲೂ ಸೂಚಿಸಲಾಗಿತ್ತು. ಹೀಗಾಗಿ ಈಗ ಮಾಹಿತಿ ನೀಡಿ ಎಂದು ಹೇಳಿದಾಗ, ಯಾರೂ ನಾವಿದನ್ನು ನಿರೀಕ್ಷಿಸಿರಲಿಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸಲು ಅವಕಾಶವಿಲ್ಲ. ಮಾಹಿತಿ ನೀಡಲು ಸಮಯ ಕೇಳುವಂತೆಯೂ ಇಲ್ಲ. ಅದನ್ನು ಒಪ್ಪಲೂ ಸಾಧ್ಯವಿಲ್ಲ ಎಂದು ಸಂವಿಧಾನ ಪೀಠವು ತನ್ನ ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಿತ್ತು. ಸುಪ್ರೀಂ ಕೋರ್ಟ್ ಅದೇ ಮಾತನ್ನು ಈಗ ಮತ್ತೊಮ್ಮೆ ಹೇಳಿದೆ.

ರಾಜಕೀಯ ಪಕ್ಷಗಳಿಗೆ ದೊರೆತ ದೇಣಿಗೆಗೆ ಕೇಂದ್ರ ಸರ್ಕಾರದಿಂದ ₹10.47 ಕೋಟಿ ಶುಲ್ಕ

ಚುನಾವಣಾ ಬಾಂಡ್ ಖರೀದಿದಾರರಿಂದ ಮತ್ತು ಅವುಗಳನ್ನು ನಗದೀಕರಿಸಿಕೊಳ್ಳುವವರಿಂದ ಎಸ್‌ಬಿಐ ಯಾವುದೇ ಕಮಿಷನ್ ಅಥವಾ ಶುಲ್ಕ ಸಂಗ್ರಹಿಸುವಂತಿಲ್ಲ ಎಂದು ನಿಯಮ ಹೇಳುತ್ತದೆ. ಹಾಗಿದ್ದರೆ ಎಸ್‌ಬಿಐ ಉಚಿತವಾಗಿ ಈ ಕೆಲಸ ಮಾಡಿಕೊಟ್ಟಿತೇ ಎಂಬ ಪ್ರಶ್ನೆ ಏಳುತ್ತದೆ. ಆ ಶುಲ್ಕವನ್ನು ಕೇಂದ್ರ ಸರ್ಕಾರ ಪಾವತಿಸಿದೆ ಎಂದು ಆ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ.

ಏಕೆಂದರೆ ಚುನಾವಣಾ ಬಾಂಡ್ ಮುದ್ರಣ ವೆಚ್ಚ ಎಂದು 'ಸೆಕ್ಯುರಿಟಿ ಪ್ರಿಂಟಿಂಗ್ ಅಂಡ್ ಮಿಂಟಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್'ಗೆ ಕೇಂದ್ರ ಸರ್ಕಾರವು ಒಟ್ಟು ₹1.90 ಕೋಟಿ ಶುಲ್ಕ ಪಾವತಿ ಮಾಡಿದೆ. ಚುನಾವಣಾ ಬಾಂಡ್ ಯೋಜನೆ ನಿರ್ವಹಣೆಗೆ ಎಂದು ಎಸ್‌ಬಿಐಗೆ ಕೇಂದ್ರ ಸರ್ಕಾರವು ಒಟ್ಟು ₹8.57 ಕೋಟಿ ಪಾವತಿಸಿದೆ.

ಹಣಕಾಸು ಸಚಿವಾಲಯವು ಲೋಕಸಭೆಗೆ ನೀಡಿರುವ ಮಾಹಿತಿ ಪ್ರಕಾರ ರಾಜಕೀಯ ಪಕ್ಷಗಳಿಗೆ ಈವರೆಗೆ ₹16,518 ಕೋಟಿ ದೇಣಿಗೆ ಚುನಾವಣಾ ಬಾಂಡ್‌ಗಳ ರೂಪದಲ್ಲಿ ಬಂದಿದೆ. ಆ ಬಾಂಡ್‌ಗಳ ಖರೀದಿ ವೇಳೆ ಜಿಎಸ್‌ಟಿ ಸೇರಿ ಯಾವ ಸ್ವರೂಪದ ತೆರಿಗೆಯನ್ನೂ ವಿಧಿಸಿಲ್ಲ. ಬಾಂಡ್‌ಗಳ ಖರೀದಿ ವೇಳೆಯೂ ಯಾವುದೇ ತೆರಿಗೆ ವಿಧಿಸಿಲ್ಲ. ಬದಲಿಗೆ ಬಾಂಡ್‌ಗಳ ಮುದ್ರಣ ವೆಚ್ಚ ಮತ್ತು ಯೋಜನೆ ನಿರ್ವಹಣೆ ವೆಚ್ಚ ಎಂದು ಕೇಂದ್ರ ಸರ್ಕಾರವು ತನ್ನ ಬೊಕ್ಕಸದಿಂದ ₹10.47 ಕೋಟಿ ವ್ಯಯ ಮಾಡಿದೆ.

ಅಂದರೆ ಬಾಂಡ್ ಖರೀದಿಸಿದವರೂ ತೆರಿಗೆ ಪಾವತಿಸಿಲ್ಲ, ದೇಣಿಗೆ ಪಡೆದುಕೊಂಡವರೂ ತೆರಿಗೆ ಪಾವತಿಸಿಲ್ಲ. ಬದಲಿಗೆ ಜನರ ತೆರಿಗೆ ಹಣವನ್ನು ಬಳಸಿಕೊಂಡು ಕೇಂದ್ರ ಸರ್ಕಾರವು ಅಷ್ಟೂ ವೆಚ್ಚವನ್ನು ಭರಿಸಿದೆ.

'ಮಾಹಿತಿ ಸಿದ್ಧವಿರಬೇಕು'

ಚುನಾವಣಾ ಬಾಂಡ್ ಖರೀದಿಗೆ ಬ್ಯಾಂಕ್ ಖಾತೆ/ಡಿಮ್ಯಾಂಡ್ ಡ್ರಾಫ್ಟ್/ಚೆಕ್/ಆನ್‌ಲೈನ್ ಪಾವತಿ ಮೂಲಕ ಮಾತ್ರ ಹಣವನ್ನು ಪಾವತಿಸುವ ಅವಕಾಶವಿದೆ. ಜತೆಗೆ ನೀವು (ಎಸ್‌ಬಿಐ) ಬಾಂಡ್ ನೀಡುವ ಮುನ್ನ ಖರೀದಿದಾರನ ಕೆವೈಸಿ ದಾಖಲೆಗಳನ್ನು ಪಡೆದುಕೊಂಡಿದ್ದೀರಿ. ಆ ಮಾಹಿತಿಯೆಲ್ಲಾ ನಿಮ್ಮ ಬಳಿಯೇ ಇದೆ. ಅದನ್ನು ಚುನಾವಣಾ ಆಯೋಗಕ್ಕೆ ಒದಗಿಸಿ ಎಂದು ಫೆ.15ರ ತೀರ್ಪಿನಲ್ಲಿ ಸಂವಿಧಾನ ಪೀಠವು ಆದೇಶಿಸಿತ್ತು.

ಇನ್ನು ಬಾಂಡ್ ನಗದೀಕರಿಸಿಕೊಳ್ಳಲು ಅವಕಾಶವಿರುವುದು ಎಸ್‌ಬಿಐ ಶಾಖೆಗಳ ಮೂಲಕ ಮಾತ್ರ. ಈ ಎಲ್ಲಾ ಪ್ರಕ್ರಿಯೆಗಳು ಬ್ಯಾಂಕ್ ಮೂಲಕವೇ ನಡೆಯುತ್ತದೆ. ಎಲ್ಲಾ ಖಾತೆಗಳ ವಿವರ, ವಹಿವಾಟಿನ ವಿವರ ಎಲ್ಲವೂ ಎಸ್‌ಬಿಐ ಶಾಖೆಗಳ ಮೂಲಕವೇ ನಡೆಯುತ್ತದೆ. ಹೀಗಿರುವಾಗ ಬಾಂಡ್‌ಗಳನ್ನು ಯಾವ ಪಕ್ಷ ನಗದೀಕರಿಸಿಕೊಂಡಿತು ಎಂಬ ಮಾಹಿತಿ ಸಿದ್ಧವಿರುತ್ತದೆ. ಇದರಲ್ಲಿ ಮಾಹಿತಿ ಗೋಪ್ಯತೆಯ ಪ್ರಶ್ನೆಯೇ ಇಲ್ಲ. ಹೀಗಾಗಿ ಎಲ್ಲಾ ಮಾಹಿತಿಯನ್ನು ಒದಗಿಸಿ ಎಂದು ಪೀಠವು ಆದೇಶಿಸಿತ್ತು.

2018ರಿಂದ 2023ರ ಅಂತ್ಯದವರೆಗೆ ಎಸ್‌ಬಿಐ ಸುಮಾರು 24,000 ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡಿದೆ. ಆ ಬಾಂಡ್‌ಗಳು ಖರೀದಿಸಿವರ ಮತ್ತು ಅದನ್ನು ನಗದೀಕರಿಸಿಕೊಂಡವರ ಮಾಹಿತಿ ಬ್ಯಾಂಕ್ ಬಳಿ ಲಭ್ಯವಿದೆ. ಆ 24 ಸಾವಿರ ಬಾಂಡ್‌ಗಳ ಮಾಹಿತಿಗಳನ್ನು ತಾಳೆ ನೋಡಲು ಎಷ್ಟು ಸಮಯಬೇಕು ಎಂದೂ ವಿರೋಧ ಪಕ್ಷಗಳು ಮತ್ತು ಬಾಂಡ್ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಹೋಗಿದ್ದ ಅರ್ಜಿದಾರರು ಪ್ರಶ್ನಿಸಿದ್ದಾರೆ.

'ಸುಪ್ರೀಂ' ಹೇಳಿದ್ದೊಂದು, ಎಸ್‌ಬಿಐ ಕೇಳಿದ್ದೊಂದು

ಚುನಾವಣಾ ಬಾಂಡ್ ಅನ್ನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ಫೆ.15ರಂದು ತೀರ್ಪು ನೀಡಿತ್ತು. ಯಾವೆಲ್ಲಾ ಮಾಹಿತಿಗಳನ್ನು ಚುನಾವಣಾ ಆಯೋಗಕ್ಕೆ ಎಸ್‌ಬಿಐ ಸಲ್ಲಿಸಬೇಕು ಎಂಬುದರ ಕುರಿತು ವಿಸ್ತೃತವಾಗಿಯೇ ನ್ಯಾಯಾಲಯ ಹೇಳಿತ್ತು. ಎಲ್ಲ ಮಾಹಿತಿಗಳನ್ನು ವಿವರವಾಗಿಯೇ ಹೇಳಿದರೂ ಮಾಹಿತಿ ತಾಳೆನೋಡಲು ಸಮಯಾವಕಾಶ ನೀಡಬೇಕು ಎಂದು ಮತ್ತೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಚುನಾವಣಾ ಬಾಂಡ್ ಯೋಜನೆ–2018 ಅನ್ವಯವೂ ಎಸ್‌ಬಿಐ ಬಳಿ ಎಲ್ಲ ಮಾಹಿತಿಗಳು ಸಿದ್ಧವಾಗಿರಬೇಕು. ನ್ಯಾಯಾಲಯಗಳು ಎಂದು ಕೇಳಿದರೂ ಅಂದು ಮಾಹಿತಿಗಳು ನೀಡುವಂತಿರಬೇಕು. ಈ ಅಂಶವನ್ನು ಸುಪ್ರೀಂ ಕೋರ್ಟ್ ತನ್ನ ಸೋಮವಾರದ ಆದೇಶದಲ್ಲಿ ಉಲ್ಲೇಖಿಸಿದೆ.

ಕೋರ್ಟ್ ಹೇಳಿದ್ದು

- 2019 ಏಪ್ರಿಲ್ 12ರಂದು ಸುಪ್ರೀಂ ಕೋರ್ಟ್ ನೀಡಿದ ಮಧ್ಯಂತರ ಆದೇಶದ ದಿನದಿಂದ ಆರಂಭಗೊಂಡು 2024 ಫೆ.15ರ ಒಳಗೆ ಖರೀದಿಸಲಾದ ಎಲ್ಲ ಚುನಾವಣಾ ಬಾಂಡ್‌ಗಳ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಬಾಂಡ್‌ಗಳನ್ನು ಖರೀದಿಸಿದ ದಿನಾಂಕ, ಯಾರು ಈ ಬಾಂಡ್‌ಗಳನ್ನು ಖರೀಸಿದರು, ಯಾವ ಮುಖಬೆಲೆಯ ಬಾಂಡ್‌ಗಳನ್ನು ಖರೀದಿಸಲಾಯಿತು ಎಂಬ ವಿವರವನ್ನು ಆಯೋಗಕ್ಕೆ ನೀಡಬೇಕು
- 2019 ಏಪ್ರಿಲ್ 12ರಂದು ಸುಪ್ರೀಂ ಕೋರ್ಟ್ ನೀಡಿದ ಮಧ್ಯಂತರ ಆದೇಶದ ದಿನದಿಂದ ಆರಂಭಗೊಂಡು 2024 ಫೆ.15ರ ಒಳಗೆ ಯಾವೆಲ್ಲ ರಾಜಕೀಯ ಪಕ್ಷಗಳು ಚುನಾವಣಾ ಬಾಂಡ್‌ಗಳನ್ನು ಪಡೆದುಕೊಂಡಿದ್ದಾವೆ ಎಂಬ ವಿವರಗಳನ್ನು ಸಲ್ಲಿಸಬೇಕು. ಈ ವಿವರಗಳಲ್ಲಿ ಪಕ್ಷವೊಂದು ಯಾವ ದಿನಾಂಕದಂದು ಬಾಂಡ್‌ಗಳನ್ನು ನಗದೀಕರಿಸಿಕೊಂಡಿದೆ ಮತ್ತು ಯಾವ ಮುಖಬೆಲೆಯ ಬಾಂಡ್‌ಗಳನ್ನು ನಗದೀಕರಿಸಿಕೊಂಡಿದೆ ಎಂಬ ವಿವರ ಸಲ್ಲಿಸಬೇಕು

ಯಾವ ದಿನಾಂಕದಲ್ಲಿ ಚುನಾವಣಾ ಬಾಂಡ್‌ಅನ್ನು ಖರೀದಿಸಲಾಗಿದೆ, ಯಾವ ಮುಖಬೆಲೆಯದ್ದನ್ನು ಖರೀದಿಸಲಾಗಿದೆ ಮತ್ತು ಯಾರು ಖರೀದಿಸಿದರು ಎನ್ನುವ ಮಾಹಿತಿ ಜೊತೆಯಲ್ಲಿ ಈ ಬಾಂಡ್‌ಗಳನ್ನು ಯಾವ ಪಕ್ಷವು ಪಡೆದುಕೊಂಡಿತು, ಯಾವ ದಿನಾಂಕದಲ್ಲಿ ನಗದೀಕರಿಸಿಕೊಂಡಿತು ಎಂಬೆಲ್ಲಾ ಮಾಹಿತಿಗಳನ್ನು ತಾಳೆನೋಡಿಕೊಡುತ್ತೇವೆ. ಇದಕ್ಕಾಗಿ ಜೂನ್ 30ವರೆಗೆ ಸಮಯಾವಕಾಶ ನೀಡಿ ಎಂದು ಎಸ್‌ಬಿಐ ಸುಪ್ರೀಂ ಕೋರ್ಟ್ ಅನ್ನು ಕೋರಿಕೊಂಡಿತ್ತು. ವಾಸ್ತವದಲ್ಲಿ ನ್ಯಾಯಾಲಯವು ಹೀಗೆ ಯಾವ ಮಾಹಿತಿಗಳನ್ನು ತಾಳೆನೋಡಿ ಕೊಡುವುದಕ್ಕೆ ಎಸ್‌ಬಿಐಗೆ ಕೇಳಿಯೇ ಇರಲಿಲ್ಲ.

ಈಗ ನ್ಯಾಯಾಲಯವು, ಬ್ಯಾಂಕ್ ಬಳಿ ಇರುವ ಮಾಹಿತಿಗಳನ್ನು ನೀಡಿ, ಅಗತ್ಯ ಇದ್ದವರು ಈ ದತ್ತಾಂಶಗಳ ತಾಳೆ ಮಾಡಿಕೊಳ್ಳುತ್ತಾರೆ ಎಂದು ಹೇಳಿದೆ.

ಆಧಾರ: ಚುನಾವಣಾ ಬಾಂಡ್ ಯೋಜನೆ–2018 ದಾಖಲೆ ಪತ್ರಗಳು, 2019ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಮಧ್ಯಂತರ ಆದೇಶ, 2024ರ ಫೆಬ್ರುವರಿ 15ರಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ನೀಡಿದ ತೀರ್ಪು, ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ಎಸ್‌ಬಿಐನ 'ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳು–ಎಫ್‌ಎಕ್ಯು', ಲೋಕಸಭೆಗೆ ಕೇಂದ್ರ ಹಣಕಾಸು ಸಚಿವಾಲಯ ನೀಡಿದ ಮಾಹಿತಿಗಳು, ಎಡಿಆರ್‌ನ ವರದಿಗಳು, ಪಿಟಿಐ

'ಕಲ್ಕಿ'ಯಲ್ಲಿ ಭೈರವನಾದ ಪ್ರಭಾಸ್

'ಸಲಾರ್' ಬಳಿಕ ಪ್ರಭಾಸ್ ನಟನೆಯ 'ಕಲ್ಕಿ–2898 AD' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ಚಿತ್ರದಲ್ಲಿ 'ಭೈರವ' ಎಂಬ ಪಾತ್ರದಲ್ಲಿ ಪ್ರಭಾಸ್ ಕಾಣಿಸಿಕೊಳ್ಳಲಿದ್ದಾರೆ.

ಬಹುತಾರಾಗಣದಲ್ಲಿ ಬಹುಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾ ಈಗಾಗಲೇ ಪೋಸ್ಟರ್‌ಗಳ ಮೂಲಕವೇ ಅಭಿಮಾನಿಗಳಲ್ಲಿ, ಪ್ರೇಕ್ಷಕರಲ್ಲಿ ನಿರೀಕ್ಷೆ ಹುಟ್ಟಿಸಿದೆ. ಸಿನಿಮಾದಲ್ಲಿ ಪ್ರಭಾಸ್ ಯಾವ ರೀತಿ ಕಾಣಿಸಿಕೊಳ್ಳಲಿದ್ದಾರೆ ಎನ್ನುವುದನ್ನು ಚಿತ್ರತಂಡ ಈಗಾಗಲೇ ರಿವೀಲ್ ಮಾಡಿದೆ. ಶಿವರಾತ್ರಿಯಂದು ನಾಯಕನ ಹೆಸರನ್ನು ಚಿತ್ರತಂಡ ಪೋಸ್ಟರ್ ಮೂಲಕ ತಿಳಿಸಿದೆ. ಈ ಮೂಲಕ ಚಿತ್ರದಲ್ಲಿ ಪ್ರಭಾಸ್ ಪಾತ್ರದ ಹೆಸರೇನು ಎನ್ನುವ ಕುತೂಹಲಕ್ಕೆ ತೆರೆಬಿದ್ದಿದೆ. ಪ್ರಭಾಸ್ 'ಭೈರವ'ನಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಬಹುಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾವನ್ನು ನಾಗ ಅಶ್ವಿನ್ ನಿರ್ದೇಶನ ಮಾಡುತ್ತಿದ್ದಾರೆ.

ವೈಜಯಂತಿ ಮೂವೀಸ್ ನಿರ್ಮಾಣ ಮಾಡಿರುವ ಈ ಸಿನಿಮಾದ ಚಿತ್ರೀಕರಣ ನಡೆಯುತ್ತಿದ್ದು, ಇತ್ತೀಚೆಗಷ್ಟೇ ಚಿತ್ರತಂಡ ಇಟಲಿಯಲ್ಲಿ ಹಾಡೊಂದರ ಚಿತ್ರೀಕರಣ ನಡೆಸಿತ್ತು. ಸಿನಿಮಾ ಮೇ 9ರಂದು ಬಿಡುಗಡೆಯಾಗುತ್ತಿದ್ದು, ಪ್ರಭಾಸ್ ಜೊತೆಗೆ ಅಮಿತಾಬ್ ಬಚ್ಚನ್, ಕಮಲ್ ಹಾಸನ್, ದೀಪಿಕಾ ಪಡುಕೋಣೆ, ದಿಶಾ ಪಟಾಣಿ ಮುಖ್ಯಭೂಮಿಕೆಯಲ್ಲಿದ್ದಾರೆ. ಮೂಲ ತೆಲುಗು ಸೇರಿ ಕನ್ನಡ, ತಮಿಳು, ಮಲಯಾಳ, ಹಿಂದಿ, ಇಂಗ್ಲಿಷ್‌ನಲ್ಲಿ ಡಬ್ ಆಗಿ ಸಿನಿಮಾ ಬಿಡುಗಡೆಯಾಗಲಿದೆ.

ಕಿರುತೆರೆಯಲ್ಲಿ ಸೂರ್ಯವಂಶ

ಎಸ್. ನಾರಾಯಣ್ ಅವರ ರಚನೆ ಹಾಗೂ ನಿರ್ದೇಶನದ, ಅನಿರುದ್ಧ ಮುಖ್ಯಭೂಮಿಕೆಯಲ್ಲಿದ್ದ ಧಾರಾವಾಹಿ 'ಸೂರ್ಯವಂಶ' 2022ರಲ್ಲಿ ಸೆಟ್ಟೇರಿತ್ತು. ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದ ಈ ಧಾರಾವಾಹಿ ಬದಲಾದ ತಂಡದೊಂದಿಗೆ ಅದೇ ಶೀರ್ಷಿಕೆಯಡಿ ಉದಯ ವಾಹಿನಿಯಲ್ಲಿ ಮತ್ತೆ ಪ್ರಾರಂಭಗೊಂಡಿದೆ.

'ಹಿಂದೆ ಈ ಧಾರಾವಾಹಿಯ 23 ಸಂಚಿಕೆಗಳ ಚಿತ್ರೀಕರಣ ಪೂರ್ಣಗೊಂಡಿತ್ತು. ಆದರೆ ಕಾರಣಾಂತರಗಳಿಂದ ಸ್ಥಗಿತಗೊಂಡಿತು. ಇದೀಗ ಶೀರ್ಷಿಕೆ, ವಾಹಿನಿ ಬದಲಾಗಿಲ್ಲ. ನಾನೂ ಮುಖ್ಯಭೂಮಿಕೆಯಲ್ಲೇ ಇದ್ದೇನೆ. ಮಾರ್ಚ್ 11ರಿಂದ ಧಾರಾವಾಹಿ ಪ್ರಸಾರ ಆರಂಭವಾಗಿದೆ' ಎಂದು ಅನಿರುದ್ಧ ಮಾಹಿತಿ ನೀಡಿದರು. ಈ ಮೂಲಕ ಬೆಳ್ಳಿತೆರೆಯ ಜೊತೆಗೆ ಕಿರುತೆರೆಯಲ್ಲೂ ಅನಿರುದ್ಧ ಸಕ್ರಿಯರಾಗಿದ್ದಾರೆ. ಈ ಧಾರಾವಾಹಿಗೆ ತನ್ವಿ ಕ್ರಿಯೇಶನ್ಸ್ ಲಾಂಛನದಲ್ಲಿ ಎಲ್. ಪದ್ಮನಾಭ ಬಂಡವಾಳ ಹೂಡುವುದರ ಮೂಲಕ ಕಿರುತೆರೆಗೆ ಹೆಜ್ಜೆ ಇಟ್ಟಿದ್ದಾರೆ. ಹರಿಸಂತು ಪ್ರಧಾನ ನಿರ್ದೇಶಕರಾಗಿದ್ದು, ಪ್ರಕಾಶ್ ಮುಚ್ಚಳಗುಡ್ಡ ಸಂಚಿಕೆ ನಿರ್ದೇಶನ ಮಾಡುತ್ತಿದ್ದಾರೆ.

ಸುಂದರ್ ರಾಜ್ 'ಸತ್ಯಮೂರ್ತಿ' ಎನ್ನುವ ಪಾತ್ರ ಮಾಡುತ್ತಿದ್ದು, 'ಕರ್ಣ'ನಾಗಿ ಅನಿರುದ್ಧ ನಟಿಸಿದ್ದಾರೆ. ನಾಯಕಿಯಾಗಿ ಸುರಭಿ, ಖಳನಟನಾಗಿ ವಿಕ್ರಂ ಉದಯಕುಮಾರ್, ರವಿಭಟ್, ಸುಂದರಶ್ರೀ, ಲೋಕೇಶ್ ಬಸವಟ್ಟಿ, ಪುಷ್ಪಾ ಬೆಳವಾಡಿ, ನಯನಾ, ರಾಮಸ್ವಾಮಿ, ಸುನಂದಾ ಮುಂತಾದವರಿದ್ದಾರೆ. ಧಾರಾವಾಹಿ ಸೋಮವಾರದಿಂದ ಶನಿವಾರದವರೆಗೆ ರಾತ್ರಿ 8 ಗಂಟೆಗೆ ಪ್ರಸಾರವಾಗುತ್ತಿದೆ.

ಅನಿರುದ್ಧ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಕುತೂಹಲವನ್ನು ಕಾಪಿಡುವ ಸಂಗತಿಗಳು

ನುಡಿ ಬೆಳಗು



ಪಿ. ಚಂದ್ರಿಕಾ

ಆ ಮಗುವಿಗೆ ನಾಲ್ಕೈದು ವರ್ಷ. ಆಟ ಆಡುತ್ತಾ, ಕುಣಿದಾಡುತ್ತಿದ್ದವ ಇದ್ದಕ್ಕಿದ್ದ ಹಾಗೆ ಕಾಯಿಲೆಯಿಂದ ಮಲಗಿದ. ಜ್ವರ ಕಾಯುತ್ತಿದೆ. ಮನೆಯ ಎಲ್ಲರಿಗೂ ಗಾಬರಿ. ಜ್ವರ ಜಾಸ್ತಿಯಾಗಿ ನರಳುತ್ತಿದ್ದ ಮಗು ಬೇಗ ಹುಷಾರಾಗಲೆಂದು ಪ್ರಾರ್ಥಿಸುತ್ತಾ ತಾಯಿ ಹತ್ತಿರ ಕುಳಿತರೆ, ಅಪ್ಪ ಔಷಧ ತರಲಿಕ್ಕೆ ಅಂತ ಅಂಗಡಿಗೆ ಓಡಿದ.

ಔಷಧ ತೆಗೆದುಕೊಂಡ ಅಪ್ಪನಿಗೆ ಅಲ್ಲೊಂದು ದಿಕ್ಸೂಚಿ ಕಾಣಿಸಿತು. ನರಳುತ್ತಾ ಮಲಗಿದ್ದ ಮಗುವಿಗೆ ಇದನ್ನು ಕೊಟ್ಟರೆ ಅವನ ಗಮನ ಇದರ ಮೇಲೆ ಹೋಗಿ ಜ್ವರದ ತಾಪವನ್ನು ಅನುಭವಿಸುವುದು ಕಡಿಮೆ ಆಗಬಹುದೆಂದು ಅನ್ನಿಸಿ ಅದನ್ನು ಕೊಂಡ. ಔಷಧ ತೆಗೆದುಕೊಂಡ ಮಗು ನಾಜೂಕಾದ ಆ ದಿಕ್ಸೂಚಿಯ ಪೆಟ್ಟಿಗೆಯನ್ನು ಹಿಡಿದು ಎದ್ದು ಕುಳಿತು ಗಮನಿಸತೊಡಗಿದ. ಎಷ್ಟೇ ಪ್ರಯತ್ನ ಪಟ್ಟು ಬೇರೆ ದಿಕ್ಕಿಗೆ ತಿರುಗಿಸಿದರೂ ಅದು ಮತ್ತೆ ಬಂದು ತನ್ನ ದಿಕ್ಕನ್ನು ಬದಲಿಸದೆ ಹೋಯಿತು. ಜ್ವರದ ತಾಪದಲ್ಲೂ ಮಗುವಿಗೆ ಇದು ಕುತೂಹಲ ಅನ್ನಿಸಿ ಮರಳಿ ಮರಳಿ ತನ್ನ ಪ್ರಯತ್ನವನ್ನು ಬಿಡದೆ ಮಾಡುತ್ತಿದ್ದ. ತನಗೆ ತಿಳಿಯದೇ ಹೋದಾಗ ಅಪ್ಪನನ್ನು 'ಅಪ್ಪಾ ಇದ್ಯಾವ ಸೂಜಿ, ಯಾಕೆ ಇದು ಪದೇ ಪದೇ ಒಂದೇ ದಿಕ್ಕಿಗೆ ತಿರುಗುತ್ತಿದೆ' ಎಂದು ಕೇಳಿದ.

ಅಪ್ಪ ತನ್ನ ಜ್ಞಾನಕ್ಕೆ ನಿಲುಕಿದ ಭೂಕಾಂತತ್ವದ ಬಗ್ಗೆ ಹೇಳಿದ. ಆದರೆ ಮಗುವಿನ 'ಏಕೆ ಏನು?' ಎನ್ನುವ ಪ್ರಶ್ನೆಗಳಿಗೆ ಅವನಿಗೆ ಉತ್ತರ ಹೇಳಲಾಗಲಿಲ್ಲ. ಮಗುವಿನ ಕುತೂಹಲ ತಣಿಯಲಿಲ್ಲ. ತಂದೆಗೆ ಉತ್ತರಿಸಲಾಗದೆ 'ನಿನಗೆ ಅದರ ಗೊಡವೆ ಬೇಡ ನೀನು ಆಡುತ್ತಿರುವ ಈ ಪೆಟ್ಟಿಗೆ ದಿಕ್ಸೂಚಿ ಅದರೊಂದಿಗೆ ಬರಿಯ ಆಟವಾಡು. ಹೇಗೆ ತಿರುಗಿಸಿದರೂ ಮತ್ತೆ ಮತ್ತೆ ತನ್ನ ದಿಕ್ಕಿಗೆ ಬಂದು ನಿಲ್ಲುವ ಅದರ ಛಲವನ್ನು ನೋಡು' ಎಂದು ಹೇಳುತ್ತಾನೆ.

ಆ ಮಾತುಗಳು ಆ ಬಾಲಕನ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ. ಕಂಡ ವಸ್ತುಗಳಲ್ಲಿ ಯಾಕೆ ಇದು ಹೀಗೆ ವರ್ತಿಸುತ್ತದೆ ಎಂಬ ಕುತೂಹಲ ತೋರುತ್ತಾ ಬರುತ್ತಾನೆ. ಅವನ ಮನಸ್ಸು ಭಿನ್ನವಾಗಿ ವರ್ತಿಸಲಿಕ್ಕೆ ಆರಂಭಿಸುತ್ತದೆ. ಆತನೇ ಆಲ್ಬರ್ಟ್ ಐನ್‌ಸ್ಟೀನ್. ಅರ್ಥವಾಗದ ಆ ವಸ್ತುವಿನ ಜೊತೆ ಕುತೂಹಲ ಬೆಳೆಸಿಕೊಂಡ ಐನ್‌ಸ್ಟೀನ್ ತನ್ನ ಅರವತ್ತೇಳನೇ ವಯಸ್ಸಿನಲ್ಲಿ ಬರೆದ ಆತ್ಮಚರಿತ್ರೆಯ ಟಿಪ್ಪಣಿಗಳು ಎಂಬ ಲೇಖನದಲ್ಲಿ ತಂದೆ ತಂದುಕೊಟ್ಟ ದಿಕ್ಸೂಚಿಯ ಘಟನೆ ಹೇಗೆ ತನ್ನ ಜೀವನದಲ್ಲಿ ಬದಲಾವಣೆ ತಂದಿತು ಎಂಬುದನ್ನು ಬರೆದಿದ್ದಾರೆ. 'ಕಣ್ಣಿಗೆ ಕಾಣದ ಆದರೆ ಜಗತ್ತಿನಲ್ಲಿ ನೆಲೆಗೊಂಡ ಶಕ್ತಿಯನ್ನು ಆ ಸೂಜಿಯು ತೋರಿತು. ಇದು ನನ್ನ ಮೇಲೆ ಚಿರಕಾಲ ಉಳಿಯಬಲ್ಲ ಮುದ್ರೆ ಒತ್ತಿತು' ಎಂದು ಅವರು ಹೇಳಿದ್ದಾರೆ.

ಅಚಾನಕ್ ಆಗಿ ಸಿಕ್ಕ ಯಾವುದೋ ವಸ್ತುವೊಂದು ಐನ್‌ಸ್ಟೀನ್ ವ್ಯಕ್ತಿತ್ವವನ್ನು ರೂಪಿಸಿದ್ದು ಹೀಗೆ. ನಮ್ಮ ಮಕ್ಕಳ ಕೈಗೆ ಏನನ್ನು ಕೊಡಬೇಕು ಎಂದು ನಿರ್ಧರಿಸುವ ಜರೂರತ್ತು ನಮಗಿದೆ ಅಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮಾರ್ಚ್ 12, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ದ್ವಿತೀಯ ಗಂ. 07-14 ನಂತರ ತೃತೀಯ ಗಂ. 28-04 ನಕ್ಷತ್ರ: ರೇವತಿ ಗಂ. 20-30 ಯೋಗ: ಶುಕ್ಲ (ಶುಕ್ರ) ಗಂ. 07-53 ಕರಣ: ಕೌಲವ ಗಂ. 07-14, ಕುಂಭ ಮಾಸದ 28 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 3. ರಾಹುಕಾಲ : ಮಧ್ಯಾಹ್ನ 03-00 – 04-30 ಸೂರ್ಯೋದಯ : 06-43 ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 01 ರಂಜಾನ್ , ದಿನ ವಿಶೇಷ : ರಾಮಕೃಷ್ಣ ಪರಮಹಂಸರ ಜನ್ಮದಿನ, ರಂಜಾನ್ ಮೊದಲನೇ ದಿನ, ಅದೃಷ್ಟ ಸಂಖ್ಯೆ : 3, 12

ಮೇಷ: ಪ್ರೀತಿ ಪಾತ್ರರೊಂದಿಗೆ ದಿನ ಕಳೆಯುವ ಸಮಯವು ಹಿಂದಿನ ಲವಲವಿಕೆಯನ್ನು ಪುನಃ ಮೂಡಿಸುತ್ತದೆ. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶ ಪಡೆದುಕೊಳ್ಳುವಿರಿ. ಸಜ್ಜನರ ಒಡನಾಟದಿಂದ ಮನಸ್ಸಿಗೆ ನೆಮ್ಮದಿ ಇರುವುದು.

ವೃಷಭ: ಸಹೋದ್ಯೋಗಿಗಳು ಸಹಕಾರ ನೀಡಿದರೂ ಸ್ವಾರ್ಥ ಮನೋಭಾವವನ್ನು ಹೊಂದಿರುತ್ತಾರೆ. ಸಂತಸದ ಕ್ಷಣಗಳನ್ನು ತಂದುಕೊಳ್ಳುವ ಪ್ರಯತ್ನ ಮಾಡಿ. ಕರಕುಶಲ ವಸ್ತು ತಯಾರಕರಿಗೆ ಆದಾಯದಲ್ಲಿ ಹೆಚ್ಚಳವಾಗಲಿದೆ.

ಮಿಥುನ: ವಿದ್ಯಾರ್ಥಿಗಳಿಗೆ ಏಕಾಗ್ರತೆ ಹೊಂದಿದ ಶಿಸ್ತುಬದ್ಧ ಅಭ್ಯಾಸವು ಉತ್ತಮ ಫಲವನ್ನು ದೊರಕಿಸಿಕೊಡಲಿದೆ. ಕಬ್ಬಿಣ ಸಿಮೆಂಟ್ ದಾಸ್ತಾನುದಾರರಿಗೆ ಉತ್ತಮ ಆದಾಯವಿರುವುದು. ವಾಸ್ತವ ಪರಿಸ್ಥಿತಿ ನಿಮ್ಮ ರಕ್ಷಾ ಕವಚದಂತಿದೆ.

ಕರ್ಕಾಟಕ: ವ್ಯಾಪಾರದಲ್ಲಿ ಅಭಿವೃದ್ಧಿ ಕಂಡು ಅದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಹಣ ತೊಡಗಿಸುವಿರಿ. ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಕ್ಕೆ ವಿಘ್ನ ಸಂಭವಿಸದಂತೆ ವಿಘ್ನೇಶ್ವರನ ಮೊರೆ ಹೋಗಬೇಕಾಗುತ್ತದೆ.

ಸಿಂಹ: ಸರ್ಕಾರಿ ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು. ನಿಮ್ಮ ನಿರ್ಲಿಪ್ತತೆ, ಮೌನದ ಉತ್ತರದಿಂದ ಶತ್ರುಗಳು ದೂರಾಗುವರು. ದೇವತಾ ಉಪಾಸನೆಯಿಂದ ಉನ್ನತಿ ಆಗಲಿದೆ.

ಕನ್ಯಾ: ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಬಹಳ ಕೆಲಸದ ಒತ್ತಡ ಇರುವುದು. ಕಣ್ಣಿನ ದೃಷ್ಟಿಯಲ್ಲಿ ಏನಾದರೂ ಬದಲಾವಣೆಯು ಅನುಭವಕ್ಕೆ ಬಂದಲ್ಲಿ ತಕ್ಷಣವೇ ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆಯನ್ನು ಪಡೆಯಿರಿ.

ತುಲಾ: ನ್ಯಾಯಾಲಯದ ಮೆಟ್ಟಿಲನ್ನು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ. ಮಹಿಳೆಯರಿಗೆ ತನ್ನ ತವರು ಮನೆಯಲ್ಲಿ ನಡೆದ ದುರ್ಘಟನೆಯು ಭಾವುಕರನ್ನಾಗಿ ಮಾಡಲಿದೆ. ಕೆಂಪು ಬಣ್ಣ ಶುಭವನ್ನು ಉಂಟುಮಾಡುತ್ತದೆ.

ವೃಶ್ಚಿಕ: ಆರ್ಥಿಕ ವಿಚಾರದಲ್ಲಿ ಉದಾರತೆ ತೋರಿ ಸಮಸ್ಯೆಯನ್ನು ಸೃಷ್ಟಿಸಿಕೊಳ್ಳಬೇಡಿ. ವೃತ್ತಿ ಜೀವನಕ್ಕೆ ಸಂಬಂಧಿಸಿದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ.

ಧನು: ಮಗನ ಕೆಲಸದ ವಿಚಾರದಲ್ಲಿ ವಿದೇಶದಲ್ಲಿರುವ ಸ್ನೇಹಿತ ನೆರವಿಗೆ ಬರಲಿದ್ದಾರೆ. ರಾಜಿಯಾಗುವ ಮನೋಭಾವವನ್ನು ಬೆಳೆಸಿಕೊಳ್ಳಿ. ಹೊಸ ಕ್ಷೇತ್ರದಲ್ಲಿ ಏಳಿಗೆ ಪಡೆಯುವಿರಿ. ಗೋವಿನ ಸೇವೆಯಿಂದ ಶುಭ.

ಮಕರ: ಇತರರನ್ನು ಹೀಯಾಳಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ವೈಯಕ್ತಿಕ ವಿಚಾರಗಳನ್ನು ಸಮಾಧಾನಕ್ಕಾಗಿ ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಎದುರಾಗುವುದು.

ಕುಂಭ: ರಸ ಪದಾರ್ಥ, ಅಲಂಕಾರಿಕ ವಸ್ತುಗಳ ಉದ್ಯೋಗದವರು ನೆಮ್ಮದಿ ಕಾಣಬಹುದು. ರಾಜಕೀಯ ವಲಯದಲ್ಲಿ ಗೌಪ್ಯತೆಯಿಂದ ಮುಖ್ಯ ಮಾತುಕತೆ ನಡೆಸಬೇಕಾಗುವುದು. ಮಿತ್ರರೊಂದಿಗೆ ಮಾತುಕತೆಗಳಲ್ಲಿ ಕಾಲ ಕಳೆಯುವಿರಿ.

ಮೀನ: ಈ ದಿನ ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಲೇವಾದೇವಿ ವ್ಯವಹಾರವು ಬಹಳಷ್ಟು ಲಾಭದಾಯಕವಾಗಿರುವುದು.

ಪದಬಂಧ 5618

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಿಂದೆ ನಡೆದಿರುವ ಕಥೆ (4)
3.ಕೋಲನ್ನು ಹಿಡಿದಿದ್ದಕ್ಕೇ ಈ ಗದ್ದಲ! (4)
5.ಗುಣವಂತನು ಹಿಡಿದಿರುವ ದೊಡ್ಡ ಮಡಕೆ (3)
6.ಕನ್ನಡಿಗ ಹಿಡಿದಿರುವ ಸ್ಕ್ರೂ (3)
8.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)
9.ಅಂಕಣದಲ್ಲಿ ಕಾಣುವ ಸಂಖ್ಯೆ (2)
10.ಆನೆ ಕುದುರೆಗಳನ್ನು ಕಟ್ಟುವ ಜಾಗ (2)
11.ಒಳ್ಳೆಯ ದಿನ ಹಿಂದು ಮುಂದಾಗಿದೆ (3)
12.ತಿರುಗಿದ ಮಗನಿಗೆ ಇದು ಸಲೀಸು! (3)
14.ಹೂವು ಇಲ್ಲಿದೆ (3)
16.ಗ್ರಹಗಳ ಚಲನೆ (4)
17.ನಾರಿ ಹಿಡಿದಿರುವ ತೆಂಗಿನಕಾಯಿ (4)

ಮೇಲಿಂದ ಕೆಳಕ್ಕೆ

1.ಅಭ್ಯುದಯ ಇಲ್ಲಿ ಕಾಣುತ್ತಿದೆ (3)
2.ನಡುಗುತ್ತಲೇ ಬೀರಿದ ಮಂದಹಾಸ (2)
3.ಮಹಿಷ ಇಲ್ಲಿಗೆ ಬಂದಿದೆಯಲ್ಲಾ? (2)
4.ವಂಗ ದೇಶದಿಂದ ತಂದಿರುವ ಸಾಂಬಾರ ದ್ರವ್ಯ (3)
7.ಈ ರೀತಿ ಸಮರ್ಥಿಸು (5)
8.ಹೀಗೆ ಮಾತಿನಲ್ಲಿ ನಯವಾಗಿ ಉಬ್ಬಿಸು (5)
11. ಉಗುರಿನ ಮೊನೆ (3)
13.ಮರಳ ಹತ್ತಿರವಿರುವ ಹುಚ್ಚ (3)
14.ಸುಮತಿಯ ಬುದ್ಧಿ (2)
15.ನಾಗರೀಕರು ಹಿಡಿದಿರುವ ಗುಂಜು ಉಲ್ಟಾ ಆಗಿದೆ (2)



5617ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರಾಹುರಿ 3.ಕಕ್ಕುಲತೆ
5.ಪುಧಾರಿ 7.ಸ್ಥಾವರ
9.ಪತಿತ 12.ಅಂತಿಮ
14.ಕಾನನ 15.ಜಾತಕ
17.ಕಡಿವಾಣ 18.ದಸಕತ್ತು

ಮೇಲಿಂದ ಕೆಳಕ್ಕೆ:
1.ಹಸ್ತಕ್ಷೇಪ 2.ರಿಪು
3.ಕರಿ 4.ತೆಪರ
6.ಧಾಳಿಸು 8.ವಕ್ರಗತಿ
10.ತಿರೋಧಾನ 11.ಪ್ರಪಾತ
13.ಮಸಲತ್ತು 14.ಕಾಯಕ
15.ಜಾಣ 16.ಕದ

ಸುಡೊಕು 6003

7	9			3			6	
4					7		2	9
	8	3		9		1		7
		4			9		8	
	2			5				3
8			2				4	
	4			2		8		
			9					5
2		8		7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6002 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಸಂವಿಧಾನ ಬದಲಾವಣೆ ಕುರಿತ ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ಹೇಳಿಕೆಗೆ ಖರ್ಗೆ ಆಕ್ರೋಶ

ಕಾಂಗ್ರೆಸ್ ಪ್ರತಿಭಟನೆ ಇಂದಿನಿಂದ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಸಂವಿಧಾನ ಬದಲಾವಣೆ ಮಾಡಲು ಬಿಜೆಪಿಗೆ 400ಕ್ಕೂ ಹೆಚ್ಚು ಸ್ಥಾನಗಳ ಅಗತ್ಯವಿದೆ ಎಂಬುದಾಗಿ ಬಿಜೆಪಿ ಸಂಸದ ಅನಂತ ಕುಮಾರ್ ಹೆಗಡೆ ನೀಡಿದ ಹೇಳಿಕೆ ವಿಚಾರವಾಗಿ ಬಿಜೆಪಿ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಸೋಮವಾರ ನಿರ್ಧರಿಸಿದೆ.

ದೆಹಲಿಯ ಜಂತರ್‌ಮಂತರ್‌ನಲ್ಲಿ ಮಂಗಳವಾರ ಮೊದಲ ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ. ಈ ಮೂಲಕ ಈ ಸರ್ಕಾರವು ದಲಿತರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ವಿರೋಧಿ ಎಂದು ಬಿಂಬಿಸಲು ಕಾಂಗ್ರೆಸ್ ಮುಂದಾಗಿದೆ.

ಪಕ್ಷದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಸಂವಿಧಾನ ಬದಲಾವಣೆಯ ಏಕೈಕ ಉದ್ದೇಶಕ್ಕಾಗಿ ಬಿಜೆಪಿಯು ಭಾರಿ ಬಹುಮತದ ಜನಾದೇಶ ಅಪೇಕ್ಷಿಸುತ್ತಿದೆ. ಸಂವಿಧಾನವನ್ನು ಬಿಜೆಪಿಯು ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಂಡಿಲ್ಲ ಎಂಬುದನ್ನು ವಿಷಾದದಿಂದಲೇ ಹೇಳಬೇಕಾಗಿದೆ' ಎಂದರು.

'ಸಂವಿಧಾನ ಬದಲಾವಣೆ ಕುರಿತು ಯಾವುದೊ ಒಂದು ಸಂಘಟನೆ ಹೇಳಿಲ್ಲ. ಬದಲಾಗಿ ಬಿಜೆಪಿಯ ಸಂಸದರೊಬ್ಬರು ಹೇಳಿದ್ದಾರೆ. ಇದು ಒಳ್ಳೆಯ ಮನಃಸ್ಥಿತಿಯಲ್ಲ. ನೀವು ಸಂವಿಧಾನ ಬದಲಾವಣೆ ಮಾಡಬೇಕು ಎಂದುಕೊಂಡರೆ, ದೇಶದಲ್ಲಿ ವಿಪ್ಲವ ನಿರ್ಮಾಣವಾಗಲಿದೆ' ಎಂದು ಎಚ್ಚರಿಕೆ ನೀಡಿದರು.

'ನಮ್ಮ ಪಕ್ಷದ ಯಾರೊಬ್ಬರಾದರೂ ಇಂಥ ಹೇಳಿಕೆಯನ್ನು ನೀಡಿದ್ದರೆ, ಅಂಥವರನ್ನು ನಾನು ಪಕ್ಷದಿಂದ ತೆಗೆದು ಹಾಕುತ್ತಿದ್ದೆ. ಅವರಿಗೆ ಧೈರ್ಯವಿದ್ದರೆ ಸಂವಿಧಾನ ವಿರೋಧಿ ಹೇಳಿಕೆ ನೀಡಿದ ವ್ಯಕ್ತಿಗಳನ್ನು ಪಕ್ಷದಿಂದ ತೆಗೆದುಹಾಕಬೇಕು ಮತ್ತು ಅಂಥ ವ್ಯಕ್ತಿಗೆ ಲೋಕಸಭಾ ಟಿಕೆಟ್ ನೀಡಬಾರದು' ಎಂದು ಆಗ್ರಹಿಸಿದರು.

ಪಿ.ಚಿದಂಬರಂ ಅವರು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿ, 'ಸಂವಿಧಾನ ತಿದ್ದುಪಡಿ ಮಾಡಬೇಕೆಂಬ ಬಿಜೆಪಿಯ ಉದ್ದೇಶವು ಎಂದಿಗೂ ರಹಸ್ಯವಾಗಿರಲಿಲ್ಲ. ಖಾಸಗಿ ಸಮಾಲೋಚನೆ ವೇಳೆ ಭಾರತವು ಹಿಂದೂ ರಾಷ್ಟ್ರವಾಗಬೇಕು ಮತ್ತು ಹಿಂದಿ ಮಾತ್ರ ಅಧಿಕೃತ ಭಾಷೆಯಾಗಬೇಕು. ಅಲ್ಲದೆ, ಕೇಂದ್ರ ಸರ್ಕಾರವು ಬಲಿಷ್ಠವಾಗಿದ್ದು, ಎಲ್ಲ ರಾಜ್ಯ ಸರ್ಕಾರಗಳಿಗಿಂತ ಮೇಲುಗೈ ಸಾಧಿಸಬೇಕು ಎಂಬುದಾಗಿ ಹತ್ತಾರು ಬಿಜೆಪಿ ಮುಖಂಡರು ಹೇಳಿದ್ದಾರೆ' ಎಂದು ತಿಳಿಸಿದರು.

'ಬಿಜೆಪಿಗೆ ಸಂವಿಧಾನವೇ ಇರಿಸುಮುರಿಸು'

ನವದೆಹಲಿ: ಸರ್ವಾಧಿಕಾರದ ಯೋಜನೆಗಳನ್ನು ಹೊಂದಿರುವ ಬಿಜೆಪಿಗೆ ಸಂವಿಧಾನವು ದೊಡ್ಡ ತೊಡಕು ಆಗಿದ್ದು, ಭಾರತವನ್ನು ಸರ್ವಾಧಿಕಾರಿ ರಾಷ್ಟ್ರವಾಗಿ ಬದಲಾವಣೆ ಮಾಡಲು ಬಿಜೆಪಿಯು 400ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ಗುರಿಯನ್ನು ಹಾಕಿಕೊಂಡಿದೆ ಎಂದು ಕಾಂಗ್ರೆಸ್ ಸೋಮವಾರ ಆರೋಪಿಸಿದೆ.

ಈ ಕುರಿತು 'ಎಕ್ಸ್' ವೇದಿಕೆಯಲ್ಲಿ ಪ್ರತಿಕ್ರಿಯಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂಬ ಅನಂತಕುಮಾರ್ ಹೆಗಡೆ ಅವರ ಹೇಳಿಕೆಯು ಅವರ ಮನದ ಮಾತಾಗಿದೆ. ಅವರು ತಮ್ಮ ಹೃದಯದಲ್ಲಿ ಎಂದಿಗೂ ಸಂವಿಧಾನದ ಪರ ನಿಲುವು ಹೊಂದಿಲ್ಲ ಅಥವಾ ಸಂವಿಧಾನದ ಮೌಲ್ಯಗಳನ್ನು ಎಂದಿಗೂ ಅವರು ಒಪ್ಪಿಕೊಂಡಿಲ್ಲ' ಎಂದು ಆರೋಪಿಸಿದರು.

'ದೇಶವನ್ನು ಅಧಿಕೃತವಾಗಿ ನಿರಂಕುಶ ಪ್ರಭುತ್ವಕ್ಕೆ ಒಳಪಡಿಸಲು 400ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲುವ ಗುರಿಯನ್ನು ಅವರು ಹಾಕಿಕೊಂಡಿದ್ದಾರೆ. ಆದರೆ, ಪ್ರಜಾಪ್ರಭುತ್ವ ಎಂಬುದು ಭಾರತೀಯ ಸಮಾಜದ ರಕ್ತದಲ್ಲಿ ಹಾಸು ಹೊಕ್ಕಾಗಿದ್ದು, ಡಾ. ಅಂಬೇಡ್ಕರ್ ಅವರ ಸಂವಿಧಾನವನ್ನು ನಾಶಪಡಿಸುವ ಸಂವಿಧಾನ ವಿರೋಧಿ ಪಡೆಗಳನ್ನು ತಿರಸ್ಕರಿಸಲಿದೆ' ಎಂದು ಹೇಳಿದರು.

'ಮೀಸಲಾತಿಯನ್ನು ರದ್ದುಗೊಳಿಸಬೇಕು ಎಂದು ಬಿಜೆಪಿಯ ಮಾತೃ ಸಂಸ್ಥೆ ಬಯಸಿತ್ತು. ಒಂದೆಡೆ ಸಂಯುಕ್ತ ವ್ಯವಸ್ಥೆಯ ಸಿದ್ಧಾಂತಗಳು, ಸಮತೋಲನಗಳನ್ನು ಉಪೇಕ್ಷಿಸಲಾಗುತ್ತಿದ್ದರೆ, ಚುನಾವಣಾ ಆಯೋಗ ಅಥವಾ ನ್ಯಾಯಾಂಗದ ರೀತಿಯ ಸಾಂವಿಧಾನಿಕ ಸಂಸ್ಥೆಗಳು ಕೂಡ ರಾಜೀ ಆಗಿರುವುದನ್ನು ನಾವು ಕಾಣುತ್ತಿದ್ದೇವೆ' ಎಂದರು.

'ಪಕ್ಷದಿಂದ ಹೊರಹಾಕಲಿ'

ಬೆಂಗಳೂರು: 'ಸಂವಿಧಾನದ ಬಗ್ಗೆ ಕೀಳುಮಟ್ಟದ ಹೇಳಿಕೆಗಳನ್ನು ನೀಡುತ್ತಿರುವ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಬಿಜೆಪಿ ಕ್ರಮ ಜರುಗಿಸಬೇಕು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಅಂಬೇಡ್ಕರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಂವಿಧಾನ ಇಲ್ಲದೇ ಹೋಗಿದ್ದರೆ ನಾನು ಪ್ರಧಾನಿ ಆಗುತ್ತಿರಲಿಲ್ಲ ಎಂದು ಹೇಳಿದ್ದಾರೆ. ಆದರೆ, ಅವರ ಪಕ್ಷದ ಸಂಸದರೊಬ್ಬರು ಪದೇ ಪದೇ ಸಂವಿಧಾನ ಬದಲಾವಣೆಯ ಮಾತುಗಳನ್ನು ಆಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ' ಎಂದರು.

ಹೆಗಡೆ ವಿರುದ್ಧ ಕ್ರಮಕ್ಕೈಗೊಳ್ಳುವ ದಮ್ಮು, ತಾಕತ್ತು ಬಿಜೆಪಿಗಿಲ್ಲ– ಸಿಎಂ

ಬೆಂಗಳೂರು: 'ಸಂವಿಧಾನದ ವಿರುದ್ಧ ಹೇಳಿಕೆ ನೀಡುತ್ತಿರುವ ಸಂಸದ ಅನಂತಕುಮಾರ ಹೆಗಡೆಗೆ ಆರೆಸ್ಸೆಸ್ ಬೆಂಬಲವಿದೆ. ಹೀಗಾಗಿ, ಹೆಗಡೆ ವಿರುದ್ಧ ಕ್ರಮಕ್ಕೈಗೊಳ್ಳುವ ದಮ್ಮು, ತಾಕತ್ತು ಬಿಜೆಪಿಗೆ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

> **ಅನಂತಕುಮಾರ ಹೆಗಡೆ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸಬೇಕು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ನರೇಂದ್ರ ಮೋದಿಯವರೂ ಸೇರಿದಂತೆ ಬಿಜೆಪಿ ನಾಯಕರ ಮುಂದೆ ಈಗ ಇರುವುದು ಎರಡೇ ಆಯ್ಕೆ. ಒಂದೊ ಹೆಗಡೆಯನ್ನು ಪಕ್ಷದಿಂದ ವಜಾಗೊಳಿಸಬೇಕು ಅಥವಾ ಅವರ ಹೇಳಿಕೆಗೆ ತಮ್ಮ ಸಹಮತವಿದೆ ಎಂದು ಘೋಷಿಸಬೇಕು. ಇದೇ ವಿಷಯದ ಮೇಲೆ ಈ ಬಾರಿಯ ಲೋಕಸಭಾ ಚುನಾವಣೆ ನಡೆಯಲಿ' ಎಂದು ಮುಖ್ಯಮಂತ್ರಿ ಸವಾಲು ಹಾಕಿದ್ದಾರೆ.

'ದಲಿತರನ್ನು ನಾಯಿಗಳು ಎಂದೂ ಹೆಗಡೆ ದೂಷಿಸಿದ್ದಾರೆ. ಮನುಸ್ಮೃತಿಯನ್ನು ಬಹಿರಂಗವಾಗಿ ಸಮರ್ಥಿಸಿದ್ದಾರೆ. ವಿರೋಧ ಪಕ್ಷದ ನಾಯಕರನ್ನು ತುಚ್ಛೀಕರಿಸಿ ಮಾತನಾಡಿದ್ದಾರೆ. ಆಗಲೂ ಬಿಜೆಪಿ ಹೆಗಡೆ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ. ಯಾಕೆಂದರೆ, ಹೆಗಡೆ ಮಾತುಗಳು ಬಿಜೆಪಿ ಮತ್ತು ಆರೆಸ್ಸೆಸ್‌ನ ಮನದ ಮಾತುಗಳೂ ಆಗಿತ್ತು' ಎಂದಿದ್ದಾರೆ.

'ಆರೆಸ್ಸೆಸ್ ಬಹಿರಂಗವಾಗಿ ಸಂವಿಧಾನಕ್ಕೆ ಬದ್ಧತೆ ಸಾರಿದ್ದರೂ, ಅಂತರಂಗದಲ್ಲಿ ಎಂದೂ ಸಂವಿಧಾನವನ್ನು, ಅದರ ರಚನಕಾರರಾದ ಡಾ. ಅಂಬೇಡ್ಕರ್ ಅವರನ್ನು ಒಪ್ಪಿಕೊಂಡಿಲ್ಲ. ಹೆಗಡೆ ಹೇಳಿರುವುದನ್ನೇ ಕಾಲಕಾಲಕ್ಕೆ ಆರೆಸ್ಸೆಸ್ ನಾಯಕರು ಹೇಳಿದ್ದರು. ಹೆಗಡೆ ಒಂದು ಮುಖವಾಡ ಅಷ್ಟೆ. ' ಎಂದರು.

> **ಅನಂತಕುಮಾರ ಹೆಗಡೆ ಅವರನ್ನು ಬಿಜೆಪಿ ತಕ್ಷಣ ಉಚ್ಚಾಟಿಸಲಿ. ಸಂವಿಧಾನ ಬದಲಿಸುವ ರಹಸ್ಯ ಕಾರ್ಯಸೂಚಿ ಬಿಜೆಪಿ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ**
> **ಮಂಕಾಳ ವೈದ್ಯ,** ಮೀನುಗಾರಿಕೆ ಸಚಿವ

> **ಅನಂತಕುಮಾರ ಹೆಗಡೆ ಅವರ ಮಿದುಳಿಗೆ, ನಾಲಿಗೆಗೆ ಸಂಪರ್ಕ ತಪ್ಪಿದೆ. ಬಿಜೆಪಿ ಯವರು ಆತನನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕು**
> **ಶಿವರಾಜ ತಂಗಡಗಿ,** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

'ಆನೆ ನಡೆದಾಗ ನಾಯಿ ಬೊಗಳುವುದು ಸಹಜ'

ಪ್ರಜಾವಾಣಿ ವಾರ್ತೆ

ಅನಂತಕುಮಾರ ಹೆಗಡೆ

ಕಾರವಾರ: 'ಆನೆ ನಡೆದು ಹೋಗುವಾಗ ನಾಯಿಗಳು ಬೊಗಳುವುದು ಸಹಜ. ಅವು ಬೊಗಳಿದರೆ ಮಾತ್ರ ಆನೆಗೆ ಗತ್ತು ಬರುತ್ತದೆ' ಎಂದು ಸಂಸದ ಅನಂತಕುಮಾರ ಹೆಗಡೆ ತಿಳಿಸಿದರು.

'ಸಂವಿಧಾನ ತಿದ್ದುಪಡಿಗೆ ಬಿಜೆಪಿ 400 ಸ್ಥಾನ ಗೆಲ್ಲಬೇಕು' ಎಂದು ಎರಡು ದಿನಗಳ ಹಿಂದೆ ತಾವೇ ನೀಡಿದ್ದ ಹೇಳಿಕೆ ವಿವಾದದ ಸ್ವರೂಪ ಪಡೆದ ಹಿನ್ನೆಲೆಯಲ್ಲಿ ಅವರು ಸೋಮವಾರ ಅಂಕೋಲಾ ತಾಲ್ಲೂಕಿನ ಹಿಲ್ಲೂರಿನಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಪ್ರತಿಕ್ರಿಯಿಸಿದರು.

'ವಿವಾದ ಸೃಷ್ಟಿಯಾದರೂ ದೃಢವಾಗಿ ನಿಲ್ಲುವುದು ನೈಜ ನಾಯಕತ್ವ. ಕಾರ್ಯಕರ್ತರು ವಿಚಲಿತರಾದರೆ, ನಾಯಕತ್ವ ಅಲುಗಾಡುತ್ತದೆ. ಪತ್ರಿಕೆ, ಜಾಲತಾಣಗಳಲ್ಲಿ ನಡೆದಿರುವ ಚರ್ಚೆಯನ್ನು ಕಡೆಗಣಿಸಿ, ಬಿಜೆಪಿಯನ್ನು ಗೆಲ್ಲಿಸುವುದಕ್ಕೆ ಕಾರ್ಯಕರ್ತರು ಹೆಚ್ಚಿನ ಆದ್ಯತೆ ಕೊಡಬೇಕು' ಎಂದರು.

'ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಹಲವು ಆಕಾಂಕ್ಷಿಗಳು ಇದ್ದಾರೆ. ಯಾರಿಗೇ ಅವಕಾಶ ಸಿಗಲಿ. ಒಟ್ಟಾರೆ ಬಿಜೆಪಿಯನ್ನು ಗೆಲ್ಲಿಸಬೇಕು' ಎಂದರು. ಗೋಕರ್ಣ ಬಿಜೆಪಿ ಮಹಾಶಕ್ತಿ ಕೇಂದ್ರದ ಸಭೆಯಲ್ಲಿ ಮಾತನಾಡಿ, 'ಆರ್ಟಿಕಲ್ 370 ರದ್ದು, ಅಯೋಧ್ಯೆ ರಾಮಮಂದಿರ ನಿರ್ಮಾಣವಷ್ಟೆ ಹಿಂದೂ ಸಮಾಜದ ಗುರಿಯಲ್ಲ. ಹಿಂದೂ ರಾಷ್ಟ್ರ-ನಿರ್ಮಾಣ ಅಂತಿಮ ಗುರಿ' ಎಂದರು.

'ಕಾಂಗ್ರೆಸ್ ಹರಡುತ್ತಿರುವ ಸುಳ್ಳು ಸುದ್ದಿ'

ಸಿ.ಟಿ.ರವಿ

ಚಿಕ್ಕಮಗಳೂರು: 'ಸಂವಿಧಾನ ತಿದ್ದುಪಡಿ ಬಗ್ಗೆ ಅನಂತಕುಮಾರ್ ಹೆಗಡೆ ಮಾತನಾಡಿದ್ದಾರೆಯೇ ಹೊರತು, ಸಂವಿಧಾನ ಬದಲಾವಣೆ ಬಗ್ಗೆ ಮಾತನಾಡಿಲ್ಲ. ತಿದ್ದುಪಡಿ ತರಲು ಸಂವಿಧಾನದಲ್ಲೇ ಅವಕಾಶ ಇದೆ. ಕಾಂಗ್ರೆಸ್ 95ಕ್ಕೂ ಹೆಚ್ಚು ಬಾರಿ ತಿದ್ದುಪಡಿ ಮಾಡಿದೆ ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ಹೇಳಿದರು. 'ಅಂಬೇಡ್ಕರ್ ಆಶಯದಂತೆ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲು ಬಿಜೆಪಿ 400 ಸೀಟು ಗೆಲ್ಲಬೇಕು' ಎಂದಷ್ಟೇ ಅವರು ಹೇಳಿದ್ದಾರೆ. ಕಾಂಗ್ರೆಸ್ ಇದನ್ನು ತಿರುಚುತ್ತಿದೆ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಸಂವಿಧಾನಕ್ಕೆ ಹೆಚ್ಚು ಗೌರವ ತಂದುಕೊಡುವ ಕೆಲಸ ಆಗಿದೆ. ಸಂವಿಧಾನ ಗೌರವ ದಿನ ಆಚರಿಸಲಾಗುತ್ತಿದೆ' ಎಂದರು. ಕಳೆದ ವಿಧಾನಸಭೆ ಚುನಾವಣೆ ವೇಳೆ ಲಿಂಗಾಯತ ಸಮುದಾಯದ ಬಗ್ಗೆ ಬಿ.ಎಲ್. ಸಂತೋಷ್ ಅವರ ಹೇಳಿಕೆ ತಿರುಚಿ ಸುಳ್ಳು ಸುದ್ದಿ ಹರಡಿದ್ದರು. ಲೋಕಸಭಾ ಚುನಾವಣೆ ಹತ್ತಿರ ಆಗುತ್ತಿರುವುದರಿಂದ ಮತ್ತೊಮ್ಮೆ ಫೇಕ್ ನ್ಯೂಸ್ ಫ್ಯಾಕ್ಟರಿಗೆ ಚಾಲನೆ ದೊರೆತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೃಪಾಪೋಷಿತ ನಾಟಕ ಮಂಡಳಿ ಈ ಕೆಲಸ ಮಾಡುತ್ತಿದೆ ಎಂದರು.

ಬಿಜೆಪಿಗೆ ಸಂಬಂಧವಿಲ್ಲ : ಅಶೋಕ

ಬೆಂಗಳೂರು: 'ಭಾರತದ ಸಂವಿಧಾನದ ಬಗ್ಗೆ ಸಂಸದ ಅನಂತಕುಮಾರ್ ಹೆಗಡೆ ಅವರು ನೀಡಿರುವ ಹೇಳಿಕೆಗೂ ಬಿಜೆಪಿಯ ಅಧಿಕೃತ ನಿಲುವಿಗೂ ಯಾವುದೇ ಸಂಬಂಧವಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಬಿಜೆಪಿಗೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಂವಿಧಾನ ಎಂದರೆ ಕೇವಲ ಒಂದು ಗ್ರಂಥವಲ್ಲ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ, ಬಲಿದಾನಗೈದ ಅಸಂಖ್ಯಾತ ಮಹನೀಯರ ತ್ಯಾಗದ ದ್ಯೋತಕ, ಆಶಯಗಳ ಪ್ರತೀಕ' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. 'ಸಂವಿಧಾನಕ್ಕೆ ಅಪಚಾರ ಮಾಡುವ ಅಥವಾ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಕೆಲಸವನ್ನು ಬಿಜೆಪಿ ಈ ಹಿಂದೆಯೂ ಮಾಡಿಲ್ಲ. ಮುಂದೆಂದಿಗೂ ಮಾಡುವುದೂ ಇಲ್ಲ. ಅಷ್ಟೇ ಅಲ್ಲ. ಅಂತಹ ಮಾತು ಆಡುವುದನ್ನು ಸಹಿಸುವುದೂ ಇಲ್ಲ' ಎಂದು ಹೇಳಿದ್ದಾರೆ.

> **ಅನಂತಕುಮಾರ ಹೆಗಡೆ ಜಾತ್ಯತೀತ ಪದವನ್ನು ಸಂವಿಧಾನದಿಂದ ತೆಗೆಯಬೇಕು ಎಂದು ಹೇಳಿಕೆ ನೀಡಿದ್ದು ಅನವಶ್ಯಕ. ಅವರು ಕ್ಷಮೆಯಾಚಿಸಬೇಕು**
> **ಅರವಿಂದ ಬೆಲ್ಲದ,** ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

'ತಿನಿಸುಗಳಿಗೆ ಕೃತಕ ಬಣ್ಣ ನಿಷೇಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಬಿಮಂಚೂರಿ, ಪಾನಿಪುರಿ, ಕಬಾಬ್ ಸೇರಿ ಎಲ್ಲ ರೀತಿಯ ಖಾದ್ಯಗಳಲ್ಲಿ ಕೃತಕ ಬಣ್ಣ ಬಳಸುವುದನ್ನು ನಿಷೇಧಿಸಿ ಸುತ್ತೋಲೆ ಹೊರಡಿಸಲಾಗುವುದು. ಬೀದಿ ಬದಿಯ ತಳ್ಳು ಗಾಡಿ ವ್ಯಾಪಾರಿಗಳಿಂದ ಹಿಡಿದು ಪಂಚತಾರಾ ಹೋಟೆಲ್‌ವರೆಗೂ ಈ ಆದೇಶ ಅನ್ವಯವಾಗುತ್ತದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದರು.

ಆದೇಶ ಕಟ್ಟುನಿಟ್ಟಾಗಿ ಇದನ್ನು ಪಾಲನೆ ಮಾಡಬೇಕು. ಒಂದು ವೇಳೆ ಕಾನೂನು ಉಲ್ಲಂಘಿಸಿ ಆಹಾರ ಪದಾರ್ಥಗಳನ್ನು ತಯಾರಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತದೆ. ದಂಡ ಮತ್ತು ಜೈಲು ವಾಸಕ್ಕೂ ಗುರಿಯಾಗಬೇಕಾಗುತ್ತದೆ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃತಕ ಬಣ್ಣ ಬಳಸಿ ತಯಾರಿಸಿದ ಬೊಂಬಾಯಿ ಮಿಠಾಯಿ (ಕಾಟನ್ ಕ್ಯಾಂಡಿ)ಗಳನ್ನು ತಕ್ಷಣದಿಂದಲೇ ನಿಷೇಧಿಸಲಾಗಿದೆ. ಆದರೆ, ಬಣ್ಣ ರಹಿತ ಬೊಂಬಾಯಿ ಮಿಠಾಯಿ ತಯಾರಿಕೆ ಮತ್ತು ಮಾರಾಟಕ್ಕೆ ನಿರ್ಬಂಧ ಇರುವುದಿಲ್ಲ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗೋಬಿ ಮಂಚೂರಿ ಸೇರಿ ಯಾವುದೇ ಆಹಾರ ಪದಾರ್ಥಗಳನ್ನು ನಿಷೇಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಇವುಗಳಿಗೆ ಬಳಸುವ ಕೃತಕ ಬಣ್ಣ ಮತ್ತು ರುಚಿ ವರ್ಧಿಸಲು ಬಳಸುವ ರಾಸಾಯನಿಕ ಬಳಸುವುದನ್ನು ನಿರ್ಬಂಧಿಸಲಾಗುವುದು. ಕೃತಕ ಬಣ್ಣ ಮತ್ತು ರಾಸಾಯನಿಕ ಬಳಸಿ ಮಾಡಿದ ಆಹಾರ ಪದಾರ್ಥಗಳಿಂದ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಮುಖ್ಯವಾಗಿ ಸಾರ್ವಜನಿಕರು ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಬೊಂಬಾಯಿ ಮಿಠಾಯಿಯನ್ನು ಮಕ್ಕಳು ಹೆಚ್ಚು ಪ್ರಮಾಣದಲ್ಲಿ ತಿನ್ನುತ್ತಾರೆ ಎಂದರು.

ಆರೋಗ್ಯ ಇಲಾಖೆಯ ಆಹಾರ ಸುರಕ್ಷತಾ ವಿಭಾಗವು ನಿಯಮಿತವಾಗಿ ಎಲ್ಲ ರೀತಿಯ ಹೋಟೆಲ್‌ಗಳು, ಬೀದಿ ಬದಿ ತಳ್ಳುಗಾಡಿಗಳಲ್ಲಿನ ಆಹಾರ ಪದಾರ್ಥಗಳನ್ನು ಪರೀಕ್ಷೆ ನಡೆಸುತ್ತದೆ. ಈ ಕಾರ್ಯಕ್ಕಾಗಿ ಹೆಚ್ಚಿನ ಸಿಬ್ಬಂದಿ ನೇಮಿಸಿಕೊಳ್ಳಲಾಗುವುದು. ಇದಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ದಿನೇಶ್ ತಿಳಿಸಿದರು.

'ರೋಡಮೈನ್–ಬಿ ಅಪಾಯಕಾರಿ'

ಬೊಂಬಾಯಿ ಮಿಠಾಯಿಯಲ್ಲಿ ಬಳಸುವ ರೋಡಮೈನ್–ಬಿ ಅತ್ಯಂತ ಅಪಾಯಕಾರಿ. ದಟ್ಟ ಗುಲಾಬಿ ಅಥವಾ ಇತರ ಬಣ್ಣ ನೀಡುವುದಕ್ಕಾಗಿ ಇದನ್ನು ಬಳಸುತ್ತಾರೆ. ಇದು ಕ್ಯಾನ್ಸರ್‌ಗೆ ಕಾರಣವಾಗುವುದರ ಜತೆಗೆ ಮಿದುಳು, ಮೂತ್ರಪಿಂಡ, ಹೃದಯಕ್ಕೂ ಹಾನಿ ಮಾಡಬಲ್ಲದು ಎಂದು ಸಚಿವ ದಿನೇಶ್ ಗುಂಡೂರಾವ್ ವಿವರಿಸಿದರು.

ಗೋಬಿ ಮಂಚೂರಿ ತಯಾರಿಸುವಾಗ ಕೃತಕ ಬಣ್ಣಕ್ಕಾಗಿ ಬಳಸುವ ಟಾರ್ ಟ್ರಾಸೈನ್, ಸನ್‌ಸೆಟ್ ಯೆಲ್ಲೊ ಮತ್ತು ಕಾರ್ಮೊಸಿನ್ ಕೂಡ ಅಪಾಯಕಾರಿ ಎಂದು ಹೇಳಿದರು.

ಪ್ಯಾಕ್ ಮಾಡಿದ ಆಹಾರಗಳಿಗೆ ರೋಡಮೈನ್ ಅನ್ನು ಸೀಮಿತ ಪ್ರಮಾಣದಲ್ಲಿ ಬಳಕೆ ಮಾಡಲು ಅವಕಾಶ ಇದೆ. ಆದರೆ, ಮನೆ, ಹೋಟೆಲ್ ಮತ್ತು ಇತರ ಕಡೆಗಳಲ್ಲಿ ಬಳಸುವುದಕ್ಕೆ ಅನುಮತಿ ಇಲ್ಲ ಎಂದರು.

ರಥೋತ್ಸವ

ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಮಹದೇಶ್ವರ ಬೆಟ್ಟದ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ ಅಂಗವಾಗಿ ಸೋಮವಾರ ಮಹದೇಶ್ವರ ಸ್ವಾಮಿಯ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು
ಪ್ರಜಾವಾಣಿ ಚಿತ್ರ/ಜಿ.ಪ್ರದೀಪ್ ಕುಮಾರ್

ಗರ್ಭಿಣಿ ಕೊಲೆ: 7 ಮಂದಿ ಬಂಧನ

ಹಿರೇಬಾಗೇವಾಡಿ (ಬೆಳಗಾವಿ ಜಿಲ್ಲೆ): 17 ವರ್ಷದ ಗರ್ಭಿಣಿಯ ಕೊಲೆಗೆ ಸಂಬಂಧಿಸಿದಂತೆ ಏಳು ಆರೋಪಿಗಳನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಆರೋಪಿಗಳ ಮೇಲೆ ಪೋಕ್ಸೊ, ಬಾಲ್ಯ ವಿವಾಹ, ಅತ್ಯಾಚಾರ, ಕೊಲೆ ಪ್ರಕರಣ ದಾಖಲಿಸಲಾಗಿದೆ.

ಬಾಲಕಿಯನ್ನು ಮದುವೆಯಾದ ಸಾಹಿಲ್ ಕುತುಬುದ್ದಿನ್ ಬಾಗವಾನ, ಇವರ ಸಂಬಂಧಿ ಫರೀದಾ ಕುತುಬುದ್ದಿನ್ ಬಾಗವಾನ, ಕುತುಬುದ್ದಿನ್ ಬಾಗವಾನ, ಸಲ್ಮಾನ್ ಕುತುಬುದ್ದಿನ್ ಬಾಗವಾನ, ಅಬ್ಬಾಸ್ ಅಬ್ದುಲ್ ಹಮೀದ್ ಢೋಣಿ, ಸುಮಯ್ಯಾ ಅಬ್ಬಾಸ್ ಡೋಣಿ ಹಾಗೂ ಮದುವೆ ಮಾಡಿದ ಮೌಲ್ವಿಯನ್ನು ಬಂಧಿಸಲಾಗಿದೆ.

'ಬಾಲಕಿ ನಾಲ್ಕು ತಿಂಗಳ ಗರ್ಭಿಣಿ ಆಗಿದ್ದಳು. ಆಕೆಗೆ ಅಡುಗೆ ಬರುವುದಿಲ್ಲ ಎಂದು ಆರೋಪಿಗಳು ಕಿರುಕುಳ ನೀಡುತ್ತಿದ್ದರು. ಮಾ. 3ರಂದು ಹಗ್ಗದಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದಾರೆ' ಎಂದು ದೂರು ದಾಖಲಾಗಿತ್ತು

ಎಂಎಸ್‌ಪಿ: 16 ಜಿಲ್ಲೆಗಳಲ್ಲಿ ಖರೀದಿ ಆರಂಭ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ (ಕೆಎಫ್‌ಸಿಎಸ್‌ಸಿ) ರಾಜ್ಯದ 16 ಜಿಲ್ಲೆಗಳಲ್ಲಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ರಾಗಿ, ಜೋಳ ಮತ್ತು ಭತ್ತ ಖರೀದಿಗೆ ಸೋಮವಾರ ದಿಢೀರ್ ಚಾಲನೆ ನೀಡಿದೆ.

ಎಂಎಸ್‌ಪಿ ಯೋಜನೆ ಅಡಿಯಲ್ಲಿ ಆಹಾರ ಧಾನ್ಯ ಖರೀದಿ ಗಡುವು ಮುಗಿಯಲು 20 ದಿನಗಳಷ್ಟೇ ಬಾಕಿ ಉಳಿದಿದ್ದರೂ, ರಾಜ್ಯದಲ್ಲಿ ಖರೀದಿ ಪ್ರಕ್ರಿಯೆ ಆರಂಭವಾಗದ ಕುರಿತು 'ಪ್ರಜಾವಾಣಿ'ಯ ಸೋಮವಾರದ ಸಂಚಿಕೆಯಲ್ಲಿ 'ಖರೀದಿ ವಿಳಂಬ: ರೈತರು ಕಂಗಾಲು' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.

ಸೋಮವಾರ ಬೆಳಿಗ್ಗೆಯೇ ನಿಗಮದ ಜಿಲ್ಲಾ ವ್ಯವಸ್ಥಾಪಕರು ಮತ್ತು ಖರೀದಿ ಕೇಂದ್ರಗಳ ಅಧಿಕಾರಿಗಳ ಜತೆ ತುರ್ತು ವಿಡಿಯೊ ಕಾನ್ಫರೆನ್ಸ್ ನಡೆಸಿದ ಕೆಎಫ್‌ಸಿಎಸ್‌ಸಿ ಅಧಿಕಾರಿಗಳು, ಸಂಜೆಯೊಳಗೆ ತುರ್ತಾಗಿ ಆಹಾರ ಧಾನ್ಯ ಖರೀದಿಗೆ ಚಾಲನೆ ನೀಡುವಂತೆ ನಿರ್ದೇಶನ ನೀಡಿದರು. ಮಧ್ಯಾಹ್ನದ ವೇಳೆಗೆ ಖರೀದಿ ಕೇಂದ್ರಗಳನ್ನು ತಲುಪಿದ ಅಧಿಕಾರಿಗಳು, ಖರೀದಿ ಪ್ರಕ್ರಿಯೆಯನ್ನು ಆರಂಭಿಸಿದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಆಗಲಕೋಟೆ, ಕೋಲಾರ, ರಾಮನಗರ, ಕೊಪ್ಪಳ, ವಿಜಯಪುರ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ದಾವಣಗೆರೆ, ತುಮಕೂರು, ಚಿತ್ರದುರ್ಗ, ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಂಎಸ್‌ಪಿ ಯೋಜನೆಯಡಿ ಖರೀದಿ ಆರಂಭವಾಗಿದೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಕೆಎಫ್‌ಸಿಎಸ್‌ಸಿ ಹಿರಿಯ ಅಧಿಕಾರಿಗಳು, 'ನಮ್ಮ ನಿಗಮಕ್ಕೆ ಹಂಚಿಕೆಯಾಗಿರುವ 16 ಜಿಲ್ಲೆಗಳಲ್ಲಿ ರಾಗಿ, ಜೋಳ ಮತ್ತು ಭತ್ತದ ಖರೀದಿ ಸೋಮವಾರದಿಂದ ಆರಂಭವಾಗಿದೆ. ಮಂಗಳವಾರದಿಂದ ಪೂರ್ಣ ಪ್ರಮಾಣದಲ್ಲಿ ಖರೀದಿ ನಡೆಯಲಿದೆ' ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ ಹಂಚಿಕೆಯಾಗಿರುವ ಒಂಬತ್ತು ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಹಂಚಿಕೆಯಾಗಿರುವ ಆರು ಜಿಲ್ಲೆಗಳಲ್ಲಿ ಮಂಗಳವಾರ ಅಥವಾ ಬುಧವಾರದಿಂದ ಆಹಾರ ಧಾನ್ಯಗಳ ಖರೀದಿ ಆರಂಭವಾಗಲಿದೆ ಎಂದು ಎರಡೂ ಸಂಸ್ಥೆಗಳ ಅಧಿಕಾರಿಗಳು ತಿಳಿಸಿದ್ದಾರೆ.

'ಮಲಯಾಳಂ ಕಥೆಗಳು' ಕೃತಿಗೆ ಅಕಾಡೆಮಿಯ 'ಭಾಷಾಂತರ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಗಂಗಾಧರನ್

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯು ನೀಡುವ ಭಾಷಾಂತರ ಪ್ರಶಸ್ತಿಗೆ ಕನ್ನಡ ವಿಭಾಗದಲ್ಲಿ ಲೇಖಕ ಕೆ.ಕೆ. ಗಂಗಾಧರನ್ ಅವರ 'ಮಲಯಾಳಂ ಕಥೆಗಳು' ಕೃತಿ ಆಯ್ಕೆಯಾಗಿದೆ.

ಮಲಯಾಳಂ ಭಾಷೆಯ ವಿವಿಧ ಲೇಖಕರ ಸಣ್ಣ ಕತೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಈ ಕೃತಿ ರಚಿಸಿದ್ದಾರೆ. ಇದೂ ಸೇರಿದಂತೆ ಅಕಾಡೆಮಿಯು ವಿವಿಧ ಭಾಷೆಗಳ 24 ಕೃತಿಗಳಿಗೆ 'ಭಾಷಾಂತರ ಪ್ರಶಸ್ತಿ'ಯನ್ನು ಸೋಮವಾರ ಪ್ರಕಟಿಸಿದೆ.

ಲೇಖಕಿ ಸುಧಾಮೂರ್ತಿ ಅವರ 'ಮಕ್ಕಳಿಗಾಗಿ ನನ್ನ ನೆಚ್ಚಿನ ಕತೆಗಳು' ಕೃತಿಯನ್ನು ಲೇಖಕಿ ನಾಗರತ್ನ ಹೆಗಡೆ ಅವರು ಸಂಸ್ಕೃತಕ್ಕೆ ಭಾಷಾಂತರಿಸಿದ್ದು, 'ರುಚಿರಾಹ್ ಬಾಲಕಥಾ' ಕೃತಿಗೆ ಸಂಸ್ಕೃತ ವಿಭಾಗದಲ್ಲಿ ಪ್ರಶಸ್ತಿ ಲಭಿಸಿದೆ.

ಸಾಹಿತಿ ಕೋಟ ಶಿವರಾಮ ಕಾರಂತ ಅವರ 'ಚೋಮನದುಡಿ' ಕೃತಿಯನ್ನು ಕಾಶ್ಮೀರಿ ಭಾಷೆಗೆ ಗುಲ್ಜಾರ್ ಅಹ್ಮದ್ ರಥೇರ್ ಅವರು 'ಚೂಮ ಸುಂಡ್ ಡೋಲ್' ಹೆಸರಿನಲ್ಲಿ ಭಾಷಾಂತರಿಸಿದ್ದು, ಈ ಕೃತಿಗೆ ಕಾಶ್ಮೀರಿ ವಿಭಾಗದಲ್ಲಿ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿಯು ಒಟ್ಟು ₹50 ಸಾವಿರ ನಗದು ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ. ಕನ್ನಡ ವಿಭಾಗದ ಆಯ್ಕೆ ಸಮಿತಿಯಲ್ಲಿ ವಿಮರ್ಶಕಿ ಎಂ.ಎಸ್. ಆಶಾದೇವಿ, ಕಥೆಗಾರ ಕೇಶವ ಮಳಗಿ ಮತ್ತು ಪ್ರೊ.ಎಸ್.ಸಿರಾಜ್ ಅಹ್ಮದ್ ಇದ್ದರು.'

ಕವಿ ಆರಿಫ್ ರಾಜಾಗೆ ಭಾರತೀಯ ಭಾಷಾ ಪರಿಷತ್ ಯುವ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಆರೀಫ್ ರಾಜಾ

ಬಾಗಲಕೋಟೆ: ಕೋಲ್ಕತ್ತಾದ ಭಾರತೀಯ ಭಾಷಾ ಪರಿಷತ್‌ನ ಯುವ ಪುರಸ್ಕಾರಕ್ಕೆ ಕವಿ ಆರಿಫ್ ರಾಜಾ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ಸ್ಮರಣಿಕೆ, ₹51 ಸಾವಿರ ನಗದು ಬಹುಮಾನ ಒಳಗೊಂಡಿದೆ.

ಏಪ್ರಿಲ್ 20ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪರಿಷತ್ತಿನ ಅಧ್ಯಕ್ಷೆ ಕುಸುಮ್ ಖೇಮಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೈತಾನನ ಪ್ರವಾದಿ, ಜಂಗಮ ಫಕೀರನ ಜೋಳಿಗೆ, ಬೆಂಕಿಗೆ ತೊಡಿಸಿದ ಬಟ್ಟೆ, ನಕ್ಷತ್ರ ಮೋಹ, ಎದೆ ಹಾಲಿನ ಪಾಳಿ ಕವನ ಸಂಕಲನಗಳನ್ನು ಅವರು ರಚಿಸಿದ್ದಾರೆ. 'ಪ್ರಜಾವಾಣಿ' ದೀಪಾವಳಿ ಕಾವ್ಯ ಸ್ಪರ್ಧೆ, ಬೇಂದ್ರೆ ಪುಸ್ತಕ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅರಳು ಸಾಹಿತ್ಯ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಸೇರಿ ಹಲವು ಪ್ರಶಸ್ತಿಗಳಿಗೆ ಅವರು ಪಾತ್ರರಾಗಿದ್ದಾರೆ.

ಇಳಕಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಆರಿಫ್ ಅವರ ಹಲವು ಕವಿತೆಗಳು ಇಂಗ್ಲಿಷ್, ಸ್ಪ್ಯಾನಿಷ್, ಪರ್ಷಿಯನ್, ಗ್ರೀಕ್, ಅಲ್ಬೇನಿಯನ್, ಟರ್ಕಿಷ್ ಸೇರಿ ದೇಶದ ತಮಿಳು, ತೆಲುಗು, ಮಲಯಾಳಂ, ಹಿಂದಿ ಅಲ್ಲದೇ ಹಲವು ಭಾಷೆಗಳಿಗೆ ಅನುವಾದಗೊಂಡಿವೆ.

ಅವರ ಕವಿತೆಗಳು ದಾವಣಗೆರೆ, ಮಂಗಳೂರು, ಶಿವಮೊಗ್ಗ, ಮೈಸೂರು, ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯ ಸೇರಿ ಕರ್ನಾಟಕ ಪಿಯು ಮಂಡಳಿಯ ಪ್ರಥಮ ಪಿಯುಸಿಗೆ ಪಠ್ಯವಾಗಿವೆ.

ವಸಂತ ಭಾರದ್ವಾಜರಿಗೆ ಮುಳಿಯ ಪ್ರಶಸ್ತಿ

ಉಡುಪಿ: ದಿ. ಮುಳಿಯ ತಿಮ್ಮಪ್ಪಯ್ಯ ಅವರ ಹೆಸರಿನಲ್ಲಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ಕೊಡಮಾಡುವ 'ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ'ಗೆ ಸಾಹಿತಿ ಕಬ್ಬಿನಾಲೆ ವಸಂತ ಭಾರದ್ವಾಜ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹10,000 ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಮಾರ್ಚ್ ಕೊನೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಬಿ.ಜಗದೀಶ್ ಶೆಟ್ಟಿ ತಿಳಿಸಿದ್ದಾರೆ. ಕಬ್ಬಿನಾಲೆ ವಸಂತ ಭಾರದ್ವಾಜ್ ಭಾಷೆ, ವ್ಯಾಕರಣ, ಛಂದಃಶಾಸ್ತ್ರಗಳಲ್ಲಿ ವಿದ್ವತ್ತು ಪಡೆದಿದ್ದು ಗಮಕ ವ್ಯಾಖ್ಯಾನಕಾರರಾಗಿ ಪ್ರಸಿದ್ಧರಾಗಿದ್ದಾರೆ. ಕವಿಯಾಗಿ, ಯಕ್ಷಗಾನ ಪ್ರಸಂಗ ಕರ್ತರಾಗಿ, ವಾಗ್ಮಿಯಾಗಿ, ಕಾವ್ಯ, ಕಥೆ, ಅನುವಾದ, ಸಂಶೋಧನೆ, ವಿಮರ್ಶೆ, ನಿಘಂಟು ರಚನೆ, ಗ್ರಂಥ ಸಂಪಾದನೆ ಸಹಿತ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ.

17 ವರ್ಷಗಳಿಂದ ಉರಗ ಸಂರಕ್ಷಣೆ

8 ಸಾವಿರ ಹಾವು ರಕ್ಷಿಸಿದ ಮಧು

ಪ್ರಜಾವಾಣಿ ವಾರ್ತೆ

ಮೈಸೂರು: ಬಾಹ್ಯಾಕಾಶ, ಸೇನೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಛಾಪು ಮೂಡಿಸಿದ್ದಾರೆ. ಇದೀಗ ಪುರುಷರೇ ಹೆಚ್ಚಿರುವ ಉರಗ ಸಂರಕ್ಷಣೆ ಕ್ಷೇತ್ರದಲ್ಲಿ ಮೈಸೂರಿನ ಮಧು ಗಮನ ಸೆಳೆದಿದ್ದಾರೆ. ಅವರು 8 ಸಾವಿರಕ್ಕೂ ಹೆಚ್ಚು ಹಾವುಗಳನ್ನು ರಕ್ಷಿಸಿ ಸೈ ಎನಿಸಿಕೊಂಡಿದ್ದಾರೆ.

ಬೆಳಗಾವಿ ಮೂಲದ 36 ವರ್ಷದ ವಿದ್ಯಾ ವಿಜಯ್ ಟಕ್ಕೇಕರ, 'ಮಧು' ಎಂದೇ ಮೈಸೂರಿಗರಿಗೆ ಚಿರಪರಿಚಿತ. 17 ವರ್ಷಗಳಿಂದ ಉರಗ ಸಂರಕ್ಷಣೆಯಲ್ಲಿರುವ ಅವರು, 3 ವರ್ಷದಿಂದ ಮೈಸೂರಿನಲ್ಲಿ ನೆಲೆಸಿದ್ದಾರೆ.

'ವಿಷಪೂರಿತ ಹಾಗೂ ವಿಷ ರಹಿತ ಹಾವುಗಳನ್ನು ರಕ್ಷಿಸಿ ಕಾಡಿಗೆ ಬಿಟ್ಟಿರುವೆ. ಯಾರೇ ಕರೆ ಮಾಡಿದರೂ ಸಮಯ ನೋಡದೆ ಸ್ಪಂದಿಸುವೆ. ಹೀಗಾಗಿ ಜನರಿಗೂ ನನ್ನ ಮೇಲೆ ವಿಶ್ವಾಸವಿದೆ. ಒಂದು ಬಾರಿಯೂ ಹಾವಿನ ಕಡಿತಕ್ಕೆ ಒಳಗಾಗಿಲ್ಲ' ಎಂದು ಮಧು 'ಪ್ರಜಾವಾಣಿ'ಗೆ ತಿಳಿಸಿದರು.

'ಬೇಸಿಗೆಯಲ್ಲಿ, ಕೇರೆ ಹಾಗೂ ನಾಗರ ಹಾವುಗಳ ಮಿಲನ ಕಾಲದಲ್ಲಿ ಹೆಚ್ಚು ಕರೆಗಳು ಬಂದಿವೆ. ವಿವಿಧ ಪ್ರಭೇದದ ಹಾವುಗಳ ಮಿಲನ ಕಾಲ ಬೇರೆ ಬೇರೆಯಾಗಿರುತ್ತದೆ. ಆದರೆ, ಅಕ್ಟೋಬರ್– ಡಿಸೆಂಬರ್ ಅವಧಿಯಲ್ಲಿ ಹೆಚ್ಚು ಕರೆಗಳು ಬಂದಿವೆ' ಎಂದರು.

'ಭೂಮಿಯ ಮೇಲಿನ ಪ್ರತಿ ಜೀವಿಗೂ ಜೀವಿಸುವ ಹಕ್ಕಿದೆ' ಎನ್ನುವ ಅವರು, ಬೆಳಗಾವಿಯಲ್ಲಿ ಹಾವುಗಳ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಿದ್ದರು. ನೆರೆಯ ಮಹಾರಾಷ್ಟ್ರದಲ್ಲೂ ಸೇವಾ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು.

'ಕರೆ ಬಂದ ಕ್ಷಣವೇ ಬೈಕ್‌ನಲ್ಲಿ ತೆರಳಿ ಹಾವುಗಳನ್ನು ರಕ್ಷಿಸುತ್ತಿದ್ದೇನೆ. ಹಣ ಕೇಳುವುದಿಲ್ಲ. ಅವರಾಗೇ ನೀಡಿದರೆ ನಿರಾಕರಿಸುವುದಿಲ್ಲ. ಹಣಕ್ಕೆ ಒತ್ತಾಯಿಸಿದರೆ ಜನ ಹಾವುಗಳನ್ನು ಕೊಲ್ಲಲು ಆರಂಭಿಸುತ್ತಾರಲ್ಲವೇ' ಎಂದು ಹೇಳಿದರು.

'ಬೆಳಗಾವಿಯಲ್ಲಿದ್ದಾಗ ನಿತ್ಯ 25 ಕರೆಗಳು ಬರುತ್ತಿದ್ದವು. ಒಂದೇ ದಿನ 15 ಹಾವುಗಳನ್ನು ರಕ್ಷಿಸಿದ್ದೆ. ದಿನಕ್ಕೆ ಒಂದಾದರೂ ಹಾವನ್ನು ರಕ್ಷಿಸದಿದ್ದರೆ ಅಂದು ನಿದ್ದೆಯೇ ಬರುವುದಿಲ್ಲ' ಎಂದರು.

ಮೈಸೂರಿನ ಶ್ರೀರಾಂಪುರದಲ್ಲಿ ಕೆಲ ವರ್ಷಗಳ ಹಿಂದೆ ಭಾರಿ ಮಳೆ ನಡುವೆ ಹಾಗೂ ಬನ್ನಿಮಂಟಪದಲ್ಲಿ ಬೈಕ್‌ನೊಳಗೆ ಸೇರಿಕೊಂಡಿದ್ದ ಹಾವನ್ನು ರಕ್ಷಿಸಿದ್ದನ್ನು ಈಗಲೂ ಸ್ಮರಿಸುವ ಅವರು, ಬೆಳಗಾವಿಯಲ್ಲಿ ತಾತ, ಪರಿಸರವಾದಿ ಬಾಬೂರಾವ್ ಟಕ್ಕೇಕರ ಅವರೊಂದಿಗೆ ಹಾವುಗಳನ್ನು ರಕ್ಷಿಸಲು ಮನೆಗಳ ಚಾವಣಿ ಹಾಗೂ ಮರ ಹತ್ತುತ್ತಿದ್ದ ದಿನಗಳ ಕುರಿತು ಹೇಳುವುದನ್ನು ಮರೆಯಲಿಲ್ಲ.

ತಮ್ಮ ಇಬ್ಬರು ಮಕ್ಕಳಿಗೂ ಹಾವುಗಳ ಸಂರಕ್ಷಣೆಯ ಕುರಿತು ಅವರು ಕಲಿಸುತ್ತಿರುವುದು ಇನ್ನೊಂದು ವಿಶೇಷ.

ಸಂರಕ್ಷಿಸಿದ ಹಾವಿನೊಂದಿಗೆ ಮಧು

ಮುಖ್ಯಾಂಶಗಳು

- ರಕ್ಷಣೆಗೆ 24 ಗಂಟೆಯೂ ಸಿದ್ಧ
- ಒಂದೇ ದಿನ 15 ಹಾವುಗಳ ಸಂರಕ್ಷಣೆ
- ಹಾವುಗಳ ಸಂರಕ್ಷಣೆಗೆ ಜಾಗೃತಿ

ಅತ್ಯಾಚಾರ: ತಾಯಿ ಸೇರಿ ನಾಲ್ವರಿಗೆ 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮೂರು ವರ್ಷಗಳ ಹಿಂದೆ ಬಾಲಕಿ ಮೇಲೆ ನಡೆದಿದ್ದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಾಲಕಿಯ ತಾಯಿ ಸೇರಿ ನಾಲ್ವರಿಗೆ ಜಿಲ್ಲಾ ತ್ವರಿತಗತಿ ನ್ಯಾಯಾಲಯ(ಪೋಕ್ಸೊ) 20 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಬಾಲಕಿ ತಾಯಿ ಮತ್ತು ಇಬ್ಬರಿಗೆ 20 ವರ್ಷ ಜೈಲುವಾಸದ ಶಿಕ್ಷೆ ಹಾಗೂ ಪ್ರಮುಖ ಆರೋಪಿಗೆ 22 ವರ್ಷ ಜೈಲು ಮತ್ತು ₹25 ಸಾವಿರ ದಂಡ ವಿಧಿಸಿದೆ.

ಶೃಂಗೇರಿ ಸಮೀಪದ ಹಳ್ಳಿಯೊಂದರಲ್ಲಿ ಬಾಲಕಿಯನ್ನು ಅಕ್ರಮ ಚಟುವಟಿಕೆಗೆ ದೂಡಿದ್ದರ ಬಗ್ಗೆ ರಾಜ್ಯದಾದ್ಯಂತ ಸುದ್ದಿಯಾಗಿತ್ತು. ಅಂದಿನ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೃತಿ ನೇತೃತ್ವದಲ್ಲಿ ತನಿಖೆ ನಡೆದಿತ್ತು. 35 ಪ್ರಕರಣಗಳನ್ನು ದಾಖಲಿಸಲಾಗಿತ್ತು. ತಾಯಿ ಸೇರಿ 53 ಜನರನ್ನು ಪೋಕ್ಸೊ ಕಾಯ್ದೆಯಡಿ ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿತ್ತು.

49 ಜನರನ್ನು ಖುಲಾಸೆಗೊಳಿಸಿ ನಾಲ್ವರನ್ನು ತಪ್ಪಿತಸ್ಥರು ಎಂದು ತೀರ್ಮಾನಿಸಿದ್ದ ನ್ಯಾಯಾಲಯ, ಶಿಕ್ಷೆ ಪ್ರಮಾಣವನ್ನು ಕಾಯ್ದಿರಿಸಿತ್ತು.

ಸ್ಫೋಟ: ಮಸೀದಿಗಳಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಕಲಬುರಗಿ/ಬೆಂಗಳೂರು: ಬೆಂಗಳೂರಿನ ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಶಂಕಿತನ ಸುಳಿವು ಪತ್ತೆಯಾಗಿದ್ದು, ಸದ್ಯದಲ್ಲೇ ಬಂಧಿಸುವ ಸಾಧ್ಯತೆ ಇರುವುದಾಗಿ ತನಿಖಾ ಸಂಸ್ಥೆಗಳ ಮೂಲಗಳು ತಿಳಿಸಿವೆ.

ಇಸ್ಲಾಮಿಕ್ ಸ್ಟೇಟ್ (ಐಎಸ್) ಬಳ್ಳಾರಿ ಘಟಕದಿಂದ ಕೃತ್ಯ ನಡೆದಿರುವುದಕ್ಕೆ ಪುರಾವೆಗಳನ್ನು ಸಂಗ್ರಹಿಸಿರುವ ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು, ಬಳ್ಳಾರಿ ನಂತರ ಕಲಬುರಗಿ ನಗರದಲ್ಲಿ ಶೋಧ ಕಾರ್ಯ ಮುಂದುವರಿಸಿದ್ದಾರೆ. ಸೋಮವಾರವೂ ಹಲವೆಡೆ ಸುತ್ತಾಡಿ ಮಾಹಿತಿ ಕಲೆಹಾಕಿದರು.

ಕಲಬುರಗಿಯಲ್ಲಿ ಮೂರು ದಿನಗಳಿಂದ ಬೀಡುಬಿಟ್ಟಿರುವ ಎನ್‌ಐಎ ಅಧಿಕಾರಿಗಳು, ಶಂಕಿತ ಹಾಗೂ ಆತನಿಗೆ ಸಹಾಯ ಮಾಡಿದ್ದವರ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ನಗರದ ಹಲವು ಮಸೀದಿಗಳು ಹಾಗೂ ಇತರೆ ಸ್ಥಳಗಳಿಗೆ ಸೋಮವಾರ ತೆರಳಿದ್ದ ಅಧಿಕಾರಿಗಳು, ಸ್ಥಳೀಯ ಪೊಲೀಸರ ಸಹಾಯದಿಂದ ಬೆಳಿಗ್ಗೆಯಿಂದ ಸಂಜೆಯವರೆಗೂ ಶೋಧ ಕಾರ್ಯ ನಡೆಸಿದರು ಎಂದು ಮೂಲಗಳು ಹೇಳಿವೆ.

'ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟದ ನಂತರ, ಬೆಂಗಳೂರು ತೊರೆದಿದ್ದ ಶಂಕಿತ ಬಳ್ಳಾರಿಗೆ ಹೋಗಿದ್ದ. ಅಲ್ಲಿಂದ ಕಲಬುರಗಿಗೆ ಬಂದು ನೆಲೆಸಿರುವ ಮಾಹಿತಿ ತನಿಖಾ ಸಂಸ್ಥೆಗಳಿಗೆ ಲಭ್ಯವಾಗಿದೆ. ಇದೇ ಕಾರಣಕ್ಕೆ ಕಲಬುರಗಿಯಲ್ಲಿ ಚುರುಕಿನ ಶೋಧ ನಡೆಯುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ಶಂಕಿತ, ಈ ಹಿಂದೆಯೂ ಪ್ರಕರಣವೊಂದರಲ್ಲಿ ಆರೋಪಿಯಾಗಿದ್ದನೆಂಬ ಮಾಹಿತಿ ಲಭಿಸಿದೆ. ಇದೊಂದು ಸೂಕ್ಷ್ಮ ಹಾಗೂ ಗಂಭೀರ ಪ್ರಕರಣವಾಗಿರುವುದರಿಂದ, ಶಂಕಿತ ಎಲ್ಲ ಮಾಹಿತಿಯನ್ನು ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಒಂದು ಹಂತದಲ್ಲಿ ಶಂಕಿತನ ಸುಳಿವು ಪತ್ತೆ: 'ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಯಾರೆಂಬುದು ಒಂದು ಹಂತಕ್ಕೆ ಪತ್ತೆ ಆಗಿದೆ. ಅದನ್ನು ದೃಢಪಡಿಸಿಕೊಳ್ಳಬೇಕಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಆರೋಪಿ ಯಾರೆಂಬುದು ಬಹುತೇಕ ಪತ್ತೆಯಾಗಿದೆ. ಅದನ್ನು ದೃಢಪಡಿಸುವ ಕೆಲಸವನ್ನು ಸಿಸಿಬಿ ಹಾಗೂ ಎನ್‌ಐಎ ಅಧಿಕಾರಿಗಳು ಮಾಡುತ್ತಿದ್ದಾರೆ' ಎಂದರು.

ಧರ್ಮಾಧಾರಿತ ಪೌರತ್ವಕ್ಕೆ ಆಕ್ಷೇಪ

ಪೌರತ್ವ ತಿದ್ದುಪಡಿ ಕಾಯ್ದೆಯು (ಸಿಎಎ) ಅಂಗೀಕಾರವಾಗಿ ಸುಮಾರು ನಾಲ್ಕು ವರ್ಷಗಳ ನಂತರ ಅದನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ವಿದೇಶಿ ಅಕ್ರಮ ವಲಸಿಗರಿಗೆ ಭಾರತದ ಪೌರತ್ವ ನೀಡಲು ಈ ಕಾಯ್ದೆ ನೆರವಾಗಲಿದೆ. ಮುಸ್ಲಿಮರ ಪೌರತ್ವಕ್ಕೆ ಯಾವುದೇ ತೊಡಕಾಗುವುದಿಲ್ಲ ಎಂದು ಕೇಂದ್ರ ಸರ್ಕಾರವು ಈಗಾಗಲೇ ಹಲವು ಬಾರಿ ಹೇಳಿದೆ. ಆದರೆ, ಸಿಎಎ ಒಂದೇ ಇದ್ದರೆ, ಅದರಿಂದ ಯಾರ ಪೌರತ್ವಕ್ಕೂ ಧಕ್ಕೆಯಾಗುವುದಿಲ್ಲ. ಆದರೆ ಸಿಎಎ ಜತೆಗೆ ಎನ್‌ಆರ್‌ಸಿ ಜಾರಿಗೆ ಬಂದರೆ, ತೊಂದರೆ ಆಗುವುದು ಮುಸ್ಲಿಮರಿಗೆ ಮಾತ್ರ. ಧರ್ಮದ ಆಧಾರದಲ್ಲಿ ಪೌರತ್ವ ಒದಗಿಸುವ ಮತ್ತು ಮುಸ್ಲಿಮರನ್ನು ಮಾತ್ರ ಹೊರಗಿಡುವ ಈ ಕಾಯ್ದೆಯ ವಿರುದ್ಧ ವಿರೋಧ ಪಕ್ಷಗಳು ಈಗ ಮತ್ತೆ ದನಿಎತ್ತಿವೆ

ಯಾರಿಗೆಲ್ಲಾ ಅನುಕೂಲ

- ಭಾರತದ ನೆರೆ ರಾಷ್ಟ್ರಗಳಾದ ಪಾಕಿಸ್ತಾನ, ಅಫ್ಗಾನಿಸ್ತಾನ ಮತ್ತು ಬಾಂಗ್ಲಾದೇಶದಿಂದ ಅಕ್ರಮವಾಗಿ ವಲಸೆ ಬಂದಿರುವ ಮುಸ್ಲಿಮೇತರರಿಗೆ ಧರ್ಮದ ಆಧಾರದಲ್ಲಿ ಪೌರತ್ವ ನೀಡಲಾಗುತ್ತದೆ
- ಈ ದೇಶಗಳಿಂದ ಅಕ್ರಮವಾಗಿ ವಲಸೆ ಬಂದಿರುವ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರೈಸ್ತ ಧರ್ಮೀಯರಿಗೆ ಮಾತ್ರ ಇದರ ಅನುಕೂಲ ದೊರೆಯಲಿದೆ
- 2014ರ ಡಿಸೆಂಬರ್ 31ಕ್ಕೂ ಮುನ್ನ ಅಕ್ರಮವಾಗಿ ವಲಸೆ ಬಂದವರಿಗಷ್ಟೇ ಪೌರತ್ವ ದೊರೆಯಲಿದೆ
- ಅಕ್ರಮ ವಲಸಿಗರ ವಿರುದ್ಧ ದಾಖಲಾಗಿರುವ ಪ್ರಕರಣಗಳು ರದ್ದಾಗುತ್ತವೆ
- ಯಾವುದೇ ಕಾರಣಕ್ಕೂ ಈ ಜನರ ಪೌರತ್ವ ಅರ್ಜಿಯನ್ನು ರದ್ದುಪಡಿಸುವಂತಿಲ್ಲ
- ಪೌರತ್ವಕ್ಕೆ ಅರ್ಜಿ ಸಲ್ಲಿಸಿದ ತಕ್ಷಣವೇ ಈ ಜನರಿಗೆ ಭಾರತದ ಪ್ರಜೆಗೆ ದೊರೆಯುವ ಎಲ್ಲಾ ಹಕ್ಕುಗಳು ಮತ್ತು ಸವಲತ್ತುಗಳು ದೊರೆಯುತ್ತವೆ

ಆಧಾರ: ಪೌರತ್ವ ತಿದ್ದುಪಡಿ ಕಾಯ್ದೆ–2019, ಎನ್‌ಆರ್‌ಸಿ ನಿಯಮಗಳು–2003, ಅಸ್ಸಾಂ ಎನ್‌ಆರ್‌ಸಿ ಅಧಿಸೂಚನೆ ಮತ್ತು ಪೌರತ್ವ ಪಟ್ಟಿ, ಪಿಟಿಐ

ಎನ್‌ಆರ್‌ಸಿ ಬಂದರೆ ಮುಸ್ಲಿಮರಿಗೆ ತೊಂದರೆ

19 ಲಕ್ಷ ಅಸ್ಸಾಂನಲ್ಲಿ ಎನ್‌ಆರ್‌ಸಿ ಜಾರಿಯಿಂದ ಹೊರಗುಳಿದವರು

11.86 ಲಕ್ಷ ಅಸ್ಸಾಂ ಎನ್‌ಆರ್‌ಸಿಯಿಂದ ಹೊರಗುಳಿದ ಮುಸ್ಲಿಮರ ಸಂಖ್ಯೆ

7.14 ಲಕ್ಷ ಅಸ್ಸಾಂ ಎನ್‌ಆರ್‌ಸಿಯಿಂದ ಹೊರಗುಳಿದ ಮುಸ್ಲಿಮೇತರರು

ಈ ಎಲ್ಲರಿಗೂ ಈಗ ಜಾರಿಗೆ ಬಂದಿರುವ ಸಿಎಎ ಅಡಿಯಲ್ಲಿ ಭಾರತದ ಪೌರತ್ವ ಒದಗಿಸಲಾಗುತ್ತದೆ. ಆದರೆ, 11.86 ಲಕ್ಷ ಮುಸ್ಲಿಮರು ನ್ಯಾಯಾಲಯದ ಮೆಟ್ಟಿಲೇರಬೇಕು. ಅಲ್ಲಿಯೂ ಅವರ ಪೌರತ್ವ ಸಾಬೀತಾಗದಿದ್ದರೆ ಅವರನ್ನು ಅಕ್ರಮ ವಲಸಿಗರು ಎಂದು ಘೋಷಿಸಲಾಗುತ್ತದೆ

ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಗೆ ಬಂದರೆ, ದೇಶದ ಎಲ್ಲಾ ನಾಗರಿಕರ ವಿವರವನ್ನು ಸಂಗ್ರಹಿಸಬೇಕಾಗುತ್ತದೆ. ಎನ್‌ಆರ್‌ಸಿ ದೇಶದ ಎಲ್ಲಾ ನಾಗರಿಕರ ವಿವರವನ್ನು ಒಳಗೊಂಡ ಪಟ್ಟಿಯಾಗಿದೆ. 1955ರ ಪೌರತ್ವ ಕಾಯ್ದೆಯಲ್ಲೇ (18ನೇ ಸೆಕ್ಷನ್‌ನ 1 ಮತ್ತು 2ನೇ ಉಪಸೆಕ್ಷನ್‌ಗಳು) ಎನ್‌ಆರ್‌ಸಿ ರಚನೆ ಮತ್ತು ನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿದೆ. ಈ ಪ್ರಕಾರ 2003ರಲ್ಲೇ ವಾಜಪೇಯಿ ಸರ್ಕಾರವು 'ರಾಷ್ಟ್ರೀಯ ಪೌರತ್ವ ನೋಂದಣಿ ನಿಯಮಗಳನ್ನು' ರೂಪಿಸಿತ್ತು. ಈ ನಿಯಮಗಳ ಪ್ರಕಾರವೇ ಅಸ್ಸಾಂನಲ್ಲಿ ಎನ್‌ಆರ್‌ಸಿ ಜಾರಿಗೆ ತರಲಾಯಿತು. ದೇಶದಾದ್ಯಂತ ಎನ್‌ಆರ್‌ಸಿ ಜಾರಿಗೆ ತಂದರೂ, ಈ ನಿಯಮಗಳನ್ನೇ ಅನುಸರಿಸಬೇಕಾಗುತ್ತದೆ.

ಎನ್‌ಆರ್‌ಸಿ ಜಾರಿಗೆ ಬಂದರೆ ಯಾವುದೇ ಕುಟುಂಬದ ಮುಖ್ಯಸ್ಥನು ತನ್ನ ಮತ್ತು ತನ್ನ ಕುಟುಂಬದ ಸದಸ್ಯರ ಹೆಸರನ್ನು ನೋಂದಾಯಿಸಬೇಕು. ಕುಟುಂಬದ ಸದಸ್ಯರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಆತ ಸಲ್ಲಿಸಿದ ದಾಖಲೆಗಳನ್ನು ಬ್ಲಾಕ್‌ಮಟ್ಟದ ನೋಂದಣಿ ಅಧಿಕಾರಿಯು ಪರಿಶೀಲಿಸಿ, ಪೌರತ್ವ ನೋಂದಣಿಯನ್ನು ಸಿದ್ಧಪಡಿಸುತ್ತಾನೆ. ದಾಖಲೆಗಳು ಸರಿಯಾಗಿದ್ದರೆ ಆ ಕುಟುಂಬವು ಭಾರತೀಯ ಕುಟುಂಬ ಎಂದು ಸಾಬೀತಾಗುತ್ತದೆ ಮತ್ತು ಅವರ ಪೌರತ್ವ ಉಳಿಯುತ್ತದೆ.

ಆದರೆ, ಆ ಅರ್ಜಿಗಳು ತಿರಸ್ಕೃತವಾಗುವ ಅಪಾಯಗಳೂ ಸಾಕಷ್ಟಿವೆ. ಪರಿಶೀಲನೆ ವೇಳೆ, ದಾಖಲೆಗಳು ನಕಲಿ ಎಂದು ಅನುಮಾನ ಬಂದರೆ, ಕುಟುಂಬದ ಸದಸ್ಯರು ಅಥವಾ ವ್ಯಕ್ತಿಗಳು ಸಲ್ಲಿಸಿರುವ ದಾಖಲೆಗಳು ಪರಸ್ಪರ ತಾಳೆಯಾಗದೇ ಇದ್ದರೆ, ವ್ಯಕ್ತಿಗಳ ದಾಖಲೆಗಳು ಮತ್ತು ಸರ್ಕಾರದ ದಾಖಲೆಗಳು ಪರಸ್ಪರ ತಾಳೆಯಾಗದೇ ಇದ್ದರೆ ಅಂತಹವರ ಪೌರತ್ವವನ್ನು ತಡೆಹಿಡಿಯಲಾಗುತ್ತದೆ. ಆಗ ಮೇಲ್ಮನವಿ ಸಲ್ಲಿಸಿ ಪೌರತ್ವವನ್ನು ಉಳಿಸಿಕೊಳ್ಳಲು ಅವಕಾಶವಿದೆ. ಆದರೆ ಅಧಿಕಾರಿಗಳು ಪೌರತ್ವ ರದ್ದುಪಡಿಸಲು ಶಿಫಾರಸು ಮಾಡಿದರೆ, ಅಂತಹವರ ಪೌರತ್ವ ರದ್ದಾಗುತ್ತದೆ. ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಹೋಗಿಯೂ ಪೌರತ್ವವನ್ನು ಉಳಿಸಕೊಳ್ಳಲು ಅವಕಾಶವಿದೆ. ಅಲ್ಲೂ ಪೌರತ್ವ ಸಾಬೀತಾಗದೇ ಇದ್ದರೆ, ಅಂತಹವರ ಪೌರತ್ವ ರದ್ದಾಗುತ್ತದೆ.

ಅಂತಹ ಸಂದರ್ಭದಲ್ಲೇ ಮುಸ್ಲಿಮೇತರರಿಗೆ ಪೌರತ್ವ ತಿದ್ದುಪಡಿ ಕಾಯ್ದೆ ನೆರವಿಗೆ ಬರುವುದು. ಹೀಗೆ ಪೌರತ್ವ ರದ್ದಾದವರು, 'ನಾವು ಪಾಕಿಸ್ತಾನ/ಅಫ್ಗಾನಿಸ್ತಾನ/ಬಾಂಗ್ಲಾ-ದೇಶದಲ್ಲಿ ಧಾರ್ಮಿಕ ಕಿರುಕುಳಕ್ಕೆ ಒಳಗಾಗಿದ್ದೇವೆ. ಹೀಗಾಗಿ ಭಾರತದ ಪೌರತ್ವ ನೀಡಿ' ಎಂದು ಘೋಷಿಸಿಕೊಂಡರೆ ಸಾಕು. ಅವರು ಬೇರೆ ಯಾವುದೇ ದಾಖಲೆ ನೀಡುವ ಅವಶ್ಯಕತೆ ಇಲ್ಲ. ಅಂತಹವರಿಗೆ ಕೇಂದ್ರ ಸರ್ಕಾರವು ಭಾರತದ ಪೌರತ್ವವನ್ನು ಒದಗಿಸುತ್ತದೆ.

ಬಂಧನ ಅಥವಾ ಗಡಿಪಾರಿನ ಭೀತಿ

ಎನ್‌ಆರ್‌ಸಿಯಿಂದ ಹೊರಗುಳಿದ ಹಿಂದೂ, ಸಿಖ್, ಬೌದ್ಧ, ಜೈನ, ಕ್ರೈಸ್ತ ಮತ್ತು ಪಾರ್ಸಿ ಧರ್ಮೀಯರಿಗೆ ಸಿಎಎ ನೆರವಿಗೆ ಬರಲಿದೆ. ಅವರ ಪೌರತ್ವ ಉಳಿಯಲಿದೆ ಅಥವಾ ಅವರಿಗೆ ಭಾರತದ ಪೌರತ್ವ ನೀಡಲಾಗುತ್ತದೆ. ಆದರೆ ಎನ್‌ಆರ್‌ಸಿಯಿಂದ ಹೊರಗಿಡಲಾದ ಮುಸ್ಲಿಮರಿಗೆ ಈ ಸವಲತ್ತು ಇರುವುದಿಲ್ಲ.

ಆ ಮುಸ್ಲಿಮರು ಭಾರತೀಯರೇ ಆಗಿದ್ದು, ದಾಖಲೆಗಳು ತಾಳೆಯಾಗದೇ ಇದ್ದರೆ ಅವರನ್ನು ವಿದೇಶಿ ಅಕ್ರಮ ವಲಸಿಗರು ಎಂದು ಎನ್‌ಆರ್‌ಸಿ ಅಡಿಯಲ್ಲಿ ಪರಿಗಣಿಸಲಾಗುತ್ತದೆ. ಪೌರತ್ವ ಪಟ್ಟಿಯಿಂದ ಕೈಬಿಡಲಾದ ಮುಸ್ಲಿಮರು ತಾಲ್ಲೂಕು ಮಟ್ಟದಲ್ಲಿ ಇರುವ 'ವಿದೇಶಿಯರ ನ್ಯಾಯಮಂಡಳಿ'ಗೆ ಅರ್ಜಿ ಸಲ್ಲಿಸಬೇಕು. ಅಲ್ಲಿ ಅವರು ಭಾರತದ ನಾಗರಿಕರು ಎಂದು ದೃಢಪಡದೇ ಇದ್ದರೆ ಅವರನ್ನು ವಿದೇಶಿ ಅಕ್ರಮ ವಲಸಿಗರು ಎಂದು ಘೋಷಿಸಲಾಗುತ್ತದೆ.

ಇದರ ವಿರುದ್ಧ ಆ ವ್ಯಕ್ತಿಗಳು ರಾಜ್ಯ ಹೈಕೋರ್ಟ್‌ಗೆ, ನಂತರ ಸುಪ್ರೀಂ ಕೋರ್ಟ್‌ಗೂ ಮೇಲ್ಮನವಿ ಸಲ್ಲಿಸಬಹುದು. ಸುಪ್ರೀಂ ಕೋರ್ಟ್‌ನಲ್ಲೂ ಅವರ ಪೌರತ್ವ ಸಾಬೀತು ಆಗದೇ ಇದ್ದರೆ, ಅವರ ಭಾರತದ ಪೌರತ್ವ ರದ್ದಾಗುತ್ತದೆ. ಸಿಎಎಯಿಂದ ಮುಸ್ಲಿಮರನ್ನು ಹೊರಗಿಟ್ಟಿರುವ ಕಾರಣ, ಅವರಿಗೆ ಈ ಕಾಯ್ದೆಯ ನೆರವೂ ಸಿಗುವುದಿಲ್ಲ. ಆನಂತರ ಅವರನ್ನು ಬಂಧನ ಕೇಂದ್ರಕ್ಕೆ ಕಳುಹಿಸಲಾಗುತ್ತದೆ. ಇಲ್ಲವೇ ಗಡಿಪಾರು ಮಾಡಲಾಗುತ್ತದೆ.

ಗುವಾಹಟಿಯಲ್ಲಿ ಮಾರ್ಚ್ 11ರಂದು ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್ (ಎಎಎಸ್‌ಯು) ಕಾರ್ಯಕರ್ತರು ಸಿಎಎ ಪ್ರತಿಗಳಿಗೆ ಬೆಂಕಿ ಹಚ್ಚಿ ಪ್ರತಿಭಟಿಸಿದರು

ಅಸ್ಸಾಂ: ಭದ್ರತೆ ಹೆಚ್ಚಳ

ಗುವಾಹಟಿ (ಪಿಟಿಐ): ವಿವಾದಾತ್ಮಕ ಪೌರತ್ವ (ತಿದ್ದುಪಡಿ) ಕಾಯ್ದೆ 2019 (ಸಿಎಎ) ಜಾರಿ ಘೋಷಣೆಯ ಬೆನ್ನಲ್ಲೇ ಅಸ್ಸಾಂನಲ್ಲಿ ಭದ್ರತೆ ಹೆಚ್ಚಿಸಲಾಗಿದ್ದು, ಸೋಮವಾರ ಹೆಚ್ಚುವರಿ ಪೊಲೀಸ್ ಪಡೆ ನಿಯೋಜಿಸಲಾಗಿದೆ.

ಎಲ್ಲ ಪೊಲೀಸ್ ಠಾಣೆಗಳನ್ನು ಸನ್ನದ್ಧವಾಗಿಡಲಾಗಿದ್ದು, ಗುವಾಹಟಿ ಸೇರಿದಂತೆ ರಾಜ್ಯದ ಬಹುತೇಕ ಎಲ್ಲ ನಗರ–ಪಟ್ಟಣಗಳ ಮುಖ್ಯ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಎಎ ಅಧಿಸೂಚನೆ ವಿರೋಧಿಸಿ ಪ್ರತಿಭಟನೆ ನಡೆಸುವುದಾಗಿ ವಿರೋಧ ಪಕ್ಷಗಳು ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರು ಗಸ್ತನ್ನು ತೀವ್ರಗೊಳಿಸಿದ್ದಾರೆ.

ಸಿಎಎ ಪ್ರತಿಗಳನ್ನು ಸುಟ್ಟು ಪ್ರತಿಭಟನೆ ನಡೆಸುವುದರ ಜತೆಗೆ ಸತ್ಯಾಗ್ರಹ ಆರಂಭಿಸುವುದಾಗಿ ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್ (ಎಎಎಸ್‌ಯು) ಘೋಷಿಸಿದೆ.

ಅಸ್ಸಾಂನಲ್ಲಿ 2019ರ ಡಿಸೆಂಬರ್‌ನಲ್ಲಿ ಸಿಎಎ ವಿರುದ್ಧದ ಪ್ರತಿಭಟನೆಗಳು ಆರಂಭವಾಗಿದ್ದವು. ಎಎಎಸ್‌ಯು ಮತ್ತು ಕೃಷಿಕ್ ಮುಕ್ತಿ ಸಂಗ್ರಾಮ್ ಸಮಿತಿ (ಕೆಎಂಎಸ್‌ಎಸ್) ಪ್ರತಿಭಟನೆಗಳ ನೇತೃತ್ವ ವಹಿಸಿದ್ದವು. ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ ಪೊಲೀಸರ ಗುಂಡಿಗೆ ಐವರು ಬಲಿಯಾಗಿದ್ದರು. ಅದರ ಬೆನ್ನಲ್ಲೇ ಅಸ್ಸಾಂ ಜಾತೀಯ ಪರಿಷತ್ (ಎಜೆಪಿ) ಮತ್ತು ಎಎಎಸ್‌ಯು ಎಂಬ ಎರಡು ರಾಜಕೀಯ ಪಕ್ಷಗಳು ಸ್ಥಾಪನೆಯಾಗಿದ್ದವು.

ಪಾಕ್ ಹಿಂದೂ ನಿರಾಶ್ರಿತರಿಗೆ ಸಂತಸ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ನೆಲೆಸಿರುವ ಪಾಕಿಸ್ತಾನದ ಹಿಂದೂ ನಿರಾಶ್ರಿತರು, ಪೌರತ್ವ ತಿದ್ದುಪಡಿ ಕಾಯ್ದೆ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿ, 'ಕೊನೆಗೂ ನಮ್ಮನ್ನು ಭಾರತೀಯ ಪ್ರಜೆಗಳು ಎಂದು ಕರೆಯುವಂತಾಗಿದೆ' ಎಂದು ಹೇಳಿದ್ದಾರೆ.

ಪಾಕಿಸ್ತಾನದ ಹಿಂದೂ ನಿರಾಶ್ರಿತ ಸಮುದಾಯದ ಮುಖ್ಯಸ್ಥ ಧರ್ಮವೀರ್ ಸೋಲಂಕಿ, 'ನಮ್ಮ ಸಮುದಾಯದ ಸುಮಾರು 500 ಮಂದಿ ಪೌರತ್ವ ಪಡೆಯಲಿದ್ದೇವೆ' ಎಂದು ಹೇಳಿದರು.

'ಇದಕ್ಕಾಗಿ ದಶಕಗಳಿಂದ ಕಾಯುತ್ತಿದ್ದೆವು. ಕೊನೆಗೂ ನಮ್ಮನ್ನು ಭಾರತೀಯ ಪ್ರಜೆಗಳು ಎಂದು ಕರೆಯುವಂತಾಗಿರುವುದು ಅತೀವ ಸಂತಸ ತಂದಿದೆ. 2013ರಲ್ಲಿ ತವರಿಗೆ ವಾಪಸ್ ಬಂದು ನೆಲೆಸಿದ್ದಕ್ಕೂ ಸಾರ್ಥಕವಾಗಿದೆ. ಹೆಗಲ ಮೇಲಿದ್ದ ದೊಡ್ಡ ಭಾರವೊಂದು ಇಳಿಸಿಟ್ಟಂತೆ ಭಾಸವಾಗುತ್ತಿದೆ' ಎಂದು ತಿಳಿಸಿದರು.

ಧ್ರುವೀಕರಣದ ಉದ್ದೇಶ: ಕಾಂಗ್ರೆಸ್

ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಜನರನ್ನು ಧ್ರುವೀಕರಿಸುವ ಉದ್ದೇಶದಿಂದ ಈ ಹೊತ್ತಿನಲ್ಲಿ ಸಿಎಎ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಚುನಾವಣಾ ಬಾಂಡ್ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಕಟುವಾದ ಮಾತುಗಳನ್ನು ಆಡಿದ ನಂತರದಲ್ಲಿ ಜನರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶದಿಂದ ಕೇಂದ್ರವು ಈ ಘೋಷಣೆ ಮಾಡಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪಿಸಿದ್ದಾರೆ.

'ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲು ಒಂಬತ್ತು ಬಾರಿ ಸಮಯಾವಕಾಶ ಪಡೆದುಕೊಂಡ ನಂತರ, ಚುನಾವಣೆಗೆ ಮೊದಲು ಅಧಿಸೂಚನೆಯಲ್ಲಿ ಪ್ರಕಟಿಸಿರುವುದು ವಿಶೇಷವಾಗಿ ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿ ಜನರನ್ನು ಧ್ರುವೀಕರಿಸುವ ಉದ್ದೇಶ ಹೊಂದಿದೆ' ಎಂದು ಅವರು ಹೇಳಿದ್ದಾರೆ.

ತಾರತಮ್ಯ ಇದ್ದರೆ ವಿರೋಧ: ಮಮತಾ

ಕೋಲ್ಕತ್ತ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆಯು ದೇಶದ ಸಮುದಾಯಗಳ ವಿಚಾರದಲ್ಲಿ ತಾರತಮ್ಯ ಎಸಗುತ್ತದೆ ಎಂದಾದರೆ, ಅವರು ಈಗಾಗಲೇ ಹೊಂದಿರುವ ಪೌರತ್ವವನ್ನು ಯಾವುದಾದರೂ ರೀತಿಯಲ್ಲಿ ಕಸಿದುಕೊಳ್ಳುತ್ತದೆ ಎಂದಾದರೆ ತಾವು ಕಾಯ್ದೆಯನ್ನು ವಿರೋಧಿಸುವುದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಸಿಎಎ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸುವ ತುಸು ಮೊದಲು ಸುದ್ದಿಗೋಷ್ಠಿ ನಡೆಸಿದ ಮಮತಾ, ಇದು ಸಿಎಎ ಕುರಿತು ಘೋಷಣೆಯೊಂದು ಹೊರಬೀಳುವ ಸಾಧ್ಯತೆ ಇದೆ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ವರದಿ ಆಧರಿಸಿ ತಾವು ನೀಡುತ್ತಿರುವ ಆರಂಭಿಕ ಪ್ರತಿಕ್ರಿಯೆ ಎಂದರು. ಅಧಿಸೂಚನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸಿಎಎ ಬಗ್ಗೆ ವಿಸ್ತೃತವಾದ ಅಭಿಪ್ರಾಯವನ್ನು ಮಂಗಳವಾರ ನೀಡುವುದಾಗಿ ಅವರು ಹೇಳಿದರು. ದೇಶದಾದ್ಯಂತ ಎನ್‌ಆರ್‌ಸಿ ಜಾರಿಗೆ ಪೂರ್ವಭಾವಿ ಸಿದ್ಧತೆಯ ರೂಪದಲ್ಲಿ ಸಿಎಎಯನ್ನು ಬಳಸಿಕೊಳ್ಳಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದರು.

ದೇಶದ ಪರಂಪರೆಗೆ ಸವಾಲು: ವಿಜಯನ್

ತಿರುವನಂತಪುರ (ಪಿಟಿಐ): ಕೋಮು ಆಧಾರದಲ್ಲಿ ಸಮಾಜದಲ್ಲಿ ವಿಭಜನೆ ಸೃಷ್ಟಿಸುವ ಕೆಲಸವನ್ನು ಸಿಎಎ ಮಾಡಲಿದೆ ಎಂದು ಹೇಳಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ತಮ್ಮ ರಾಜ್ಯದಲ್ಲಿ ಈ ಕಾನೂನು ಜಾರಿಯಾಗುವುದಿಲ್ಲ ಎಂದು ಹೇಳಿದ್ದಾರೆ.

'ಮುಸ್ಲಿಂ ಅಲ್ಪಸಂಖ್ಯಾತರನ್ನು ದ್ವಿತೀಯ ದರ್ಜೆಯ ನಾಗರಿಕರಂತೆ ಕಾಣುವ ಸಿಎಎ ಕೇರಳದಲ್ಲಿ ಜಾರಿಯಾಗುವುದಿಲ್ಲ ಎಂಬುದನ್ನು ಸರ್ಕಾರವು ಮತ್ತೆ ಮತ್ತೆ ಹೇಳಿದೆ. ಅದೇ ನಿಲುವು ಮುಂದುವರಿಯಲಿದೆ. ಕೋಮು ಆಧಾರದಲ್ಲಿ ವಿಭಜಿಸುವ ಕಾನೂನನ್ನು ವಿರೋಧಿಸಲು ಇಡೀ ಕೇರಳ ಒಂದಾಗಲಿದೆ' ಎಂದು ವಿಜಯನ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಲೋಕಸಭಾ ಚುನಾವಣೆ ಘೋಷಣೆ ಆಗುವ ಕೆಲವು ದಿನಗಳ ಮೊದಲು ಸಿಎಎ ಸಂಬಂಧಿತ ಅಧಿಸೂಚನೆ ಪ್ರಕಟವಾಗಿದೆ. ಇದು ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಉದ್ದೇಶ ಹೊಂದಿದೆ ಎಂದು ಅವರು ಆರೋಪಿಸಿದ್ದಾರೆ.

ಭಾರತದ ಪೌರತ್ವವನ್ನು ಧರ್ಮದ ಆಧಾರದಲ್ಲಿ ವ್ಯಾಖ್ಯಾನಿಸುವುದನ್ನು ಒಪ್ಪಲಾಗದು. ಇದು ಮಾನವಕುಲಕ್ಕೆ, ದೇಶದ ಪರಂಪರೆಗೆ ಮತ್ತು ದೇಶದ ನಾಗರಿಕರಿಗೆ ಬಹಿರಂಗ ಸವಾಲು ಒಡ್ಡಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ರಾಜಕೀಯ ಉದ್ದೇಶ: ಪರಮೇಶ್ವರ

ಬೆಂಗಳೂರು: 'ಲೋಕಸಭಾ ಚುನಾವಣಾ ದೃಷ್ಟಿಯಿಂದ ಕೇಂದ್ರ ಸರ್ಕಾರ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಗೆ ಸಂಬಂಧಿಸಿ ಅಧಿಸೂಚನೆ ಹೊರಡಿಸಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪೌರತ್ವ ತಿದ್ದುಪಡಿ ಕಾಯ್ದೆಗೆ ಬಹಳಷ್ಟು ಜನರು ವಿರೋಧ ವ್ಯಕ್ತಪಡಿಸಿರುವುದನ್ನು ನಾವೆಲ್ಲ ನೋಡಿದ್ದೇವೆ. ಇದರ ನಡುವೆಯೂ ಕೇಂದ್ರ ಸರ್ಕಾರ ಇಂತಹ ನಿರ್ಧಾರಕ್ಕೆ ಬಂದಿದೆ. ಇದರಲ್ಲಿ ರಾಜಕೀಯ ಉದ್ದೇಶವಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ' ಎಂದರು. 'ಬಿಜೆಪಿಯವರಿಗೆ ಎಲ್ಲೋ ಒಂದು ಕಡೆ ಸೋಲಿನ ಆತಂಕ ಕಾಡುತ್ತಿದೆ. ಹೆಚ್ಚು ಸ್ಥಾನ ಗೆಲ್ಲುತ್ತೇವೆ ಎಂದು ಹೇಳಿಕೊಳ್ಳುತ್ತರಾದ-ರೂ ಸೋಲಿನ ಭಯವಿದೆ. ಬಿಜೆಪಿಯವರಿಗೆ ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂಬ ವಿಶ್ವಾಸ ಕಡಿಮೆಯಾದಂತಿದೆ. ಅದಕ್ಕಾಗಿ ಇಂತಹ ತೀರ್ಮಾನ ತೆಗೆದುಕೊಂಡಿದ್ದಾರೆ' ಎಂದು ಹೇಳಿದರು.

ದೇಶದಾದ್ಯಂತ ಸಿಎಎ ಜಾರಿ

ಒಂದನೇ ಪುಟದಿಂದ

ಕೇಂದ್ರ ಗೃಹ ಸಚಿವಾಲಯವು 2020ರಿಂದಲೂ, ನಿಯಮ ರೂಪಿಸಲು ಸಂಸದೀಯ ಸಮಿತಿಯಿಂದ ಕಾಲಕಾಲಕ್ಕೆ ಹೆಚ್ಚುವರಿ ಕಾಲಾವಕಾಶ ಪಡೆದುಕೊಳ್ಳುತ್ತ ಬಂದಿದೆ.

ಪೌರತ್ವ ಕೋರುವವರಿಂದ ಯಾವ ದಾಖಲೆಗಳನ್ನೂ ಕೇಳುವುದಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ಸಿಎಎ ವಿರೋಧಿಸಿ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಿ ನೂರಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಸಿಎಎ ಈಗ ದೇಶದ ಕಾನೂನಾಗಿದೆ. ಅದು ಅನುಷ್ಠಾನಕ್ಕೆ ಬರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಅಮಿತ್ ಶಾ ಅವರು 2023ರ ಡಿಸೆಂಬರ್ 27ರಂದು ಹೇಳಿದ್ದರು. ಸಿಎಎ ವಿಚಾರದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಜನರ ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದ್ದರು. ಮಮತಾ ಅವರ ನೇತೃತ್ವದಲ್ಲಿ ಟಿಎಂಸಿ ಪಕ್ಷವು ಸಿಎಎ ಜಾರಿಗೆ ವಿರೋಧ ವ್ಯಕ್ತಪಡಿಸಿದೆ.

ಸಿಎಎ ಜಾರಿಗೆ ತರುವುದು ಬಿಜೆಪಿಯ ಬದ್ಧತೆಗಳಲ್ಲಿ ಒಂದು ಎಂದು ಕೂಡ ಶಾ ಹೇಳಿದ್ದರು.

ಸಿಎಎ ಜಾರಿಗೆ ತರಲಾಗುತ್ತದೆ ಎಂಬ ಆಶ್ವಾಸನೆಯು ಪಶ್ಚಿಮ ಬಂಗಾಳದಲ್ಲಿ ಕಳೆದ ಲೋಕಸಭಾ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯ ಪ್ರಮುಖ ಚುನಾವಣಾ ಅಸ್ತ್ರವಾಗಿತ್ತು. ಬಂಗಾಳದಲ್ಲಿ ಬಿಜೆಪಿ ಬಲ ಹೆಚ್ಚಿಸಿಕೊಳ್ಳುವುದರ ಹಿಂದೆ ಸಿಎಎ ವಿಚಾರವಾಗಿ ನೀಡಿರುವ ಆಶ್ವಾಸನೆ ಕೂಡ ಕೆಲಸ ಮಾಡಿರಬಹುದು ಎಂದು ಬಿಜೆಪಿ ನಾಯಕರು ಭಾವಿಸಿದ್ದಾರೆ.

ದೆಹಲಿಯ ಶಾಹೀನ್ ಬಾಗ್, ಜಾಮಿಯಾ ಮತ್ತು ಇತರ ಕೆಲವು ಪ್ರದೇಶಗಳಲ್ಲಿ ಹಾಗೂ ಹಿಂದೆ ಸಿಎಎ ವಿರೋಧಿ ಪ್ರತಿಭಟನೆಗಳು ನಡೆದ ವಿವಿಧ ರಾಜ್ಯಗಳಲ್ಲಿ ಸೋಮವಾರ ಭದ್ರತೆ ಹೆಚ್ಚಿಸಲಾಗಿದೆ.

ನಾಲ್ಕು ವರ್ಷಗಳ ನಂತರ ನಿಯಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೌರತ್ವ ತಿದ್ದುಪಡಿ ಕಾಯ್ದೆಯು (ಸಿಎಎ) ಅಧಿಸೂಚನೆಯಲ್ಲಿ ಪ್ರಕಟವಾದ ನಂತರ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸುವುದಕ್ಕೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ 1,521 ದಿನಗಳು ಬೇಕಾದವು.

ಪೌರತ್ವ ತಿದ್ದುಪಡಿ ಮಸೂದೆಗೆ ಸಂಸತ್ತು 2019ರ ಡಿಸೆಂಬರ್ 11ರಂದು ಅಂಗೀಕಾರ ನೀಡಿತ್ತು. ಅದಕ್ಕೆ ರಾಷ್ಟ್ರಪತಿಯವರು ಮಾರನೆಯ ದಿನವೇ ಅಂಕಿತ ಹಾಕಿದ್ದರು. 2020ರ ಜನವರಿ 10ರಂದು ಕಾಯ್ದೆಯನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಯಿತು. ಚುನಾವಣೆಯಲ್ಲಿ ಲಾಭ ಪಡೆಯುವ ಉದ್ದೇಶದಿಂದಲೇ ನಿಯಮ ರೂಪಿಸುವುದನ್ನು ವಿಳಂಬ ಮಾಡಲಾಗುತ್ತಿದೆ ಎಂಬ ಅಭಿಪ್ರಾಯ ಒಂದು ವಲಯದಲ್ಲಿ ವ್ಯಕ್ತವಾಗಿತ್ತು.

ಸಿಎಎ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸುವುದಕ್ಕೆ ಸರ್ಕಾರಕ್ಕೆ ಈವರೆಗೆ ಸಮಯ ಆಗಿರಲಿಲ್ಲ ಎಂಬುದೇ ಆಶ್ಚರ್ಯ ಎಂದು ಹಿರಿಯ ವಕೀಲ ಸಂಜಯ್ ಹೆಗ್ಡೆ ಪ್ರತಿಕ್ರಿಯೆ ನೀಡಿದ್ದಾರೆ. 'ಕಾಯ್ದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ತಡೆಯಾಜ್ಞೆ ಇಲ್ಲ' ಎಂದು ಹೆಗ್ಡೆ ಹೇಳಿರುವುದಾಗಿ ಪಿಟಿಐ ವರದಿ ಮಾಡಿದೆ.

ಚುನಾವಣಾ ಬಾಂಡ್: ಆಗುಹೋಗುಗಳು

- **2017:** ಚುನಾವಣಾ ಬಾಂಡ್ ಯೋಜನೆಯನ್ನು ಹಣಕಾಸು ಮಸೂದೆಯಲ್ಲಿ ಪರಿಚಯಿಸಲಾಯಿತು
- **2017 ಸೆಪ್ಟೆಂಬರ್ 14:** ಈ ಯೋಜನೆಯನ್ನು ಪ್ರಶ್ನಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ ಎಂಬ ಸ್ವಯಂ ಸೇವಾ ಸಂಸ್ಥೆಯಿಂದ ಸುಪ್ರೀಂ ಕೋರ್ಟ್‌ಗೆ ಅರ್ಜಿ
- **2017 ಅಕ್ಟೋಬರ್ 3:** ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಿದ ಸುಪ್ರೀಂ ಕೋರ್ಟ್
- **2018 ಜನವರಿ 2:** ಚುನಾವಣಾ ಬಾಂಡ್ ಯೋಜನೆ ಕುರಿತು ಅಧಿಸೂಚನೆ ಹೊರಡಿಸಿದ ಕೇಂದ್ರ
- **2022 ನವೆಂಬರ್ 7:** ಯಾವುದಾದರೂ ವಿಧಾನಸಭೆಯ ಚುನಾವಣೆ ನಿಗದಿಯಾಗುವ ಸಾಧ್ಯತೆ ಇರುವ ವರ್ಷದಲ್ಲಿ ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡುವ ಅವಧಿಯನ್ನು 70 ದಿನಗಳಿಂದ 85 ದಿನಗಳಿಗೆ ಏರಿಕೆ ಮಾಡಿ ಯೋಜನೆಗೆ ತಿದ್ದುಪಡಿ ತರಲಾಯಿತು
- **2023 ಅಕ್ಟೋಬರ್ 16:** ಚುನಾವಣಾ ಬಾಂಡ್ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಯನ್ನು ಐವರು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಿದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠ
- **2023 ಅಕ್ಟೋಬರ್ 31:** ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠದಿಂದ ವಿಚಾರಣೆ ಆರಂಭ
- **2023 ನವೆಂಬರ್ 2:** ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್
- **2024 ಫೆಬ್ರುವರಿ 15:** ಚುನಾವಣಾ ಬಾಂಡ್ ಯೋಜನೆಯನ್ನು ರದ್ದುಗೊಳಿಸಿ, ಸರ್ವಾನುಮತದ ತೀರ್ಪು ಪ್ರಕಟ
- **2024 ಮಾರ್ಚ್ 4:** ರಾಜಕೀಯ ಪಕ್ಷಗಳು ಸ್ವೀಕರಿಸಿರುವ ಚುನಾವಣಾ ಬಾಂಡ್‌ಗಳ ಮಾಹಿತಿಯನ್ನು ಸಲ್ಲಿಸುವ ಅವಧಿಯನ್ನು ಜೂನ್ 30ರ ವರೆಗೆ ವಿಸ್ತರಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್ ಮೊರೆಹೋದ ಎಸ್‌ಬಿಐ
- **2024 ಮಾರ್ಚ್ 7:** ಮಾರ್ಚ್ 6ರೊಳಗೆ ಚುನಾವಣಾ ಬಾಂಡ್‌ಗಳ ಮಾಹಿತಿ ಸಲ್ಲಿಸದೆ ನ್ಯಾಯಾಂಗ ನಿಂದನೆ ಮಾಡಿರುವುದಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆ
- **2024 ಮಾರ್ಚ್ 11:** ಅವಧಿ ವಿಸ್ತರಣೆ ಕೋರಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ಸಾಂವಿಧಾನಿಕ ಪೀಠ

ಸುಪ್ರೀಂ ಕೋರ್ಟ್ ಆದೇಶದಿಂದಾಗಿ ಚುನಾವಣಾ ಬಾಂಡ್ ಖರೀದಿ ಮೂಲಕ ಬಿಜೆಪಿಗೆ ಯಾರೆಲ್ಲ ದೇಣಿಗೆ ನೀಡಿದ್ದಾರೆ ಎನ್ನುವುದು ಶೀಘ್ರವೇ ದೇಶಕ್ಕೆ ಗೊತ್ತಾಗಲಿದೆ. ಮೋದಿ ಸರ್ಕಾರದ ವಹಿವಾಟುಗಳು, ಹಗರಣಗಳು ಮತ್ತು ಭ್ರಷ್ಟಾಚಾರವನ್ನು ಬಯಲು ಮಾಡುವ ಮೊದಲ ಹಂತ ಇದಾಗಿದೆ.

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಚುನಾವಣಾ ಬಾಂಡ್‌ಗಳು ಭಾರತ ದೇಶದ ಇತಿಹಾಸದಲ್ಲಿ ಅತಿದೊಡ್ಡ ಹಗರಣ ಎಂಬುದು ಸಾಬೀತಾಗಲಿದೆ. ಭಾರತ ಸರ್ಕಾರ ಮತ್ತು ಭ್ರಷ್ಟ ಉದ್ಯಮಿಗಳ ನಡುವಿನ ಸಂಬಂಧವನ್ನು ಬಹಿರಂಗಗೊಳಿಸುವ ಮೂಲಕ ನರೇಂದ್ರ ಮೋದಿ ಸರ್ಕಾರದ ನಿಜವಾದ ಮುಖವು ದೇಶದ ಎದುರು ಜಗಜ್ಜಾಹೀರಾಗಲಿದೆ.

ರಾಹುಲ್ ಗಾಂಧಿ, ಸಂಸದ, ಕಾಂಗ್ರೆಸ್

ಬಿಜೆಪಿಯು ಸ್ವಿಸ್ ಬ್ಯಾಂಕ್ ಮಾಹಿತಿಯನ್ನು ನೀಡುವುದಾಗಿ ಭರವಸೆ ನೀಡಿ, ಅಧಿಕಾರಕ್ಕೆ ಬಂದಿತ್ತು. ಈಗ ಅದೇ ಬಿಜೆಪಿ ಎಸ್‌ಬಿಐ ಮಾಹಿತಿಯನ್ನು ಬಹಿರಂಗಪಡಿಸಲು ಹೆದರುತ್ತಿದೆ.

ಮಹುವಾ ಮೊಯಿತ್ರಾ, ಟಿಎಂಸಿ ನಾಯಕಿ

ಸುಪ್ರೀಂ ಕೋರ್ಟ್‌ನ ಇಂದಿನ ಆದೇಶದಿಂದ ತನ್ನ ತೀರ್ಪನ್ನು ಉಲ್ಲಂಘಿಸಿದ ಎಸ್‌ಬಿಐಗೆ ತೀವ್ರ ಹಿನ್ನಡೆಯಾಗಿದೆ. ಆದಾಗ್ಯೂ, ಈ ಆದೇಶವು ತನಗೆ ಅಂಟಿರುವ ಕಳಂಕವನ್ನು ತೊಡೆದುಕೊಂಡು, ಹೊರಬರಲು ಎಸ್‌ಬಿಐಗೆ ಅವಕಾಶ ನೀಡಿದೆ. ಎಸ್‌ಬಿಐ ಅಧ್ಯಕ್ಷ, ಅತ್ಯುತ್ತಮವಾದ ಅಧಿಕಾರಿಗಳು ಇಂಥ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುವುದೇ ಬೇಸರ.

ಪಿ. ಚಿದಂಬರಂ, ರಾಜ್ಯಸಭಾ ಸದಸ್ಯ, ಕಾಂಗ್ರೆಸ್



ಚುನಾವಣಾ ಬಾಂಡ್ ವಿವರ ಬಹಿರಂಗ ಪ್ರಕ್ರಿಯೆಗೆ ತಡೆಯಲು ಎಸ್‌ಬಿಐ ಯತ್ನಿಸಿತು. ಆದರೆ, ಕೋರ್ಟ್ ಅದನ್ನೂ ಮೀರಿ ನಿಂತಿದೆ. ಎಸ್‌ಬಿಐ ಅರ್ಜಿ ವಜಾಗೊಳಿಸಿದ ಸುಪ್ರೀಂ ಕೋರ್ಟ್ ಕ್ರಮ ಸ್ವಾಗತಾರ್ಹ

ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ

ದೇಶದ ಚುನಾವಣಾ ದೇಣಿಗೆ ವಿಚಾರದಲ್ಲಿ ಪಾರದರ್ಶಕತೆಯನ್ನು ಎತ್ತಿಹಿಡಿಯುವಲ್ಲಿ ಈ ತೀರ್ಪು ಅತ್ಯಂತ ಮಹತ್ವದ್ದು

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

ಇಂದೇ ಮಾಹಿತಿ ಹಂಚಿಕೊಳ್ಳಲು ಎಸ್‌ಬಿಐಗೆ 'ಸುಪ್ರೀಂ' ತಾಕೀತು

ಒಂದನೇ ಪುಟದಿಂದ

ಗಡುವನ್ನು 2024ರ ಜೂನ್ 30ರವರೆಗೆ ವಿಸ್ತರಿಸುವಂತೆ ಕೋರಿ ಎಸ್‌ಬಿಐ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸಂವಿಧಾನ ಪೀಠ ಸೋಮವಾರ ನಡೆಸಿತು. ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಎಸ್‌ಬಿಐ ವಿರುದ್ಧ ಪ್ರತ್ಯೇಕವಾಗಿ ಸಲ್ಲಿಕೆಯಾಗಿದ್ದ ನ್ಯಾಯಾಂಗ ನಿಂದನೆ ಅರ್ಜಿಗಳ ವಿಚಾರಣೆಯನ್ನು ಪೀಠವು ಇದೇ ವೇಳೆ ಕೈಗೆತ್ತಿಕೊಂಡಿತು.

ನ್ಯಾಯಾಲಯವು ಬಹಿರಂಗಪಡಿಸಲು ನಿರ್ದೇಶಿಸಿರುವ ಮಾಹಿತಿಯು ಸುಲಭವಾಗಿ ಲಭ್ಯವಿದೆ ಎಂಬುದು ಎಸ್‌ಬಿಐ ಸಲ್ಲಿಸಿರುವ ಅರ್ಜಿಯಲ್ಲಿಯೇ ಅಡಕವಾಗಿದೆ ಎಂಬುದನ್ನು ಪೀಠವು ಗಮನಕ್ಕೆ ತೆಗೆದುಕೊಂಡಿತು. ಕೋರ್ಟ್ ನೀಡಿರುವ ನಿರ್ದೇಶನಗಳ ಪಾಲನೆ ವಿಚಾರದಲ್ಲಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಿಂದ ಪ್ರಮಾಣಪತ್ರ ಸಲ್ಲಿಸಬೇಕು ಎಂದೂ ಪೀಠ ಹೇಳಿತು.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) (ಹೈದ್ರಾಬಾದ್ ರೋಡ್, ರಾಯಚೂರು –584102)
Phone /Fax-08532-238488/89
Web.www.rims-raichur.gov.in Email info@rims-raichur.com

ಸಂ.ರಿಮ್ಸ್/ಸರಬರಾಜು/ಟೆಂಡರ್/ಸೇವೆ/16/2023–24 ದಿನಾಂಕ : 07.03.2024

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವಶ್ಯವಿರುವ ಸ್ವಚ್ಛತೆ, ಸಫಾಯಿ ಕರ್ಮಚಾರಿ ಮತ್ತು ಇನ್ನತರ ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಪೂರೈಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. 1) ಟೆಂಡರ್‌ಗಳನ್ನು ದಿನಾಂಕ : 11.03.2024 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 10.04.2024 ರ ಸಾಯಂಕಾಲ 5.30 ಗಂಟೆಯ ವರೆಗೆ 3) ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ : 12.04.2024 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ https://rimsraichur.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು

DIP/RCR/586/KSMC&A/Job No.583/2023-24

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010.
ಟೆಲಿಫ್ಯಾಕ್ಸ್: 080–22024000 ಇ–ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2023–24/26 ದಿನಾಂಕ: 11–03–2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಐಟಂ ದರದ ಆಧಾರದ ಮೇಲೆ ದ್ವಿಲಕೋಟೆ ಪದ್ಧತಿಯಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರ ಅಗತ್ಯತೆಯಂತೆ ಈ ಕೆಳಕಂಡ ಸಂಬಂಧಿತ ಕಾಮಗಾರಿಗಳಲ್ಲಿ ಅನುಭವವಿರುವ ಏಜೆನ್ಸಿಗಳಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ)	ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ರೂ.ಗಳಲ್ಲಿ)	ಕಾಮಗಾರಿ/ಸೇವೆಗಳು ಪೂರ್ಣಗೊಳ್ಳುವ ಕಾಲಾವಧಿ
1	"ಬೆಂಗಳೂರು ನಗರದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗಕ್ಕೆ ವಿವಿಧ 25 ಸ್ಥಳಗಳಲ್ಲಿ ಆಟೋಮೇಟೆಡ್ ಕಾಂಟಾಕ್ಟ್‌ಲೆಸ್ ಟ್ರಾಫಿಕ್ ಎನ್‌ಫೋರ್ಸ್‌ಮೆಂಟ್‌ಗಾಗಿ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನ (ಆರ್‌ಎಲ್‌ವಿಡಿ + ಎಎನ್‌ಪಿಆರ್ ಕ್ಯಾಮೆರಾ) ಸರಬರಾಜು, ಅಳವಡಿಕೆ, ಕಾರ್ಯಚಾಲನೆ ಮತ್ತು ನಿರ್ವಹಣೆ ಕಾಮಗಾರಿ."	9,99,50,000/-	14,99,250/-	ಆರು ತಿಂಗಳು (ಸರಬರಾಜು ಮಾಡಿ, ಅಳವಡಿಸಿ, ಪರೀಕ್ಷಿಸಿ, ಕಾರ್ಯಚಾಲನೆ ಮಾಡಿ ತರಬೇತಿ ನೀಡುವುದು)
2	"ಬೆಂಗಳೂರು ನಗರದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗಕ್ಕೆ 2024 ರಿಂದ 2027ರ ಮೂರು ವರ್ಷಗಳ ಅವಧಿಗೆ ಐಟಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳ ಅಸೆಟ್ ಮ್ಯಾನೇಜ್‌ಮೆಂಟ್, ಮಾನಿಟರಿಂಗ್ ಮತ್ತು ವಾರ್ಷಿಕ ನಿರ್ವಹಣೆ ಕಾಮಗಾರಿ."	4,46,55,683/-	6,69,850/-	ಮೂರು ವರ್ಷಗಳು

ಆಸಕ್ತ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಬಿಡ್‌ಗಳು ಮತ್ತು ಇಎಂಡಿಯನ್ನು (ವಿದ್ಯುನ್ಮಾನವಾಗಿ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು.

ವಿವಿಧ ಚಟುವಟಿಕೆಗಳಿಗೆ ಟೆಂಡರ್ ದಿನಾಂಕಗಳು: (1) ಟೆಂಡರ್‌ನ ಆಕ್ಷೇಪಣೆ/ವಿಚಾರಣೆಯನ್ನು ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: 20.03.2024ರ 17.30 ಗಂಟೆವರೆಗೆ. ಅರ್ಜಿದಾರರು ಎಲೆಕ್ಟ್ರಾನಿಕ್ ಮೇಲ್ cekrdcl@gmail.com ಮುಖಾಂತರ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು. (2) ಪೂರ್ವ ಬಿಡ್ ಸಭೆಯ ದಿನಾಂಕ: 21.03.2024ರಂದು ಬೆಳಿಗ್ಗೆ 11.30 ಗಂಟೆಗೆ – ಜಂಟಿ ಪೊಲೀಸ್ ಆಯುಕ್ತರವರ ಕಚೇರಿ, ಬೆಂಗಳೂರು ನಗರ ಪೊಲೀಸ್, ನಂ. 5, ಸಂಚಾರ ನಿರ್ವಹಣಾ ಕೇಂದ್ರ, 2ನೇ ಮಹಡಿ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001. (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 04.04.2024ರ 17.30 ಗಂಟೆವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 06.04.2024ರಂದು ಬೆಳಿಗ್ಗೆ 11.00 ಗಂಟೆಗೆ.

* ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಮುಖ್ಯ ಅಭಿಯಂತರರು
ಕರಅನಿನಿ, ಬೆಂಗಳೂರು

DIPR/CP/YC/4194/2023-24

ಷೇರುಪೇಟೆ ವಹಿವಾಟು ▼616	
ಹಿಂದಿನ ಅಂತ್ಯ	74,119
ಇಂದಿನ ಅಂತ್ಯ	73,502



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	22,493
ಇಂದಿನ ಅಂತ್ಯ	22,332
▼	160
ದಿನದ ಗರಿಷ್ಠ	22,526

ವಿನಿಮಯ ದರ	
$ ಡಾಲರ್	82.77
£ ಪೌಂಡ್	106.28
€ ಯುರೊ	90.49
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100ಕ್ಕೆ	₹465
12 ಕ್ಕೆ	₹65
ಮೈಸೂರು	
100ಕ್ಕೆ	₹465

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162
ಗುಡ್ ಲಾಟ್	₹151

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹320-445
ದ್ವಿತಳಿ (ಬಿ.ವಿ)	₹327-571

‘ರೂಪಾಯಿಯಲ್ಲಿ ವಹಿವಾಟಿಗೆ ಬಾಂಗ್ಲಾ, ಶ್ರೀಲಂಕಾ ಉತ್ಸುಕ’

ನವದೆಹಲಿ (ಪಿಟಿಐ): ‘ಬಾಂಗ್ಲಾದೇಶ, ಶ್ರೀಲಂಕಾ ಹಾಗೂ ಗಲ್ಫ್ ರಾಷ್ಟ್ರಗಳು ರಫ್ತು ಮತ್ತು ಆಮದು ವಹಿವಾಟುಗಳನ್ನು ಭಾರತದ ರೂಪಾಯಿಯಲ್ಲಿಯೇ ನಡೆಸಲು ಉತ್ಸುಕವಾಗಿವೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

‘ಹಲವು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳು ದ್ವಿಪಕ್ಷೀಯ ವ್ಯಾಪಾರ ವಹಿವಾಟನ್ನು ರೂಪಾಯಿಯಲ್ಲಿ ನಡೆಸಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆ. ಇದರಿಂದ ನಿರ್ವಹಣಾ ವೆಚ್ಚ ತಗ್ಗಲಿದೆ’ ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ಈ ಸಂಬಂಧ ಬಾಂಗ್ಲಾ ಮತ್ತು ಶ್ರೀಲಂಕಾವು ಭಾರತದ ಜೊತೆಗೆ ಮಾತುಕತೆ ನಡೆಸಿವೆ. ಶೀಘ್ರವೇ, ಈ ಪ್ರಕ್ರಿಯೆ ಆರಂಭಗೊಳ್ಳಲಿದೆ. ಗಲ್ಫ್ ರಾಷ್ಟ್ರಗಳು ಇದೇ ಹಾದಿಯನ್ನು ಎದುರು ನೋಡುತ್ತಿವೆ’ ಎಂದು ಹೇಳಿದ್ದಾರೆ.

ಸ್ಥಳೀಯ ಕರೆನ್ಸಿಗಳಲ್ಲಿ ದ್ವಿಪಕ್ಷೀಯ ವ್ಯಾಪಾರ ನಡೆದರೆ ಉಭಯ ರಾಷ್ಟ್ರಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂಬುದು ವಿದೇಶಗಳಿಗೆ ಅರ್ಥವಾಗುತ್ತಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಜನನ: 13/05/1953
ಮರಣ: 27/02/2024
ಶ್ರೀ ಕೆ.ಟಿ. ಡಾಕಪ್ಪ, ನ್ಯಾಯವಾದಿಗಳು
ನನ್ನ ಪೂಜ್ಯ ಪತಿಯವರಾದ ಶ್ರೀ ಕೆ.ಟಿ. ಡಾಕಪ್ಪ, ಇವರು ದಿನಾಂಕ 27-02-2024ನೇ ಮಂಗಳವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇದರ ತತ್ಸಂಬಂಧ “ವೈಕುಂಠ ಸಮಾರಾಧನೆ” ಯನ್ನು ದಿನಾಂಕ 13-03-2024ನೇ ಬುಧವಾರ ಮಧ್ಯಾಹ್ನ ಗಂಟೆ 12-00ಕ್ಕೆ “ಶ್ರೀ ಶಿವಕೃಪಾ ಸಭಾಭವನ” ಗಬಡಿ, ತೂದೂರು, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಇಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ, ಆಹ್ವಾನ ಪತ್ರಿಕೆ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸತಕ್ಕದ್ದು.
ಇಂತಿ ದುಃಖತಪ್ತರು
ಧರ್ಮಪತ್ನಿ- ಶ್ರೀಮತಿ ಶೈಲ ಡಾಕಪ್ಪ (ಕುಂದೋಡಿ)
ಶ್ರೀಮತಿ ರಕ್ಷಿತ (ನ್ಯಾಯವಾದಿಗಳು) ಡಾ. ಸುಹಾಸ್, ಬೆಂಗಳೂರು
ಶ್ರೀ ಕೆ. ಟಿ. ರಾಮಕೃಷ್ಣ ಮತ್ತು ಸಹೋದರರು (ಕುಂದೋಡಿ), ಕೌರಿ
ಶ್ರೀಮತಿ ಶ್ರೀ ಪಾಳಪ್ಪ ಗೌಡ್ರು ಮತ್ತು ಮಕ್ಕಳು, ತೋರುವಾನಿ

5ನೇ ವರ್ಷದ ಪುಣ್ಯಸ್ಮರಣೆ

ಸಿದ್ಧಗಂಗಯ್ಯ
ನಿವೃತ್ತ ಕಂದಾಯ ಪರಿವೀಕ್ಷಕರು, ಬಿ.ಬಿ.ಎಂ.ಪಿ
ಜನನ: 4-6-1944 – ನಿಧನ: 12-3-2019
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

ಸೆನ್ಸೆಕ್ಸ್ 616 ಅಂಶ ಇಳಿಕೆ

ಎಸ್‌ಬಿಐ ಷೇರು ಶೇ 2ರಷ್ಟು ಕುಸಿತ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರ ಇಳಿಕೆ ಕಂಡಿವೆ. ಲೋಹ ಹಾಗೂ ಬ್ಯಾಂಕಿಂಗ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದು ಕೂಡ ಕುಸಿತಕ್ಕೆ ಕಾರಣವಾಯಿತು.

ಎರಡು ದಿನದ ಹಿಂದೆ ಗರಿಷ್ಠ ಮಟ್ಟಕ್ಕೆ ತಲುಪಿದ್ದ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 616 ಅಂಶ (ಶೇ 0.83) ಇಳಿಕೆ ಕಂಡು 73,502ರಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 685 ಅಂಶ ಕುಸಿದು, 73,433 ಅಂಶಗಳಿಗೆ ತಲುಪಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 160 ಅಂಶ ಇಳಿಕೆ ಕಂಡು (ಶೇ 0.72) 22,332ರಲ್ಲಿ ವಹಿವಾಟನ್ನು ಅಂತ್ಯಗೊಳಿಸಿತು.

‘ಅಮೆರಿಕದ ಕೇಂದ್ರೀಯ ಬ್ಯಾಂಕ್ ಆಗಿರುವ ಫೆಡರಲ್ ಬ್ಯಾಂಕ್ ಬಡ್ಡಿದರ ಕಡಿತ ಮಾಡುವುದರ ಬಗ್ಗೆ ಅನಿಶ್ಚಿತತೆ ತಲೆದೋರಿದೆ. ಇದು ದೇಶೀಯ ಮಾರುಕಟ್ಟೆ ಮೇಲೂ ಪರಿಣಾಮ ಬೀರಿದೆ. ಅಲ್ಲದೆ, ಮಂಗಳವಾರ ಅಮೆರಿಕದ ಹಣದುಬ್ಬರ ಕುರಿತ ವರದಿ ಬಿಡುಗಡೆಯಾಗಲಿದೆ. ಈ ಎಲ್ಲಾ ಅಂಶಗಳು ಷೇರುಪೇಟೆ ಮೇಲೆ ನಕಾರಾತ್ಮಕ ಪರಿಣಾಮ ಬೀರಿವೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯಸ್ಥ (ಸಂಶೋಧನೆ) ವಿನೋದ್ ನಾಯರ್ ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರು ₹7,304 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಪಾನ್ ಷೇರುಪೇಟೆ ನಿಕ್ಕಿ ಶೇ 2.2 ಹಾಗೂ ದಕ್ಷಿಣ ಕೊರಿಯಾ ಶೇ 0.8ರಷ್ಟು ಕುಸಿತ ಕಂಡಿವೆ. ಹಾಂಗ್‌ಕಾಂಗ್ ಶೇ 1.4ರಷ್ಟು ಹಾಗೂ ಶಾಂಘೈ ಮಾರುಕಟ್ಟೆ ಶೇ 0.7ರಷ್ಟು ಏರಿಕೆ ಕಂಡಿವೆ. ಬ್ರೆಂಟ್ ಕಚ್ಚಾ ತೈಲ ಶೇ 0.29ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 82.32 ಡಾಲರ್‌ಗೆ ತಲುಪಿದೆ.

ಎಸ್‌ಬಿಐ ಷೇರು ಇಳಿಕೆ: ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ಗಡುವು ವಿಸ್ತರಣೆ ಕೋರಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ ಎಸ್‌ಬಿಐ ಷೇರಿನ ಮೌಲ್ಯ ಶೇ 2ರಷ್ಟು ಕುಸಿದಿದೆ.

ಸಾರ್ವಜನಿಕ ಸಾಲದ ವಿತರಣೆಗೆ ಸಂಬಂಧಿಸಿದಂತೆ ಸೆಬಿ ವಿಧಿಸಿರುವ ನಿರ್ಬಂಧದಿಂದಾಗಿ ಜೆಎಂ ಫೈನಾನ್ಶಿಯಲ್ ಷೇರಿನ ಮೌಲ್ಯ ಶೇ 10ರಷ್ಟು ಕುಸಿದಿದೆ.

ಪವರ್ ಗ್ರಿಡ್, ಟಾಟಾ ಸ್ಟೀಲ್ ಷೇರಿನ ಮೌಲ್ಯ ಶೇ 2ರಷ್ಟು ಕುಸಿದಿದೆ. ಎಚ್‌ಡಿಎಫ್‌ಸಿ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಹಿಂದುಸ್ತಾನ್ ಯೂನಿಲಿವರ್ ಹಾಗೂ ಎನ್‌ಟಿಪಿಸಿ ಇಳಿಕೆ ಕಂಡಿವೆ.

ನೆಸ್ಲೆ, ಬಜಾಜ್ ಫಿನ್‌ಸರ್ವ್ ಹಾಗೂ ಬಜಾಜ್ ಫೈನಾನ್ಸ್ ಗಳಿಕೆ ಕಂಡಿವೆ.

ಅಡಿಕೆ ಆಮದಿಗೆ ಕೇಂದ್ರ ಅನುಮತಿ ನೀಡಿಲ್ಲ: ಸಚಿವೆ ಶೋಭಾ ಸ್ಪಷ್ಟನೆ

ವೈಜ್ಞಾನಿಕ ಅಧ್ಯಯನಕ್ಕೆ ₹10 ಕೋಟಿ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ(ದಕ್ಷಿಣ ಕನ್ನಡ): ‘ದೇಶದ ಪ್ರತಿಷ್ಠಿತ ಸಂಸ್ಥೆಗಳನ್ನು ಸೇರಿಸಿಕೊಂಡು ಈ ಭಾಗದ ಅಡಿಕೆಯ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಅದಕ್ಕಾಗಿ ₹10 ಕೋಟಿಯನ್ನು ಮೀಸಲಿಟ್ಟಿದೆ’ ಎಂದು ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕಡಬ ತಾಲ್ಲೂಕಿನ ಬಿಳಿನೆಲೆ ಗ್ರಾಮದ ನೆಟ್ಟಣದ ಕಿದು ಸಿಪಿಸಿಆರ್‌ಐನಲ್ಲಿ ಸೋಮವಾರ ನಡೆದ ಕೃಷಿ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಅಡಿಕೆ ಆರೋಗ್ಯಕ್ಕೆ ಹಾನಿಕರವಲ್ಲ ಎಂಬುದನ್ನು ಕೇಂದ್ರದ ಆರೋಗ್ಯ ಸಚಿವರ ಗಮನಕ್ಕೆ ತಂದಿದ್ದೆವು. ಬೆಳೆಗಾರರ ಪರವಾಗಿ ಪ್ರಧಾನಿ ನಿಂತಿದ್ದರು. ಆದರೆ, ಈ ಬಗ್ಗೆ ವೈಜ್ಞಾನಿಕ ವರದಿ ಅಗತ್ಯವಿದ್ದು, ಕಾನೂನಾತ್ಮಕ ಕ್ರಮಕ್ಕೆ ಅವರು ಬೆಂಬಲ ಸೂಚಿಸಿದ್ದರು’ ಎಂದರು.

ಕಡಬ ತಾಲ್ಲೂಕಿನ ಬಿಳಿನೆಲೆ ಗ್ರಾಮದ ನೆಟ್ಟಣದ ಕಿದು ಸಿಪಿಸಿಆರ್‌ಐನಲ್ಲಿ ನಡೆದ ಕೃಷಿ ಸಮ್ಮೇಳನವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಿದರು

ಆಮದು ಇಲ್ಲ: ‘ಪುನಃ ಅಡಿಕೆ ಆಮದು ಮಾಡಲಾಗುತ್ತಿದೆ ಎಂಬುದು ಸತ್ಯಕ್ಕೆ ದೂರವಾದುದು. 2020-21ರಲ್ಲಿ ಭೂತಾನ್‌ನಿಂದ ಅಡಿಕೆ ಆಮದಿಗೆ ಅನುಮತಿ ನೀಡಲಾಗಿತ್ತು. ಈ ವರ್ಷ ಯಾವುದೇ ದೇಶದಿಂದ ಅಡಿಕೆ ಆಮದು ಮಾಡಲು ಅನುಮತಿ ನೀಡಿಲ್ಲ. ಅಡಿಕೆ ಆಮದು ಮಾಡಲಾಗುತ್ತಿದೆ ಎಂಬ ಸುದ್ದಿ ಹಬ್ಬಿಸಿ, ದರ ಕುಸಿತ ಮಾಡಿ ಗೊಂದಲ ಸೃಷ್ಟಿಸುವ ಸಂಚು ನಡೆಯುತ್ತಿದೆ’ ಎಂದು ಆರೋಪಿಸಿದರು.

‘ಅಡಿಕೆಯ ಎಲೆಚುಕ್ಕಿ, ಹಳದಿ ಎಲೆ ರೋಗ ನಿರ್ವಹಣೆಗೆ ₹225 ಕೋಟಿ ಅನುದಾನ ಕೋರಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಈ ಬಗ್ಗೆ ಕ್ರಮಕ್ಕೆ ಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಲಾಗಿದೆ. ಈ ಕುರಿತ ಅಧ್ಯಯನಕ್ಕೂ ಕೇಂದ್ರದಿಂದ ಕೋಟ್ಯಂತರ ರೂಪಾಯಿ ನೀಡಲಾಗಿದೆ’ ಎಂದರು.

> ‘ಅಡಿಕೆ ಆರೋಗ್ಯಕ್ಕೆ ಹಾನಿಕರ’ ಎಂದು ಯುಪಿಎ ಸರ್ಕಾರ ವರದಿ ನೀಡಿದ್ದರಿಂದ ಅಡಿಕೆಯ ಧಾರಣೆ ಇಳಿಕೆಯಾಗಿತ್ತು. ಆದರೆ, ಅದರಿಂದ ಹಾನಿಯಾದ ನಿದರ್ಶನವಿಲ್ಲ
> **ಶೋಭಾ ಕರಂದ್ಲಾಜೆ**, ಕೇಂದ್ರ ಸಚಿವೆ

‘ಕಲ್ಪ ಸುವರ್ಣ’ ತಳಿ ಬಿಡುಗಡೆ: ಸಿಪಿಸಿಆರ್‌ಐ ಅಭಿವೃದ್ಧಿಪಡಿಸಿದ ‘ಕಲ್ಪ ಸುವರ್ಣ’ ಗಿಡ್ಡ ತಳಿಯ ತೆಂಗು ಗಿಡವನ್ನು ಶೋಭಾ ಕರಂದ್ಲಾಜೆ ಬಿಡುಗಡೆ ಮಾಡಿದರು. ವಿಟ್ಲ ಕೊಕ್ಕೊ ಹೈಬ್ರಿಡ್ 1, ವಿಟ್ಲ ಕೊಕ್ಕೊ ಹೈಬ್ರಿಡ್ 2 ತಳಿಯನ್ನು ಬಿಡುಗಡೆಗೊಳಿಸಿ ಕೃಷಿಕರಿಗೆ ವಿತರಿಸಲಾಯಿತು. ತರಬೇತುದಾರರಿಗೆ ಪ್ರಮಾಣ ಪತ್ರ, ಉಪಕರಣ, ಸುಧಾರಿತ ತೆಂಗಿನ ತಳಿಗಳ ಪ್ರಕಟಣೆಯನ್ನು ಬಿಡುಗಡೆಗೊಳಿಸಲಾಯಿತು.

114 ಹೆದ್ದಾರಿ ಯೋಜನೆಗೆ ಶಂಕುಸ್ಥಾಪನೆ

ಬೆಳಗಾವಿ–ರಾಯಚೂರು, ಬೆಂಗಳೂರು–ವಿಜಯವಾಡ ಹೆದ್ದಾರಿ ನಿರ್ಮಾಣ

ಗುರುಗ್ರಾಮ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಒಟ್ಟು ₹1 ಲಕ್ಷ ಕೋಟಿ ವೆಚ್ಚದಡಿ 114 ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಬೆಂಗಳೂರು-ಕಡಪ-ವಿಜಯವಾಡ ಎಕ್ಸ್‌ಪ್ರೆಸ್‌ವೇ ಕೂಡ ಈ ಯೋಜನೆಗಳಡಿಯಲ್ಲಿ ಸೇರಿದೆ. ₹14 ಸಾವಿರ ಕೋಟಿ ವೆಚ್ಚದಲ್ಲಿ ಒಟ್ಟು 14 ಪ್ಯಾಕೇಜ್‌ಗಳಲ್ಲಿ ಈ ಹೆದ್ದಾರಿಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಬೆಳಗಾವಿ-ಹುನಗುಂದ-ರಾಯಚೂರು ನಡುವಿನ ರಾಷ್ಟ್ರೀಯ ಹೆದ್ದಾರಿ 748ಎ ನಿರ್ಮಾಣಕ್ಕೂ ಶಿಲಾನ್ಯಾಸ ನೆರವೇರಿಸಿದರು.

ಈ ಯೋಜನೆಗೆ ₹8 ಸಾವಿರ ಕೋಟಿ ನಿಗದಿಪಡಿಸಿದ್ದು, ಆರು ಪ್ಯಾಕೇಜ್‌ಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.

ಉದ್ಘಾಟನೆ: ಇದೇ ವೇಳೆ ಕರ್ನಾಟಕದ ಡಾಬಸ್‌ಪೇಟೆ-ಹೊಸಕೋಟೆ ನಡುವೆ ಎರಡು ಪ್ಯಾಕೇಜ್‌ಗಳಲ್ಲಿ ₹2,750 ಕೋಟಿ ವೆಚ್ಚದಡಿ ನಿರ್ಮಿಸಿರುವ ಹೆದ್ದಾರಿಯನ್ನು ಉದ್ಘಾಟಿಸಿದರು. ಉತ್ತರಪ್ರದೇಶ, ಆಂಧ್ರಪ್ರದೇಶ ಹಾಗೂ ಹಿಮಾಚಲ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿರುವ ಹೆದ್ದಾರಿಗಳನ್ನೂ ಲೋಕಾರ್ಪಣೆಗೊಳಿಸಿದರು.

ಹರಿಯಾಣದಲ್ಲಿ ಸೋಮವಾರ ಲೋಕಾರ್ಪಣೆಗೊಂಡ ದ್ವಾರಕ ಎಕ್ಸ್‌ಪ್ರೆಸ್‌ವೇ ಅನ್ನು ಪ್ರಧಾನಿ ನರೇಂದ್ರ ಮೋದಿ ವೀಕ್ಷಿಸಿದರು. ಕೇಂದ್ರ ಸಚಿವ ನಿತಿನ್ ಗಡ್ಕರಿ, ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಇದ್ದರು —ಪಿಟಿಐ ಚಿತ್ರ

ದ್ವಾರಕ ಎಕ್ಸ್‌ಪ್ರೆಸ್‌ವೇ ವಿಶೇಷತೆ ಏನು?: ಹರಿಯಾಣದಲ್ಲಿ ₹9,000 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ದ್ವಾರಕ ಎಕ್ಸ್‌ಪ್ರೆಸ್‌ವೇ ಅನ್ನು ಉದ್ಘಾಟಿಸಿದರು. ದೇಶದ ಮೊದಲ ಎಂಟು ಪಥಗಳ ಎಕ್ಸ್‌ಪ್ರೆಸ್‌ವೇ ಇದಾಗಿದೆ. ಒಟ್ಟು 29 ಕಿ.ಮೀ. ಉದ್ದವಿದ್ದು, ಹರಿಯಾಣದಲ್ಲಿ 18.9 ಕಿ.ಮೀ. ಹಾಗೂ ನವದೆಹಲಿಯಲ್ಲಿ 10.1 ಕಿ.ಮೀ. ದೂರ ಹಾದುಹೋಗುತ್ತದೆ.

2019ರ ಮಾರ್ಚ್‌ನಲ್ಲಿ ಕೇಂದ್ರ ಸಚಿವರಾಗಿದ್ದ ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ ಹಾಗೂ ನಿತಿನ್ ಗಡ್ಕರಿ ಅವರು ಈ ಎಕ್ಸ್‌ಪ್ರೆಸ್‌ವೇಗೆ ಶಿಲಾನ್ಯಾಸ ನೆರವೇರಿಸಿದ್ದರು. ಈ ಎಕ್ಸ್‌ಪ್ರೆಸ್‌ವೇಯಿಂದ ನವದೆಹಲಿ ಮತ್ತು ಗುರುಗ್ರಾಮದ ನಡುವಿನ ರಾಷ್ಟ್ರೀಯ ಹೆದ್ದಾರಿ 48ರಲ್ಲಿನ ವಾಹನಗಳ ಸಂಚಾರ ಮತ್ತು ದಟ್ಟಣೆ ಕಡಿಮೆಯಾಗಲಿದೆ.

ಈ ಹೆದ್ದಾರಿಯು ನವದೆಹಲಿಯ ವಿಮಾನ ನಿಲ್ದಾಣ ಹಾಗೂ ಗುರುಗ್ರಾಮದ ಬೈಪಾಸ್‌ಗೆ ನೇರ ಸಂಪರ್ಕ ಕಲ್ಪಿಸುತ್ತದೆ.

ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್, ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಜರಿದ್ದರು.

ಅರುಣಾಚಲಕ್ಕೆ ಮೋದಿ: ಚೀನಾ ಪ್ರತಿಭಟನೆ ಸಲ್ಲಿಕೆ

ಬೀಜಿಂಗ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವಾರ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿದ್ದಕ್ಕಾಗಿ ಭಾರತಕ್ಕೆ ರಾಜತಾಂತ್ರಿಕವಾಗಿ ಪ್ರತಿಭಟನೆ ಸಲ್ಲಿಸಿರುವುದಾಗಿ ಚೀನಾ ಸೋಮವಾರ ಹೇಳಿದೆ.

ಭಾರತದ ನಡೆಯು ಉಭಯ ದೇಶಗಳ ನಡುವಣ ಗಡಿ ವಿವಾದವನ್ನು ‘ಇನ್ನಷ್ಟು ಸಂಕೀರ್ಣ’ಗೊಳಿಸುತ್ತದೆ ಎಂಬುದನ್ನು ಚೀನಾ ಪುನರುಚ್ಚರಿಸಿದೆ.

ಮೋದಿ ಅವರು ಕಳೆದ ಶನಿವಾರ ಅರುಣಾಚಲಕ್ಕೆ ಭೇಟಿ ನೀಡಿದ್ದರಲ್ಲದೆ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು. ತವಾಂಗ್ ಸಂಪರ್ಕಿಸುವ ಸೇಲಾ ಸುರಂಗ ಮಾರ್ಗವನ್ನು ಉದ್ಘಾಟಿಸಿದ್ದರು.

ಮೋದಿ ಭೇಟಿ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್, ‘ಅರುಣಾಚಲ ಪ್ರದೇಶ ಭಾರತದ ಭಾಗ ಎಂಬುದನ್ನು ಚೀನಾ ಒಪ್ಪುವುದಿಲ್ಲ’ ಎಂದು ಹೇಳಿದ್ದಾರೆ. ‘ಝಾಂಗ್ನಾನ್ ಪ್ರದೇಶವು ಚೀನಾಕ್ಕೆ ಸೇರಿದೆ’ ಎಂದಿದ್ದಾರೆ.

ಅರುಣಾಚಲ ಪ್ರದೇಶವನ್ನು ಚೀನಾ ‘ದಕ್ಷಿಣ ಟಿಬೆಟ್’ ಎಂದು ಕರೆಯುತ್ತದೆ. ಮಾತ್ರವಲ್ಲ, ‘ಝಾಂಗ್ನಾನ್’ ಎಂದು ಹೆಸರಿಟ್ಟಿದೆ. ಭಾರತದ ನಾಯಕರು ಇಲ್ಲಿಗೆ ಭೇಟಿ ನೀಡುವಾಗ ಚೀನಾ ಪ್ರತಿ ಬಾರಿಯೂ ಪ್ರತಿಭಟನೆ ಸಲ್ಲಿಸಲಿದೆ.

ಪಾಕ್: ಅಧ್ಯಕ್ಷರ ಮಗಳು ‘ಪ್ರಥಮ ಮಹಿಳೆ’

ಇಸ್ಲಾಮಾಬಾದ್ (ಪಿಟಿಐ): ಚಾರಿತ್ರಿಕ ಬೆಳವಣಿಗೆಯೊಂದರಲ್ಲಿ ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಜರ್ದಾರಿ ಅವರು ತಮ್ಮ 31 ವರ್ಷದ ಮಗಳು ಆಸೀಫಾ ಭುಟ್ಟೊ ಅವರನ್ನು ರಾಷ್ಟ್ರದ ಪ್ರಥಮ ಮಹಿಳೆಯನ್ನಾಗಿ ಘೋಷಿಸಿದ್ದಾರೆ.

ಆಸೀಫಾ ಭುಟ್ಟೋ

ರಾಷ್ಟ್ರದ ಅಧ್ಯಕ್ಷರ ಪತ್ನಿಗೆ ಪ್ರಥಮ ಮಹಿಳೆಯ ಸ್ಥಾನಮಾನ ನೀಡುವುದು ವಾಡಿಕೆ. ಆದರೆ, ಜರ್ದಾರಿ ಅವರ ಪತ್ನಿ ಬೆನಜಿರ್ ಭುಟ್ಟೊ ಅವರನ್ನು 2007ರಲ್ಲಿ ಹತ್ಯೆ ಮಾಡಲಾಗಿತ್ತು. ನಂತರ ಜರ್ದಾರಿ ಅವರು ವಿಧುರನಾದರು. ಅವರು ಮರುವಿವಾಹವಾಗಲಿಲ್ಲ. ರಾಷ್ಟ್ರಾಧ್ಯಕ್ಷರಾಗಿದ್ದ 2008ರಿಂದ 2013ರವರೆಗಿನ ಪ್ರಥಮ ಅವಧಿಯಲ್ಲೂ ದೇಶದ ಪ್ರಥಮ ಮಹಿಳೆಯ ಸ್ಥಾನ ಖಾಲಿ ಉಳಿದಿತ್ತು.

ಆಸೀಫಾ ಅವರನ್ನು ರಾಷ್ಟ್ರದ ಪ್ರಥಮ ಮಹಿಳೆ ಸ್ಥಾನಕ್ಕೆ ಆಯ್ಕೆ ಮಾಡಿರುವುದು ಪಾಕಿಸ್ತಾನದ ರಾಜಕೀಯ ಚರಿತ್ರೆಯಲ್ಲಿ ಮಹತ್ವದ ಅಧ್ಯಾಯವಾಗಿದೆ ಎಂದು ಎಆರ್‌ವೈ ನ್ಯೂಸ್ ವರದಿ ಮಾಡಿದೆ.

ಸಾವಿಗೀಡಾಗುವ ಔಷಧ ಸೇವನೆಗೆ ಕಾನೂನು: ಮ್ಯಾಕ್ರಾನ್

ಪ್ಯಾರಿಸ್ (ಎಪಿ): ಗುಣಮುಖವಾಗದ ಕಾಯಿಲೆಗಳಿಂದ ಬಳಲುತ್ತಿರುವವರು ಸಾವಿಗೀಡಾಗುವ ಔಷಧ ಸೇವಿಸಲು ಅವಕಾಶ ಕಲ್ಪಿಸುವ ಕಾನೂನು ಜಾರಿಗೊಳಿಸುವುದಾಗಿ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವಲ್ ಮ್ಯಾಕ್ರಾನ್ ಘೋಷಿಸಿದ್ದಾರೆ.

ಮಾರಣಾಂತಿಕ ರೋಗದಿಂದ ಬಳಲುತ್ತಿರುವ ವಯಸ್ಕರಿಗೆ ಈ ಕಾನೂನಿನಿಂದ ಪ್ರಯೋಜನವಾಗಲಿದೆ ಎಂದು ಮೂಲಗಳು ಹೇಳಿವೆ.

ಗುಣಪಡಿಸಲಾಗದ ಕಾಯಿಲೆಗೆ ಒಳಗಾಗಿ ದೈಹಿಕವಾಗಿ, ಮಾನಸಿಕವಾಗಿ ನೋವನ್ನು ಅನುಭವಿಸುವ ವಯಸ್ಕರಿಗೆ ಈ ಹೊಸ ಕಾನೂನು ಸೀಮಿತವಾಗಲಿದೆ ಎಂದು ‘ಲಾ ಕ್ರೊಯಿಕ್ಸ್’ ಮತ್ತು ‘ಲಿಬರೇಶನ್’ ಪತ್ರಿಕೆಗಳಿಗೆ ನೀಡಿರುವ ಸಂದರ್ಶನದಲ್ಲಿ ಮ್ಯಾಕ್ರಾನ್ ಹೇಳಿದ್ದಾರೆ.

ನಿಖರವಾದ ಮಾನದಂಡಗಳಿಗೆ ಅನುಗುಣವಾಗಿ ಕೈಗೊಳ್ಳುವ ವೈದ್ಯಕೀಯ ನಿರ್ಧಾರಗಳಿಗೆ ಈ ಕಾನೂನಿನಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಕ್ಯಾನ್ಸರ್ ರೋಗದ ಕೊನೆಯ ಹಂತದಲ್ಲಿರುವ ರೋಗಿಗಳಿಗೆ ಇದರ ಪ್ರಯೋಜನ ಪಡೆಯಬಹುದು ಎಂದು ಅವರು ಉದಾಹರಣೆ ನೀಡಿದ್ದಾರೆ.

ಮುಂಬೈ ಧಾರಣೆ

ಶೇಂಗಾ

11-3-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಸೋಯಾ ಕಚ್ಚಾ	960 (960)
ಪಾಮ್ ವಾರದ ಡೆಲಿವರಿ	925 (925)
ಸೂರ್ಯಕಾಂತಿ ಎಣ್ಣೆ ಕಚ್ಚಾ	885 (885)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹65,300 (64,300)

ಬೆಳ್ಳಿ ಕೆ.ಜಿ ₹72,550 (71,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ ಓದಿರಿ...

ಮಾರುಕಟ್ಟೆ ಧಾರಣೆ

ಬಂಟ್ವಾಳ (ಅಡಿಕೆ)	
ಕೋಕ	18000-28500
ಹೊಸತು	28500-34500
ಕಾರ್ಕಳ	
ಹೊಸತು	25000-35000
ಹಳತು	30000-43500
ಕುಮಟ	
ಚಿಪ್ಪು	25019-28699
ಕೋಕ	13019-24999
ಫ್ಯಾಕ್ಟರಿ	11019-21129
ಹಳೆಚಾಲಿ	32509-36599
ಹೊಸಚಾಲಿ	30999-33729
ಶಿವಮೊಗ್ಗ	
ಗೊರಬಲು	16509-34008
ರಾಶಿ	33208-48658
ಸರಕು	46100-82596
ಸಿದ್ದಾಪುರ	
ಬಿಳಿಗೋಟು	24899-28700
ಚಾಲಿ	35209-37019
ಕೋಕ	24299-29500
ಹೊಸಚಾಲಿ	31889-34639

ಕೆಂಪುಗೋಟು	30600-33899
ರಾಶಿ	42509-46899
ತಟ್ಟಿಬೆಟ್ಟೆ	37209-42109
ಚಿತ್ರದುರ್ಗ	
ಬೆಟ್ಟೆ	33619-34059
ಕೆಂಪುಗೋಟು	27609-28010
ರಾಶಿ	46929-47389
ಸಾಗರ	
ಬಿಳಿಗೋಟು	20231-24899

ಚಾಲಿ	25499-33320
ಕೋಕ	10119-26989
ಕೆಂಪುಗೋಟು	25499-35199
ರಾಶಿ	27899-48510
ಸಿಪ್ಪೆಗೋಟು	8989-17600

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,900	-	-	-
ಎಸಿ	7,950	-	-	-
ಆರ್‌ಪಿ	14,000	-	-	-
ಆರ್‌ಸಿ	8,020	-	-	-

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

REQUIRED, EXPERIENCED Telecaller, & Loan Recovery Supervisor For BankLoan collection. Salary 30,000+ Incentive. 9620206756.

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430366, 9663542555

17.05.2024 19.06.2024 ಸಿಂಗಾಪುರ್ ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.04.2024 05.05.2024 ಭೂತಾನ್ 8 ದಿನಗಳು. 15.04.2024 21.05.2024 ನೇಪಾಳ 9 ದಿನಗಳು. 16.04.2024 17.05.2024 ಕಾಶ್ಮೀರ್ ವೈಷ್ಣೋದೇವಿ 6/8 ದಿನಗಳು. 28.04.2024 26.05.2024 ಅಸ್ಸಾಂ ಮೇಘಾಲಯ ಅರುಣಾಚಲ 9 ದಿನಗಳು. 21.04.2024 21.05.2024 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 7 ದಿನಗಳು. 16.04.2024 14.05.2024 ಶಿಮ್ಲಾ ಕುಲುಮನಾಲಿ 8 ದಿನಗಳು. 18.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 16.04.2024 ಗುರುವಾಯೂರು ಕಾಲಡಿ,ಮುನ್ನಾರ್ ತ್ರಿವೇಂಡ್ರಮ್ ಇತ್ಯಾದಿ 10500/-. 24.04.2024 ರಾಮೇಶ್ವರ ಕನ್ಯಾಕುಮಾರಿ ಮಧುರೈ ಇತ್ಯಾದಿ 8000/-. 06.05.2024 ವೈಷ್ಣೋದೇವಿ. 9448390735 9449721678

8 ದಿನಗಳ ಸೌತ್ ಆಫ್ರಿಕಾ, 18 ದಿನಗಳ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, 7 ದಿನಗಳ ಜಪಾನ್, 8 ದಿನಗಳ ಭೂತಾನ್, 10 ದಿನಗಳ ವಿಯೆಟ್ನಾಂ, ಕಾಂಬೋಡಿಯಾ. ಭಟ್ ಟ್ರಾವೆಲ್ಸ್. 9844166555, 7975132507

ಮಂಗಳೂರು ಕಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ (ನಿ.)
MCC BANK Estd - 1912
ಆಡಳಿತ ಕಛೇರಿ : ಎಂ.ಸಿ.ಸಿ. ಬ್ಯಾಂಕ್ ಬಿಲ್ಡಿಂಗ್, ಹಂಪನಕಟ್ಟ, ಮಂಗಳೂರು 575001
ದೂರವಾಣಿ: 0824–2445746
Email: hohrd@mccbank.in / gm@mccbank.in | Website: www.mccbank.in

ನೇಮಕಾತಿ ಪ್ರಕಟಣೆ

ಮಂಗಳೂರು ಕಥೋಲಿಕ್ ಕೋಆಪರೇಟಿವ್ ಬ್ಯಾಂಕ್ ನಿ, ಮಂಗಳೂರು ಇಲ್ಲಿ ಖಾಲಿ ಇರುವ ಈ ಕೆಳಕಂಡ 50 ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ 12.03.2024ರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ವಿವರ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
1	ಹಿರಿಯ ಪ್ರಬಂಧಕರು/Senior Manager	30400–51300	2
2	ಶಾಖಾ ಪರಿವೀಕ್ಷಕರು/Branch Inspector	30400–51300	1
3	ವಸೂಲಾತಿ ಅಧಿಕಾರಿ/Recovery Officer	30400–51300	1
4	ಶಾಖಾ ವ್ಯವಸ್ಥಾಪಕರು/Branch Manager	28100–50100	2
5	ಸುಪರ್‌ವೈಸರ್/ Supervisor	28100–50100	1
6	ಮುಖ್ಯ ಅಕೌಂಟೆಂಟ್/Chief Accountant	28100–50100	1
7	ಅಕೌಂಟೆಂಟ್/Accountant	26000–47700	5
8	ಡೇಟಾಬೇಸ್ ಅಡ್ಮಿನಿಸ್ಟ್ರೇಟರ್/DBA	26000–47700	2
9	ಕಿರಿಯ ಅಧಿಕಾರಿ/Junior Officer	24000–45300	10
10	ಹಿರಿಯ ಸಹಾಯಕ/Senior Assistant	21600–40050	8
11	ಕಿರಿಯ ಸಹಾಯಕ/Junior Assistant	20000–36300	13
12	ಅಟೆಂಡರ್/ಡ್ರೈವರ್/Attender/Driver	16000–29000	4
	ಒಟ್ಟು ಹುದ್ದೆಗಳು		50

ಅರ್ಜಿ ನಮೂನೆ/ವಿದ್ಯಾರ್ಹತೆ/ವಯೋಮಿತಿ/ಅರ್ಜಿ ಶುಲ್ಕ/ಆಯ್ಕೆ ವಿಧಾನ/ಲಗತ್ತಿಸಬೇಕಾದ ಪ್ರಮಾಣ ಪತ್ರಗಳು, ನಿಬಂಧನೆಗಳು ಮತ್ತು ಸೂಚನೆಗಳು ಇತ್ಯಾದಿ ವಿವರಗಳು ಬ್ಯಾಂಕಿನ Website :www.mccbank.in ರಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ 26.03.2024 ಸಂಜೆ 5.00 ಗಂಟೆಯೊಳಗೆ ಖುದ್ದಾಗಿ/ ಅಂಚೆ/ ಕೊರಿಯರ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಸ್ಥಳ : ಮಂಗಳೂರು
ದಿನಾಂಕ : 11.03.2024
ಸಹಿ/– ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ ಮಹಾಪ್ರಬಂಧಕರು (ಪ್ರ)

ಭವಿಷ್ಯ

Astrology

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ವಾಸ್ತುವಿದ್ಯಾಪೀಠ ಮಹಾಮಾಂತ್ರಿಕ ಜ್ಯೋತಿಷ್ಯ ವಿದ್ವಾನ್. ಶ್ರೀಗುರುದೇವಾನಂದನ್ ರವರಿಂದ 100008 ಅತೀಂದ್ರಿಯ 888 ಛಾರಣ,ಮಾರಣ, ಸಂಮೋಹನ,ಸ್ತಂಭನ,ಮನಇಚ್ಛಾ ವಶೀಕರಣ,ಉಚ್ಚಾಟನಗಳಿಂದ ನಿಮ್ಮ ಯಾವುದೇ ಧೀರ್ಘಕಾಲದ ಪರಿಹಾರವಾಗದ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರಕ್ಕೆ ಇಂದೇ ಸಂಪರ್ಕಿಸಿ:9845005009

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 500/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9900428036 |
+91 9731810277 | +91 9886213331 | 080- 45557163/164

ಶಿಕ್ಷಣ

Admission

B. ED ADMISSION ದೇಗುಲಮಠ ಕನಕಪುರದಲ್ಲಿ ಬಿ.ಇಡಿ ಕೋರ್ಸಿಗೆ ಪ್ರವೇಶ ಇದೆ. ಊಟ ವಸತಿ ಉಚಿತ. ಸಂಪರ್ಕಿಸಿ: 8970942618/ 9844358513

ಪ್ರವಾಸ

Travel

6 ದಿನಗಳ ಬಾಲಿ. 7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ. 18 ದಿನಗಳ ಗ್ರ್ಯಾಂಡ್ ಯು.ಕೆ ಮತ್ತು ಯುರೋಪ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ,ಬೆಂಗಳೂರು.04. 9880079588 9900080793

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

‘ಸುಪ್ರೀಂ’ ತೀರ್ಪಿನಂತೆ ಆಗಲಿ ನೇಮಕ’

ತಿದ್ದುಪಡಿ ಕಾಯ್ದೆ ಅನುಸಾರ ಚುನಾವಣಾ ಆಯುಕ್ತರ ನೇಮಕ ಬೇಡ – ಕಾಂಗ್ರೆಸ್ ಮನವಿ

ನವದೆಹಲಿ (ಪಿಟಿಐ): ನೂತನ ತಿದ್ದುಪಡಿ ಕಾಯ್ದೆ ಅನುಸಾರ ಚುನಾವಣಾ ಆಯುಕ್ತರನ್ನು ನೇಮಿಸದಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕಾಂಗ್ರೆಸ್ ಪಕ್ಷದ ನಾಯಕಿ ಜಯಾ ಠಾಕೂರ್ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಚುನಾವಣಾ ಆಯುಕ್ತರನ್ನು ನೇಮಿಸಲು ಪ್ರಧಾನಿ ನೇತೃತ್ವದ ಉನ್ನತಾಧಿಕಾರ ಸಮಿತಿಗೆ ಅಧಿಕಾರ ನೀಡುವ ತಿದ್ದುಪಡಿ ಕಾಯ್ದೆ ಸಿಂಧುತ್ವವನ್ನು ಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ಅದರಂತೆ ನೋಟಿಸ್ ಜಾರಿಯಾಗಿದೆ ಎಂದೂ ಉಲ್ಲೇಖಿಸಿದ್ದಾರೆ.

ತಿದ್ದುಪಡಿ ಕಾಯ್ದೆಯ ಅನುಸಾರ ಆಯುಕ್ತರನ್ನು ನೇಮಿಸಬಾರದು. ಅದಕ್ಕೂ ಹಿಂದೆ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿಗೆ ಅನುಗುಣವಾಗಿ ಹೊಸ ಆಯುಕ್ತರನ್ನು ನೇಮಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

‘ಈ ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸಲಾಗುವುದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಈ ಬಗ್ಗೆ ಇ-ಮೇಲ್ ಕಳುಹಿಸಿ. ಗಮನಿಸುತ್ತೇವೆ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ, ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠವು ಪ್ರತಿಕ್ರಿಯಿಸಿದೆ.

ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರೆ ಆಯುಕ್ತರ ನೇಮಕ, ಸೇವಾ ಷರತ್ತು, ಅವಧಿ ಕುರಿತ 2023ರ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕಿ ಜಯಾ ಠಾಕೂರ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

‘ತಮ್ಮ ಅರ್ಜಿಯ ಸಂಬಂಧ ಜನವರಿ 12ರಂದೇ ನೋಟಿಸ್ ಜಾರಿಯಾಗಿದೆ.

15ಕ್ಕೆ ಪ್ರಧಾನಿ ನೇತೃತ್ವದ ಸಮಿತಿ ಸಭೆ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಉನ್ನತಾಧಿಕಾರ ಸಮಿತಿಯು ನೂತನ ಚುನಾವಣಾ ಆಯುಕ್ತರ ಹೆಸರು ಅಂತಿಮಗೊಳಿಸಲು ಮಾರ್ಚ್ 15ರಂದು ಸಭೆ ಸೇರಲಿದೆ.

ಆಯುಕ್ತರಾಗಿದ್ದ ಅರುಣ್ ಗೋಯಲ್ ಅವರು ರಾಜೀನಾಮೆ ನೀಡಿದ ಬಳಿಕ ಪ್ರಸ್ತುತ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಒಬ್ಬರೇ ಉಳಿದಿದ್ದಾರೆ. ಇನ್ನೊಬ್ಬ ಆಯುಕ್ತ ಅನೂಪ್ ಚಂದ್ರ ಪಾಂಡೆ ಅವರು ನಿವೃತ್ತ-ರಾಗಿದ್ದರು. ಹೀಗಾಗಿ, ಪ್ರಸ್ತುತ ಎರಡು ಆಯುಕ್ತ ಸ್ಥಾನಗಳು ತೆರವಾಗಿವೆ.

ಈ ಮಧ್ಯೆ, ಚುನಾವಣಾ ಆಯುಕ್ತ ಅರುಣ್ ಗೋಯಲ್ ರಾಜೀನಾಮೆ ಸಲ್ಲಿಸಿದ್ದಾರೆ. ಅದನ್ನು ಮಾರ್ಚ್ 9ರಂದು ರಾಷ್ಟ್ರಪತಿ ಅಂಗೀಕರಿಸಿದ್ದಾರೆ. ಶೀಘ್ರವೇ ಲೋಕಸಭೆಗೆ ಸಾರ್ವತ್ರಿಕ ಚುನಾವಣೆ ವೇಳಾಪಟ್ಟಿ ಪ್ರಕಟವಾಗಬೇಕಿದ್ದು, ಹೊಸ ಆಯುಕ್ತರ ನೇಮಕದ ಅಗತ್ಯವಿದೆ. ಅನೂಪ್ ಬರನ್‌ವಾಲ್ ವರ್ಸಸ್ ಕೇಂದ್ರ ಸರ್ಕಾರದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಅನುಸಾರವೇ ಆಯುಕ್ತರನ್ನು ನೇಮಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಲ್ಲಿ ಪ್ರಧಾನಿ, ಲೋಕಸಭೆಯ ವಿರೋಧಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಇರಬೇಕು ಎಂದು ಈ ಬಗ್ಗೆ ನೀಡಿದ್ದ ಆದೇಶದಲ್ಲಿ ಸುಪ್ರೀಂ ಸೂಚಿಸಿತ್ತು.

ತಿದ್ದುಪಡಿ ಆಗಿರುವ ‘ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರೆ ಆಯುಕ್ತರು–ನೇಮಕ, ಸೇವಾ ಷರತ್ತು, ಅವಧಿ–2023’ ಕಾಯ್ದೆಯ ಸೆಕ್ಷನ್ 7 ಮತ್ತು 8ರ ಅನುಸಾರ ಆಯುಕ್ತರನ್ನು ನೇಮಿಸದಂತೆ ತಡೆಯಬೇಕು. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ಸೂಚನೆಯನ್ನು ನೀಡಬೇಕು ಎಂದು ಮೇಲ್ಮನವಿಯಲ್ಲಿ ಜಯಾ ಠಾಕೂರ್ ಕೋರಿದ್ದಾರೆ.

ತಿದ್ದುಪಡಿ ಕಾಯ್ದೆ ಅನುಸಾರ, ಪ್ರಧಾನಿ ನೇತೃತ್ವದ ತ್ರಿಸದಸ್ಯ ಸಮಿತಿಗೆ ಆಯುಕ್ತರನ್ನು ನೇಮಿಸುವ ಅಧಿಕಾರವಿದೆ. ಪ್ರಧಾನಿಯೇ ನಾಮನಿರ್ದೇಶನ ಮಾಡುವ ಸಂಪುಟ ದರ್ಜೆಯ ಸಚಿವ ಹಾಗೂ ಲೋಕಸಭೆಯ ವಿರೋಧಪಕ್ಷದ ನಾಯಕ ಈ ಸಮಿತಿಯ ಇತರ ಸದಸ್ಯರಾಗಿರುತ್ತಾರೆ.

ಕಾಯ್ದೆಯ ತಿದ್ದುಪಡಿಗೆ ಮುನ್ನ ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಲ್ಲಿ ಸಿಜೆಐ ಕೂಡ ಇದ್ದರು. ತಿದ್ದುಪಡಿಯ ಮೂಲಕ ಸಿಜೆಐ ಅವರನ್ನು ಕೈಬಿಡಲಾಗಿತ್ತು. ಕೇಂದ್ರದ ಈ ನಿಲುವನ್ನು ಕಾಂಗ್ರೆಸ್ ಪಕ್ಷ ತೀವ್ರವಾಗಿ ವಿರೋಧಿಸಿತ್ತು.

ಅರ್ಜಿದಾರರಾದ ಜಯಾ ಠಾಕೂರ್ ಅವರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ವಿಕಾಸ್ ಸಿಂಗ್, ವಕೀಲ ವರುಣ್ ಠಾಕೂರ್ ಅವರು ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸುವಂತೆ ಮನವಿ ಮಾಡಿದರು.

ದೇವಸ್ಥಾನ–ಮಸೀದಿ ಸಂಕೀರ್ಣ ವಿವಾರ ಮುನ್ನೆಲೆಗೆ

ಭೋಜಶಾಲಾ: ಸಮೀಕ್ಷೆಗೆ ಆದೇಶ

ಇಂದೋರ್ (ಪಿಟಿಐ): ಮಧ್ಯಪ್ರದೇಶದ ಧಾರ್‌ನಲ್ಲಿನ 11ನೇ ಶತಮಾನದ ಸ್ಮಾರಕ ಭೋಜಶಾಲಾ ಸಂಕೀರ್ಣದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಹೈಕೋರ್ಟ್ ನಿರ್ದೇಶಿಸಿದೆ.

ಗ್ಯಾನವಾಪಿ ಸಂಕೀರ್ಣದಲ್ಲಿ ಇತ್ತೀಚೆಗೆ ಸಮೀಕ್ಷೆ ನಡೆದು, ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ಹಿಂದೂಗಳಿಗೆ ಕೋರ್ಟ್‌ನಿಂದ ಅನುಮತಿ ದೊರೆತಿತ್ತು. ಅದರ ಬೆನ್ನಲ್ಲೇ ಈ ನಿರ್ದೇಶನ ಹೊರಬಿದ್ದಿದೆ.

ಎಎಸ್‌ಐ ಸಂರಕ್ಷಣೆಯಲ್ಲಿರುವ ಭೋಜಶಾಲಾ ಸ್ಮಾರಕವು ವಾಗ್ದೇವಿ ದೇವ ಸ್ಥಾನವಾಗಿತ್ತು ಎಂದು ಹಿಂದೂಗಳು ಪ್ರತಿಪಾದಿಸಿದ್ದಾರೆ. ಇದು, ಕಮಲ್ ಮೌಲಾ ಮಸೀದಿಯಾಗಿತ್ತು ಎಂದು ಮುಸ್ಲಿಮರು ಪ್ರತಿವಾದ ಮಂಡಿಸಿದ್ದಾರೆ.

ಈ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಬೇಕಾದದ್ದು ಅಗತ್ಯ ಎಂದು ನ್ಯಾಯಮೂರ್ತಿಗಳಾದ ಎಸ್.ಎ.ಧರ್ಮಾಧಿಕಾರಿ ಮತ್ತು ದೇವನಾರಾಯಣ ಮಿಶ್ರಾ ಅವರಿದ್ದ ಪೀಠವು ಸೋಮವಾರ ಅಭಿಪ್ರಾಯಪಟ್ಟಿತು.

ಹಿಂದೂಪರ ಸಂಘಟನೆಯು ಈ ಕುರಿತು ಅರ್ಜಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 29ಕ್ಕೆ ಮುಂದೂಡಿತು. ಏಪ್ರಿಲ್ 7, 2023ರಂದು ಎಎಸ್‌ಐ ಕೈಗೊಂಡಿದ್ದ ತೀರ್ಮಾನದಂತೆ ಹಿಂದೂಗಳು ಪ್ರತಿ ಮಂಗಳವಾರ ಭೋಜಶಾಲಾದಲ್ಲಿ ಪೂಜೆ ನೆರವೇರಿಸಿದರು. ಮುಸ್ಲಿಮರು ಶುಕ್ರವಾರ ಪ್ರಾರ್ಥನೆ ಸಲ್ಲಿಸುತ್ತಾರೆ.

88 ಮಂದಿ ವಿರುದ್ಧ ಆರೋಪಪಟ್ಟಿ

ಕಾನ್‌ಸ್ಟೆಬಲ್ ನೇಮಕಾತಿಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ

ನವದೆಹಲಿ (ಪಿಟಿಐ): ‘2022ರಲ್ಲಿ ಹಿಮಾಚಲ ಪ್ರದೇಶದಲ್ಲಿ ನಡೆದ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ 88 ಮಂದಿ ವಿರುದ್ಧ ಸಿಬಿಐ ಎರಡು ದೋಷಾರೋಪ ಪಟ್ಟಿಗಳನ್ನು ಸಲ್ಲಿಸಿದೆ’ ಎಂದು ಅಧಿಕಾರಿಗಳು ಹೇಳಿದರು.

ಶಿಮ್ಲಾದಲ್ಲಿರುವ ಸಿಬಿಐ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುವ ತನಿಖಾ ಸಂಸ್ಥೆಯು, ‘ಬಿಹಾರ ರಾಜ್ಯದ ಲಖಿಸರೈ ನಿವಾಸಿ ಭರತ್ ಕುಮಾರ್ ಯಾದವ್ ಮತ್ತು ನಾವಾಡ ನಿವಾಸಿ ಅರವಿಂದ್ ಅವರು ಪ್ರಶ್ನೆ ಪತ್ರಿಕೆಯನ್ನು ಕದ್ದು, ಮಂಡಿ, ಕಾಂಗ್ರಾ, ಚಂಡೀಗಢ, ಪಂಚಕುಲ, ಜಿರಾಕ್‌ಪುರ, ಮೊಹಾಲಿ ಹಾಗೂ ಇತರ ಸ್ಥಳಗಳಲ್ಲಿನ ಅಭ್ಯರ್ಥಿಗಳಿಗೆ ಮಧ್ಯವರ್ತಿಗಳ ಮೂಲಕ ₹3 ಲಕ್ಷದಿಂದ ₹4 ಲಕ್ಷದವರೆಗೆ ಮಾರಾಟ ಮಾಡಿದ್ದರು’ ಎಂದು ಆರೋಪಿಸಿದೆ.

‘ಬಿಹಾರ, ಉತ್ತರಪ್ರದೇಶ, ಹಿಮಾಚಲ ಪ್ರದೇಶ, ಉತ್ತರಾಖಂಡ, ದೆಹಲಿ ಹಾಗೂ ಹರಿಯಾಣದಲ್ಲಿನ ಬಹು ಸಂಘಟಿತ ಗುಂಪುಗಳು ಈ ಸಂಚಿನಲ್ಲಿ ಭಾಗಿಯಾದ ಸಾಧ್ಯತೆ ಇದೆ. ಹಾಗೆಯೇ ನಳಂದ (ಬಿಹಾರ), ಕಾಂಗ್ರಾ (ಹಿಮಾಚಲ ಪ್ರದೇಶ), ರೋಹ್‌ಟಕ್ (ಹರಿಯಾಣ), ದೆಹಲಿ ಮತ್ತು ಜಮ್ಮುವಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರಗಳನ್ನು ನಡೆಸು-ತ್ತಿದ್ದವರೂ ಇದರಲ್ಲಿ ಭಾಗಿಯಾಗಿದ್ದಾರೆ’ ಎಂದು ಸಿಬಿಐ ಹೇಳಿದೆ.

ಯಾರ ವಿರುದ್ಧ ದೋಷಾರೋಪ?: ‘ನಳಂದದ ಪಾಸ್ಕಲ್ ಕೋಚಿಂಗ್ ಸೆಂಟರ್‌ನ ರಂಜಿತ್ ಕುಮಾರ್, ಕಾಂಗ್ರಾದ ಠಾಕೂರ್ ಕಾಶಿರಾಮ್ ವೆಬ್ ಸಲ್ಯೂಷನ್ಸ್‌ನ ಬಿಜೇಂದರ್ ಸಿಂಗ್, ರೋಹ್‌ಟಕ್‌ನ ಭಾಸ್ಕರ್ ಅಕಾಡೆಮಿಯ ಅನಿಲ್ ಭಾಸ್ಕರ್, ದೆಹಲಿಯ ಜೀರೊ ಪ್ಲಸ್ ಕನ್ಸಲ್ಟೆಂಟ್ ಸರ್ವೀಸಸ್‌ನ ಚಿರಂಜೀವಿ ಚಿಂತನ್, ಕಾಂಗ್ರಾದ ಕಮ್ಯಾಂಡೋ ಡಿಫೆನ್ಸ್ ಅಕಾಡೆಮಿಯ ಸುನಿಲ್ ಕುಮಾರ್, ಜಮ್ಮುವಿನಲ್ಲಿ ಆನ್‌ಲೈನ್ ಪರೀಕ್ಷೆಗಾಗಿ ಕಂಪ್ಯೂಟರ್ ಪ್ರಯೋಗಾಲಯ ನಡೆಸುತ್ತಿರುವ ರಾಜ್ ಕುಮಾರ್ ವಿರುದ್ಧ ಸಿಬಿಐ ದೋಷಾರೋಪ ಸಲ್ಲಿಸಿದೆ’ ಎಂದಿದ್ದಾರೆ.

‘ತನಿಖೆಯ ವೇಳೆ ಈ ಖಾಸಗಿ ತರಬೇತಿ ಕೇಂದ್ರಗಳ ಪಾತ್ರ ಕಂಡು ಬಂದದ್ದರಿಂದ ಇವುಗಳ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಎನ್‌ಟಿಎಗೆ (ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ) ಸಿಬಿಐ ಹೇಳಿದೆ. ಅಲ್ಲದೆ ರೈಲ್ವೆ ಇಲಾಖೆ, ಹಿಮಾಚಲ ಪ್ರದೇಶ ಶಿಕ್ಷಣ ಇಲಾಖೆ, ರಾಜ್ಯದ ವಿದ್ಯುತ್ ಮಂಡಳಿ, ಚಂಡೀಗಢ ಪೊಲೀಸ್ ಇಲಾಖೆ, ದೆಹಲಿ ಸರ್ಕಾರ, ರಕ್ಷಣಾ ಇಲಾಖೆ– ಈ ಎಲ್ಲವುಗಳ ಅನೇಕ ಹಾಲಿ ಮತ್ತು ಮಾಜಿ ಅಧಿಕಾರಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ’ ಎಂದೂ ಅವರು ವಿವರಿಸಿದ್ದಾರೆ.

ಕೆ.ಪೊನ್ಮುಡಿಗೆ ನೀಡಿದ್ದ ಶಿಕ್ಷೆಗೆ ತಡೆ

ನವದೆಹಲಿ: ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ತಮಿಳುನಾಡಿನ ಉನ್ನತ ಶಿಕ್ಷಣ ಸಚಿವ ಕೆ.ಪೊನ್ಮುಡಿ ಅವರನ್ನು ದೋಷಿ ಎಂದು ಪರಿಗಣಿಸಿ ಮೂರು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದ್ದ ಮದ್ರಾಸ್ ಹೈಕೋರ್ಟ್‌ನ ತೀರ್ಪನ್ನು ಸುಪ್ರೀಂ ಕೋರ್ಟ್ ಸೋಮವಾರ ತಡೆಹಿಡಿದಿದೆ.

ಇದೇ ವೇಳೆ, ನ್ಯಾಯಮೂರ್ತಿ-ಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ನ್ಯಾಯಪೀಠವು ಪೊನ್ಮುಡಿ ಅವರ ಪತ್ನಿ ಪಿ.ವಿಶಾಲಾಕ್ಷಿ ಅವರಿಗೆ ವಿಧಿಸಿದ್ದ ಶಿಕ್ಷೆಯನ್ನೂ ಅಮಾನತು ಮಾಡಿದೆ.

ಪೊನ್ಮುಡಿ ಮತ್ತು ಅವರ ಪತ್ನಿ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ವಾದ ಮಂಡಿಸಿದರು.

ಪ್ರಕರಣದಲ್ಲಿ ಪೊಲೀಸರಿಗೆ ಶರಣಾಗತಿಯಾಗುವುದರಿಂದ ಕಳೆದ ಜನವರಿಯಲ್ಲಿ ಸುಪ್ರೀಂ ಕೋರ್ಟ್ ವಿನಾಯಿತಿ ನೀಡಿತ್ತು. ಹೀಗಾಗಿ ಪೊನ್ಮುಡಿ ಮತ್ತು ಅವರ ಪತ್ನಿಯನ್ನು ಇದುವರೆಗೆ ಬಂಧಿಸಿರಲಿಲ್ಲ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಮದ್ರಾಸ್ ಹೈಕೋರ್ಟ್ ತೀರ್ಪು ಪ್ರಕಟಿಸಿದ ನಂತರ ಪೊನ್ಮುಡಿ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು.

ಪ್ರೊ.ಸಾಯಿಬಾಬಾ ಬಿಡುಗಡೆ ತಡೆಗೆ ‘ಸುಪ್ರೀಂ’ ನಕಾರ

ಸಾಯಿಬಾಬಾ

ನವದೆಹಲಿ (ಪಿಟಿಐ): ಮಾವೋವಾದಿಗಳೊಂದಿಗಿನ ನಂಟು ಪ್ರಕರಣದ ಸಂಬಂಧ ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾ ಅವರ ಬಿಡುಗಡೆ ಆದೇಶಕ್ಕೆ ತಡೆ ನೀಡುವಂತೆ ಕೋರಿ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾ ಮಾಡಿದೆ.

ಸಾಯಿಬಾಬಾ ಅವರನ್ನು ಖುಲಾಸೆಗೊಳಿಸಿದ ಬಾಂಬೆ ಹೈಕೋರ್ಟ್ ಆದೇಶವು ‘ಮೇಲ್ನೋಟಕ್ಕೆ ಸಕಾರಣದಿಂದ ಕೂಡಿದೆ’ ಎಂದಿದೆ ನ್ಯಾಯಪೀಠ.

‘ಬಿಡುಗಡೆ ಆದೇಶವು ಅವರ ಕಷ್ಟದ ಫಲ. ಈ ಮನುಷ್ಯ ಎಷ್ಟು ವರ್ಷ ಜೈಲುವಾಸ ಅನುಭವಿಸಿದ್ದಾರೆ?’ ಎಂದು ನ್ಯಾಯಮೂರ್ತಿ ಮೆಹ್ತಾ ಪ್ರತಿಕ್ರಿಯಿಸಿದ್ದಾರೆ.

ಮೇಲ್ಮನವಿ ಸ್ವೀಕಾರ: ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಸಂದೀಪ್ ಮೆಹ್ತಾ ಅವರ ಪೀಠವು ಪ್ರಕರಣ ಸಂಬಂಧ ಬಾಂಬೆ ಹೈಕೋರ್ಟ್‌ನ ಮಾರ್ಚ್ 5ರ ಆದೇಶ ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಸ್ವೀಕರಿಸಿದೆ. ಆದರೆ, ಮೇಲ್ಮನವಿ ವಿಚಾರಣೆಯನ್ನು ಮುಂಚಿತವಾಗಿ ಕೈಗೆತ್ತಿಕೊಳ್ಳುವಂತೆ ಮಹಾರಾಷ್ಟ್ರ ಸರ್ಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರ ಮೌಖಿಕ ಮನವಿಯನ್ನು ನ್ಯಾಯಪೀಠವು ತಳ್ಳಿಹಾಕಿತು. ಈ ಸಂಬಂಧ ಹೈಕೋರ್ಟ್‌ನ ಎರಡು ಪ್ರತ್ಯೇಕ ಪೀಠಗಳು ಎರಡು ಪ್ರತ್ಯೇಕ ಆದೇಶ ನೀಡಿದ್ದು, ಮೊದಲ ಆದೇಶದಲ್ಲಿ ಸುಪ್ರೀಂಕೋರ್ಟ್ ಮಧ್ಯ ಪ್ರವೇಶಿಸಿತ್ತು ಎಂದು ನ್ಯಾ. ಗವಾಯಿ ಹೇಳಿದ್ದಾರೆ.

ಬಣ್ಣದೋಕುಳಿ ಹೋಳಿ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ಸೋಮವಾರ ಮಹಿಳೆಯರು ಬಣ್ಣದೋಕುಳಿಯಲ್ಲಿ ಮಿಂದೆದ್ದರು –ಪಿಟಿಐ ಚಿತ್ರ

ಕೈಲಾಶ್ ಸತ್ಯಾರ್ಥಿ ಚಳವಳಿ ಆರಂಭ

ನವದೆಹಲಿ (ಪಿಟಿಐ): ನೊಬೆಲ್ ಪುರಸ್ಕೃತ ಮತ್ತು ಮಕ್ಕಳ ಹಕ್ಕು ಕಾರ್ಯಕರ್ತ ಕೈಲಾಶ್ ಸತ್ಯಾರ್ಥಿ ಸೋಮವಾರ ‘ಜಾಗತಿಕ ಸಹಾನುಭೂತಿಗಾಗಿ ಸತ್ಯಾರ್ಥಿ ಚಳವಳಿ’ (ಎಸ್‌ಎಮ್‌ಜಿಸಿ) ಎನ್ನುವ ಹೊಸ ಪ್ರಯತ್ನಕ್ಕೆ ನಾಂದಿ ಹಾಡಿದರು. ಸಹಾನುಭೂತಿಯ ಸಂವಾದ ಮತ್ತು ಕ್ರಿಯೆಯ ಮೂಲಕ ಜಾಗತಿಕ ಆಡಳಿತದಲ್ಲಿ ಸುಧಾರಣೆ ತರುವುದು ಈ ಚಳವಳಿಯ ಉದ್ದೇಶವಾಗಿದೆ.

ಇಲ್ಲಿ ನಡೆದ ‘ಮಕ್ಕಳಿಗಾಗಿ ಪ್ರಶಸ್ತಿ ಪ್ರಶಸ್ತಿ ಪುರಸ್ಕೃತರು ಮತ್ತು ನಾಯಕರ ಸಭೆ’ಯಲ್ಲಿ ಅವರು ಎಸ್‌ಎಮ್‌ಜಿಸಿಗೆ ಚಾಲನೆ ನೀಡಿದರು.

ನೊಬೆಲ್ ಪುರಸ್ಕೃತರು, ಜಾಗತಿಕ ನಾಯಕರು, ಉದ್ಯಮಿಗಳು, ಶಿಕ್ಷಣ ತಜ್ಞರು, ಯುವಜನತೆ ಮತ್ತು ನಾಗರಿಕವನ್ನು ಒಗ್ಗೂಡಿಸುವ ಮೂಲಕ ಪ್ರಪಂಚದ ಕಂದಕಗಳನ್ನು ಮುಚ್ಚಿ ಎಲ್ಲರನ್ನೂ ಒಳಗೊಳ್ಳುವಂಥ ನ್ಯಾಯಪರವಾದ ಸಮಾಜ ನಿರ್ಮಾಣದ ಬೃಹತ್ ಕಾರ್ಯಕ್ಕಾಗಿ ಈ ಚಳವಳಿಯನ್ನು ಆರಂಭಿಸಲಾಗಿದೆ ಎಂದು ಕೈಲಾಶ್ ಸತ್ಯಾರ್ಥಿ ಹೇಳಿದರು.

‘ನಾನು ದಶಕಗಳ ಕಾಲ ‘ಸಹಾನುಭೂತಿಯ ಜಾಗತೀಕರಣ’ ಪ್ರತಿಪಾದಿಸಿದೆ. ಇಂದು ನಾವು ಅದರ ಮುಂದಿನ ಹಂತಕ್ಕೆ ಹೋಗಲು ಅಣಿಯಾಗಿದ್ದೇವೆ’ ಎಂದು ಅವರು ಹೇಳಿದರು.

ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಜೋಡಿ ವಿಲಿಯಮ್ಸ್, ಮೊರಾಕ್ಕೊ ಮಾಜಿ ಪ್ರಧಾನಿ ಸೆರ್ಗೆ ಟೆಲ್ಲೆ, ಪದ್ಮ ವಿಭೂಷಣ ಡಾ.ಆರ್.ಎ.ಮಾಶೇಲ್ಕರ ಹಾಗೂ ಭಾರತೀಯ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ದಲ್ಬೀರ್ ಸಿಂಗ್ ಸೇರಿದಂತೆ ಹಲವು ಗಣ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ನೊಬೆಲ್ ಪುರಸ್ಕೃತ ಮತ್ತು ಮಕ್ಕಳ ಹಕ್ಕು ಕಾರ್ಯಕರ್ತ ಕೈಲಾಶ್ ಸತ್ಯಾರ್ಥಿ ಸೋಮವಾರ ನವದೆಹಲಿಯಲ್ಲಿ ‘ಜಾಗತಿಕ ಸಹಾನುಭೂತಿಗಾಗಿ ಸತ್ಯಾರ್ಥಿ ಚಳವಳಿ’ಗೆ (ಎಸ್‌ಎಮ್‌ಜಿಸಿ) ಚಾಲನೆ ನೀಡಿದರು. ಎಎಫ್‌ಪಿ ಚಿತ್ರ

ದೆಹಲಿಯಲ್ಲಿ ನಡೆದ ‘ಸಶಕ್ತ ನಾರಿ– ವಿಕಸಿತ ಭಾರತ’ ಕಾರ್ಯಕ್ರಮ

ಮಹಿಳಾ ಶಕ್ತಿ ವರ್ಧನೆ: ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರಿಗಾಗಿ ತಮ್ಮ ಸರ್ಕಾರ ಜಾರಿಗೊಳಿಸಿದ ಯೋಜನೆಗಳನ್ನು ಉಲ್ಲೇಖಿಸಿ, ‘ಮಹಿಳೆಯರ ಸ್ಥಾನಮಾನ ಹೆಚ್ಚಿಸುವ ಮತ್ತು ಅವರಿಗೆ ಹೊಸ ಅವಕಾಶ-ಗಳನ್ನು ರೂಪಿಸುವ ಸಮಾಜವಷ್ಟೇ ಮುನ್ನಡೆಯಲು ಸಾಧ್ಯ’ ಎಂದು ಸೋಮವಾರ ಪ್ರತಿಪಾದಿಸಿದರು.

‘ಸಶಕ್ತ ನಾರಿ– ವಿಕಸಿತ ಭಾರತ’ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ ಅವರು, ‘ಮಹಿಳೆಯರ ಶಕ್ತಿಯನ್ನು ವರ್ಧಿಸುವ ವಿಷಯದಲ್ಲಿ ನನ್ನ ಮೂರನೇ ಅಧಿಕಾರಾವಧಿಯು ಹೊಸ ಅಧ್ಯಾಯ ಬರೆಯಲಿದೆ’ ಎಂದು ಹೇಳುವ ಮೂಲಕ ಮುಂಬರಲಿರುವ ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಅಧಿಕಾರವನ್ನು ಉಳಿಸಿಕೊಳ್ಳುವ ಭರವಸೆ ವ್ಯಕ್ತಪಡಿಸಿದರು.

ನವದೆಹಲಿಯಲ್ಲಿ ಸೋಮವಾರ ನಡೆದ ‘ಸಶಕ್ತ ನಾರಿ– ವಿಕಸಿತ ಭಾರತ’ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು –ಪಿಟಿಐ ಚಿತ್ರ

ಇದೇ ವೇಳೆ, ಹಿಂದಿನ ಸರ್ಕಾರಗಳ ವಿರುದ್ಧ ವಾಗ್ದಾಳಿ ನಡೆಸಿ, ‘ಮಹಿಳೆಯರ ಜೀವನ ಮತ್ತು ಅವರ ಶ್ರಮ ಅವುಗಳ (ಹಿಂದಿನ ಸರ್ಕಾರಗಳು) ಆದ್ಯತೆಯಾಗಿರಲಿಲ್ಲ. ಆದರೆ, ಮಹಿಳೆಯರಿಗೆ ಜೀವನದ ಪ್ರತಿ ಹಂತದಲ್ಲಿ ಸಹಾಯ ಮಾಡಲು ಬಿಜೆಪಿಯು ವಿವಿಧ ಯೋಜನೆಗಳನ್ನು ರೂಪಿಸಿತು’ ಎಂದು ಹೇಳಿದರು.

‘ಮಹಿಳೆಯರ ಶೌಚಾಲಯಗಳ ಕೊರತೆ, ಸ್ಯಾನಿಟರಿ ಪ್ಯಾಡ್‌ಗಳ ಬಳಕೆ, ಅಡುಗೆಮನೆಯಲ್ಲಿ ಬಳಸುವ ಕಟ್ಟಿಗೆ ಹಾಗೂ ಇದ್ದಿಲಿನ ಹೊಗೆಯಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳು– ಹೀಗೆ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮೊದಲು ಮಾತನಾಡಿದ ಪ್ರಧಾನಿಯೇ ನಾನು. ಆದರೆ, ಇಂಥ ವಿಷಯಗಳನ್ನು ಪ್ರಸ್ತಾ-ಪಿಸಿದ್ದಕ್ಕೆ ಕಾಂಗ್ರೆಸ್‌ನಂಥ ರಾಜಕೀಯ ಪಕ್ಷಗಳು ನನ್ನನ್ನು ಅಪಹಾಸ್ಯ ಮಾಡಿ ಅವಮಾನಿಸಿದವು’ ಎಂದು ತಿಳಿಸಿದರು.

‘ಸರ್ಕಾರದ ಯೋಜನೆಗಳ ಮೂಲಕ ಇಲ್ಲಿಯವರೆಗೆ ₹ 8 ಲಕ್ಷ ಕೋಟಿಗೂ ಹೆಚ್ಚು ಹಣವನ್ನು ಮಹಿಳೆಯರಿಗೆ ವಿತರಿಸಲಾಗಿದೆ. 1 ಕೋಟಿ ಮಹಿಳೆಯರು ‘ಲಕ್ಪತಿ ದೀದಿ’ಗಳಾಗಿದ್ದಾರೆ’ ಎಂದರು.

ಮೊದಲ ಚಿತ್ರ ಕಳುಹಿಸಿದ ಇನ್ಸಾಟ್–3 ಡಿಎಸ್

ಬೆಂಗಳೂರು (ಪಿಟಿಐ): ‘ಫೆ. 17ರಂದು ಉಡ್ಡಯನಗೊಂಡಿದ್ದ ಹವಾಮಾನ ಉಪಗ್ರಹ ‘ಇನ್ಸಾಟ್–3 ಡಿಎಸ್’, ಭೂಚಿತ್ರಣದ ಕಾರ್ಯಾಚರಣೆಯನ್ನು ಆರಂಭಿಸಿದೆ. ಆನ್‌ಬೋರ್ಡ್ ಪೇಲೋಡ್‌ಗಳು (6–ಚಾನೆಲ್ ಇಮೇಜರ್ ಮತ್ತು 19–ಚಾನೆಲ್ ಸೌಂಡರ್) ಸೆರೆಹಿಡಿದ ಮೊದಲ ಚಿತ್ರಗಳನ್ನು ಬಿಡುಗಡೆ ಮಾಡಿದೆ’ ಎಂದು ಇಸ್ರೋ ಸೋಮವಾರ ತಿಳಿಸಿದೆ.

ಇಮೇಜರ್ ಮತ್ತು ಸೌಂಡರ್ ಪೇಲೋಡ್‌ಗಳು ಇನ್ಸಾಟ್–3 ಡಿ ಮತ್ತು ಇನ್ಸಾಟ್–3 ಡಿಆರ್‌ನಲ್ಲಿರುವ ಉಪಕರಣಗಳನ್ನೇ ಹೋಲುತ್ತವೆ. ಆದರೆ ರೇಡಿಯೊಮೆಟ್ರಿಕ್ ನಿಖರತೆ, ಕಪ್ಪುಮೇಲ್ಮೈನ ಮಾಪನಾಂಕ ನಿರ್ಣಯ, ಉಷ್ಣ ನಿರ್ವಹಣೆಯಲ್ಲಿ ಗಮನಾರ್ಹ ಸುಧಾರಣೆ ಹೊಂದಿವೆ.

ಈ ಪೇಲೋಡ್‌ಗಳನ್ನು ಅಹಮದಾಬಾದ್‌ನ ಸ್ಪೇಸ್ ಅಪ್ಲಿಕೇಶನ್ಸ್ ಸೆಂಟರ್‌ನಲ್ಲಿ (ಎಸ್‌ಎಸಿ) ಅಭಿವೃದ್ಧಿಗೊ-ಳಿಸಿ, ವಿನ್ಯಾಸಗೊಳಿಸಲಾಗಿದೆ.

ಸಂಸತ್ ಭದ್ರತಾ ಲೋಪ: ತನಿಖೆ ಕಾಲಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪ ಪ್ರಕರಣದ ತನಿಖೆಗಾಗಿ ದೆಹಲಿ ಪೊಲೀಸರಿಗೆ ನಗರದ ನ್ಯಾಯಾಲಯವು ಸೋಮವಾರ ಕಾಲಾವಕಾಶ ವಿಸ್ತರಣೆ ಮಾಡಿದೆ.

ಕೆಲವು ವರದಿಗಳು ಇನ್ನೂ ಕೈಸೇರಿಲ್ಲ ಹಾಗೂ ಬೃಹತ್ ದತ್ತಾಂಶದ ಪರಿಶೀಲನೆಗೆ ಹೆಚ್ಚಿನ ಸಮಯದ ಅಗತ್ಯ ಇರುವುದರಿಂದ ತನಿಖೆಗೆ ಇನ್ನೂ ಮೂರು ತಿಂಗಳು ಕಾಲಾವಕಾಶ ಬೇಕು ಎಂದು ದೆಹಲಿ ಪೊಲೀಸ್ ಪರ ವಕೀಲರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆಯಾದ ಹರ್‌ದೀಪ್ ಕೌರ್, ಪ್ರಕರಣದ ತನಿಖೆಗಾಗಿ 45 ದಿನಗಳ ಹೆಚ್ಚುವರಿ ಕಾಲಾವಕಾಶ ನೀಡಿದರು.

ಕಾನೂನಿನ ಪ್ರಕಾರ ತನಿಖಾ ಸಂಸ್ಥೆಯು ನಿಗದಿತ ಮೂರು ತಿಂಗಳ ಒಳಗೆ ಪ್ರಕರಣದ ತನಿಖೆ ಪೂರ್ಣಗೊಳಿಸದಿದ್ದರೆ, ಕಸ್ಟಡಿಯಲ್ಲಿರುವ ಆರೋಪಿಗಳಿಗೆ ಜಾಮೀನು ಪಡೆಯುವ ಶಾಸನಬದ್ಧ ಹಕ್ಕು ಪ್ರಾಪ್ತವಾಗುತ್ತದೆ.

ಸಂಸತ್‌ಮೇಲಿನದಾಳಿಪ್ರಕರಣದ22ನೇವಾರ್ಷಿಕೋತ್ಸವದ ಸಂದರ್ಭದಲ್ಲಿ ಸಾಗರ್ ಶರ್ಮಾ ಮತ್ತು ಡಿ.ಮನೋರಂಜನ್ ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಸದನದೊಳಗೆ ಜಿಗಿದಿದ್ದರು. ಘೋಷಣೆಗಳನ್ನು ಕೂಗುತ್ತಾ ‘ಸ್ಮೋಕ್ ಕ್ಯಾನ್’ ಹಾರಿಸಿ ದಾಂದಲೆ ಎಬ್ಬಿಸಿದ್ದರು. ಅದೇ ಸಮಯಕ್ಕೆ ಸಂಸತ್ ಭವನದ ಹೊರಗೆ ಅಮೋಲ್ ಶಿಂದೆ ಮತ್ತು ನೀಲಂ ಆಜಾದ್ ಬಣ್ಣದ ಹೊಗೆ ಹಾರಿಸಿ ಘೋಷಣೆ ಕೂಗಿದ್ದರು. ಅವರ ಜತೆಗೆ ಲಲಿತ್ ಝಾ ಮತ್ತು ಮಹೇಶ್ ಕುಮಾವತ್ ಅವರೂ ಪ್ರಸ್ತುತ ಜೈಲಿನಲ್ಲಿದ್ದಾರೆ.

‘ಕೇಂದ್ರದಿಂದ ಇ.ಡಿ ದುರುಪಯೋಗ’

ಪುಣೆ (ಪಿಟಿಐ): ಪ್ರತಿಪಕ್ಷಗಳ ನಾಯಕರಲ್ಲಿ ಭಯ ಸೃಷ್ಟಿಸಲು ಜಾರಿ ನಿರ್ದೇಶನಾಲಯದ (ಇ.ಡಿ) ರೀತಿಯ ತನಿಖಾ ಸಂಸ್ಥೆಗಳನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಎನ್‌ಸಿಪಿ ಮುಖ್ಯಸ್ಥ (ಶರದ್ ಪವಾರ್ ಬಣ) ಶರದ್ ಪವಾರ್ ಸೋಮವಾರ ಆರೋಪಿಸಿದ್ದಾರೆ.

ಪುಣೆಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ‘ಬಿಜೆಪಿಯು ಇ.ಡಿ ಬೆಂಬಲಿಸುವ ಪಕ್ಷವಾಗಿದೆ. 2005ರಿಂದ 2023ರ ಮಧ್ಯೆ ಇ.ಡಿ ಒಟ್ಟಾರೆ 5,806 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದು, ಕೇವಲ 25 ಪ್ರಕರಣಗಳನ್ನು ಇತ್ಯರ್ಥ ಪಡಿಸಿದೆ’ ಎಂದು ಹೇಳಿದರು.

‘ಇತ್ಯರ್ಥವಾದ ಪ್ರಕರಣಗಳ ಪ್ರಮಾಣ ಶೇ 0.42ರಷ್ಟಿದ್ದರೆ, ದೋಷಿಗಳು ಎಂದು ನಿರೂಪಿತವಾದ ಪ್ರಕರಣ ಸಂಖ್ಯೆಯು ಕೇವಲ ಶೇ 0.40ರಷ್ಟಿದೆ. ಆದರೆ, 2022ರಲ್ಲಿ ₹300 ಕೋಟಿಯಷ್ಟಿದ್ದ ಇ.ಡಿಯ ಬಜೆಟ್ ಗಾತ್ರ ಮಾತ್ರ ₹404 ಕೋಟಿಗೆ ಜಿಗಿದಿದೆ’ ಎಂದರು.

2005–2023ರವರೆಗೆ ಯುಪಿಎ ಹಾಗೂ ಎನ್‌ಡಿಎ ಮೈತ್ರಿಕೂಟಗಳ ನೇತೃತ್ವದಲ್ಲಿ 2 ಸರ್ಕಾರಗಳು ಅಧಿಕಾರದಲ್ಲಿದ್ದವು. ಯುಪಿಎ ಅವಧಿಯಲ್ಲಿ ಕಾಂಗ್ರೆಸ್‌ನ ಐವರು ಮತ್ತು ಬಿಜೆಪಿಯ ಮೂವರು ಸೇರಿದಂತೆ 26 ಮಂದಿ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ಇ.ಡಿ ತನಿಖೆ ನಡೆಸಿತ್ತು. ಯುಪಿಎ ಅವಧಿಯಲ್ಲಿ ಇ.ಡಿಯ ಕ್ರಮವು ರಾಜಕೀಯವಾಗಿ ಪ್ರೇರೇಪಿತವಾಗಿರಲಿಲ್ಲ. ಆದರೆ, 2014ರ ಬಳಿಕ ಇ.ಡಿಯು ಒಬ್ಬ ಬಿಜೆಪಿ ನಾಯಕನನ್ನು ವಿಚಾರಣೆಗೊಳಪಡಿಸಿಲ್ಲ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಬಿಜೆಪಿ ಸರ್ಕಾರದಡಿ ಇ.ಡಿಯ ಕ್ರಮಗಳು ರಾಜಕೀಯವಾಗಿ ಪ್ರೇರೇಪಿತವಾಗಿವೆಯೇ ಎಂಬ ಅನುಮಾನ ಮೂಡಿಸುತ್ತಿದೆ ಎಂದು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿಯೂ ಆಗಿರುವ ಶರದ್ ಪವಾರ್ ಹೇಳಿದರು.

ಇ.ಡಿ ಏನು ಕ್ರಮ ಕೈಗೊಳ್ಳಲಿದೆ ಎಂಬ ಬಗ್ಗೆ ಬಿಜೆಪಿ ಮುಖಂಡರಿಗೆ ಮುಂಚಿತವಾಗಿಯೇ ತಿಳಿದಿರುತ್ತದೆ. ಹೀಗಾಗಿ ಇ.ಡಿ ಏನು ಕ್ರಮ ಕೈಗೊಳ್ಳಬೇಕು ಎಂಬ ಆದೇಶಗಳು ಬಿಜೆಪಿ ಮುಖಂಡರಿಂದಲೇ ಬರುತ್ತಿವೆ ಎಂಬಂತೆ ಕಾಣುತ್ತಿದೆ ಎಂದಿದ್ದಾರೆ.

ಶರದ್ ಪವಾರ್ ಅವರ ಸಂಬಂಧಿ ಹಾಗೂ ಎನ್‌ಸಿಪಿ ಶಾಸಕರೂ ಆಗಿರುವ ರೋಹಿತ್ ಪವಾರ್ ಅವರ ಮಾಲೀಕತ್ವದ ಸಕ್ಕರೆ ಕಾರ್ಖಾನೆಯ ಆಸ್ತಿಯನ್ನು ಇ.ಡಿ ವಶಕ್ಕೆ ಪಡೆದಿತ್ತು. ಅಲ್ಲದೆ, ಈ ಪ್ರಕರಣದಲ್ಲಿ ರೋಹಿತ್ ಪವಾರ್ ಅವರನ್ನೂ ಇ.ಡಿ ಎರಡು ಬಾರಿ ವಿಚಾರಣೆಗೊಳಪಡಿಸಿತ್ತು.

ಚೈತ್ಯಭೂಮಿಯಲ್ಲಿ ಸಮಾಪ್ತಿ ಆಗಲಿದೆ ನ್ಯಾಯ ಯಾತ್ರೆ

ಪ್ರಜಾವಾಣಿ ವಾರ್ತೆ

ಮುಂಬೈ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಂತ್ಯಸಂಸ್ಕಾರ ನಡೆದ ಸ್ಥಳವಾದ ದಾದರ್‌ನ ಚೈತ್ಯ-ಭೂಮಿಯಲ್ಲಿ ಸಮಾಪ್ತಿಯಾಗಲಿದೆ.

ಸೋಮವಾರದಿಂದ ಮುಂದಿನ ಭಾನುವಾರದವರೆಗೆ (ಮಾ. 17) ಯಾತ್ರೆಯ ಕೊನೆಯ ಹಂತ ನಡೆಯಲಿದ್ದು, ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ರಾಹುಲ್ ಗಾಂಧಿ ಅವರು ಸಂಚರಿಸಲಿದ್ದಾರೆ.

ಚೈತ್ಯಭೂಮಿಯಲ್ಲಿ ಸಮಾಪ್ತಿ-ಗೊಳ್ಳಲಿರುವ ಹಿನ್ನೆಲೆಯಲ್ಲಿ ಯಾತ್ರೆ ಮಹತ್ವದ್ದಾಗಿ ಪರಿಣಮಿಸಿದೆ. ಬಳಿಕ ಛತ್ರಪತಿ ಶಿವಾಜಿ ಮಹಾರಾಜ ಮೈದಾನದಲ್ಲಿ ರ‍್ಯಾಲಿ ನಡೆಯಲಿದೆ. ‘ಇಂಡಿಯಾ’ ಮೈತ್ರಿಕೂಟದ ನಾಯಕರು ರ‍್ಯಾಲಿಯಲ್ಲಿ ಭಾಗವಹಿಸಲಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರ‍್ಯಾಲಿಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮುಂಬರಲಿರುವ ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯಕ್ಕೆ ಕಾಂಗ್ರೆಸ್ ಮತ್ತು ‘ಇಂಡಿಯಾ’ ಮೈತ್ರಿಕೂಟವು ಈ ರ‍್ಯಾಲಿ ಮೂಲಕ ಚಾಲನೆ ನೀಡಲಾಗುತ್ತದೆ ಎಂದು ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ಎಬಿವಿಪಿ ಪ್ರತಿಭಟನೆಯಲ್ಲಿ ಘರ್ಷಣೆ

ಸಿಲಿಗುರಿ (ಪಿಟಿಐ): ಸಂದೇಶ್‌ಖಾಲಿಯಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಇಲ್ಲಿನ ಸಚಿವಾಲಯಕ್ಕೆ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆ ವೇಳೆ, ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ಘರ್ಷಣೆ ನಡೆದಿದೆ.

ಬ್ಯಾರಿಕೇಡ್ ಹತ್ತಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ಲಾಠಿ ಪ್ರಹಾರ ನಡೆಸಿ ಚದುರಿಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಘರ್ಷಣೆಯಲ್ಲಿ ಕೆಲವು ಪ್ರತಿ-ಭಟನಕಾರರು ಮತ್ತು ಪೊಲೀಸರು ಗಾಯಗೊಂಡಿದ್ದಾರೆ.

ಪ್ರಗ್ಯಾ ಠಾಕೂರ್‌ಗೆ ವಾರಂಟ್

ಮುಂಬೈ (ಪಿಟಿಐ): ಬಿಜೆಪಿ ಸಂಸದೆ ಪ್ರಗ್ಯಾ ಠಾಕೂರ್ ಅವರಿಗೆ ವಿಶೇಷ ಎನ್‌ಐಎ ಕೋರ್ಟ್ ಸೋಮವಾರ ಜಾಮೀನು ಪಡೆಯಬಹುದಾದ ವಾರಂಟ್ ಜಾರಿಗೊಳಿಸಿದೆ.

2008ರಲ್ಲಿ ನಡೆದಿದ್ದ ಮಾಲೆಗಾಂವ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪದೇ ಪದೇ ಎಚ್ಚರಿಕೆ ನೀಡಿದರೂ ವಿಚಾರಣೆಗೆ ಹಾಜರಾಗದ ಕಾರಣಕ್ಕೆ ಈ ವಾರಂಟ್ ಜಾರಿಗೊಳಿಸಲಾಗಿದೆ.

ಯುಎಪಿಎ ಅಡಿಯಲ್ಲಿ ಪ್ರಗ್ಯಾ ಠಾಕೂರ್ ಹಾಗೂ ಇತರೆ ಆರು ಮಂದಿ ಸ್ಫೋಟ ಪ್ರಕರಣದಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ. ಎನ್‌ಐಎ ನ್ಯಾಯಾಲಯವು ಈಗ ಆರೋಪಿಗಳ ಹೇಳಿಕೆಗಳನ್ನು ಅಪರಾಧ ಪ್ರಕ್ರಿಯಾ ಸಂಹಿತೆಯಡಿ (ಸಿಆರ್‌ಪಿಸಿ) ದಾಖಲಿಸಿಕೊಳ್ಳುತ್ತಿದೆ.

ವಿಶೇಷ ನ್ಯಾಯಮೂರ್ತಿ ಎ.ಕೆ. ಲಾಹೋಟಿ ಅವರು ಠಾಕೂರ್ ಅವರಿಗೆ ₹10 ಸಾವಿರ ಮೊತ್ತದೊಂದಿಗೆ ವಾರಂಟ್ ಜಾರಿಗೊಳಿಸಿದ್ದೇ ಅಲ್ಲದೆ, ಮಾರ್ಚ್ 20ರ ಹೊತ್ತಿಗೆ ವಿಚಾರಣೆಯ ಕುರಿತ ವರದಿಯನ್ನು ಸಲ್ಲಿಸುವಂತೆ ತನಿಖಾ ಸಂಸ್ಥೆಗೆ ಸೂಚಿಸಿತು.

ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ಇದ್ದರೆ ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಕಳೆದ ತಿಂಗಳೇ ಪ್ರಗ್ಯಾ ಠಾಕೂರ್ ಅವರಿಗೆ ಕೋರ್ಟ್ ಎಚ್ಚರಿಕೆ ನೀಡಿತ್ತು.

ಕಾಂಗ್ರೆಸ್‌ನ ಇಬ್ಬರು ಮಾಜಿ ಶಾಸಕರು ಬಿಜೆಪಿಗೆ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಕಾಂಗ್ರೆಸ್‌ಗೆ ಮೇಲಿಂದ ಮೇಲೆ ಆಘಾತ ಎದುರಾಗುತ್ತಿದೆ. ಇಬ್ಬರು ಮಾಜಿ ಶಾಸಕರು ಪಕ್ಷ ತೊರೆದು ಆಡಳಿತಾರೂಢ ಬಿಜೆಪಿಯನ್ನು ಸೋಮವಾರ ಸೇರಿದರು.

ಶಹಜಹಾನ್ ಶೇಖ್ ಆಪ್ತರಿಗೆ ಸಿಬಿಐ ಸಮನ್ಸ್

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ನಡೆದ ದಾಳಿ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ, ತೃಣಮೂಲ ಕಾಂಗ್ರೆಸ್‌ನಿಂದ (ಟಿಎಂಸಿ) ಅಮಾನತುಗೊಂಡಿರುವ ಮುಖಂಡ ಶಹಜಹಾನ್ ಶೇಖ್ ಅವರ ಒಂಬತ್ತು ಮಂದಿ ಆಪ್ತರಿಗೆ ಸಿಬಿಐ ಸೋಮವಾರ ಸಮನ್ಸ್ ಜಾರಿ ಮಾಡಿದೆ.

ಪಡಿತರ ಹಗರಣದ ಆರೋಪಿ ಶಹಜಹಾನ್ ಅವರ ಮನೆಯಲ್ಲಿ ಶೋಧ ನಡೆಸಲು ತೆರಳಿದ್ದ ಇ.ಡಿ ಅಧಿಕಾರಿಗಳ ಮೇಲೆ ಜನವರಿ 5ರಂದು ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ನಡೆದಿದ್ದ ದಾಳಿಯಲ್ಲಿ ಈ ಒಂಬತ್ತು ಮಂದಿ ಶಾಮೀಲಾಗಿರುವ ಸಾಧ್ಯತೆ ಇದೆ ಎಂದು ಸಿಬಿಐ ಶಂಕಿಸಿರುವುದಾಗಿ ಅಧಿಕಾರಿಗಳು ತಿಳಿಸಿದರು.

ಈ ದಾಳಿಯ ಹಿಂದೆ ಶಹಜಹಾನ್ ಅವರ ಪಾತ್ರವಿದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದೂ ವಿವರಿಸಿದರು. ಶಹಜಹಾನ್ ಅವರು ಸದ್ಯ ಸಿಬಿಐ ವಶದಲ್ಲಿದ್ದಾರೆ. ಅವರನ್ನು ಫೆ. 29ರಂದು ಪೊಲೀಸರು ಬಂಧಿಸಿದ್ದರು.

ಬನಗ್ರಾಮಕ್ಕೆ ಸಿಬಿಐ ತಂಡ ಭೇಟಿ: (ಕೋಲ್ಕತ್ತ ವರದಿ) ಇ.ಡಿ. ಅಧಿಕಾರಿಗಳ ಮೇಲೆ ನಡೆದ ದಾಳಿ ಪ್ರಕರಣದ ತನಿಖೆ ಅಂಗವಾಗಿ ಸಿಬಿಐ ಅಧಿಕಾರಿಗಳು ಉತ್ತರ 24 ಪರಗಣ ಜಿಲ್ಲೆಯ ಬನಗ್ರಾಮಕ್ಕೆ ಸೋಮವಾರ ಭೇಟಿ ನೀಡಿದರು.

ಈ ಪ್ರಕರಣ ಸಂಬಂಧ ಈಗಾಗಲೇ ಬಂಧಿಸಿರುವ ಬನಗ್ರಾಮ ನಗರಸಭೆಯ ಮಾಜಿ ಅಧ್ಯಕ್ಷ ಶಂಕರ್ ಆದ್ಯ ಅವರ ಮನೆಗೆ ಸಿಬಿಐ ತಂಡ, ವಿಧಿವಿಜ್ಞಾನ ತಜ್ಞರ ಜೊತೆಗೆ ತೆರಳಿ ಪರಿಶೀಲನೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪಶ್ಚಿಮ ಬಂಗಾಳ ಸರ್ಕಾರದ ಅರ್ಜಿ ವಜಾ: ನವದೆಹಲಿ: ಇ.ಡಿ ಅಧಿಕಾರಿಗಳ ಮೇಲೆ ನಡೆದ ದಾಳಿ ಪ್ರಕರಣದ ವಿಚಾರಣೆಯನ್ನು ಸಿಬಿಐಗೆ ವರ್ಗಾಯಿಸಿ, ಕಲ್ಕತ್ತ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಸೋಮವಾರ ವಜಾಗೊಳಿಸಿದೆ.

ಪಶ್ಚಿಮ ಬಂಗಾಳ ಸರ್ಕಾರ ಮತ್ತು ಪೊಲೀಸರ ವಿರುದ್ಧ ಮಾಡಿರುವ ಕೆಲವು ಟೀಕೆಗಳನ್ನು ಮಾರ್ಚ್ 5ರಂದು ನೀಡಿರುವ ಆದೇಶದಿಂದ ಕೈಬಿಡುವಂತೆ ಕಲ್ಕತ ಹೈಕೋರ್ಟ್‌ಗೆ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ನ್ಯಾಯಪೀಠವು ಸೂಚಿಸಿದೆ.

ಮಣಿಪುರ ಹಿಂಸಾಚಾರ ಪ್ರಕರಣದ ವರದಿ ಸಲ್ಲಿಸಲು ಸೂಚನೆ

ಮಣಿಪುರ ಸರ್ಕಾರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಮಣಿಪುರದಲ್ಲಿನ ಹಿಂಸಾಚಾರ ಪ್ರಕರಣಗಳ ತನಿಖೆಯ ಪ್ರಗತಿ ಕುರಿತಂತೆ ವಸ್ತುಸ್ಥಿತಿ ವರದಿಯನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಮಣಿಪುರ ಸರ್ಕಾರ, ಸಿಬಿಐ ಮತ್ತು ಎನ್‌ಐಎಗೆ ನಿರ್ದೇಶಿಸಿದೆ.

ತನಿಖೆಯ ಹಂತ, ಪ್ರಕರಣಗಳನ್ನು ಕುರಿತು ಸಲ್ಲಿಸಲಾಗಿರುವ ಆರೋಪಪಟ್ಟಿ, ವಿಚಾರಣೆ ಅಸ್ಸಾಂನಲ್ಲಿ ಆರಂಭ ಆಗಿದೆಯೇ ಅಥವಾ ಮಣಿಪುರದಲ್ಲಿಯೇ ನಡೆಯಲಿದೆಯೇ ಎಂಬ ಕುರಿತಂತೆ ವರದಿ ಸಲ್ಲಿಸಬೇಕು ಎಂದು ಆದೇಶಿಸಿದೆ.

ಕಳೆದ ಎರಡು ತಿಂಗಳಲ್ಲಿ ಜಿಲ್ಲಾಧಿಕಾರಿ ನಿವಾಸದ ಮೇಲಿನ ದಾಳಿ ಸೇರಿದಂತೆ ಹಲವು ಹಿಂಸಾಚಾರ ಪ್ರಕರಣಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಅಥವಾ ಕಾನೂನು ಜಾರಿ ಸಂಸ್ಥೆಗಳಿಗೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸ್ಥಿತಿ ರಕ್ಷಣೆ ಕುರಿತಂತೆ ನಿರ್ದೇಶನವನ್ನು ನೀಡಲಾಗದು ಎಂದು ಸುಪ್ರೀಂ ಕೋರ್ಟ್ ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿತು.



ನಾಗರಿಕ ಸಮಾಜದ ಸಂಘಟನೆಗಳಿಗೆ ಈ ಬಗ್ಗೆ ನಿರ್ದೇಶನ ನೀಡಲಾಗದು. ಕಾನೂನು ಮತ್ತು ಸುವ್ಯವಸ್ಥೆ ರಕ್ಷಣೆಗಾಗಿಯೇ ರಾಜ್ಯ ಸರ್ಕಾರವಿದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಹಿಂಸಾಚಾರ ಕುರಿತು ನ್ಯಾಯಮೂರ್ತಿ ಗೀತಾ ಮಿತ್ತಲ್ ಸಮಿತಿಯ ಇತ್ತೀಚಿನ ವರದಿಯ ಸೂಚನೆಗಳನ್ನು ಪರಿಗಣಿಸಬೇಕು ಎಂದು ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸಲಹೆ ಮಾಡಿತು.

ಕೆಲವು ಹಿಂಸಾಚಾರ ಘಟನೆಗಳಿಗೆ ಸಂಬಂಧಿಸಿದಂತೆ ಆದೇಶ ನೀಡಲು ಸುಪ್ರೀಂ ಕೋರ್ಟ್, ನ್ಯಾಯಮೂರ್ತಿ ಮಿತ್ತಲ್ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನು ರಚಿಸಿತ್ತು.

ಸಹಜತೆಯತ್ತ ಮಣಿಪುರ: ಸಿ.ಎಂ

ಇಂಫಾಲ್ (ಪಿಟಿಐ): ರಾಜ್ಯದಲ್ಲಿ ನಾಲ್ಕು ತಿಂಗಳುಗಳಿಂದ ಪರಿಸ್ಥಿತಿಯು ಸಹಜತೆಗೆ ಮರಳುತ್ತಿದೆ ಎಂದು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಸೋಮವಾರ ತಿಳಿಸಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಶಾಂತಿ ಪುನಃಸ್ಥಾಪಿಸಲು ನಾವು ಅವಿರತವಾಗಿ ಶ್ರಮಿಸುತ್ತಿದ್ದೇವೆ. ಕ್ರಮೇಣವಾಗಿ ಶಾಂತಿ ನೆಲೆಸುತ್ತಿದೆ’ ಎಂದು ಹೇಳಿದರು.

‘ಹಿಂಸಾಚಾರ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಿದ್ದೇವೆ. ಗಲಭೆ ಸಾಧ್ಯತೆ ಇರುವ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ’ ಎಂದರು.

‘ಮೇ 3ರಂದು ನಡೆದಿದ್ದ ರ‍್ಯಾಲಿಯನ್ನು ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಸಣ್ಣ ರ‍್ಯಾಲಿ ಎಂದು ನಾವು ಭಾವಿಸಿದ್ದೆವು’ ಎಂದೂ ಹೇಳಿದರು.

ಮೈತೇಯಿ ಸಮುದಾಯಕ್ಕೆ ಬುಡಕಟ್ಟು ಸಮುದಾಯದ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿ ‘ಆಲ್ ಟ್ರೈಬಲ್ ಸ್ಟೂಡೆಂಟ್ಸ್ ಯೂನಿಯನ್ ಮಣಿಪುರ’ ಹಮ್ಮಿಕೊಂಡಿದ್ದ ಈ ರ‍್ಯಾಲಿಯ ಬಳಿಕ ರಾಜ್ಯದಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು.

ಮೇಲುಗೈ ಸಾಧಿಸಿದ ಮುಂಬೈ

ರಣಜಿ ಟ್ರೋಫಿ: ವಿದರ್ಭಕ್ಕೆ ತಲೆನೋವಾದ ಅಜಿಂಕ್ಯ ರಹಾನೆ, ಮುಷೀರ್ ಖಾನ್

ಮುಂಬೈ (ಪಿಟಿಐ): ಋತುವಿನುದ್ದಕ್ಕೂ ರನ್‌ಗಳ ಬರಗಾಲ ಎದುರಿಸುತ್ತಿದ್ದ ನಾಯಕ ಅಜಿಂಕ್ಯ ರಹಾನೆ (ಔಟಾಗದೇ 58, 109 ಎಸೆತ) ಸಕಾಲದಲ್ಲಿ ಅಜೇಯ ಅರ್ಧ ಶತಕ ಬಾರಿಸಿದರು. ವಿದರ್ಭ ವಿರುದ್ಧ ರಣಜಿ ಟ್ರೋಫಿ ಫೈನಲ್ ಪಂದ್ಯದ ಎರಡನೇ ದಿನವಾದ ಸೋಮವಾರ ಮುಂಬೈ ತಂಡ 260 ರನ್‌ಗಳ ಉತ್ತಮ ಮುನ್ನಡೆ ಹೊಂದಿದೆ. ಜೊತೆಗೆ ಎಂಟು ವಿಕೆಟ್‌ಗಳನ್ನು ಹೊಂದಿದ್ದು ಮೇಲುಗೈ ಸಾಧಿಸಿದೆ.

ಯುವ ಆಟಗಾರ ಮುಷೀರ್ ಖಾನ್ ಅಕ್ರಮಣದ ಆಟ ಬದಿಗಿಟ್ಟು ಸಹನೆಯ 51 ರನ್ (135ಎ, 4x3) ಗಳಿಸಿ ನಾಯಕನ ಜೊತೆ ಅಜೇಯರಾಗಿ ಉಳಿದಿದ್ದಾರೆ. ಮುಂಬೈ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 141 ರನ್ ಗಳಿಸಿದೆ. ಮೊದಲ ಇನಿಂಗ್ಸ್‌ನಲ್ಲಿ 119 ರನ್‌ಗಳ ಮುನ್ನಡೆ ಪಡೆದಿದ್ದ ಮುಂಬೈ ಈಗ 42ನೇ ಪ್ರಶಸ್ತಿ ಗೆಲ್ಲುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಮೊದಲ ದಿನ ಆತಿಥೇಯ ತಂಡದ 224 ರನ್‌ಗಳ ಸಾಧಾರಣ ಮೊತ್ತಕ್ಕೆ ಉತ್ತರವಾಗಿ 3 ವಿಕೆಟ್‌ಗೆ 31 ರನ್ ಗಳಿಸಿದ್ದ ವಿದರ್ಭ ಮೊದಲ ಇನಿಂಗ್ಸ್‌ನಲ್ಲಿ 105 ರನ್‌ಗಳಿಗೆ ಪತನಗೊಂಡಿತು. ಒಂದೂ ಉತ್ತಮ ಜೊತೆಯಾಟ ಬರದೇ ತಂಡದ ಆಟ ಸೊರಗಿತು.

ಆರಂಭ ಆಟಗಾರರಾದ ಪೃಥ್ವಿ ಶಾ (11) ಮತ್ತು ಭೂಪೇನ್ ಲಾಲ್ವಾನಿ (18) ಅವರು ಲಂಚ್ ಕಳೆದು ಕೆಲವೇ ಹೊತ್ತಿನಲ್ಲಿ ನಿರ್ಗಮಿಸಿದಾಗ ವಿದರ್ಭ ಮತ್ತೊಂದು ಮರುಹೋರಾಟಕ್ಕೆ ವೇದಿಕೆ ಸಿದ್ಧಪಡಿಸಿದಂತೆ ಕಂಡಿತು. ಆದರೆ ರಹಾನೆ ಮತ್ತು ಮುಷೀರ್ ಮೂರು ಗಂಟೆಗಳಿಗೂ ಹೆಚ್ಚುಕಾಲ ಸಂಯಮದಿಂದ ಆಡಿ ಎದುರಾಳಿಗಳನ್ನು ಹತಾಶಗೊಳಿಸಿದರು. ಹೀಗಾಗಿ ಪಂದ್ಯ ಈಗ ಮುಂಬೈ ಕಡೆಗೆ ವಾಲಿದೆ. ಕೇವಲ 12ರ ಸರಾಸರಿ ಹೊಂದಿದ್ದ ರಹಾನೆ ವಿಶ್ವಾಸ ವೃದ್ಧಿಸುತ್ತಿದ್ದಂತೆ ಋತುವಿನ ಎರಡನೇ ಅರ್ಧ ಶತಕ ದಾಟಿದರು. ಮುಷೀರ್ ಕೂಡ ಎಂದಿನ ಆಕ್ರಮಣದ ಶೈಲಿಗಿಂತ ರಕ್ಷಣೆಗೇ ಒತ್ತು ನೀಡಿದರು. ಇವರಿಬ್ಬರು ಮುರಿಯದ ಮೂರನೇ ವಿಕೆಟ್‌ಗೆ 107 ರನ್ ಸೇರಿಸಿದ್ದಾರೆ.

ಮುಂಬೈ ತಂಡದ ನಾಯಕ ಅಜಿಂಕ್ಯ ರಹಾನೆ ಅರ್ಧ ಶತಕ ಗಳಿಸಿ ಸಂಭ್ರಮಿಸಿದರು. ಪಿಟಿಐ ಚಿತ್ರ

ಇದಕ್ಕೆ ಮೊದಲು ವಿದರ್ಭ ಆಟಗಾರರಲ್ಲಿ ಯಾರೂ ಬೇರೂರಿ ಆಡುವ ಛಲ ತೋರಲಿಲ್ಲ. ನೈಟ್ ವಾಚ್‌ಮನ್ ಆಗಿದ್ದ ಆದಿತ್ಯ ಠಾಕರೆ (19, 69ಎಸೆತ) ತಮ್ಮ ಕೆಲಸ ನಿಭಾಯಿಸಿದರು. ಯಶ್ ರಾಥೋಡ್ (27, 67ಎ) ಅವರದೇ ಗರಿಷ್ಠ ವೈಯಕ್ತಿಕ ಮೊತ್ತ ಎನಿಸಿತು.

ವೇಗದ ಬೌಲರ್ ಧವಳ್ ಕುಲಕರ್ಣಿ 15 ರನ್ನಿಗೆ 3 ವಿಕೆಟ್ ಪಡೆದರೆ, ಸ್ಪಿನ್ನರ್‌ಗಳಾದ ಶಮ್ಸ್ ಮುಲಾನಿ (32ಕ್ಕೆ3) ಮತ್ತು ತನುಷ್ ಕೋಟ್ಯಾನ್ (4.3–1–7–3) ಎದುರಾಳಿ ತಂಡಕ್ಕೆ ಲಂಚ್‌ಗೆ ಮೊದಲೇ ಹೊಡೆತ ನೀಡಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಮುಂಬೈ 224; ವಿದರ್ಭ: 45.3 ಓವರುಗಳಲ್ಲಿ 105 (ಅಥರ್ವ ತೈಡೆ 23, ಯಶ್ ರಾಥೋಡ್ 27; ಧವಳ ಕುಲಕರ್ಣಿ 13 ಕ್ಕೆ3, ಶಮ್ಸ್ ಮುಲಾನಿ 32ಕ್ಕೆ3, ತನುಷ್ ಕೋಟ್ಯಾನ್ 7ಕ್ಕೆ3); ಎರಡನೇ ಇನಿಂಗ್ಸ್: ಮುಂಬೈ: 50 ಓವರುಗಳಲ್ಲಿ 2 ವಿಕೆಟ್‌ಗೆ 141 (ಮುಷೀರ್ ಖಾನ್ ಬ್ಯಾಟಿಂಗ್ 51, ಅಜಿಂಕ್ಯ ರಹಾನೆ ಬ್ಯಾಟಿಂಗ್ 58)

ಹಾಕಿ: ಕರ್ನಾಟಕಕ್ಕೆ ಕೃತಿಕಾ ನಾಯಕಿ

ಬೆಂಗಳೂರು: ಕೃತಿಕಾ ಎಸ್.ಪಿ. ಅವರು ಮಹಾರಾಷ್ಟ್ರದ ಪುಣೆಯಲ್ಲಿ ಇದೇ 13ರಿಂದ 23ರವರೆಗೆ ನಡೆಯಲಿರುವ 14ನೇ ಹಾಕಿ ಇಂಡಿಯಾ ಸೀನಿಯರ್ ಮಹಿಳಾ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಟೂರ್ನಿಯಲ್ಲಿ ಕರ್ನಾಟಕ ತಂಡವು 'ಜಿ' ಗುಂಪಿನಲ್ಲಿ ಸ್ಥಾನ ಪಡೆದಿದೆ.**ತಂಡ ಹೀಗಿದೆ:** ತೇಜಸ್ವಿನಿ ಡಿ.ಎನ್, ಸೌಮ್ಯಶ್ರೀ ಎನ್.ಆರ್, ದೀಪ್ತಿ ಕೆ.ಎ, ಸೀಮಾ ಆನಂದ್‌ರಾವ್ ಪವಾರ್, ಆದಿರಾ ಎಸ್, ಅಂಜಲಿ ಎಚ್.ಆರ್, ಕೃತಿಕಾ ಎಸ್.ಪಿ (ನಾಯಕಿ), ಸಹನಾ ಸಿ.ಎಂ, ಪ್ರಿಯಾಂಕಾ ಪರಿಹಾರ್, ಜಿ. ಗಾಯತ್ರಿ, ಪ್ರಶು ಸಿಂಗ್ ಪರಿಹಾರ್, ಹೇಮಾ ಅಶೋಕ್, ಶೈನಾ ತಂಗಮ್ಮ, ಚಂದನಾ ಜೆ, ಪೂಜಿತಾ ಬಿ.ಎನ್, ಯಶಿಕಾ ಎಂ.ಜಿ, ನಿಶಾ ಪಿ.ಸಿ. ಮೇರಿ ಅಭಿಜಿತ್ (ಮ್ಯಾನೇಜರ್), ವಿಜಯ ಕೃಷ್ಣನ್ ಟಿ. (ಕೋಚ್)



ರವಿಚಂದ್ರನ್ ಅಶ್ವಿನ್ ತಮ್ಮ 100 ನೇ ಟೆಸ್ಟ್‌ನಲ್ಲಿ ಮಿಂಚಿದ್ದಾರೆ!

ಸಿ.ಕೆ.ನಾಯ್ಡು ಟ್ರೋಫಿ ಫೈನಲ್: ಪಾರಸ್‌ಗೆ 5 ವಿಕೆಟ್, ಪ್ರಖರ್ ಅರ್ಧ ಶತಕ

ಕರ್ನಾಟಕ ತಂಡದ ಬಿಗಿ ಹಿಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಡಗೈ ಸ್ಪಿನ್ನರ್ ಪಾರಸ್ ಗುರುಬಕ್ಷ್ ಆರ್ಯ (35ಕ್ಕೆ5) ನೇತೃತ್ವದಲ್ಲಿ ಸ್ಪಿನ್ನರ್‌ಗಳ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ಎರಡನೇ ದಿನವಾದ ಸೋಮವಾರ ಉತ್ತರ ಪ್ರದೇಶ ತಂಡದ ಮೇಲೆ ಬಿಗಿಹಿಡಿತ ಸಾಧಿಸಿತು.

219 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆದ ಕರ್ನಾಟಕ ದಿನದ ಕೊನೆಗೆ ಆ ಮುನ್ನಡೆಯನ್ನು 310 ರನ್‌ಗಳಿಗೆ ಏರಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಆತಿಥೇಯ ತಂಡ ಎರಡನೇ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 91 ರನ್ ಗಳಿಸಿದೆ. ಮೆಕ್ನೀಲ್ ಎಚ್.ಎನ್. (ಔಟಾಗದೇ 33, 99 ಎಸೆತ) ಮತ್ತು ಪ್ರಖರ್ ಚತುರ್ವೇದಿ (ಔಟಾಗದೇ 55, 88 ಎಸೆತ, 4x7, 6x2) ಆಟವನ್ನು ಮೂರನೇ ದಿನಕ್ಕೆ ಕಾಯ್ದಿಟ್ಟರು. ಇನ್ನೂ ಎರಡು ದಿನಗಳ ಆಟ ಉಳಿದಿದ್ದು, ಉತ್ತರ ಪ್ರದೇಶ ಒತ್ತಡಕ್ಕೆ ಸಿಲುಕಿದೆ.

ಐದು ವಿಕೆಟ್ ಪಡೆದ ಪಾರಸ್ ಗುರುಬಕ್ಷ್ ಆರ್ಯ (ಎಡಗಡೆ) ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಅಜೇಯ ಅರ್ಧ ಶಕತ ಗಳಿಸಿದ ಪ್ರಖರ್ ಚತುರ್ವೇದಿ. ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ಇದಕ್ಕೆ ಮೊದಲು ಕರ್ನಾಟಕ (ಭಾನುವಾರ: 5 ವಿಕೆಟ್‌ಗೆ 325) ಮೊದಲ ದಿನದ ಮೊತ್ತಕ್ಕೆ 33 ರನ್ ಸೇರಿಸಲಷ್ಟೇ ಶಕ್ತವಾಯಿತು. ಅಷ್ಟರೊಳಗೆ ಯಶೋವರ್ಧನ್ ಪರಂತಾಪ್ (ಭಾನುವಾರ ಔಟಾಗದೇ 84) ಶತಕವನ್ನು ಪೂರೈಸಿದರು. ಅವರ 105 ರನ್‌ಗಳು 129 ಎಸೆತಗಳಲ್ಲಿ 10 ಬೌಂಡರಿಗಳ ನೆರವಿನಿಂದ ಬಂತು. ಭಾನುವಾರ 58 ರನ್ ಗಳಿಸಿದ್ದ ವಿಕೆಟ್ ಕೀಪರ್ ಕೃತಿಕ್ ಕೃಷ್ಣ, ಆ ಮೊತ್ತಕ್ಕೆ ಎಂಟು ರನ್ ಸೇರಿಸಲಷ್ಟೇ ಶಕ್ತರಾದರು. ಎರಡನೇ ದಿನ ಬಿದ್ದ ಕರ್ನಾಟಕದ ಐದು ವಿಕೆಟ್‌ಗಳಲ್ಲಿ ಲೆಗ್ ಸ್ಪಿನ್ನರ್ ವಿಪ್ರಾಜ್ ನಾಲ್ಕನ್ನು ಪಡೆದರು

ಉತ್ತರ ಪ್ರದೇಶದ ಈ ಸಂತಸ ಕೆಲವೇ ಕ್ಷಣಗಳಲ್ಲಿ ಕರಗಿಹೋಯಿತು. ಮಧ್ಯಮ ವೇಗಿ ಪರಂತಾಪ್ ಮೊದಲ ಓವರ್‌ನಲ್ಲೇ ಆರಂಭ ಆಟಗಾರ 0) ಸ್ವಸ್ತಿಕ್ (0) ವಿಕೆಟ್ ಪಡೆದರು.

ರಿತುರಾಜ್ ಶರ್ಮ (26) ಜೊತೆಗೂಡಿದ ಕೃತಗ್ಯ ಸಿಂಗ್ (21) ಪರಿಸ್ಥಿತಿ ಸುಧಾರಿಸಿ ಎರಡನೇ ವಿಕೆಟ್‌ಗೆ 43 ರನ್ ಸೇರಿಸಿದರು. ಆದರೆ ನಂತರ ಸ್ಪಿನ್ನರ್‌ಗಳಾದ ಪರಾಸ್, ಮೊಹ್ಸಿನ್ ಖಾನ್ ಮತ್ತು ಮೆಕ್ನೀಲ್ ದಾಳಿಗೆ ಸಿಲುಕಿ ನಿಯಮಿತವಾಗಿ ವಿಕೆಟ್‌ಗಳು ಉರುಳಿದವು. ತಂಡ 139 ರನ್‌ಗಳಿಗೆ ಕುಸಿಯಿತು. ವಿಕೆಟ್ ಕೀಪರ್ ಆರಾಧ್ಯ ಯಾದವ್ ಮಾತ್ರ ಪ್ರತಿರೋಧ ತೋರಿ 66 ರನ್ (94 ಎಸೆತ, 4x6, 6x1) ಹೊಡೆದರು. ಆರಾಧ್ಯ ಮತ್ತು ವಿಪ್ರಾಜ್ ಏಳನೇ ವಿಕೆಟ್‌ಗೆ 48 ರನ್ ಸೇರಿಸಿದ್ದರಿಂದ ತಂಡ ನೂರರ ಗಡಿ ದಾಟಿತು.

ಕರ್ನಾಟಕ ತಂಡ ಫಾಲೋಆನ್ ಹೇರಲು ಹೋಗಲಿಲ್ಲ. ಮೆಕ್ನೀಲ್ ಮತ್ತು ಚತುರ್ವೇದಿ ದಿನದ ಉಳಿದ ಅವಧಿಯನ್ನು ಆರಾಮವಾಗಿ ಕಳೆದರು. ಸ್ಪಿನ್ನರ್‌ಗಳ ಪ್ರಭಾವ ಏನೂ ಕಾಡಲಿಲ್ಲ.

ಸ್ಕೋರುಗಳು: ಮೊದಲ ಇನಿಂಗ್ಸ್: ಕರ್ನಾಟಕ: 99.5 ಓವರುಗಳಲ್ಲಿ 358 (ಯಶೋವರ್ಧನ್ ಪರಂತಾಪ್ 105, ಕೃತಿಕ್ ಕೃಷ್ಣ 66; ವಿಪ್ರಾಜ್ ನಿಗಮ್ 51ಕ್ಕೆ4); ಉತ್ತರ ಪ್ರದೇಶ: 46.2 ಓವರುಗಳಲ್ಲಿ 139 (ರಿತುರಾಜ್ ಶರ್ಮಾ 26, ಕೃತಗ್ಯ ಕೆ.ಕೆ.ಸಿಂಗ್ 21, ಆರಾಧ್ಯ ಯಾದವ್ 66; ಮೊಹ್ಸಿನ್ ಖಾನ್ 40ಕ್ಕೆ2, ಪಾರಸ್ ಗುರುಬಕ್ಷ ಆರ್ಯ 35ಕ್ಕೆ5, ಮೆಕ್ನೀಲ್ ಎಚ್.ಎನ್. 18ಕ್ಕೆ2); ಎರಡನೇ ಇನಿಂಗ್ಸ್: ಕರ್ನಾಟಕ: 31 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 91 (ಮೆಕ್ನೀಲ್ ಎಚ್.ಎನ್.ಬ್ಯಾಟಿಂಗ್ 33, ಪ್ರಖರ್ ಚತುರ್ವೇದಿ ಬ್ಯಾಟಿಂಗ್ 55).

'ಬಾಝ್‌ಬಾಲ್ ತಂತ್ರ: ಪರಿಷ್ಕರಣೆ ಅಗತ್ಯ'

ಧರ್ಮಶಾಲಾ (ಪಿಟಿಐ): ಇಂಗ್ಲೆಂಡ್ ತಂಡದ 'ಬಾಝ್‌ಬಾಲ್' ತಂತ್ರದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಾದ ಅಗತ್ಯವಿದೆ ಎಂದು ಕೋಚ್ ಬ್ರೆಂಡನ್ ಮೆಕ್ಕಲಂ ಒಪ್ಪಿಕೊಂಡರು.

ಭಾರತ ಶನಿವಾರ ಮುಕ್ತಾಯಗೊಂಡ ಸರಣಿಯಲ್ಲಿ ಈ ತಂತ್ರದ ದೋಷಗಳನ್ನು ಬಯಲುಗೊಳಿಸಿ ತಂಡವನ್ನು ಅಧೀರಗೊಳಿಸಿತ್ತು. 0–1 ಹಿನ್ನಡೆಯಿಂದ ಪುಟಿದೆದ್ದ ಭಾರತ ನಂತರ ಎಲ್ಲ ನಾಲ್ಕೂ ಟೆಸ್ಟ್‌ಗಳಲ್ಲಿ ಜಯಗಳಿಸಿ ಬಾಝ್‌ಬಾಲ್‌ಗೆ ತಿರುಮಂತ್ರ ಹಾಕಿತ್ತು.

'ಕೆಲವೊಮ್ಮೆ ದೋಷಗಳು ಗೊತ್ತಾಗುವುದಿಲ್ಲ. ಈಗ ಭಾರತ ವಿರುದ್ಧ ಸರಣಿಯಲ್ಲಿ ಆದಂತೆ, ಈ ತಂತ್ರದ ದೌರ್ಬಲ್ಯಗಳು ಬಹಿರಂಗವಾದರೆ ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಕೆಲವು ಹೊಂದಾಣಿಕೆಗಳನ್ನು ಮಾಡಿಕೊಂಡು ನಾವು ನಂಬಿದ ತಂತ್ರವನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ' ಎಂದು ಅವರು ಬ್ರಿಟನ್‌ನ ಮಾಧ್ಯಮಗಳಿಗೆ ಭಾನುವಾರ ತಿಳಿಸಿದರು.

ಸರಣಿ ಒಂದರಲ್ಲಿ ಇಂಗ್ಲೆಂಡ್‌ನ ಬಾಝ್‌ಬಾಲ್ ತಂತ್ರ ಇಷ್ಟೊಂದು ಹಿನ್ನಡೆ ಕಂಡಿದ್ದು ಇದೇ ಮೊದಲ ಬಾರಿ.

ಡಬ್ಲ್ಯುಪಿಎಲ್: ನೆರವಿಗೆ ಬರದ ದೀಪ್ತಿ ಶರ್ಮಾ ಸಾಹಸ

ಜೈಂಟ್ಸ್ ತಂಡಕ್ಕೆ ಎರಡನೇ ಜಯ

ನವದೆಹಲಿ (ಪಿಟಿಐ): ಆಲ್‌ರೌಂಡರ್ ದೀಪ್ತಿ ಶರ್ಮಾ ಅವರ ಬಿರುಸಿನ ಅರ್ಧಶತಕದ (ಔಟಾಗದೇ 88, 60ಎ, 4x9, 6x4) ಆಟ ಯುಪಿ ವಾರಿಯರ್ಸ್ ಗೆಲುವಿಗೆ ಸಾಕಾಗಲಿಲ್ಲ. ಪಾಯಿಂಟ್ ಪಟ್ಟಿಯ ತಳದಲ್ಲಿರುವ ಗುಜರಾತ್ ಜೈಂಟ್ಸ್ ಸೋಮವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ವಾರಿಯರ್ಸ್ ತಂಡವನ್ನು ಎಂಟು ರನ್‌ಗಳಿಂದ ಸೋಲಿಸುವಲ್ಲಿ ಯಶಸ್ವಿಯಾಯಿತು.

ಅರುಣ್ ಜೇಟ್ಲಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 153 ರನ್‌ಗಳ ಗುರಿ ಎದುರಿಸಿದ್ದ ವಾರಿಯರ್ಸ್ ಒಂದು ಹಂತದಲ್ಲಿ 35 ರನ್ನಿಗೆ 5 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಈ ಹಂತದಲ್ಲಿ ಭಾರತ ತಂಡದ ಆಟಗಾರ್ತಿ ದೀಪ್ತಿ ಜೊತೆಗೂಡಿದ ಪೂನಂ ಖೆಮ್ನಾರ್ (ಔಟಾಗದೇ 36) ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 109 ರನ್ ಸೇರಿಸಿದರು.

ಆದರೆ ಅದು ಗೆಲುವಿಗೆ ಬರಲಿಲ್ಲ. ತಂಡ 5 ವಿಕೆಟ್‌ಗೆ 144ರನ್‌ಗಳಿಸಲಷ್ಟೇ ಸಾಧ್ಯವಾಯಿತು.ಮಧ್ಯಮ ವೇಗಿ ಶಬ್ನಮ್ ಶಕೀಲ್ 4 ಓವರ್‌ಗಳಲ್ಲಿ 11 ರನ್ನಿಗೆ 3 ವಿಕೆಟ್ ಪಡೆದು ಯುಪಿ ತಂಡಕ್ಕೆ ಆರಂಭದಲ್ಲೇ ಹೊಡೆತ ನೀಡಿದ್ದರು. ಮನ್ನತ್ ಕಶ್ಯಪ್ ಮತ್ತು ಮೇಘನಾ ಸಿಂಗ್ ಕೂಡ ಬಿಗುವಾಗಿ ಬೌಲಿಂಗ್ ಮಾಡಿದರು.

ಇದು ಜೈಂಟ್ಸ್‌ಗೆ ಏಳು ಪಂದ್ಯಗಳಲ್ಲಿ ಎರಡನೇ ಗೆಲುವು. ವಾರಿಯರ್ಸ್‌ಗೆ ಎಂಟು ಪಂದ್ಯಗಳಲ್ಲಿ ಐದನೇ ಸೋಲು. ಈ ಪಂದ್ಯ ಗೆದ್ದಲ್ಲಿ ಅದು ಪಾಯಿಂಟ್ ಪಟ್ಟಿಯಲ್ಲಿ ಎಂಟು ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನಕ್ಕೆ ಏರುತಿತ್ತು. ಈ ಫಲಿತಾಂಶ ಆರ್‌ಸಿಬಿಗೆ ನೆರವಾಗುವ ಸಾಧ್ಯತೆಯಿದೆ.

ಇದಕ್ಕೆ ಮೊದಲು, ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಜೈಂಟ್ಸ್ ತಂಡ 8 ವಿಕೆಟ್‌ಗೆ 152 ರನ್‌ಗಳ ಸಾಧಾರಣ ಮೊತ್ತ ಗಳಿಸಿತ್ತು. ಯುಪಿ ಸ್ಪಿನ್ನರ್‌ಗಳಾದ ಸೋಫಿ ಎಕ್ಲೆಸ್ಟೋನ್ (38 ಕ್ಕೆ 3), ದೀಪ್ತಿ ಶರ್ಮಾ (22ಕ್ಕೆ 2) ಮತ್ತು ರಾಜೇಶ್ವರಿ ಗಾಯಕವಾಡ್ (28ಕ್ಕೆ1) ಜೈಂಟ್ಸ್ ತಂಡಕ್ಕೆ ಕಡಿವಾಣ ಹಾಕಿದರು. ಆದರೆ ಆರಂಭ ಆಟಗಾರ್ತಿ ಬೆತ್ ಮೂನಿ ಕೊನೆಯವರೆಗೂ ಉಳಿದು ಅಜೇಯ 74 ರನ್ (52ಎ, 4x10, 6x1) ಗಳಿಸಿದ್ದರಿಂದ ತಂಡ ಗೌರವದ ಮೊತ್ತ ಗಳಿಸಲು ಸಾಧ್ಯವಾಯಿತು. ವೋಲ್ವಾರ್ಟ್ (43, 30ಎ) ಮತ್ತು ಮೂನಿ ಅವರು ತಂಡಕ್ಕೆ ಒಳ್ಳೆಯ ಬುನಾದಿ ಹಾಕಿಕೊಟ್ಟಿದ್ದರು. ಆದರೆ ಒಂದು ಹಂತದಲ್ಲಿ 7.5 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 60 ರನ್ ಗಳಿಸಿದ್ದ ತಂಡ ವೋಲ್ವಾರ್ಟ್ ನಿರ್ಗಮನದ ನಂತರ ಪರದಾಡಿತು. ವಾರಿಯರ್ಸ್ ತಂಡದಲ್ಲಿರುವ ಭಾರತದ ಯುವ ಆಟಗಾರ್ತಿಯರು ಕ್ಷೇತ್ರರಕ್ಷಣೆಯಲ್ಲಿ ಮಾಡಿದ ಲೋಪಗಳಿಂದ ತಂಡ ಸುಮಾರು 25 ರನ್ ಹೆಚ್ಚು ವರಿಯಾಗಿ ನೀಡಿತು.

ಚೆಂಡನ್ನು ಬೌಂಡರಿಗಟ್ಟುತ್ತಿರುವ ಗುಜರಾತ್ ಜೈಂಟ್ಸ್ ನಾಯಕಿ ಬೆತ್ ಮೂನಿ. ಪಿಟಿಐ ಚಿತ್ರ

ಸ್ಕೋರುಗಳು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 8 ವಿಕೆಟ್‌ಗೆ 152 (ಲಾರಾ ವೋಲ್ವಾರ್ಟ್ 43, ಬೆತ್ ಮೂನಿ ಔಟಾಗದೇ 74, ಆ್ಯಶ್ಲೆ ಗಾರ್ಡನರ್ 15, ದೀಪ್ತಿ ಶರ್ಮಾ 22ಕ್ಕೆ2, ಸೋಫಿ ಎಕ್ಲೆಸ್ಟೋನ್ 38ಕ್ಕೆ3); ಯುಪಿ ವಾರಿಯರ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 144 (ದೀಪ್ತಿ ಶರ್ಮಾ ಔಟಾಗದೇ 88, ಪೂನಂ ಖೆಮ್ನಾರ್ ಔಟಾಗದೇ 36; ಶಬ್ನಂ ಶಕೀಲ್ 11ಕ್ಕೆ3). **ಪಂದ್ಯದ ಆಟಗಾರ್ತಿ** ಶಬ್ನಂ ಶಕೀಲ್.

ಮಂಗಳವಾರದ ಪಂದ್ಯ: ರಾಯಲ್ ಚಾಲೆಂಜರ್ಸ್ ಬೆಂಗಳೂರು– ಮುಂಬೈ ಇಂಡಿಯನ್ಸ್ (ರಾತ್ರಿ 7.30).

ಬಾಕ್ಸಿಂಗ್ ಟೂರ್ನಿ: ಕ್ವಾರ್ಟರ್ ಫೈನಲ್‌ಗೆ ನಿಶಾಂತ್

ಬುಸ್ಟೊ ಆರ್ಸಿಝಿಯೊ (ಇಟಲಿ) (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ನಿಶಾಂತ್ ದೇವ್ ಅವರು ಪ್ರಥಮ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಅರ್ಹತಾ ಟೂರ್ನಿಯಲ್ಲಿ ಗ್ರೀಸ್‌ನ ಕ್ರಿಸ್ಟೋಸ್ ಕರ್ಯೆಟಿಸ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸುವ ಮೂಲಕ ಒಲಿಂಪಿಕ್ಸ್ ಕೋಟಾಕ್ಕೆ ಮತ್ತಷ್ಟು ಹತ್ತಿರವಾದರು.

ನಿಶಾಂತ್ ದೇವ್

ಭಾನುವಾರ ತಡರಾತ್ರಿ ನಡೆದ 71 ಕೆ.ಜಿ ವಿಭಾಗದ ಪ್ರಿ ಕ್ವಾರ್ಟರ್‌ಫೈನಲ್ ಸೆಣಸಾಟದಲ್ಲಿ ಭಾರತದ 23 ವರ್ಷದ ಆಟಗಾರ ದೇವ್ 5–0 ಒಮ್ಮತದ ತೀರ್ಪು ಪಡೆದು ಎಂಟರ ಘಟ್ಟವನ್ನು ಪ್ರವೇಶಿಸಿದರು.

ಇಲ್ಲಿ ಸೆಮಿಫೈನಲ್ ಪ್ರವೇಶಿಸುವ ನಾಲ್ಕೂ ಬಾಕ್ಸರ್‌ಗಳು ಪ್ಯಾರಿಸ್ ಒಲಿಂಪಿಕ್ ಕೋಟಾ ಪಡೆಯಲಿದ್ದು, ಅದಕ್ಕಾಗಿ ದೇವ್ ಅವರು ಒಂದೇ ಹೆಜ್ಜೆ ಮುಂದೆ ಸಾಗಬೇಕಿದೆ.

ಒಲಿಂಪಿಕ್ಸ್‌ನಲ್ಲಿ ಚೊಚ್ಚಲ ಸ್ಪರ್ಧೆಗೆ ಎದುರು ನೋಡುತ್ತಿರುವ ದೇವ್ ಅವರು ಸೋಮವಾರ ತಡರಾತ್ರಿ ನಡೆಯುವ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಅಮೆರಿಕದ ಒಮರಿ ಜೋನ್ಸ್ ಅವರನ್ನು ಎದುರಿಸಲಿದ್ದಾರೆ.

ಬಾಂಗ್ಲಾ ಸರಣಿಗೆ ಶಮಿ ಮರಳುವ ಸಾಧ್ಯತೆ

ಧರ್ಮಶಾಲಾ (ಪಿಟಿಐ): ಪಾದದ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿರುವ ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಈ ವರ್ಷದ ಕೊನೆಯಲ್ಲಿ ಬಾಂಗ್ಲಾದೇಶದ ವಿರುದ್ಧ ತವರಿನಲ್ಲಿ ನಡೆಯುವ ಟೆಸ್ಟ್ ಸರಣಿಗೆ ಪುನರಾಗಮನ ಮಾಡುವ ನಿರೀಕ್ಷೆಯಿದೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಕಳೆದ ತಿಂಗಳು ಎಡಗಾಲಿನ ಪಾದದ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಶಮಿ, ಇದೇ 22ರಂದು ಆರಂಭವಾಗುವ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಅಲಭ್ಯರಾಗಿದ್ದರು. ಜೂನ್‌ನಲ್ಲಿ ವೆಸ್ಟ್ ಇಂಡೀಸ್ ಮತ್ತು ಅಮೆರಿಕ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಿಂದಲೂ ಅವರು ಹೊರಗುಳಿಯುವುದು ಖಚಿತವಾಗಿದೆ.

'ಶಮಿ ಅವರಿಗೆ ಶಸ್ತ್ರಚಿಕಿತ್ಸೆ ಮುಗಿದಿದೆ. ಅವರು ಭಾರತಕ್ಕೆ ವಾಪಸಾಗಿದ್ದಾರೆ. ಬಾಂಗ್ಲಾದೇಶದ ವಿರುದ್ಧ ತವರಿನಲ್ಲಿ ನಡೆಯಲಿರುವ ಸರಣಿಗೆ ಅವರು ತಂಡವನ್ನು ಸೇರುವ ಸಾಧ್ಯತೆಯಿದೆ' ಎಂದು ಶಾ ಹೇಳಿದ್ದಾರೆ.

'ಕೆ.ಎಲ್. ರಾಹುಲ್ ಅವರಿಗೆ ಚುಚ್ಚುಮದ್ದಿನ ಅಗತ್ಯವಿತ್ತು. ಅವರು ಎನ್‌ಸಿಎನಲ್ಲಿ ಪುನಶ್ಚೇತನ ಶಿಬಿರ ಆರಂಭಿಸಿದ್ದಾರೆ' ಎಂದೂ ಶಾ ಮಾಹಿತಿ ನೀಡಿದರು.


ಮೊಹಮ್ಮದ್ ಶಮಿ

ಐಪಿಎಲ್‌ಗೆ ಪಂತ್: 2022ರ ಡಿಸೆಂಬರ್‌ನಲ್ಲಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ಗಾಯಗೊಂಡು ಚೇತರಿಸಿಕೊಂಡಿರುವ ರಿಷಭ್ ಪಂತ್ ಅವರು ಐಪಿಎಲ್ ಟೂರ್ನಿಗೆ ಪುನರಾ ಗಮನ ಮಾಡುವುದು ಖಚಿತವಾಗಿದೆ.

'ಪಂತ್ ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದಾರೆ. ಜತೆಗೆ ಉತ್ತಮವಾಗಿ ಕೀಪಿಂಗ್ ನಡೆಸುತ್ತಿದ್ದಾರೆ. ಶೀಘ್ರದಲ್ಲೇ ನಾವು ಅವರನ್ನು ಫಿಟ್ ಎಂದು ಘೋಷಿಸುತ್ತೇವೆ. ಅವರು ಟಿ20 ವಿಶ್ವಕಪ್ ಟೂರ್ನಿ ಆಡಿದರೆ ಅದು ನಮಗೆ ದೊಡ್ಡ ವಿಷಯ. ಐಪಿಎಲ್‌ನಲ್ಲಿ ಅವರು ಹೇಗೆ ಆಡುತ್ತಾರೆ ಎಂದು ನೋಡೋಣ' ಎಂದು ಜಯ್ ಶಾ ಹೇಳಿದ್ದಾರೆ. ಡೆಲ್ಲಿ ಕ್ಯಾಪಿಟಲ್ಸ್‌ನ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಅವರು ರಿಷಭ್ ಐಪಿಎಲ್ ಟೂರ್ನಿಯಲ್ಲಿ ಭಾಗವಹಿಸುವುದಾಗಿ ಈ ಮೊದಲೇ ಹೇಳಿದ್ದರು.

ಐಎಸ್‌ಪಿಎಲ್: ಬೆಂಗಳೂರು ಸ್ಟ್ರೈಕರ್ಸ್‌ಗೆ ಮೊದಲ ಜಯ

ಮುಂಬೈ: ಬೆಂಗಳೂರು ಸ್ಟ್ರೈಕರ್ಸ್ ತಂಡವು ಸೋಮವಾರ ನಡೆದ ಇಂಡಿಯನ್ ಸ್ಟ್ರೀಟ್ ಪ್ರೀಮಿಯರ್ ಲೀಗ್ ಟಿ10 ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕೋಲ್ಕತ್ತ ಟೈಗರ್ಸ್ ತಂಡವನ್ನು ಸೂಪರ್ ಓವರ್‌ನಲ್ಲಿ ಮಣಿಸಿ, ಟೂರ್ನಿಯಲ್ಲಿ ಮೊದಲ ಜಯ ದಾಖಲಿಸಿತು.

ಇಲ್ಲಿನ ದಾದೋಜಿ ಕೊಂಡದೇವ್ ಕ್ರೀಡಾಂಗಣದಲ್ಲಿ ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಬೆಂಗಳೂರು ತಂಡವು 21 ರನ್ ಗಳಿಸಿತು. ಥಾಮಸ್ ಡಯಾಸ್ 3 ಎಸೆತಗಳಲ್ಲಿ 13 ರನ್ ಗಳಿಸಿದರೆ, ಮನ್ಸೂರ್ ಕೆ.ಎಲ್. 8 ಸೇರಿಸಿದರು. ಇದಕ್ಕೆ ಉತ್ತರವಾಗಿ ಕೋಲ್ಕತ್ತ ತಂಡವು ಎರಡು ವಿಕೆಟ್‌ಗೆ 13 ರನ್ ಗಳಿಸಿ ಸೋತಿತು.

ಇದಕ್ಕೂ ಮೊದಲು ನಡೆದ ಪಂದ್ಯದಲ್ಲಿ ಕೋಲ್ಕತ್ತ ತಂಡವು 10 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 86 ರನ್ ಗಳಿಸಿತು. ಈ ಗುರಿ ಬೆನ್ನತ್ತಿದ ಬೆಂಗಳೂರು ತಂಡವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 86 ರನ್‌ಗಳೊಂದಿಗೆ ಸಮಬಲ ಸಾಧಿಸಿತ್ತು. ಈ ಗೆಲುವಿನೊಂದಿಗೆ ಸ್ಟ್ರೈಕರ್ಸ್ ತಂಡವು ನಾಕೌಟ್ ಹಂತಕ್ಕೆ ಪ್ರವೇಶಿಸುವ ಅವಕಾಶ ಹೊಂದಿದೆ. ಕೋಲ್ಕತ್ತ ತಂಡವು 4 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಆಲ್ ಇಂಗ್ಲೆಂಡ್ ಟೂರ್ನಿ: 23 ವರ್ಷಗಳಿಂದ ಪ್ರಶಸ್ತಿ ಬರ

ಸಾತ್ವಿಕ್– ಚಿರಾಗ್ ಮೇಲೆ ನಿರೀಕ್ಷೆ ಭಾರ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಫ್ರೆಂಚ್ ಓಪನ್ ಟೂರ್ನಿಯ ನೂತನ ಚಾಂಪಿಯನ್ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ತಮ್ಮ ಯಶಸ್ಸಿನ ಓಟವನ್ನು, ಮಂಗಳವಾರ ಆರಂಭವಾಗುವ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಮುಂದುವರಿಸುವ ನಿರೀಕ್ಷೆಯಿದೆ. ಅನುಭವಿ ಪಿ.ವಿ. ಸಿಂಧು ಕೂಡ ಉತ್ತಮ ಆಟ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವು 23 ವರ್ಷಗಳಿಂದ ಪ್ರಶಸ್ತಿ ಬರವನ್ನು ಎದುರಿಸುತ್ತಿದೆ. ಪ್ರಕಾಶ್ ಪಡುಕೋಣೆ (1980) ಮತ್ತು ಪುಲ್ಲೇಲ ಗೋಪಿಚಂದ್ (2001) ಅವರು ಮಾತ್ರ ಈ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಪ್ರಶಸ್ತಿ ವಿಜೇತರಾಗಿದ್ದಾರೆ. ಸೈನಾ ನೆಹ್ವಾಲ್ (2015) ಮತ್ತು ಲಕ್ಷ್ಯ ಸೇನ್ (2022) ಅವರು ರನ್ನರ್ ಅಪ್ ಸ್ಥಾನ ಪಡೆದಿದ್ದಾರೆ.

ಅಂತರರಾಷ್ಟ್ರೀಯ ಕ್ಯಾಲೆಂಡರ್‌ನಲ್ಲಿ ನಾಲ್ಕು ಸೂಪರ್ 1000 ಟೂರ್ನಿಗಳಲ್ಲಿ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ಕೂಡಾ ಒಂದಾಗಿದೆ. ಈ ಪ್ರತಿಷ್ಠಿತ ಟೂರ್ನಿಯಲ್ಲಿ 2001ರ ಬಳಿಕ ಭಾರತದ ಯಾವುದೇ ಆಟಗಾರ ಚಾಂಪಿಯನ್ ಕಿರೀಟ ಧರಿಸಿಲ್ಲ.

ಸಾತ್ವಿಕ್– ಚಿರಾಗ್ ಜೋಡಿ ಮೊದಲ ಸುತ್ತಿನಲ್ಲಿ ಇಂಡೊನೇಷ್ಯಾದ ಮೊಹಮ್ಮದ್ ಅಹ್ಸಾನ್ ಮತ್ತು ಮೂರು ಬಾರಿಯ ವಿಶ್ವ ಚಾಂಪಿಯನ್ ಹೆಂಡ್ರಾ ಸೆಟಿಯಾವಾನ್ ಜೋಡಿಯನ್ನು ಎದುರಿಸಲಿದೆ.

ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಮಹಿಳೆಯರ ಸಿಂಗಲ್ಸ್‌ನಲ್ಲಿ ಆರಂಭಿಕ ಸುತ್ತಿನಲ್ಲಿ ಜರ್ಮನಿಯ ಯವೊನೆ ಲಿ ಅವರನ್ನು ಎದುರಿಸಲಿದ್ದಾರೆ. ಲಿ ವಿರುದ್ಧ 2–0 ಗೆಲುವಿನ ದಾಖಲೆ ಹೊಂದಿರುವ ಸಿಂಧು, ಇಲ್ಲಿ ಮುನ್ನಡೆದರೆ ಎರಡನೇ ಸುತ್ತಿನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಆನ್ ಸೆ ಯಂಗ್ (ಕೊರಿಯಾ) ಅವರ ಸವಾಲನ್ನು ಎದುರಿಸಬೇಕಾಗಬಹುದು ಎಡ ಮೊಣಕಾಲಿನ ಗಾಯದಿಂದ ಚೇತರಿಸಿಕೊಂಡು ಫ್ರೆಂಚ್ ಓಪನ್‌ನಲ್ಲಿ ಕಣಕ್ಕೆ ಇಳಿದಿದ್ದ ಭಾರತದ ಆಟಗಾರ್ತಿ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿದ್ದರು.

ಕ್ಯಾರಿ ಸಾಹಸದಲ್ಲಿ ಆಸ್ಟ್ರೇಲಿಯಾಕ್ಕೆ ಜಯ

ಕ್ರೈಸ್ಟ್‌ಚರ್ಚ್ (ಎಎಫ್‌ಪಿ): ವಿಕೆಟ್ ಕೀಪರ್– ಬ್ಯಾಟರ್ ಅಲೆಕ್ಸ್ ಕ್ಯಾರಿ ಅವರ ಅಜೇಯ 98 ರನ್‌ಗಳ (123ಎ, 4x15) ನೆರವಿನಿಂದ ಆಸ್ಟ್ರೇಲಿಯಾ ತಂಡ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಅಂತಿಮ ದಿನವಾದ ಸೋಮವಾರ ಆತಿಥೇಯ ನ್ಯೂಜಿಲೆಂಡ್ ಮೇಲೆ ಮೂರು ವಿಕೆಟ್‌ಗಳ ರೋಚಕ ಜಯಪಡೆಯಿತು. ಆ ಮೂಲಕ ಸರಣಿಯನ್ನು 2–0 ಯಿಂದ ಸ್ವೀಪ್ ಮಾಡಿಕೊಂಡಿತು.

ಸರಣಿಯಲ್ಲಿ ಲಯ ಕಂಡುಕೊಳ್ಳಲು ಪರದಾಡಿದ್ದ ಕ್ಯಾರಿ ಮತ್ತು ಮಿಚೆಲ್ ಮಾರ್ಷ್ (80, 102ಎ, 4x10, 6x1) ಆರನೇ ವಿಕೆಟ್‌ಗೆ 140 ರನ್ ಜೊತೆಯಾಟದ ಮೂಲಕ ಆಸ್ಟ್ರೇಲಿಯಾ ತಂಡವನ್ನು ಅಪಾಯದಿಂದ ಪಾರು ಮಾಡಿದರು. 31 ವರ್ಷಗಳ ಬಳಿಕ ತವರು ನೆಲದಲ್ಲಿ ನೆರೆಯ ರಾಷ್ಟ್ರದ ಮೇಲೆ ಜಯ ಗಳಿಸುವ ನ್ಯೂಜಿಲೆಂಡ್ ಆಸೆ ಈಡೇರಲಿಲ್ಲ.

ಸ್ಕೋರುಗಳು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 162, ಆಸ್ಟ್ರೇಲಿಯಾ:256; ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 372, ಆಸ್ಟ್ರೇಲಿಯಾ: 65 ಓವರುಗಳಲ್ಲಿ 7 ವಿಕೆಟ್‌ಗೆ 281 (ಮಿಚೆಲ್ ಮಾರ್ಷ್ 80, ಅಲೆಕ್ಸ್ ಕ್ಯಾರಿ ಔಟಾಗದೇ 98, ಪ್ಯಾಟ್ ಕಮಿನ್ಸ್ ಔಟಾಗದೇ 32; ಹೆನ್ರಿ 94ಕ್ಕೆ2, ಸಿಯರ್ಸ್ 90ಕ್ಕೆ4).

ಅನುಭವಿ ಆಟಗಾರರಿಗೆ ಮಣೆ, ಶಿಬಿರ ಇಂದಿನಿಂದ

ಹಾಕಿ ಶಿಬಿರಕ್ಕೆ 28 ಸಂಭವನೀಯರ ಆಯ್ಕೆ

ನವದೆಹಲಿ (ಪಿಟಿಐ): ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಇದೇ 12 ರಿಂದ 30ರವರೆಗೆ ನಡೆಯಲಿರುವ ಸೀನಿಯರ್ ಪುರುಷರ ಹಾಕಿ ತರಬೇತಿ ಶಿಬಿರಕ್ಕೆ 28 ಮಂದಿ ಸಂಭವನೀಯ ಆಟಗಾರರನ್ನು ಹಾಕಿ ಇಂಡಿಯಾ ಆಯ್ಕೆ ಮಾಡಿದೆ. ಈ ಪಟ್ಟಿಯಲ್ಲಿರುವ ಆಟಗಾರರೆಲ್ಲ ಅನುಭವಿಗಳಾಗಿದ್ದಾರೆ.

ಈ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಿದ್ಧತೆಯಲ್ಲಿರುವ ಭಾರತ ತಂಡಕ್ಕೆ ಈ ಶಿಬಿರ ಅಂತಿಮ ಸ್ಪರ್ಶ ನೀಡಲು ನೆರವಾಗಲಿದೆ. ಎಫ್‌ಐಎಚ್ ಪ್ರೊ ಲೀಗ್ ಪಂದ್ಯದಲ್ಲಿ ಉತ್ತಮ ಸಾಧನೆಯೊಡನೆ ತಂಡದ ಆಟಗಾರರು ಶಿಬಿರ ಸೇರಿಕೊಳ್ಳಲಿದ್ದಾರೆ. ಭುವನೇಶ್ವರ ಮತ್ತು ರೂರ್ಕೆಲಾ ಲೆಗ್‌ಗಳಲ್ಲಿ ಭಾರತ ಎಂಟು ಪಂದ್ಯಗಳಿಂದ 15 ಪಾಯಿಂಟ್ಸ್ ಕಲೆಹಾಕಿದ್ದು, ಪ್ರಸ್ತುತ ಮೂರನೇ ಸ್ಥಾನದಲ್ಲಿದೆ. ಲೀಗ್ ಮೇ 22ರಂದು ಆ್ಯಂಟ್‌ವರ್ಪ್‌ನಲ್ಲಿ (ಬೆಲ್ಜಿಯಂ) ಮುಂದುವರಿಯಲಿದೆ. ಜೂನ್ 1ರಂದು ಲಂಡನ್ ಲೆಗ್ ಶುರುವಾಗಲಿದೆ. ನೆದರ್ಲೆಂಡ್ಸ್‌ನಲ್ಲಿ ಅಂತಿಮ ಹಂತ ನಡೆಯಲಿದೆ.

ಸಂಭವನೀಯರು: ಗೋಲ್ ಕೀಪರ್ಸ್: ಕೃಷನ್ ಬಹಾದ್ದೂರ್ ಪಾಠಕ್, ಪಿ.ಆರ್.ಶ್ರೀಜೇಶ್, ಸೂರಜ್ ಕರ್ಕೇರಾ. ಡಿಫೆಂಡರ್ಸ್: ಹರ್ಮನ್‌ಪ್ರೀತ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಜುಗರಾಜ್ ಸಿಂಗ್, ಸಂಜಯ್, ಸುಮಿತ್, ಅಮಿರ್ ಅಲಿ.

ಮಿಡ್‌ಫೀಲ್ಡರ್ಸ್: ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ರವಿಚಂದ್ರ ಸಿಂಗ್ ಮೊಯ್ರಂಗ್‌ಥೆಮ್, ಶಂಷೇರ್ ಸಿಂಗ್, ನೀಲಕಂಠ ಶರ್ಮಾ, ರಾಜಕುಮಾರ್ ಪಾಲ್, ವಿಷ್ಣುಕಾಂತ ಸಿಂಗ್.

ಫಾರ್ವರ್ಡ್ಸ್: ಆಕಾಶ್‌ದೀಪ್ ಸಿಂಗ್, ಮನದೀಪ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಅಭಿಷೇಕ್, ದಿಲ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಗುರ್ಜಂತ್ ಸಿಂಗ್, ಮೊಹಮದ್ ರಾಹೀಲ್ ಮೌಸೀನ್, ಬಾಬಿ ಸಿಂಗ್ ಧಾಮಿ, ಅರಿಜೀತ್ ಸಿಂಗ್ ಹುಂಡಲ್.

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕಾದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ್ 1 ಆಯುರ್ವೇದಿಕ್ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದ ದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ, ಯಾವುದೇ ಅಡ್ಡ ಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.

ಸಂಪರ್ಕಿಸಿ :

08037836183

ರಾಷ್ಟ್ರೀಯ ತಂಡದ ಆಯ್ಕೆ ಟ್ರಯಲ್ಸ್‌ನಲ್ಲಿ ನಾಟಕೀಯ ಬೆಳವಣಿಗೆ

ಕುಸ್ತಿ: 50 ಕೆ.ಜಿ ವಿಭಾಗದಲ್ಲಿ ವಿನೇಶಾ ಫೋಗಾಟ್‌ಗೆ ಗೆಲುವು

ಪಟಿಯಾ (ಪಿಟಿಐ): ನಾಟಕೀಯ ಬೆಳವಣಿಗೆಗಳನ್ನು ಕಂಡ ರಾಷ್ಟ್ರೀಯ ತಂಡದ ಕುಸ್ತಿ ಆಯ್ಕೆ ಟ್ರಯಲ್ಸ್‌ನಲ್ಲಿ ಸೋಮವಾರ ವಿನೇಶಾ ಫೋಗಾಟ್ ಅವರು 50 ಕೆಜಿ ವಿಭಾಗದಲ್ಲಿ ಗೆದ್ದರು. ಸೆಣಸಾಟದ ಬಳಿಕ ವಿನೇಶಾ ಅವರು ರಾಷ್ಟ್ರೀಯ ಉದ್ದೀಪನ ಮದ್ದುತಡೆ ಸಂಸ್ಥೆ (ನಾಡಾ) ಅಧಿಕಾರಿಗಳಿಗೆ ಮೂತ್ರದ ಮಾದರಿ ನೀಡದೆ ಸ್ಥಳದಿಂದ ನಿರ್ಗಮಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉದ್ದೀಪನ ಮದ್ದು ಪರೀಕ್ಷೆ ಭಾಗವಾಗಿ ಟ್ರಯಲ್ಸ್ ವಿಜೇತರ ಮಾತ್ರದ ಮಾದರಿ ಸಂಗ್ರಹಿಸಲು ನಾಡಾ ತಂಡ ಇಲ್ಲಿಗೆ ಬಂದಿತ್ತು. ಆದರೆ, ವಿನೇಶಾ ತನ್ನ ಮಾದರಿಯನ್ನು ನೀಡಿಲ್ಲ ಎಂದು ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ. ಆದರೆ, ಈ ವಿಷಯ ತನಗೆ ತಿಳಿದಿಲ್ಲ ಎಂದು ಕುಸ್ತಿ ಅಡ್‌ಹಾಕ್ ಸಮಿತಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಡಾ ನಿಯಮ ಪ್ರಕಾರ, 'ಮಾದರಿ ಸಂಗ್ರಹ ತಪ್ಪಿಸುವುದು; ಅಥವಾ ಅಧಿಕೃತ ಸೂಚನೆಯ ನಂತರವೂ ಸೂಕ್ತ ಸಮರ್ಥನೆ ಇಲ್ಲದೆ ಮಾದರಿ ಸಂಗ್ರಹಕ್ಕೆ ನಿರಾಕರಿಸುವುದು ಅಥವಾ ವಿಫಲವಾಗುವುದು ಡೋಪಿಂಗ್ ವಿರೋಧಿ ನಿಯಮ ಉಲ್ಲಂಘನೆ (ಎಡಿಆರ್‌ವಿ) ಆಗುತ್ತದೆ.

ವಿನೇಶಾ ಫೋಗಾಟ್

ವಿನೇಶಾ ಅವರು ಬೆಳಿಗ್ಗೆ ಮಹಿಳೆಯರ 50 ಕೆಜಿ ಮತ್ತು 53 ಕೆಜಿ ವಿಭಾಗಗಳಲ್ಲಿ ಟ್ರಯಲ್ಸ್ ಆರಂಭಿಸಲು ಬಿಡಲಿಲ್ಲ. 53 ಕೆಜಿ ತೂಕ ವಿಭಾಗದಲ್ಲಿ ಅಂತಿಮ ಟ್ರಯಲ್ಸ್ ಅನ್ನು ಒಲಿಂಪಿಕ್ಸ್‌ಗೆ ಮೊದಲೇ ನಡೆಸಲಾಗುವುದು ಎಂದು ಅಧಿಕಾರಿಗಳು ಲಿಖಿತ ಭರವಸೆ ನೀಡಬೇಕೆಂದು ಆಗ್ರಹಿಸಿದರು. ಹೀಗಾಗಿ ಎರಡೂ ವಿಭಾಗದ ಸ್ಪರ್ಧೆಗಳು ವಿಳಂಬವಾದವು. ಕೆಲವು ಮಹಿಳಾ ಪೈಲ್ವಾನರು ಇದಕ್ಕೆ ಆಕ್ಷೇಪಿಸಿದರು. ಹೀಗಾಗಿ ಅಧಿಕಾರಿಗಳು ಸಮಾಲೋಚನೆಯಲ್ಲಿ ತೊಡಗಿದರು.

ಭಾರತ ಕುಸ್ತಿ ಫೆಡರೇಷನ್ ಅಡ್‌ಹಾಕ್ ಸಮಿತಿಯು ಅವರ ಬೇಡಿಕೆಗೆ ಸಮ್ಮತಿಸಿದ ಬಳಿಕ, ಜಕಾರ್ತಾ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ವಿನೇಶಾ 50 ಕೆಜಿ ವಿಭಾಗದಲ್ಲಿ ಶಿವಾನಿ ಅವರನ್ನು 11-6 ಅಂತರದಿಂದ ಸೋಲಿಸಿದರು. ಮುಂದಿನ ತಿಂಗಳು ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್ ಅರ್ಹತಾ ಟೂರ್ನಿಗೆ ಸ್ಥಾನ ಪಡೆದರು. ಆದರೆ, ವಿನೇಶಾ 53 ಕೆಜಿ ವಿಭಾಗದಲ್ಲಿ ಅಂಜು ವಿರುದ್ಧ 0-10 ತಾಂತ್ರಿಕ ಶ್ರೇಷ್ಠತೆ ಆಧಾರದ ಮೇಲೆ ಸೋತರು.

50 ಕೆಜಿ ಟ್ರಯಲ್ಸ್‌ನಲ್ಲಿ ಸ್ಪರ್ಧಿಸಲು ಬೆಳಗ್ಗೆ ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರಕ್ಕೆ ಬಂದಿದ್ದರು. ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು) ನ ನಿಯಮಾವಳಿಯ ಏಳನೇ ವಿಧಿ ಅನ್ವಯ, ಒಬ್ಬ ಸ್ಪರ್ಧಿ ಒಂದೇ ದಿನದಲ್ಲಿ ಒಂದು ತೂಕ ವಿಭಾಗದಲ್ಲಿ ಮಾತ್ರ ಭಾಗವಹಿಸಲು ಅವಕಾಶವಿದೆ.

ಆದರೆ, ವಿನೇಶಾ ಸೋಮವಾರ ಎರಡು ಪ್ರತ್ಯೇಕ ತೂಕ ವಿಭಾಗಗಳಲ್ಲಿ ಟ್ರಯಲ್ಸ್‌ನಲ್ಲಿ ಕಾಣಿಸಿಕೊಂಡರು. ಈ ಮೊದಲು 29 ವರ್ಷದ ಫೋಗಾಟ್, 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು. ಆದರೆ, ಅಂತಿಮ್ ಪಂಘಲ್ ಈಗಾಗಲೇ ಆ ವಿಭಾಗದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವುದರಿಂದ ತಮ್ಮ ತೂಕದ ವಿಭಾಗ ಕಡಿಮೆ ಮಾಡಿದ್ದಾರೆ.

ಸ್ಪರ್ಧೆಗೆ ಅನುಮತಿ: ಅಡ್‌ಹಾಕ್ ಸಮಿತಿ

ನವದೆಹಲಿ (ಪಿಟಿಐ): ಸ್ಪರ್ಧಿ ಕೇವಲ ಒಂದು ವಿಭಾಗದಲ್ಲಿ ಸ್ಪರ್ಧಿಸಬಹುದು ಎಂಬ ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು) ನಿಯಮದ ಹೊರತಾಗಿಯೂ ಪಟಿಯಾಲದಲ್ಲಿ ನಡೆಯಲಿರುವ ರಾಷ್ಟ್ರೀಯ ಟ್ರಯಲ್ಸ್‌ನ 50 ಕೆಜಿ ಮತ್ತು 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸಲು ವಿನೇಶಾ ಫೋಗಾಟ್ ಅವರ ಮನವಿಯನ್ನು ಅಡ್‌ಹಾಕ್ ಸಮಿತಿಯ ಎಲ್ಲಾ ಮೂವರು ಸದಸ್ಯರು ಒಪ್ಪಿಕೊಂಡಿದ್ದಾರೆ ಎಂದು ಸಮಿತಿ ಅಧ್ಯಕ್ಷ ಭೂಪೇಂದರ್ ಸಿಂಗ್ ಬಜ್ವಾ ಸೋಮವಾರ ಸ್ಪಷ್ಟಪಡಿಸಿದರು.

'ಎರಡೂ ವಿಭಾಗಗಳಲ್ಲಿ ಸ್ಪರ್ಧಿಸಬೇಕೆಂಬ ವಿನೇಶಾ ಅವರ ಮನವಿಯನ್ನು ಸ್ವೀಕರಿಸಲು ಸಮಿತಿ ಒಪ್ಪಿಕೊಂಡಿತು' ಎಂದು ಬಜ್ವಾ ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಟ್ರಯಲ್ಸ್ ವಿಜೇತರು: 50 ಕೆ.ಜಿ: ವಿನೇಶಾ ಫೋಗಾಟ್, 53 ಕೆ.ಜಿ: ಅಂಜು, 55 ಕೆ.ಜಿ. ತಮನ್ನಾ, 57 ಕೆ.ಜಿ: ಅನ್ಶು ಮಲಿಕ್, 59 ಕೆ.ಜಿ.: ಪುಷ್ಪಾ ಯಾದವ್, 62 ಕೆ.ಜಿ: ಮಾನಸಿ, 65 ಕೆ.ಜಿ: ಅಂತಿಮ್. 68 ಕೆ.ಜಿ. ನಿಶಾ, 72 ಕೆ.ಜಿ. ಹರ್ಷಿತಾ, 76 ಕೆ.ಜಿ: ರೀತಿಕಾ.

ಪ್ಯಾರಾ ಶೂಟಿಂಗ್: ಭಾರತಕ್ಕೆ ಎರಡು ಬೆಳ್ಳಿ

ನವದೆಹಲಿ: ಭಾರತದ ರುದ್ರಾಂಶ್ ಖಂಡೇಲ್ವಾಲ್ ಮತ್ತು ನಿಹಾಲ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಪ್ಯಾರಾ ಶೂಟಿಂಗ್ ವಿಶ್ವಕಪ್‌ನ ಮಿಕ್ಸೆಡ್ 50 ಮೀಟರ್ ಪಿಸ್ತೂಲ್ (ಎಸ್‌ಎಚ್1 ಕೆಟಗರಿ) ಸ್ಪರ್ಧೆಯಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಕೂಟದ ಮೂರನೇ ದಿನವಾದ ಸೋಮವಾರ ಆತಿಥೇಯ ಭಾರತಕ್ಕೆ ಚಿನ್ನದ ಪದಕ ಒಲಿಯಲಿಲ್ಲ. ಆದರೆ, ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ ಮತ್ತು ಕಂಚು ಹಾಗೂ ತಂಡ ವಿಭಾಗದಲ್ಲಿ ಬೆಳ್ಳಿ ಪದಕ ದೊರಕಿದೆ.

ವೈಯಕ್ತಿಕ ವಿಭಾಗದ 50 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ಈಗಾಗಲೇ ಅರ್ಹತೆ ಪಡೆದಿರುವ ರುದ್ರಾಂಶ್ 223.2 ಅಂಕದೊಂದಿಗೆ ಎರಡನೇ ಸ್ಥಾನ ಪಡೆದರು. ನಿಹಾಲ್ (202.8) ಮೂರನೇ ಸ್ಥಾನ ಗಳಿಸಿದರು.

KAS ಅಧಿಸೂಚನೆ ಪ್ರಕಟಣೆ!

ಪೂರ್ವಭಾವಿ ಪರೀಕ್ಷಾ (Prelims) ದಿನಾಂಕ: 05-05-2024

384 ಗೆಜೆಟೆಡ್ ಪ್ರೊಬೇಷನರ್ಸ (KAS) ಹುದ್ದೆಗಳ ನೇಮಕಾತಿಗೆ ಇದೀಗ ಅಧಿಸೂಚನೆ ಪ್ರಕಟಿಸಿ ಅರ್ಜಿ ಆಹ್ವಾನಿಸಲಾಗಿದೆ!!

ನಿಮ್ಮ ತಯಾರಿಯನ್ನು ಪೂರ್ಣಗೊಳಿಸಿ

EXAM MASTERMIND DH ಪ್ರಜಾವಾಣಿ

ಇಂದೇ KAS ಮಾಕ್ ಟೆಸ್ಟ್ ಸರಣಿಗೆ ಚಂದಾದಾರರಾಗಿ!

- 12 KAS ಮಾಕ್ ಪ್ರಿಲಿಮ್ಸ್ ಪರೀಕ್ಷೆಗಳ ಸರಣಿ
- 24 ಗಂಟೆಗಳ ಒಳಗೆ ಸಮಗ್ರ ಪರಿಹಾರಗಳು ಮತ್ತು ಶ್ರೇಯಾಂಕಗಳನ್ನು ಪಡೆಯಿರಿ
- ಪ್ರತಿ ಪರೀಕ್ಷೆಯನ್ನು 3 ಬಾರಿ ಪ್ರಯತ್ನಿಸಿ

ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ

ಹೆಚ್ಚಿನ ಮಾಹಿತಿಗಾಗಿ WhatsApp ಮಾಡಿ: 96069 66128

www.exammastermind.com